ಪರಿವಿಡಿ

ಬ್ರಹ್ಮನಿಂದ ಆರಾಧಿಸಲ್ಪಟ್ಟು ಚತುರ್ಯುಗಮೂರ್ತಿಯಾಗಿ, ಸರ್ವಜ್ಞಾಚಾರ್ಯ–ರಿಂದ ಅವಿಚ್ಛಿನ್ನ ಪರಂಪರಾ ಪ್ರಾಪ್ತವಾಗಿ ಅಧುನಾ ಶ್ರೀರಾಘವೇಂದ್ರತೀರ್ಥ–ಗುರುಸಾರ್ವಭೌಮರ ಮಠದಲ್ಲಿ ಪೂಜೆಗೊಂಡು ಶೋಭಿಸುತ್ತಿದ್ದಾನೆ.

ಆದರೆ ಈ ವಿಷಯವಾಗಿ ಸುಮ್ಮಸುಮ್ಮನೆ ವಿವಾದವೆಬ್ಬಿಸಿ ಕಲಹಪ್ರಿಯ–ರಾಗುವುದು ವೈಷ್ಣವರಿಗೆ ಉಚಿತವಲ್ಲ.

ಗ್ರಂಥಬಾಹುಲ್ಯ ಭಯದಿಂದ ಇನ್ನೂ ಅನೇಕ ಪ್ರಮಾಣಗಳನ್ನು ನಾವು ವ್ಯಕ್ತಪಡಿಸಿಲ್ಲ.

ಆದರೆ, ಸತ್ಯವನ್ನರಸಿ ಹೊರಟ ನಿರ್ಮಾತ್ಸರ್ಯದ ಜನರ ಬೇಡಿಕೆ ಹೆಚ್ಚಿತು. ಅವರ ಬೇಡಿಕೆಯ ಕೂಗು ಮುಗಿಲು ಮುಟ್ಟಿತು.

ಆದ್ದರಿಂದ ಶ್ರೀಜಗನ್ನಾಥದಾಸರ ಇನ್ನೂ ಎರಡು ಹಸ್ತಪ್ರತಿಗಳು ಶಿಲ್ಪಶಾಸ್ತ್ರದ ಅಭಿಪ್ರಾಯಗಳು ಮುಂತಾದುವುಗಳಿಂದ ಅಲಂಕೃತಗೊಂಡು ಮತ್ತೊಮ್ಮೆ ವಿಜಯದುಂದುಭಿಯನ್ನು ಮೊಳಗಲು ಹೊರಬರುತ್ತಿದೆ.

ಪ್ರಥಮ ಮುದ್ರಣವು ಅಜಯ್ಯ–ವಿಜಯೀಂದ್ರರ ಆರಾಧನೆಯಂದು ಲೋಕಾರ್ಪಣೆಯಾಗಿ ವಿಜಯ ಸಾಧಿಸಿಕೊಟ್ಟಿತು. ದ್ವಿತೀಯ ಮುದ್ರಣವು ಶ್ರೀವಿಜಯೀಂದ್ರತೀರ್ಥರ ಪ್ರಪೌತ್ರರಾದ ಶ್ರೀರಾಘವೇಂದ್ರತೀರ್ಥಗುರುಸಾರ್ವ–ಭೌಮರ ಆರಾಧನೆಗೆ ಪ್ರಕಟವಾಗುತ್ತಿರುವುದು ಸಂತಸದ ವಿಷಯ.

ಎಂದಿದ್ದರೂ ನಮ್ಮ ತಾರಕಮಂತ್ರ ಒಂದೇ.

‘ಸತ್ಯಮೇವ ಜಯತೇ’

ದಿವಾನರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ

ಸಂದೇಹ ಇನ್ನೂ ಉಳಿದಿದ್ದಲ್ಲಿ, ಇಬ್ಬರಿಗೂ ಸಮ್ಮತರಾಗಿರುವ ಸಂಶೋಧಕರಿಗೆ ನಮ್ಮಲ್ಲಿನ ಎಲ್ಲ ಪ್ರಾಚೀನ ಹಸ್ತಪ್ರತಿಗಳನ್ನೂ, ಶಾಸನಗಳನ್ನೂ, ಗೆಜೆಟ್‌ಗಳನ್ನೂ, ಉಲ್ಲೇಖಿಸಿರುವ ಎಲ್ಲ ಆಧಾರಗಳನ್ನೂ ಒದಗಿಸಲು ಸಿದ್ಧರಾಗಿದ್ದೇವೆ.

ಅದೇನೋ ಗಾದೆ ಇದೆ 'ಸುಮ್ಮನಿರಲಾರದವರು ಏನೋ ಬಿಟ್ಟಕೊಂಡ– ರಂತೆ'. ಮುಂದೆ ಹೀಗೆ ಮಾಡುವುದು ಬೇಡ. 'ಕೆಣಕಬೇಡ ಕೆಣಕಿ ತಿಣಕಬೇಡ'. ಆದರೆ, ಒಂದು ಪ್ರಶಂಸೆ ಕೊಡದೇ ಹೋಗಲು ಮನಸ್ಸಾಗುತ್ತಿಲ್ಲ. ಲೇಖಕರ ಶೈಲಿ ಚೆನ್ನಾಗಿದೆ. ಆಚಾರ್ಯರ ಮಧ್ವರ ಸಂದೇಶಗಳನ್ನು ಇಂತಹ ಶೈಲಿಯಲ್ಲಿ ಹೇಳಿದರೆ ಜನಗಳಿಗೆ ಮನದಟ್ಟಾಗಬಹುದು.

'ಸತ್ಯಮೇವ ಜಯತೇ'

ದಿವಾನರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ

ದ್ವಿತೀಯ ಮುದ್ರಣದ ಮುನ್ನುಡಿ

ಸತ್ಯದ ಅನಾವರಣ ನಮ್ಮ ಧ್ಯೇಯ.

ಸತ್ಯಕ್ಕೆ ಎಂದಿದ್ದರೂ ಜಯ ನಿಶ್ಚಿತ.

"ಸತ್ಯಂ ಪ್ರಿಯಹಿತಂ ಚ ಯತ್" ಎಂಬುದು ಗೀತೋಕ್ತಿ.

ಸತ್ಯ ಎನ್ನುವುದು ಸಾತ್ತ್ವಿಕ ತಪಸ್ಸಿನ ಒಂದು ಭಾಗ ಎನ್ನುವುದು ಗೀತಾ– ಚಾರ್ಯನ ಅಭಿಪ್ರಾಯ. ಸತ್ಯ ಎಂದರೆ ಯಥಾರ್ಥ. ಅತ ಏವ ಯಥಾರ್ಥಕತೆಯ ನಿಶ್ಚಿತ ಮತಿಯಿಂದ ಮಥಿಸಿ ಹೊರತಂದ ಅಮೃತಸದೃಶ ಹೊತ್ತಿಗೆ 'ಶ್ರೀಮೂಲ– ರಾಮಸ್ತು ಮನ್ಮತೇ' ಜಯ ಗಳಿಸಿದೆ. ಸಾತ್ತ್ವಿಕ ತಪಸ್ಸು ಫಲ ಕೊಟ್ಟಿದೆ. ಇದಕ್ಕೆ ಈ ಗ್ರಂಥ ದ್ವಿತೀಯ ಮುದ್ರಣವಾಗುತ್ತಿರುವುದೇ ಸಾಕ್ಷಿ.

ಇದರಲ್ಲಿ ಆಗ್ರಹಕ್ಕೆ ಅವಕಾಶವಿರಲಿಲ್ಲ, ದುರಾಗ್ರಹ ಪೀಡಿತರ ನಿಗ್ರಹ– ವಿತ್ತು. ಆದ್ದರಿಂದಲೇ ಸರ್ವರಿಂದಲೂ ಗ್ರಾಹ್ಯವಾಯಿತು.

ತತ್ತ್ವನಿಶ್ಚಯವು ಪ್ರಥಮ ಹಂತ. ತತ್ತ್ವನಿಶ್ಚಯವಾಗದೇ ಕೇವಲ ಜ್ಞಾನ ಪ್ರಾಪ್ತಿಯಾಗಿದೆ ಎಂದು ಭ್ರಮಿಸುವುದು ಶಾಸ್ತ್ರಜ್ಞರಿಗೆ ವಿಹಿತವಲ್ಲ. ಹೀಗಾಗಿ ಮುಂದಾದರೂ ತತ್ತ್ವನಿಶ್ಚಯಕ್ಕಾಗಿ ಪ್ರಯತ್ನಪಡಲಿ ಎಂಬುದು ಅವರಲ್ಲಿ ನಮ್ಮ ಸಲಹೆ. ಆ ಪ್ರಯತ್ನ ಅಭಿಮಾನ – ಅನುಮಾನ ರಹಿತವಾಗಿರಲಿ, ಭಕ್ತಿ – ಶ್ರದ್ಧೆ ಸಹಿತವಾಗಿರಲಿ. ಆಗ ಸತ್ಯದ ನಿಜವಾದ ವಿಶ್ವರೂಪ ದರ್ಶನವಾಗುತ್ತದೆ.

ಪರಮಾತ್ಮನು ಪ್ರತಿಮೆಯಲ್ಲಿ ವಿಶಿಷ್ಟ ವಿಭೂತಿರೂಪದಿಂದ ಸನ್ನಿಹಿತ– ನಾಗಿರುತ್ತಾನೆ ಎನ್ನುವುದು ಪ್ರಾಚೀನ ಜ್ಞಾನಿಗಳ ಮತ. ಅವನ ಉಪಾಸನೆ ಅತ್ಯಗತ್ಯ. ಇನ್ನು ಯೋಗಿಗಳ ಹೃದಯದಲ್ಲಿ ಆನಂದಕಾರಕನಾಗಿ ಇರುವ ವಿಶಿಷ್ಟ ರೂಪ ಶ್ರೀರಾಮರೂಪ. ಅಂತಹ ಶ್ರೀರಾಮಚಂದ್ರನು ಋಜುಪುಂಗವರಾದ ಚತುರ್ಮುಖ

ಇಂತಹ ಬಾಡಿಗೆದಾರ ಲೇಖಕನಿಗೆ ಅವರ ಮಠದ ಸಾತ್ವಿಕ ಯಜಮಾನರು ಪ್ರೋತ್ಸಾಹಿಸುವುದಿದೆಯಲ್ಲ ಅದು ಮನಸ್ಸಿಗೆ ನೋವಾಗುವ ವಿಷಯ.

ದಾಸರ ಕೃತಿಗಳನ್ನು ಇಷ್ಟು ಕೃತಿಚೌರ್ಯ ಮಾಡುವ ಪಂಗಡ ಜಗತ್ತಿನಲ್ಲಿ ಮತ್ತೊಂದು ಇರಲಾರದು.

ಶ್ರೀಹಯವದನರಾವ್ ಎನ್ನುವ ಆ ಮಠದ ಲೇಖಕ ತನ್ನ Gazzetನಲ್ಲಿ ಮತ್ತೇನು ಬರೆದಿರಲು ಸಾಧ್ಯ!? ಅದು ಹೇಗೆ ಎಲ್ಲರಿಗೂ ಸಮ್ಮತ? ಶ್ರೀವ್ಯಾಸ–ರಾಜರು, ಶ್ರೀವಾದಿರಾಜರು, ಶ್ರೀವಿಜಯಧ್ವಜರು, ಶ್ರೀಸುಧೀಂದ್ರರು, ಶ್ರೀವಿಬು–ಧೇಂದ್ರತೀರ್ಥರುಗಳನ್ನು ಹೀಯಾಳಿಸುವ ಅವರ ಆಧಾರಗ್ರಂಥಗಳು ಕೆಟ್ಟ ಕಲ್ಪನೆಯ ದಾರದಿಂದ ಸೇರಿಸಿದ್ದು.

ಶ್ರೀವಿದ್ಯಾನಿಧಿಗಳಿಂದ ಆರಂಭವಾದ ಸಂಸ್ಥೆಯು ಅವರಿಗೆ ಏನೂ ಸಂಬಂಧ ಪಡದ ಶ್ರೀಜಯತೀರ್ಥರು, ಶ್ರೀನರಹರಿತೀರ್ಥರು, ಶ್ರೀಪದ್ಮನಾಭತೀರ್ಥ–ರನ್ನು ನಮ್ಮ ತಂದೆ, ನಮ್ಮ ತಾತ ಎಂದು ಪದೇ ಪದೇ ಹೇಳಿಕೊಳ್ಳುವುದು ಶೋಭೆಯಲ್ಲ.

ನಮ್ಮ ಆಧಾರ ಸ್ಪಷ್ಟ

ಅವರ ಪೂರ್ವಿಕರು ಶಿರೂರಿನವರು. ಹೀಗಾಗಿ ಅವರ ಪೋಷಕರು ಶಿರೂರಿನವರು.

ಚೆಂದವಾಗಿ – ಮನಮೋಹಕವಾಗಿ – ಚುಂಬಕಶಕ್ತಿ ಇರುವ ನಮ್ಮ ಶ್ರೀಮೂಲರಾಮ ಎಲ್ಲಿ? ಅದೆಲ್ಲಿ. ಅದರ ನೆರಳಿಗೂ ಸಾಮ್ಯವಿಲ್ಲ.

ಶ್ರೀರಾಘವೇಂದ್ರಸ್ವಾಮಿಗಳು 'ಪ್ರಾತಃಸಂಕಲ್ಪಗದ್ಯ'ದಲ್ಲಿ ಉಲ್ಲೇಖಿಸಿರುವ 'ಅಸ್ಮದಾದಿ ಗುರೂಣಾಂ ಶ್ರೀಮದಾನಂದತೀರ್ಥಶ್ರೀಮಚ್ಚರಣಾನಾಂ....' ಎಂಬ ಒಂದೇ ಒಂದು ಪದ ಸಾಕು, ಯಾರ ಪೂರ್ವಿಕರು ಯಾರು ಎಂಬುದಕ್ಕೆ.

ಕನ್ನಡ ಚಿತ್ರರಂಗ ಪ್ರಸ್ತುತ 'ಕಥೆಗಾರ'ರ ಸಮಸ್ಯೆಯನ್ನು ಎದುರಿಸುತ್ತಿದೆ. ಇಂತಹ ಕಥೆಗಾರರಿಗೆ ಅಲ್ಲಿ ತುಂಬಾ ಅವಕಾಶವಿದೆ.

ಯಾವ ಧೀಮಂತ ವ್ಯಕ್ತಿಯಿಂದ, ವಿದ್ಯೆ ಕಲಿಸಿಕೊಟ್ಟ ಗುರುಗಳಿಂದ ಶ್ರೀಲಕ್ಷ್ಮೀನಾರಾಯಣಮುನಿಗಳು ಶ್ರೀಪಾದರಾಜರೆಂದು ವಿಖ್ಯಾತರಾದರೋ, ಅಂತಹವರನ್ನು ಇವರು ಅವಮಾನಿಸುತ್ತಾರೆ.

ಅವರಿಗೆ ಸಮಕಾಲೀನರಲ್ಲದ ಶ್ರೀರಘುನಾಥತೀರ್ಥರು ಪ್ರಶಸ್ತಿ ಕೊಟ್ಟರಂತೆ! ಹಳೆಯ ಕಾಗಕ್ಕ – ಗುಬ್ಬಕ್ಕ ಕಥೆಗಳು.

ಮುಖಚಿತ್ರದಲ್ಲಿ ಕೆಟ್ಟ ಅಭಿರುಚಿಯ ಅಭಿವ್ಯಕ್ತಿ ಬೇರೆ! ಮೇಲೆ ಅವರ ವೃಂದಾವನದಿಂದ, ಶ್ರೀಪಾದರಾಜರ ವೃಂದಾವನಕ್ಕೆ ತೋರುವ ಆಶೀರ್ವಾದ. ಥೂ.... ಥೂ.... ಹೀಗೆಲ್ಲ ವೈಷ್ಣವರು ವರ್ತಿಸಬಾರದು. ನಿಜವಾದಲ್ಲಿ ಅವರ ಆರಾಧನೆ ಏಕೆ ಮಾಡುವುದಿಲ್ಲ? ಭಕ್ತರು ಏಕೆ ಇಷ್ಟು ವೈಭವದಿಂದ ನಡೆದು–ಕೊಳ್ಳುವುದಿಲ್ಲ? ಇಲ್ಲಿ ಇಂತಹ ಅಸತ್ಯವನ್ನು ಬಯಲು ಮಾಡಲಾಗಿದೆ. ಮಾಯಾಜಾಲದ ಮುಸುಕನ್ನು ಕಿತ್ತು ಅವರ 'ನಿಜಸ್ವರೂಪ'ವನ್ನು ಬಯಲು–ಗೊಳಿಸುವ ಒಳ್ಳೆಯ ಪ್ರಯತ್ನ ಅಷ್ಟೇ. ಯಶಸ್ವಿ ಪ್ರಯತ್ನ ಸಂಶೋಧಕರಿಗೆ ಸಂತಸ ಕೊಡುತ್ತದೆ.

ಆ ಮಠದ ಶಿಷ್ಯಂದಿರಿಂದ ರಚಿತವಾದ
Gazzet ಗೆ – Gazzet ನ ಆಧಾರ.

ಇತ್ತೀಚಿನ ಕೃತಿಗಳಿಗೆ – ಪ್ರಾಚೀನ ಕೃತಿಗಳ ಆಧಾರ.

ಮೊನ್ನೆ, ನೆನ್ನೆಯ ಹಸ್ತಪ್ರತಿಗಳಿಗೆ –
ಅಂದಿನ ಪ್ರಾಚೀನ ಹಸ್ತಪ್ರತಿಗಳ ಆಧಾರ.

ಅಸ್ಪಷ್ಟ ವಿಗ್ರಹದ ಚಿತ್ರಗಳಿಗೆ – ನಮ್ಮ ಮಠದ ಸ್ಪಷ್ಟ ಚಿತ್ರಗಳ ಆಧಾರ.

ವಿಜಯರಾಯರ ಕಟ್ಟೆಯಲ್ಲಿ ಇಲ್ಲದ, ಎಲ್ಲಿಂದಲೋ ಬಂದ ಕಾಗದ–ಗಳು – ವಿಜಯರಾಯರ ಕಟ್ಟೆಯಲ್ಲಿ ಪ್ರಸ್ತುತವೂ ಇರುವ ಪ್ರಾಚೀನ ಹಸ್ತಪ್ರತಿ–ಗಳು ಸರಿ ಉತ್ತರವನ್ನೇ ನೀಡಿವೆ.

ಬಹುಶಃ ಇದರಿಂದ ಅವರ ಎಲ್ಲ ಅನುಮಾನಗಳಿಗೆ ವಿರಾಮ ಹೇಳಲು ಸಫಲವಾಗಿದೆ.

ಚಿತ್ರಪಟಗಳ ಸಮೇತ ಮುದ್ರಿಸಲಾಗಿದೆ. ಪೂರ್ವದಿಂದಲೂ ಶ್ರೀಮಠದ ಪಂಚಾಂಗ, ರಾಯಸಗಳಲ್ಲಿ 'ಶ್ರೀಮೂಲರಾಮೋ ವಿಜಯತೇ' ಎಂಬ ಘೋಷಣಾಮುದ್ರೆ ಇದ್ದುದನ್ನು ಗಮನಕ್ಕೆ ತರಲಾಗಿದೆ. ಇಲ್ಲಿನ ಗಮನಾರ್ಹ ಅಂಶವೆಂದರೆ – ಶ್ರೀರಾಯರ ಮಠದ ಪರಂಪರೆಯಲ್ಲಿ ಕೇವಲ 'ಶ್ರೀಮೂಲರಾಮ'ನನ್ನು ಸ್ತುತಿಸಿರುವರಲ್ಲದೇ – ಮೂಲಸೀತೆಯರ ಗೋಜಿಗೆ ಹೋಗಿಲ್ಲ. ಇದು ಶ್ರೀರಾಯರ ಮಠದಲ್ಲಿ ಸತ್ಯವನ್ನು ಮಾತ್ರ ಹೇಳುವ ಸಂಪ್ರದಾಯವಿದೆ ಎಂಬುದನ್ನು ಸಿದ್ಧಪಡಿಸುತ್ತದೆ. ಶ್ರೀವಿಬುಧೇಂದ್ರರ ಅನುಪಸ್ಥಿತಿಯಲ್ಲಿ ಶ್ರೀವಿದ್ಯಾನಿಧಿಗಳು ಶ್ರೀರಾಮಚಂದ್ರತೀರ್ಥರ ಭೂಗತವಾದ ದೇವರ ಪೆಟ್ಟಿಗೆಯನ್ನು ೧೪೩೬ ಎ.ಡಿ. ಯಲ್ಲಿ ವಶಪಡಿಸಿಕೊಂಡಿದ್ದು ಹಾಗೂ ಶ್ರೀರಘುನಂದನರು ೧೪೯೩ ಎ.ಡಿ. ಯಲ್ಲಿ ಅದರಲ್ಲಿನ ಶ್ರೀಮೂಲರಾಮದೇವರನ್ನು ಮರಳಿ ಪಡೆದರೆಂಬ ಐತಿಹಾಸಿಕ ಸತ್ಯವನ್ನು ಯಾವುದೇ ಪೂರ್ವಾಗ್ರಹವಿಲ್ಲದೇ ಒಪ್ಪಲಾಗಿದೆ.

ಈ ಕೃತಿಯಲ್ಲಿ ನಾಲ್ಕು ಭಾಗಗಳಿದ್ದು, ಮೊದಲನೆಯದರಲ್ಲಿ ಶ್ರೀರಾಯರ ಮಠದ ವೈಭವ, ಪ್ರತಿಮೆಗಳು, ದಾಸರಾಯರು ಹಾಗೂ ಯತಿಶ್ರೇಷ್ಠರು ಸ್ತುತಿಸಿದ ಶ್ರೀಮೂಲರಾಮ ಇತ್ಯಾದಿಗಳಿದ್ದರೆ, ಎರಡನೆಯ ಭಾಗವು 'ಸಸೀತಾಮೂಲ–ರಾಮಾರ್ಚಾ'ದ ವಿಮರ್ಶೆಯನ್ನೊಳಗೊಂಡಿದೆ. ಶ್ರೀದಿಗ್ವಿಜಯರಾಮ ಪ್ರತಿಮಾ ಮಹಿಮೆ ಎಂಬ ಮೂರನೆಯ ಅಧ್ಯಾಯವು ಶ್ರೀಮನ್ಮಧ್ವಾಚಾರ್ಯರು ತಮ್ಮ ಸಂಚಾರಕ್ಕೆ (ದಿಗ್ವಿಜಯಕ್ಕೆ) ಬಳಸಿದ ರಜತ ದಿಗ್ವಿಜಯರಾಮ ಹಾಗೂ ವಿಜಯ–ದಾಸರ ಸುಳಾದಿಯನ್ನೊಳಗೊಂಡಿದೆ. 'ಚರ್ವಿತಚರ್ವಣ'ವೆಂಬ ನಾಲ್ಕನೆಯ ಭಾಗದಲ್ಲಿ ಶ್ರೀಉತ್ತರಾದಿಮಠವು ಪದೇ ಪದೇ ತನ್ನ ಶ್ರೇಷ್ಠತ್ವವನ್ನು ಹೇಳಿಕೊಳ್ಳು–ವುದರ ಔಚಿತ್ಯವನ್ನು ಪ್ರಶ್ನಿಸಲಾಗಿದೆ. ಐದನೆಯ ಭಾಗವು ಮೇಲಿನ ಎಲ್ಲ ವಿಷಯ–ಗಳಿಗೆ ಸಂವಾದಿಯಾಗುವಂತಹ ಎಲ್ಲ ಹಾಡುಗಳು, ಭಾವಚಿತ್ರಗಳನ್ನೊಳಗೊಂಡ ಅನುಬಂಧವಾಗಿದೆ.

ನಿಷ್ಪಕ್ಷಪಾತವಾದ ನಿರ್ಣಯವನ್ನು ಕೈಗೊಳ್ಳಲು ಸಹೃದಯ ಓದುಗರಿಗೆ ಇದನ್ನು ಸಮರ್ಪಿಸಲಾಗುತ್ತಿದೆ. ಸುಳ್ಳಿನ ಅಡಿಪಾಯದಿಂದಲೇ ಪ್ರಾರಂಭವಾದ ಈ ಉತ್ತರಾದಿಮಠವು ಅದೇ ಜಾಡನ್ನು ಮುಂದುವರೆಸುವ ಬದಲು – ಇಂದಿನ ಅವಶ್ಯಕತೆಗೆ ಅನುಗುಣವಾಗಿ ವಿಶಾಲ ಮನೋಭಾವದಿಂದ ಸಮಾಜದ ಸುಧಾರಣೆ–ಗಾಗಿ ವಿಧಾಯಕ ಕಾರ್ಯಗಳನ್ನು ಯೋಜಿಸಿ ಎಲ್ಲರ ಗೌರವಕ್ಕೆ ಪಾತ್ರರಾಗ–ಲೆಂದು ನಮ್ಮ ಮನಃಪೂರ್ವಕ ಅಭಿಲಾಷೆಯಾಗಿದೆ.

✶✶✶

ಪ್ರಥಮ ಮುದ್ರಣದ ಮುನ್ನುಡಿ

ಆ ರಾಮನಿಗೆ ವಿರಾಮ

ಯಾಕೋ ಗೊತ್ತಿಲ್ಲ, ರಾಮ ಎಂದರೆ ವಿವಾದ.

ರಾಮಜನ್ಮಭೂಮಿ

ರಾಮ – ಸೀತಾ ಪರಿತ್ಯಾಗ

ರಾಮನ ಚಾರಿತ್ರ್ಯ

ರಾಮ ಕಟ್ಟಿದ – ರಾಮಸೇತು

ಗಾಂಧೀಜಿ ಹೇಳಿದ ಅಂತಿಮ ವಾಕ್ಯ 'ಹೇ ರಾಮ್!'

– ಹೀಗೆ ಒಂದಲ್ಲ ಒಂದು.

ಉತ್ತರಾದಿ ಮಠ ಆರಂಭವಾದ (೧೪೨೦) ರಿಂದ ಇಂದಿನವರೆಗೂ ಇರುವ ಮೂಲರಾಮನ ವಿವಾದ.

ಇದೆಲ್ಲಾ ಬೇಕಿತ್ತಾ!

ಚಿತ್ರರಂಗದ ಹಳೇ ಹಾಡುಗಳಿಗೆ ಈಗಿನವರು Remix ಮಾಡಿ ಕೆಡಿಸುವ ಹಾಗೆ, ಅದೇ ರಾಗ! ಅದೇ ಹಾಡು! ಒಬ್ಬ ಮಾಲೀಕ ಮನೆಗೆ ಬಾಡಿಗೆ ಕೊಡುತ್ತಾನೆ. ಆ ಬಾಡಿಗೆದಾರ ಕುತಂತ್ರಿ. ತನ್ನ ಸಂಬಂಧಿಗಳ ಮುಂಜಿ–ಮದುವೆ ಕಾರ್ಯಕ್ರಮಗಳಿಗೆ ಆಹ್ವಾನಪತ್ರಿಕೆ ಮುದ್ರಿಸುವಾಗ 'ನನ್ನ ಸ್ವಗೃಹ'ದಲ್ಲಿ ಎಂದು ಅಚ್ಚುಹಾಕಿಸುತ್ತಾನೆ. ಕಾರಣಾಂತರದಿಂದ ಮಾಲೀಕ ಹೊರ ಊರಿಗೆ ಹೋದಾಗ ಇಂತಹ ಹತ್ತು ಸುಳ್ಳು ಸಾಕ್ಷಿಗಳನ್ನು ಇಟ್ಟುಕೊಂಡು ಆ ಮನೆ ನನ್ನ ಸ್ವಂತದ್ದು ಎನ್ನುತ್ತಾನೆ.

ಆದರೂ 'ಸಸೀತಾಮೂಲರಾಮಾರ್ಚಾ'ದ ನಿರಾಸವನ್ನು ಕಾಲದ ಅವಶ್ಯಕತೆಗನುಗುಣವಾಗಿ ಮಾಡಲಾಗುತ್ತಿದೆ. ಅದನ್ನು ಸಹೃದಯರು, ಸತ್ಯಾನ್ವೇಷಕರು ಸ್ವಾಗತಿಸುವರೆಂದು ನಂಬುವೆವು. ಅದು ಸ್ವಗೋಷ್ಠಿಯಾಗಿದ್ದರೆ ನಮ್ಮದೇನೂ ತಕರಾರಿಲ್ಲ. ಶ್ರೀಮಠದ ಶಿಷ್ಯಕೋಟಿಗೆ ತಾವು ಏನನ್ನಾದರೂ ಉಪದೇಶಿಸಬಹುದು. ಆದರೆ ಅದು ಇತರ ಮಠಗಳ ಚಾರಿತ್ರ್ಯದ ಕೊಲೆಯಾಗುವುದಾದರೆ ಖಂಡಿತ ಆಕ್ಷೇಪಾರ್ಹವಾಗುತ್ತದೆ.

"ಸಂತಃ ಸಂತು ಸಂತುಷ್ಟಾಃ ದುಷ್ಟಾಃ ನಿಂದಂತು ಸಂತತಮ್ ।
ತಯೋಃ ಸ್ವಭಾವ ಸಿದ್ಧತ್ವಾತ್ ಕಾ ತತ್ರ ಪರಿವೇದನಾ ॥"

✳✳✳

ಉಪೋದ್ಘಾತ

ಶ್ರೀಉತ್ತರಾದಿ ಮಠವು ಇದೇ ೨/೯ ರಲ್ಲಿ 'ಸಸೀತಾಮೂಲರಾಮಾರ್ಚಾ' ಎಂಬ ಪುಸ್ತಿಕೆಯನ್ನು ಹೊರಡಿಸಿ – ಈ ಹಿಂದಿನ ತಮ್ಮ ಪ್ರಕಟಣೆಗಳಂತೆ ಶ್ರೀಮನ್ಮಧ್ವಾಚಾರ್ಯರ ಮೂಲಸಂಸ್ಥಾನ ತಮ್ಮದೇ ಎಂದೂ, ಶ್ರೀಮೂಲರಾಮ, ಸೀತಾವಿಗ್ರಹಗಳು ತಮ್ಮಲ್ಲಿಯೇ ಇವೆ ಎಂದೂ ಸಾಧಿಸಲು ಪ್ರಯತ್ನಿಸಿರುವಂತೆ ಇತರರಿಂದ ಆಕ್ಷೇಪಣೆ ಬರಬಾರದೆಂದು, ಇದು ಶ್ರೀಮಠದ ಶಿಷ್ಯಕೋಟಿ ಪ್ರವಿಷ್ಠರಿಗಾಗಿ ಎಂದು ಹೇಳಿಕೊಂಡಿರುವರು.

ಇದರಲ್ಲಿ ಮುಖ್ಯವಾಗಿ ಅವರು ಶ್ರೀರಾಯರ ಮಠವನ್ನು ಕಟಾಕ್ಷೀಕರಿಸಿರುವರು. 'ಶ್ರೀರಘುನಂದನರು ಪುನಃ ಶ್ರೀಮೂಲರಾಮ ಪ್ರತಿಮೆಯನ್ನು ತಮ್ಮ ಸಂಸ್ಥಾನಕ್ಕೆ ತಂದುಕೊಟ್ಟಿರೆಂಬುದು ಪ್ರಮಾಣಗಳಿಗೆ ಅನನುಗುಣವಾಗಿದೆ ಎಂದೂ, ವೃತ್ತಪೀತಾ ಎಂಬ ಲಕ್ಷಣಶ್ಲೋಕವು ವಾಸಿಷ್ಠ ರಾಮಾಯಣದಲ್ಲಿಲ್ಲವೆಂದೂ, ಸೀತಾರಾಮ ಪ್ರತಿಮೆಗಳಿಗೆ ಸಾಮ್ಯವಿಲ್ಲವೆಂದೂ' ಹೇಳಿಕೊಂಡಿದ್ದಾರೆ. ಇದಕ್ಕೆ ಉಪೋದ್ಬಲಕವಾಗಿ ಶ್ರೀಶ್ರೀಪಾದರಾಜರು, ಶ್ರೀಪುರಂದರದಾಸರು, ಶ್ರೀಗುರುಪುರಂದರದಾಸರು, ಮುಂತಾದ ದಾಸವರೇಣ್ಯರುಗಳ ಕೃತಿಗಳನ್ನೂ, ತಮ್ಮ ಮಠದ ಟಿಪ್ಪಣೀಕಾರರ ಮಂಗಲಶ್ಲೋಕಗಳನ್ನು, ತಮ್ಮ ಮಠದ ವಿಜಯಕಾವ್ಯಗಳನ್ನು ಉದಾಹರಿಸಿದ್ದಾರೆ.

ಈ ಕೃತಿಯಲ್ಲಿ ಅವುಗಳೆಲ್ಲವನ್ನೂ ವಿಮರ್ಶಿಸಲಾಗಿದೆ. ಮುಖ್ಯವಾಗಿ ಶ್ರೀರಾಮಚಂದ್ರತೀರ್ಥರ ಕಾಲದಲ್ಲಿ ಆದ ಮಠಭೇದ, ಶ್ರೀವಿದ್ಯಾನಿಧಿಗಳ ಪ್ರವೇಶ ಇತ್ಯಾದಿಗಳನ್ನು ಸಪ್ರಮಾಣಕವಾಗಿ ವಿವರಿಸಲಾಗಿದೆ. ಶ್ರೀವಾದೀಂದ್ರರ 'ಪರಸ್ಥ ಸೀತಾಸದೃಶೋ ಮೂಲರಾಮಸ್ತು ಮನ್ಮಠೇ' ಎಂಬುದನ್ನು ಫೋಟೋಗಳ ಸಮೇತ ಸಿದ್ಧಪಡಿಸಲಾಗಿದೆ.

ಅಪರೋಕ್ಷಜ್ಞಾನಿಗಳಾದ ಶ್ರೀಪುರಂದರದಾಸಾದಿಗಳು ಶ್ರೀರಾಯರ ಮಠದಲ್ಲಿನ ಯತಿಗಳು ಪೂಜಿಸುತ್ತಿದ್ದ 'ಶ್ರೀಮೂಲರಾಮನ' ಕೃತಿಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಶ್ರೀರಾಘವೇಂದ್ರವಿಜಯ ಹಾಗೂ ಅದರ ಟಿಪ್ಪಣಿಗಳನ್ನು

ರಾಜರಿಗೆ ರಘುನಾಥತೀರ್ಥರು ಪ್ರಶಸ್ತಿ ಕೊಟ್ಟರು, ವ್ಯಾಸತ್ರಯಗಳನ್ನು ರಘುನಾಥತೀರ್ಥರು ವಿಮರ್ಶಿಸಿದರು. ದಾಸಗುಪ್ತಾರವರು ಮಧ್ವರ ಮೂಲಪರಂಪರೆ ಉತ್ತರಾದಿ ಮಠ ಮಾತ್ರ ಎಂದಿರುವರು, ವಿಜಯಧ್ವಜರನ್ನು ಬಹಿಷ್ಕರಿಸಿದ್ದು' ಮುಂತಾದ ವಿಶ್ವಾಸಾನರ್ಹ ಹಾಗೂ ಸ್ಪಷ್ಟ ತಪ್ಪುಗಳಿಂದ ಕೂಡಿದ ವಿಷಯಗಳನ್ನು ಡಾ। ಶರ್ಮಾರವರು ಚರ್ಚಿಸಿ ನಿರಾಕರಿಸಿದ್ದಾರೆ. ಶ್ರೀಅಕ್ಷೋಭ್ಯತೀರ್ಥರು ವಿದ್ಯಾರಣ್ಯರನ್ನು ಸೋಲಿಸಿದರು ಎಂಬ ವಿಷಯವನ್ನು ಕಳೆದ ನೂರಾರು ವರ್ಷಗಳ ಹಿಂದೆ ಉತ್ತರಾದಿ ಮಠೀಯರು ಸೃಷ್ಟಿಸಿದ ಸುಳ್ಳುಕಥೆಯ ಕೃತ್ರಿಮತೆಯನ್ನು ಪರಿಹರಿಸುವುದು ಈಗ ನುಂಗಲಾರದ ತುತ್ತಾಗಿದೆ.

ಇನ್ನು ಅವಿಚ್ಛಿನ್ನ ಪರಂಪರೆ ಎಂದು ಹೇಳಿಕೊಳ್ಳುವುದಂತೂ ತೀರಾ ಹಾಸ್ಯಾಸ್ಪದ. ವಿದ್ಯಾನಿಧಿ, ರಘುನಾಥತೀರ್ಥರುಗಳಿಗೇನೇ ಆಶ್ರಮಗುರುಗಳು ಯಾರೆಂದು ನಿರ್ಣಯಿಸಲಾಗದ ಸಂದಿಗ್ಧತೆ, ಅನೇಕ ಯತಿಗಳ ನಿರ್ಯಾಣಾನಂತರ ಮುಂದಿನವರು ಸನ್ಯಸ್ತರಾಗಿ ಪೀಠಕ್ಕೆ ಬರುವುದು, ಅನಾರೋಗ್ಯ ನಿಮಿತ್ತ ಪೂಜಾ ವಿಚ್ಛಿತ್ತಿ ಇತ್ಯಾದಿಗಳು ಈ ವಾದಕ್ಕೆ ಬಾಧಕವಾಗಿವೆ.

ಇನ್ನು ಶ್ರೀಮೂಲರಾಮ ಪ್ರತಿಮೆಯ ಬಗ್ಗೆ ಶ್ರೀವಾದೀಂದ್ರರ 'ಅರ್ಚಾಗತಿಕ್ರಮ', ಶ್ರೀಜಗನ್ನಾಥದಾಸರ ಪದಗಳು, ಶ್ರೀರಾಯರ ಮಠದ ಅಧಿಕೃತ ಮುದ್ರೆ / ಘೋಷಣೆ, ಶ್ರೀವಿಜಯೀಂದ್ರವಿಜಯದಲ್ಲಿನ ಮಠಭೇದದ ವಿವರಣೆ, ಉತ್ತರಾದಿ ಮಠದ ಸತ್ಯಧರ್ಮರ (೧೭೯೨–೧೮೩೦) ಕಾಲದ 'ಪರಂಪರಾ ಪದ್ಧತಿ', ಉಭಯ ಮಠದ ರಾಯಸಗಳು, ಸತ್ಯವೀರತೀರ್ಥರು ಬರೆದುಕೊಟ್ಟ ವ್ಯವಸ್ಥಾಪತ್ರ, ೧೮೮೮ ಹಾಗೂ ೧೮೯೧ ರಲ್ಲಿ ಮೈಸೂರು ಕೋರ್ಟಿನಲ್ಲಿ ನಡೆದ ವ್ಯಾಜ್ಯದ ತೀರ್ಮಾನ, ಮಹಾರಾಜರ ಆಜ್ಞೆ, ಇತ್ಯಾದಿಗಳನ್ನು ವಿಮರ್ಶಿಸಿದರೆ – ಇಂದು ಪೂಜೆಗೊಳ್ಳುತ್ತಿರುವ ಮೂಲರಾಮ ರಾಯರ ಮಠದಲ್ಲೂ, ಮೂಲಸೀತೆ ಉತ್ತರಾದಿ ಮಠದಲ್ಲೂ ಇದೆ ಎಂಬುದು ಕಳೆದ ೩೦೦ ವರ್ಷಗಳಿಂದ ಎಲ್ಲರೂ ಒಪ್ಪಿದ ಸತ್ಯಾಂಶ. ಇನ್ನು ಈ ಅವಧಿಯಲ್ಲಿ ಮೂಲಸೀತಾವಿಗ್ರಹ ಶಿಲ್ಪಶಾಸ್ತ್ರಕ್ಕೆ ವಿರುದ್ಧವಾಗಿ ತಾಮ್ರದ ಬದಲು ಹಿತ್ತಾಳೆಯದಿದ್ದ ಬಗ್ಗೆ ಸತ್ಯವರರು (೧೭೯೪–೯೨) ಹಾಗೂ ಸತ್ಯವೀರ (೧೮೮೦–೮೪) ರ ಕಾಲದಲ್ಲಿ ಮಠದಲ್ಲಿ ನಡೆದ ಕಳವಿನ ಪ್ರಕರಣ

ದಿಂದ ವಿವರಿಸಬಹುದಾಗಿದೆ. ರಾಮ–ಸೀತೆಯರ ಪ್ರತಿಮೆಗಳ ನಿರ್ಮಾಣವೇ ಒಂದು ತಾಮ್ರ ಹಾಗೂ ಇನ್ನೊಂದು ಹಿತ್ತಾಳೆಯದನ್ನಾಗಿ ಮಾಡಲಾಯಿತು. ಹಿತ್ತಾಳೆಯ ಸೀತೆಗೆ ತಾಮ್ರದ ಪೀಠವನ್ನು ಜೋಡಿಸಲಾಯಿತೆಂಬುದು ಹಾಗೂ ಸೀತೆಯ ಎತ್ತರವನ್ನು ರಾಮನ ಸೊಂಟಕ್ಕೆ ಬರುವಂತೆ ನಿರ್ಮಿಸಿದರೆಂಬ ಕಲ್ಪನೆಯಂತೂ ಮತ್ಸ್ಯಪುರಾಣಾದಿಗಳಲ್ಲಿ ಬರುವ ಪ್ರತಿಮಾಲಕ್ಷಣಶಾಸ್ತ್ರಕ್ಕೆ ಅನನುಗುಣವಾದುದು. ಅಲ್ಲದೇ ಶ್ರೀರಘುನಂದನರು ಶ್ರೀಮೂಲರಾಮನನ್ನು ೧೮೪೩ರಲ್ಲಿ ಮೌಲ್ಯದಿಂದ ರಾಯರ ಮಠಕ್ಕೆ ತರಿಸಿದ ಬಳಿಕ ಆ ಸ್ಥಾನದಲ್ಲಿ ಇನ್ನೊಂದು ರಾಮ ಪ್ರತಿಮೆಯನ್ನು ಬಳಸಲಾಯಿತೆಂದು ಶ್ರೀವಿಜಯೀಂದ್ರವಿಜಯದಲ್ಲಿ ಸ್ಪಷ್ಟವಾಗಿದೆ.

ಹೀಗಾಗಿ ವಸ್ತುಸ್ಥಿತಿಯನ್ನು ಯಥಾವತ್ತಾಗಿ ಸ್ವೀಕರಿಸಿ, ಕುತರ್ಕಗಳಿಂದ ವಿವಾದಗಳನ್ನು ಸೃಷ್ಟಿಸದೇ ಇನ್ನೂ ಮಹತ್ವದ ವಿಷಯಗಳಾದ ಮಾಧ್ವ ತತ್ತ್ವಜ್ಞಾನ ಪ್ರಸಾರ ಮುಂತಾದ ಸಮಾಜಮುಖಿ ಕಾರ್ಯಕ್ರಮಗಳನ್ನು ರೂಪಿಸುವುದು, ಮಠದ ಆದಾಯವನ್ನು ಇಂತಹ ಕಾರ್ಯಗಳಿಗೆ ವಿನಿಯೋಗಿಸುವುದು ಇವೇ ಮೊದಲಾದವುಗಳಲ್ಲಿ ಪ್ರವೃತ್ತರಾಗುವುದು ಇಂದಿನ ಅವಶ್ಯಕತೆಯಾಗಿದೆ. ನಮ್ಮ ಯುವಜನಾಂಗ ಇಂತಹ ಹಾಸ್ಯಾಸ್ಪದ ಚರ್ಚೆಗಳಿಂದ ರೋಸಿ ಹೋಗಿರುವರು. ಅವರು ವಿಧಾಯಕ ಕಾರ್ಯಗಳಿಗೆ ಕೈಜೋಡಿಸುವರೇ ಹೊರತು ಸ್ವಾಭಿಮಾನದ ಅತಿರೇಕಗಳನ್ನು ಅವರು ಸಹಿಸಲಾರರು. ಅಲ್ಲದೇ ಪದೇ ಪದೇ ನಾವೇ ದೊಡ್ಡವರು ಎಂಬುವುದರಲ್ಲಿ ಕೇಳುಗರು ಅನುಮಾನಪಡುವ ಪ್ರಸಂಗವೂ ಬರುತ್ತದೆ. ಆ ಮಾತನ್ನು ಇತರರು ಹೇಳಬೇಕೇ ವಿನಃ ಸ್ವಯಂ ಆ ಕೆಲಸ ಮಾಡಬಾರದಷ್ಟೇ?

ಡಾ. ಶರ್ಮಾರವರು ಹೇಳುವಂತೆ ಇಂತಹ ವಿಷಯಗಳ ಮರಣೋತ್ತರ ತನಿಖೆಯಿಂದ ಏನೂ ಪ್ರಯೋಜನವಾಗಲಾರದು. ವಿಗ್ರಹಗಳ ಪ್ರಾಚೀನತೆಯನ್ನು ಇಂದಿಗೂ ಕಾರ್ಬನ್ ಡೇಟಿಂಗ್‌ನಿಂದ ಸುಲಭವಾಗಿ ಮಾಡಬಹುದು. ಎರಡೂ ಮಠಗಳಲ್ಲಿನ ರಾಮವಿಗ್ರಹಗಳಲ್ಲಿ ಯಾವುದು ಪ್ರಾಚೀನ ಎಂಬುದನ್ನು ಎಳೆಯ ಮಕ್ಕಳೂ ಹೇಳಬಹುದು.

ಪ್ರಸ್ತಾವನೆ

ಉತ್ತರಾದಿ ಮಠವು ಇದೇ ಫೆಬ್ರವರಿ ೨೦೦೯ ರಲ್ಲಿ 'ಸಸೀತಾ ಮೂಲ–ರಾಮಾರ್ಚಾ' ಎಂಬ ಪುಸ್ತಕವನ್ನು ಬಿಡುಗಡೆ ಮಾಡಿದೆ. ಅದರಲ್ಲಿ ಆ ಮಠದ ಪ್ರೀತ್ಯಾಸ್ಪದ ವಿಷಯವಾದ 'ನಾವೇ ಮೂಲಮಠ, ಮಧ್ವರ ಹಾಗೂ ಅವರ ಪೂರ್ವಜರಿಂದ ಪಾರಂಪರಿಕವಾಗಿ ಬಂದ ಎಲ್ಲ ಪ್ರತಿಮೆಗಳಿಗೆ ನಾವೇ ಏಕಮಾತ್ರ ವಾರಸುದಾರರು, ಇತರ ಮಠಗಳು ಕೇವಲ ಬಾಲಂಗೋಚಿಗಳು ಹಾಗೂ ನಗಣ್ಯ' ಇತ್ಯಾದಿ ವಿಷಯಗಳನ್ನು ಪ್ರತಿಪಾದಿಸುತ್ತಾ ಈ ಸಲ 'ಮೂಲರಾಮ ಪ್ರತಿಮೆ' ನಮ್ಮಲ್ಲಿದೆ ಎಂಬ ವಾದವನ್ನು ಎತ್ತಿದ್ದಾರೆ.

ಈ ಹಿಂದೆ ಉತ್ತರಾದಿ ಮಠದ ಅಧಿಕೃತ ಪ್ರಕಟಣೆಗಳಾದ ಗುರುಚರ್ಯಾ (೧೬೪೮), ಸತ್ಕಥಾ (೧೮೯೬, ೧೯೩೧ ಮತ್ತು ೧೯೭೪), ಪೂರ್ಣಬೋಧ ಗುರುವಂಶ ಕಥಾಕಲ್ಪತರು, ಡಾ. ಸುಬ್ಬಾಚಾರ್ಯರ Glories of the Pontiffs of Uttaradi Mutt, ಸಿ.ಆರ್. ರಾವ್ ರವರ 'ಶ್ರೀಮದುತ್ತರಾದಿಮಠ – ಶ್ರೀಮಧ್ವಾಚಾರ್ಯರ ಮೂಲಮಹಾಸಂಸ್ಥಾನ' ಇತ್ಯಾದಿಗಳಲ್ಲಿನ ವಿಷಯ–ಗಳನ್ನೇ ಇಲ್ಲಿ ಚರ್ವಿತಚರ್ವಣ ಮಾಡಿದ್ದು ಶ್ರೀಸತ್ಯಪ್ರಮೋದರವರೆಗೆ ಎತ್ತಲಾಗದ 'ಮೂಲರಾಮ'ನ ಪ್ರಕರಣವನ್ನು ಪ್ರಸ್ತುತ ಪೀಠಾಧಿಪತಿಗಳು ಎತ್ತಿ ಜೇನುಗೂಡಿಗೆ ಕೈಹಾಕಿದ್ದಾರೆ. ಅವರ ಎಲ್ಲ ದಾಖಲೆಗಳು ಪೂರ್ವಾಗ್ರಹದೂಷಿತವಾಗಿದ್ದು ಅವಿಚಾರ–ದಿಂದ ಕೂಡಿದ ಹೇಳಿಕೆಗಳು, ಮಠ–ಮಠಗಳಲ್ಲಿ ವೈಮನಸ್ಸು ಉಂಟಾಗುವಂತವು–ಗಳಿದ್ದು, ಪರಸ್ಪರ ವಿರೋಧೀ ಹೇಳಿಕೆಗಳು ಅವಿಶ್ವಾಸಾರ್ಹತೆಗೆ ಎಡೆಯುಂಟು ಮಾಡಿವೆ. ಮೇಲಿನ ಎಲ್ಲ ಪ್ರಕಟಣೆಗಳನ್ನು ಮುಂಬೈಯ ಮಹಾಮಹೋಪಾಧ್ಯಾಯ, ಮಧ್ವಮುನಿಪ್ರಿಯ, ಮುಂತಾದ ಬಿರುದಾಂಕಿತರೂ, ಅಂತಾರಾಷ್ಟ್ರೀಯ ಖ್ಯಾತಿಯ ವಿದ್ವಾಂಸರೂ 'ದ್ವೈತವೇದಾಂತದ ಇತಿಹಾಸ ಮತ್ತು ಸಾಹಿತ್ಯ' ಎಂಬ ಮೇರು ಕೃತಿಯನ್ನು ಬರೆದವರೂ ಆದ ಡಾ. ಬಿ.ಎನ್.ಕೆ. ಶರ್ಮಾರವರು ಶತಶಃ

೧೯೮೪ ರಷ್ಟು ಹಿಂದೆಯೇ ಖಂಡಿಸಿರುವರು. 'ಪುರಂದರದಾಸರ ಪದ', 'ಉತ್ತರಾದಿ ಮಠದ ಪ್ರತಿಮೆಗಳು' ಮುಂತಾದ ಅಧ್ಯಾಯಗಳಲ್ಲಿ ಐತಿಹಾಸಿಕ ಶಾಸನಗಳು, ದಾಖಲೆಗಳು ಮುಂತಾದವುಗಳ ಆಧಾರದಿಂದ ಸತ್ಯಾಸತ್ಯತೆಯ ನಿರ್ಣಯವನ್ನು ಮಾಡಿರುವರು.

ಹೀಗಾಗಿ ಈಗಿನ 'ಸಸೀತಾಮೂಲರಾಮಾರ್ಚಾ'ದಲ್ಲಿನ ಅಭಿಯೋಗವು ಪ್ರತ್ಯೇಕ ಖಂಡನೆಗೆ ಯೋಗ್ಯವೇ ಅಲ್ಲ. ಇದರಲ್ಲಿನ ಹೆಚ್ಚಿನ ವಿಷಯವೇನೆಂದರೆ 'ಮೂಲರಾಮ ಪ್ರತಿಮೆ'ಯ ಬಗ್ಗೆ ಮಾತ್ರ. ಅದನ್ನು ಮುಂದಿನ ಪುಟಗಳಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗುವುದು.

ಇತಿಹಾಸವನ್ನು ತಿರುಚುವ ಕೆಲಸ ಹೊಸದೇನಲ್ಲ. ಆಚಾರ್ಯ ಮಧ್ವರೇ 'ಕ್ವಚಿತ್ ಗ್ರಂಥಾನ್ ಪ್ರಕ್ಷಿಪಂತಿ' ಎಂದು ಹೇಳಿರುವರು. ಹಂಪಿಯ ಕನ್ನಡ ವಿಶ್ವವಿದ್ಯಾಲಯವು 'ವಿಜಯನಗರದ ಇತಿಹಾಸ'ದ ಸಂಪುಟಗಳಲ್ಲಿ ವಿದ್ಯಾರಣ್ಯರ ಬಗ್ಗೆ, ಇಸ್ಲಾಮಿನ ಆಕ್ರಮಣದ ಬಗ್ಗೆ ವಸ್ತುಸ್ಥಿತಿಯ ವಿರುದ್ಧವಾದ ಹಾಗೂ ಈಗಿನ ರಾಜಕೀಯಕ್ಕೆ ಹೊಂದುವಂತಹ ಬದಲಾವಣೆಗಳನ್ನು ಮಾಡಲಾಗಿದೆ ಎಂಬ ಆಕ್ಷೇಪವು ಇದೆ. ಅಷ್ಟಮಠಗಳ ಕೈಫಿಯತ್ತುಗಳೂ ಸಹ ಸಂಪೂರ್ಣ ವಿಶ್ವಾಸಾರ್ಹಗಳಲ್ಲವೆಂಬ ಭಾವನೆಯನ್ನು ಡಾ. ಶರ್ಮಾರವರು ವ್ಯಕ್ತಪಡಿಸಿದ್ದಾರೆ. ಇತರೆಡೆಯಲ್ಲೂ ಬೋಧಾಯನರ ಸಿದ್ಧಾಂತವನ್ನು ಪೈಥಾಗೋರಸ್‌ನು ಕಂಡುಹಿಡಿದನೆಂಬುದು, ಶಿವಮಂದಿರವನ್ನು ತಾಜಮಹಲನ್ನಾಗಿಸುವುದು, 'ಜನಗಣಮನ ಅಧಿನಾಯಕ ಜಯಹೇ' ಇದು ರಾಷ್ಟ್ರಗೀತೆ ಎಂಬುದು ಮುಂತಾದ ವ್ಯತ್ಯಸ್ತ ವಿಚಾರಗಳು ನಮ್ಮ ಮನದಲ್ಲಿ ಮನೆ ಮಾಡಿಕೊಂಡಿವೆ. ಪಾಶ್ಚಾತ್ಯ ವಿದ್ವಾಂಸರು ಬ್ರಿಟೀಷರ ಸಾಮ್ರಾಜ್ಯಶಾಹಿ ಧೋರಣೆಗನುಗುಣವಾಗಿ 'ಆರ್ಯರ ಆಕ್ರಮಣ'ವೆಂಬ ಸುಳ್ಳನ್ನು ಸೃಷ್ಟಿಸಿದ್ದು ಈಗ ಸಿದ್ಧವಾಗಿದೆ. ಭಾರತ–ದಲ್ಲಿ ಶಿಕ್ಷಣಪದ್ಧತಿಯನ್ನು ರೂಪಿಸಿದ ಮೆಕಾಲೆಯ ಉದ್ದೇಶವೇ ಬ್ರಿಟೀಷರಿಗೆ ಅನುಕೂಲವಾಗುವಂತಹ ಕೂಟಬುದ್ಧಿಯುಳ್ಳದೆಂದು ಅವನೇ ಹೇಳಿಕೊಂಡಿ–ದ್ದಾನೆ. ಹಿಟ್ಲರನ ಪ್ರಸಾರ ಮಂತ್ರಿ ಗೋಬೆಲ್ಸ್‌ನ ಸಿದ್ಧಾಂತದಂತೆ ಒಂದು ಸುಳ್ಳನ್ನು ನೂರು ಸಲ ಹೇಳಿದರೆ ಅದು ಸತ್ಯವಾಗುವದೆಂಬುದು ಈಗ ಎದ್ದುಕಾಣುತ್ತಿದೆ.

ಅದರಂತೆ ಮಠದ ಉತ್ಕರ್ಷದ ವಿಷಯವನ್ನೇ ಧ್ಯೇಯವನ್ನಾಗಿರಿಸಿ–ಕೊಂಡ ಉತ್ತರಾದಿಮಠವು ದಾಖಲೆಗಳನ್ನು ಸೃಷ್ಟಿಸುತ್ತಲೇ ಬಂದಿದೆ. 'ಶ್ರೀಪಾದ–

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ॥

ಮೂಲರಾಮಸ್ತು ಮನ್ಮತೇ

(‘ಸಸೀತಾಮೂಲರಾಮಾರ್ಚಾ’ ಗ್ರಂಥವಿಮರ್ಶೆ)



ಪ್ರಕಾಶಕರು

ಶ್ರೀರಾಘವೇಂದ್ರ ಸಾಹಿತ್ಯ ಪರಿಷತ್

ನಂಜನಗೂಡು

MOOLARAMASTU MANMATE
(‘Saseetha Moolaramarcha’ Granthavimarshe)

First Edition : 2009
Second Edition : 2010

Copies : 1000

Pages : xv + 156

Price : **₹ 25/-**

Printed at : **Sree Gururaja Offset Printers,**
Adoni-518301. A.P. M.:09440334832

।। अथ यो मन्त्रे मन्त्रे वेद स सर्वमायुरेति - श्रुतिः ।।

He who knows history, gets eternal life

।। मूलरामस्तु मन्मठे ।।

(‘ससीतामूलरामार्चा’ ग्रन्थविमर्शः)

[illegible]

ಭೂರಿಭೋಜನದಿಂದ, ಸನ್ಮಾನ, ಕೊಡುಗೆಗಳಿಂದ ಎಲ್ಲ ಜನರನ್ನೂ ತಣಿಸಿ ಶ್ರೀರಘುನಂದನತೀರ್ಥರೊಂದಿಗೆ ತಮ್ಮ ಹೆಸರನ್ನೂ ಶಾಶ್ವತಗೊಳಿಸಿಕೊಂಡು ಕೀರ್ತಿಭಾಜನರಾದರು.

ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರ ಕರಕಮಲಸಂಜಾತರಾದ ಪ್ರಸ್ತುತ ಪೀಠಾಧಿಪತಿಗಳಾದ ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು ತಮ್ಮ ಗುರು–ಪರಂಪರೆಯ ಸದಾಚಾರ, ಸದ್ವಿಚಾರಗಳ ಅನುಷ್ಠಾನದಲ್ಲಿ ದೀಕ್ಷಾಬದ್ಧರಾಗಿ ಶ್ರೀಮನ್ಮೂಲರಾಮಚಂದ್ರದೇವರನ್ನು ನಿರಂತರ ಆರಾಧಿಸುತ್ತ, ಶ್ರೀರಾಘವೇಂದ್ರ ಗುರುಸಾರ್ವಭೌಮರ ಶಿಷ್ಯ–ಭಕ್ತಸಮೂಹದ ಶ್ರೇಯಃಪ್ರಾರ್ಥನೆ ಮಾಡುತ್ತ ವಿರಾಜಮಾನರಾಗಿದ್ದಾರೆ.

"ಬ್ರಹ್ಮಾಭ್ಯರ್ಚಿತ ಮೂಲರಾಮಮಖಿಲಪ್ರಜ್ಞಾರ್ಚಿತಂ ಸ್ವೇಶಿರಃ
ಪಾದೇನ್ಯಸ್ತ ಸುದರ್ಶನಂ ಹರಿದಶ ಶ್ರೇಷ್ಠಾವತಾರಾಂಕಿತೇ ।
ಪೀಠೇಸಂಸ್ಥಿತ ದಿಗ್ಜಯಂಚ ಜಯಿನಂ ರಾಮಂ ಜಯಾರ್ಯಾರ್ಚಿತಂ
ವಿಸ್ತೀರ್ಣಾಷ್ಟಭುಜ ದ್ವಿಜೇಂದ್ರ ಭುಜಗಂ ಲಕ್ಷ್ಮೀಶನಾರಾಯಣಮ್ ॥"

"ಶ್ರೀಭೂದುರ್ಗಾಸಮೇತಂ ಮಣಿಮಯವಪುಷಂ ಶೇಷಶಯ್ಯಾ ವಿಲಾಸಂ
ನೀಲಾರ್ಚ್ಯಂ ವಾಸುದೇವಂ ವರದಮಪಿಹರಿಂ ವೇಣುಗೋಪಾಲಕೃಷ್ಣಮ್ ।
ಶ್ರೀಕೃಷ್ಣಂ ರಾಘವೇಂದ್ರಾರ್ಚಿತಮಥ ಸುಮತೀಂದ್ರಾರ್ಚಿತಂ ವಾಜಿವಕ್ತ್ರಂ ।
ರಾಮಾಂಕೇ ವ್ಯಾಸಮುಷ್ಟೀ ಯತಿವರ ಸುಯತೀಂದ್ರೋಯಮರ್ಚತ್ಯುದಾರಃ ॥"

ಈ ಶ್ಲೋಕಗಳನ್ನು ಅನೇಕ ತಲೆಮಾರುಗಳಿಂದ ಆಯಾ ಕಾಲದ ಪೀಠಾ–ಧಿಪತಿಗಳ ಹೆಸರಿನಲ್ಲಿ ಹೇಳುತ್ತಲೇ ಬರಲಾಗಿದೆ. ಪ್ರಸ್ತುತ –

"ಬ್ರಹ್ಮದೇವರಿಂದ ವಿಶೇಷಪೂಜಿತರಾದ ಶ್ರೀಮೂಲರಾಮದೇವರನ್ನೂ; ಶ್ರೀಪೂರ್ಣಪ್ರಜ್ಞರಿಂದ (ಮಧ್ವಾಚಾರ್ಯರಿಂದ) ಪೂಜಿತರಾದ, ಶಿರ ಮತ್ತು ಪಾದಗಳಲ್ಲಿ ಅಳವಡಿಸಿರುವ ಸುದರ್ಶನ ಶಿಲೆಗಳಿಂದ ಕೂಡಿದ, ಹರಿಯ ದಶಾವತಾರಗಳಿಂದ ಅಲಂಕೃತವಾದ ಪೀಠದಲ್ಲಿ ನಿಂತಿರುವ ಶ್ರೀದಿಗ್ವಿಜಯ–ರಾಮದೇವರನ್ನೂ; ಶ್ರೀಮಜ್ಜಯತೀರ್ಥಕರಾರ್ಚಿತ ಶ್ರೀಜಯರಾಮದೇವ–ರನ್ನೂ; ಶ್ರೀಸುಧೀಂದ್ರತೀರ್ಥಕರಾರ್ಚಿತ ಅಷ್ಟಭುಜ ಗರುಡವಾಹನ ಶ್ರೀಲಕ್ಷ್ಮೀ–ನಾರಾಯಣದೇವರನ್ನೂ; ನೀಲಾದೇವೀಕರಾರ್ಚಿತ ಶ್ರೀ–ಭೂ–ದುರ್ಗಾಸಮೇತ,

ನವರತ್ನಖಚಿತ ಆದಿಶೇಷಸ್ಥಿತನಾದ ಶ್ರೀವೈಕುಂಠವಾಸುದೇವಮೂರ್ತಿಯನ್ನೂ; ಶ್ರೀವರದರಾಜಸ್ವಾಮಿಯನ್ನೂ; ಶ್ರೀವೇಣುಗೋಪಾಲಕೃಷ್ಣದೇವರನ್ನೂ; ಶ್ರೀರಾಘವೇಂದ್ರಸ್ವಾಮಿಗಳವರಿಂದ ಪೂಜಿತವಾದ ಶ್ರೀಸಂತಾನಗೋಪಾಲ–ಕೃಷ್ಣದೇವರನ್ನೂ; ಸುವರ್ಣಸಂಪುಟದಲ್ಲಿ ಶೋಭಿಸುವ ಎರಡು ವ್ಯಾಸಮುಷ್ಟಿ–ಗಳನ್ನೂ; ಎರಡು ರಾಮಟಂಕೀ ವರಹಗಳನ್ನೂ; ಶ್ರೀಸುಮತೀಂದ್ರತೀರ್ಥ ಕರಾರ್ಚಿತ ಶ್ರೀಹಯಗ್ರೀವದೇವರನ್ನೂ; ಉದಾರ ವ್ಯಕ್ತಿತ್ವದ ಶ್ರೀಸುಯತೀಂದ್ರ–ತೀರ್ಥರು ಪೂಜಿಸುತ್ತಾರೆ" ಎಂಬ ಅರ್ಥದ ಈ ಎರಡು ಶ್ಲೋಕಗಳನ್ನು ಶ್ರೀಮಠದ ಶಿಷ್ಯರು ತಮ್ಮ ನಿತ್ಯ ದೇವರ ಪೂಜೆಯ ಆರಂಭದಲ್ಲಿ ಪಾರಾಯಣ ಮಾಡಿ ಅರ್ಥಾನುಸಂಧಾನಪೂರ್ವಕ ಚಿಂತಿಸಿ, ದೇವರ ಪೂಜೆ ಮುಂದುವರಿಸುವ ಪರಿಪಾಠವಿದೆ.

✳✳✳

ಶ್ರೀಸುಪ್ರಜ್ಞೇಂದ್ರತೀರ್ಥರು ರಚಿಸಿದ **'ಶ್ರೀಸುಗುಣೇಂದ್ರತೀರ್ಥಪಂಚರತ್ನ-ಮಾಲಾಸ್ತೋತ್ರ'**ದಲ್ಲಿ –

"ಕಿಂವಾ ಚೇತಸಿ ಸನ್ನಿಧಾಯ ವಿಧಿವಚ್ಛ್ರೀ ಮೂಲರಾಮಾರ್ಚನಮ್
ಕೃತ್ವಾ ದ್ವಾದಶವತ್ಸರಾವಧಿತತಸ್ತ್ಯಕ್ತ್ವಾ ತನೂಂ ಮಾನುಷೀಮ್ ।
ಚಿತ್ತೂರು ಸ್ಥಿತಶಿಷ್ಯಸಂಘರಚಿತೇ ಬೃಂದಾವನೇ ಸಂವಸನ್
ತುಷ್ಟಃ ಶ್ರೀಸುಗುಣೇಂದ್ರತೀರ್ಥ ಗುರುರಾಟ್ ಇಷ್ಟಪ್ರದಃ ಸ್ಯಾನ್ಮಮ ॥"

ಎಂದು ಪ್ರಾರ್ಥಿಸುತ್ತಾ ತಮ್ಮ ಗುರುಗಳು ೧೨ ವರ್ಷಗಳ ಕಾಲ ಶ್ರೀಮೂಲ-ರಾಮದೇವರನ್ನು ಭಕ್ತಿಯಿಂದ ಪೂಜಿಸಿದ ಐತಿಹಾಸಿಕ ವಿಚಾರವನ್ನು ದೃಢೀ-ಕರಿಸಿದ್ದಾರೆ.

ಕಾಶಿಯ ಬಾಲಸರಸ್ವತೀ ಎಂಬ ಅದ್ವೈತಪಂಡಿತರಿಂದ ವಿರಚಿತವಾದ **'ಯತೀಂದುಶತಕ'**ದಲ್ಲಿ ಶ್ರೀಸುಕೃತೀಂದ್ರತೀರ್ಥರು ಗೈದ ಶ್ರೀಮೂಲರಾಮಾರ್ಚನ ಹಾಗೂ ಸಚ್ಛಾಸ್ತ್ರಪ್ರಚಾರ ಕಾರ್ಯಗಳನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ.

"ಬ್ರಹ್ಮೇಂದ್ರಾದ್ಯಭಿವಂದಿತಾಂಘ್ರಿಯುಗಲ ಶ್ರೀಮೂಲರಾಮಾರ್ಚನ
ವ್ಯಾಸಂಗಾದನುವಾಸರಂ ನವನವೋನ್ಮೀಲನ್ನಿಜಪ್ರಾಭವಮ್ ।
ಶ್ರೀಮಧ್ವಮುನೀಂದ್ರ ಸಮ್ಮತಮತಾಚಾರ ಪ್ರಚಾರೋದ್ಯತಂ
ವಂದೇ ಶ್ರೀಸುಕೃತೀಂದ್ರತೀರ್ಥಯಮಿನಂ ಬೃಂದಾವನೀಮಂದಿರಮ್ ॥ ೧ ॥"

ಮುಂದೆ ಶ್ರೀಭುವನೇಂದ್ರತೀರ್ಥರ ನಂತರ ಕ್ರಮವಾಗಿ, ಶ್ರೀಸುಬೋಧೇಂದ್ರ-ತೀರ್ಥರು, ಶ್ರೀಸುಜನೇಂದ್ರತೀರ್ಥರು, ಶ್ರೀಸುಜ್ಞಾನೇಂದ್ರತೀರ್ಥರು, ಶ್ರೀಸುಧ-ರ್ಮೇಂದ್ರತೀರ್ಥರು, ಶ್ರೀಸುಗುಣೇಂದ್ರತೀರ್ಥರು, ಶ್ರೀಸುಪ್ರಜ್ಞೇಂದ್ರತೀರ್ಥರು, ಶ್ರೀಸುಕೃತೀಂದ್ರತೀರ್ಥರು, ಶ್ರೀಸುಶೀಲೇಂದ್ರತೀರ್ಥರು, ಶ್ರೀಸುವ್ರತೀಂದ್ರತೀರ್ಥರು, ಶ್ರೀಸುಯಮೀಂದ್ರತೀರ್ಥರು, ಶ್ರೀಸುಜಯೀಂದ್ರತೀರ್ಥರು ಹಾಗೂ ಶ್ರೀಸುಶ-ಮೀಂದ್ರತೀರ್ಥರು ಈ ಪೀಠವನ್ನಾಳಿ ಶ್ರೀಮೂಲರಾಮದೇವರ ವಿಶೇಷ ಉಪ-ಸತ್ತಿಯನ್ನು ಮಾಡಿ ಧನ್ಯರಾಗಿದ್ದಾರೆ.

ದಿನದಿನಕಿಲ್ಲಿ ನೂತನ ಪೂಜೆಗಳಾಗುವುವು

ಇವರಲ್ಲಿ ಬಹುಪಾಲು ಯತಿವರ್ಯರು ಮಹಾವಿದ್ವಾಂಸರಾಗಿದ್ದು, ಸಚ್ಛಾಸ್ತ್ರ ಪಾಠ, ಪ್ರವಚನ, ಗ್ರಂಥರಚನೆ, ವಾದಿದಿಗ್ವಿಜಯ, ವಿದ್ವತ್ಸಭಾವ್ಯವಸ್ಥೆ, ವಾಕ್ಯಾರ್ಥ

ನಿರ್ಣಾಯಕತ್ವ, ಪಂಡಿತಪೋಷಣೆ, ವಿದ್ಯಾರ್ಥಿಪೋಷಣೆ, ಹಾಗೂ ಇತ್ತೀಚಿನ ತಲೆಮಾರುಗಳಲ್ಲಿ ಪ್ರಾಚೀನ ಹಸ್ತಪ್ರತಿಸಂಗ್ರಹ, ಸಂರಕ್ಷಣೆ, ಸಂಶೋಧನೆ ಹಾಗೂ ಗ್ರಂಥಪ್ರಕಾಶನದಂತಹ ವಿಶೇಷಸೇವೆಗಳ ಮೂಲಕ ಶ್ರೀಮಧ್ವ-ಜಯಾರ್ಯ-ಶ್ರೀಗುರುರಾಜಾದಿ ಸರ್ವಗುರುಗಳ ಹೃತ್ಕಮಲವಾಸಿ ಶ್ರೀಮೂಲರಾಮಚಂದ್ರ-ನನ್ನು ಆರಾಧಿಸಿ ಧನ್ಯರಾಗಿದ್ದಾರೆ.

ಅವರ ಮಧ್ಯೆ ಶ್ರೀಭುವನೇಂದ್ರರು ಶ್ರೀಮೂಲರಾಮದೇವರಿಗೆ ಹೇಮ ಮಂಟಪವನ್ನು ಸಮರ್ಪಿಸಿ ವೈಭವದಿಂದ ಪೂಜಿಸಿದರೆ, ಶ್ರೀಸುಗುಣೇಂದ್ರ-ತೀರ್ಥರು ಭೀಕರ ಕ್ಷಾಮ ಬಾಧಿಸಿದ ದುರ್ಭರ ದಿನಗಳಲ್ಲಿ ಶ್ರೀಮೂಲರಾಮ-ದೇವರ ಕೆಲವು ಪೂಜಾಪರಿಕರಗಳನ್ನು ವಿನಿಯೋಗಿಸಿ; ಗತಪ್ರಾಣರಾಗಿದ್ದ ಸಾವಿರಾರು ಪ್ರಜೆಗಳಿಗೆ ರಾಗಿಗಂಜಿ ಹಾಕಿಸಿ ಜೀವದಾನಮಾಡುವ ಮೂಲಕ ವೈರಾಗ್ಯಭಾಗ್ಯದಿಂದ ಶ್ರೀಮೂಲರಾಮನನ್ನು ಆರಾಧಿಸಿ ಪ್ರಸನ್ನೀಕರಿಸಿಕೊಂಡಿದ್ದಾರೆ.

ಶ್ರೀಸುಯಮೀಂದ್ರತೀರ್ಥರು ಶ್ರೀಮೂಲರಾಮದೇವರಿಗೆ ವಜ್ರಮಂಟಪ-ವನ್ನು ನಿರ್ಮಿಸಿದರೆ, ಶ್ರೀಸುಜಯೀಂದ್ರತೀರ್ಥರು ಇಂದು ವಿನಿಯೋಗವಾಗು-ತ್ತಿರುವ ಸುಂದರ ಸುವರ್ಣ ಮಂಟಪವನ್ನು ಸಮರ್ಪಿಸಿದ್ದಾರೆ.

ಶ್ರೀಸುಜಯೀಂದ್ರತೀರ್ಥರ ತ್ಯಾಗಮಯ, ಯೋಜನಾಬದ್ಧ ಆಡಳಿತದ ಫಲವಾಗಿ ರೂಪುಗೊಂಡ ಶ್ರೀಸುಶಮೀಂದ್ರತೀರ್ಥರ ಕಾಲವಂತೂ ಸುವರ್ಣ ಯುಗವೇ ಸರಿ. ಶ್ರೀಮೂಲರಾಮದೇವರಿಗೆ ಸುವರ್ಣ ಸಿಂಹಾಸನ, ಸುವರ್ಣ ಕುಂಭ, ಸುವರ್ಣದ ಹರಿವಾಣವೇ ಮೊದಲಾದ ಪರಿಗಣನೀಯ ಸೇವೆಗಳು ಸಂದಿವೆ.

ಸಂಸ್ಥಾನಕ್ಕೆ ಶ್ರೀಮೂಲರಘುಪತಿ ಪ್ರತಿಮೆಯನ್ನು ಪುನಃ ತರಿಸಿಕೊಟ್ಟ ಶ್ರೀರಘುನಂದನತೀರ್ಥರ ವೃಂದಾವನ ಸನ್ನಿಧಿಯ ಕಟ್ಟಡದ ಜೀರ್ಣೋದ್ಧಾರ ಕೈಗೊಂಡ ಶ್ರೀಸುಶಮೀಂದ್ರತೀರ್ಥರು **'ಶ್ರೀರಘುನಂದನತೀರ್ಥರ ಆರಾಧನಾ ಪಂಚಶತಮಾನೋತ್ಸವ'**ವನ್ನು ಅವಿಸ್ಮರಣೀಯ ವೈಭವದಿಂದ ಆಚರಿಸಿ, ವಿವಿಧ ಮಾಧ್ವ ಪೀಠಾಧಿಪತಿಗಳ ಸಮ್ಮುಖದಲ್ಲಿ, ಏಕಕಾಲಕ್ಕೆ ೧೦೧ ಶಾಸ್ತ್ರಗ್ರಂಥ-ಗಳನ್ನು ಪ್ರಕಾಶಿಸಿ, ವಿದ್ವಾಂಸರು ಕಲಾವಿದರು, ಸಾಧಕರು, ನೊಂದವರು ಹಾಗೂ ನಿರಾಶ್ರಿತರಿಗೂ ಸಹ ಕನಕ, ರಜತ, ಧನ, ವಸ್ತ್ರಾದಿ ದಾನಗಳಿಂದ,

೭. **"ಜೋ ಜೋ ವಾದೀಂದ್ರ ಕರಕಮಲೋದ್ಭವ**
ಜೋ ಜೋ ವರದೇಂದ್ರಗುರುರಾಜ ಪ್ರಭುವೆ ॥ ಪ ॥

. . . .
<u>ಮೂಲರಾಮನ</u> ಪಾದ ಧ್ಯಾನನಿರತನಾಗಿ
ಮೂಲೇಶನಪಾದಮೂಲಗುರುಗಳ ಸೇವೆ
ಕಾಲಕಾಲಕೆಮಾಡಿ ತಾರಕ ಮಂತ್ರವ
ಬಾಲಭಕುತರಿಗೆಲ್ಲ ಪೇಳ್ವಾದಿಗುರುವೆ ॥ ೩ ॥

. . . .
ಬಂದಾರ್ತ ಭಕುತ ಜನರಿಗೆಲ್ಲ ಮನೋ
ಮಂದಿರ ಸುಂದರವಿಠಲನ ತೋರ್ವಿ" ॥ ೧೨ ॥

– ಶ್ರೀಸುಂದರವಿಠಲದಾಸರು (ಗೋರಬಾಳು ಹನುಮಂತರಾಯರು)

ಧೀರೇಂದ್ರಧಿಯಾರ್ಚಿತ ಶ್ರೀಮೂಲರಾಮ

ಶ್ರೀವಾದೀಂದ್ರತೀರ್ಥರ, ಶ್ರೀವಸುಧೇಂದ್ರತೀರ್ಥರ ಹಾಗೂ ಶ್ರೀವರದೇಂದ್ರ–ತೀರ್ಥರ ಸದಾಶಯದಂತೆ, ಭಗವತ್ಪ್ರೇರಣೆಯಂತೆ, ಕುಂಭಕೋಣದ ಶ್ರೀವಿಜಯೀಂದ್ರರ ವೃಂದಾವನ ಸನ್ನಿಧಾನದಲ್ಲಿ ಯತ್ಯಾಶ್ರಮ ಸ್ವೀಕರಿಸಿದ ಶ್ರೀಧೀರೇಂದ್ರತೀರ್ಥರು, ಶ್ರೀಭುವನೇಂದ್ರತೀರ್ಥರ ಪ್ರಾರ್ಥನೆಯ ಮೇರೆಗೆ ಶ್ರೀಮೂಲರಾಮದೇವರನ್ನು ಪೂಜಿಸಿದ ಭಾಗ್ಯಶಾಲಿಗಳು.

ಈ ಐತಿಹಾಸಿಕ ಘಟನೆಯನ್ನು **'ಶ್ರೀಮತ್ಪೂರ್ಣಮತೇರಣುಕಥಾವ್ಯಾಖ್ಯಾ–ಸುತುಷ್ಟೋ ಹರಿಃ'** ಎಂದು ಪ್ರಾರಂಭವಾಗುವ ಶ್ರೀಧೀರೇಂದ್ರಾಷ್ಟಕದಲ್ಲಿ ಸಾತಾರೀ ಆಚಾರ್ಯರು ಹಾಗೂ ಮತ್ತೊಂದು ಮಂಗಲಾಷ್ಟಕದಲ್ಲಿ ಶ್ರೀಶೇಷಾಚಲ–ನಿವಾಸಿ ದೇವಾಚಾರ್ಯರು, ಶ್ರೀಧೀರೇಂದ್ರಗುರುಗಳನ್ನು ಸ್ತುತಿಸುತ್ತ ವೇದವ್ಯಾಸ ಮೂಲರಾಮನನ್ನು ಸೇವಿಸಿದರೆಂದು ಉಲ್ಲೇಖಿಸುತ್ತಾರೆ.

"ಗಂಗಾತೀರ್ಥಮುಖಾಗ್ರತೀರ್ಥಗಮನಂ ತನ್ಮಜ್ಜನಂ ಸಜ್ಜನೈಃ
ವೇದವ್ಯಾಸ 'ಸುಮೂಲಸದ್ರಘುಪತೇಃ' ಕುರ್ವನ್ ಸಪರ್ಯಾಂ ಮುಹುಃ।
ಸಾತಾರಾ ಪುನಯಾದಿರಾಜನಗರೇ ತದ್ರಾಜಕೈಃ ಸೇವಿತಃ
ಶ್ರೀಧೀರೇಂದ್ರಯತೀಶ್ವರೋ ಮಮಗುರುಃ ದದ್ಯಾದಭೀಷ್ಟಂ ಸದಾ ॥ ೮ ॥"

– ಶ್ರೀಮದ್ಧೀರೇಂದ್ರ ಮಂಗಳಾಷ್ಟಕಮ್

"ವಾಣೀ ಯಸ್ಯ ಕುವಾದಿದಂಭ ದಲನೇ ತೂರ್ಣಂ ಮೃಗೇಂದ್ರಾಯತೇ
ದೃಷ್ಟಿರ್ಭಕ್ತಮಹಾಘಭೂಧರಮಣೇಃ ವಜ್ರಾಯತೇ ಭೇದನೇ।
ಚೇತೋ 'ಮೂಲರಘೂದ್ವಹಾಂಘ್ರಿನಲಿನದ್ವಂದ್ವೇ' ದ್ವಿರೇಫಾಯಿತೇ
ಶ್ರೀಮದ್ಧೀರಜನೇಂದ್ರತೀರ್ಥಯಮಿರಾಟ್ ದದ್ಯಾದ್ಧ್ರುವಂ ಮಂಗಲಮ್ ॥ ೨ ॥"

– ಶ್ರೀಶೇಷಾಚಲನಿವಾಸಿ ದೇವಾಚಾರ್ಯವಿರಚಿತ
ಶ್ರೀಮದ್ಧೀರೇಂದ್ರತೀರ್ಥಮಂಗಳಾಷ್ಟಕಂ

ಶ್ರೀಹೊಸರಿತ್ತಿ ಕ್ಷೇತ್ರದಲ್ಲಿ ವಿರಾಜಮಾನರಾಗಿ ಶ್ರೀರಾಯರ ಸನ್ನಿಧಾನ ಪಾತ್ರ–ರಾಗಿ ಶೋಭಿಸುವ ಶ್ರೀಧೀರೇಂದ್ರತೀರ್ಥರು ಮಹಾಜ್ಞಾನಿಗಳು. ನಾರಾಯ–ಣೋಪನಿಷತ್ ವ್ಯಾಖ್ಯಾನ, ಮನ್ಯುಸೂಕ್ತಕ್ಕೆ ವ್ಯಾಖ್ಯಾನ..... ಇತ್ಯಾದಿ ಗ್ರಂಥ–ಗಳು ಅವರ ಅಪಾರ ವಿದ್ವತ್ತಿಗೆ ಸಾಕ್ಷಿಯಾಗಿ ಉಳಿದುಬಂದಿವೆ.

ಭುವನೇಂದ್ರಾದಿಬುಧವರಾರ್ಚಿತ ಶ್ರೀಮೂಲರಾಮ

ಶ್ರೀಜಗನ್ನಾಥದಾಸರು ತಮ್ಮ ವಿದ್ಯಾಗುರುಗಳಾದ ಶ್ರೀವರದೇಂದ್ರತೀರ್ಥರ ಕರಕಮಲಸಂಜಾತರೂ, ಶ್ರೀಧೀರೇಂದ್ರತೀರ್ಥರ ಶಿಷ್ಯರಾಗಿ ನಡೆದುಕೊಂಡು, ಶ್ರೀವ್ಯಾಸತತ್ವಜ್ಞರ ಹಾಗೂ ಶ್ರೀಸುಬೋಧೇಂದ್ರತೀರ್ಥರ ಆಶ್ರಮ ಗುರುಗಳೂ ಆದ ಶ್ರೀಭುವನೇಂದ್ರತೀರ್ಥರ ತಪಃಶಕ್ತಿಗೆ ಮಾರುಹೋಗಿ, ಅನನ್ಯ ಶರಣಾ–ಗತರಾಗಿ ರಚಿಸಿದ ಕೀರ್ತನೆ. (ಹಸ್ತಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ) –

"ಭುವನೇಂದ್ರ ಮುನಿಪ ನಿನ್ನವನೊ ಎನ್ನ
ಅವಗುಣಗಳೆಣಿಸದಲೆ ಅನುದಿನದಿ ಪಾಲಿಪುದು ॥ ಪ ॥

<u>ಶ್ರೀಮೂಲದಿಗ್ವಿಜಯರಾಮ</u> ವ್ಯಾಸಾಂಘ್ರಿ ಯುಗ
ತಾಮರಸಭಜಕ ಈ ಭೂಮಿಯೊಳಿಹ
ಪಾಮರನ ಉದ್ಧರಿಸು ಕವಿಸಾರ್ವಭೌಮ ನೀ
ಅನವರತ ಸಂಚರಿಪೆ ಈ ಮಹೀತಳದಿ ॥ ೨ ॥

ವರದೇಂದ್ರಯತಿವರ್ಯ ಕರಕಮಲಸಂಜಾತ
ನಿರುಪಮ ಜಗನ್ನಾಥವಿಠಲದೂತ
ನೆರೆನಂಬಿದೆನೊ ನಿನ್ನ ಪರಿಪಾಲಿಸುವುದೆನ್ನ
ಮರೆಯಲಾಗದು ಜಿತಸ್ಮರ ಭೂವರಪ್ರವರ" ॥ ೩ ॥

ವರದೇಂದ್ರಮುನಿ ರಚಿತ ಈ ತಂತ್ರಸಾರವನು ಬರೆದೋದಿ ಕೇಳಿ ಮೋದಿಸುವ ಜನರ।
ವರ ಮೂಲರಾಮವೇದವ್ಯಾಸರಿಹಪರದಿ ಕರುಣಿಪರು ಬೇಡಿದಿಷ್ಟಾರ್ಥಗಳನು ॥ ೨೭ ॥

ಮಂಗಳ ರಮಾಪತಿಗೆ ಮಂಗಳ ದ್ರುಹಿಣಪಿತಗೆ ಮಂಗಳದಶಪ್ರಮತಿಮುನಿಮಾನ್ಯಗೆ।
ಮಂಗಳ ಶಿವೇಂದ್ರಾದಿ ಸುರನಿಕರಪೂಜ್ಯನಿಗೆ ಮಂಗಳ ಜಗದ್ವಿಲಕ್ಷಣರೂಪಗೆ ॥ ೨೮ ॥

ಇಪ್ಪತ್ತರೊಂಬತ್ತು ಪದಗಳೆಂಬತಿವಿಮಲ ಪುಷ್ಪಮಾಲಿಕೆ ಮೂಲರಾಮನಡಿಗೆ।
ಅರ್ಪಿಸಿದೆವೀ ಸುಮನಧಾಮವನುದಿನದಲ್ಲಿ ಒಪ್ಪದಿಹುದೇ ಬುಧರ ಮಸ್ತಕದಲಿ ॥ ೨೯ ॥

ಹೀಗೆ ತಮ್ಮ ಆರಾಧ್ಯಮೂರ್ತಿಯನ್ನು ಸ್ಪಷ್ಟವಾಗಿ ನಮೂದಿಸಿದ್ದಾರೆ.

ಶ್ರೀವರದೇಂದ್ರತೀರ್ಥರ 'ವರದಾತೃತ್ವ'ಕ್ಕೆ ಮಾರುಹೋಗಿ ಅನೇಕ ಭಕ್ತರು ಶರಣಾಗತರಾಗಿದ್ದಾರೆ. ಶ್ರೀವರದೇಂದ್ರತೀರ್ಥರ ಸ್ತುತಿರೂಪವಾಗಿ ಹರಿದಾಸರು ರಚಿಸಿರುವ ಕೀರ್ತನೆಗಳಲ್ಲಿ ಶ್ರೀಮೂಲರಾಮರ ಪ್ರಸ್ತಾಪವೂ ಇದೆ.

೧. "ರಾಮಾ ಸದ್ಗುಣಗಣಧಾಮಾ ನಿರ್ಜರ ಸಾರ್ವಭೌಮಾ ॥ ಪ ॥

. . . .

ಸರಸಿಜೋದ್ಭವನ ಮಂದಿರದೊಳರ್ಚನೆಗೊಂಡ
ನಿರುತ ಪಾವನಚರಿತಾ ॥ ೧ ॥

. . . .

ವರದೇಂದ್ರವರದ ಜಗನ್ನಾಥವಿಠ್ಠಲ ರಾಮಾ" ॥ ೩ ॥

೨. "ಸೂರಿವರ್ಯ ವರದೇಂದ್ರ ರಾಜ ಗುರು
ಸಾರ್ವಭೌಮತೇ ನಮೋ ನಮೋ।

....

ಮೂಲರಾಮ ಪದಕೀಲಾಲಜ ಮಧು।
ಪಾಲಕ ನಿಭ ಮುನಿ ಪಾಲಯ ಮಾಂ ॥

.... ॥ ೨ ॥

೩. "ವೃಂದಾರಕೇಂದ್ರಯತಿ ವೃದಾರಕೇಂದ ಪ್ರತಿ।
ವೃಂದಾರಕೇಂದ್ರ ಸುಮತಿ ವೃಂದಾರ
ಮೂಲರಾಮಪದ ಕೀಲಾಲಜ ಮಧು
ಪಾಲಕನಿಭಮುನಿ ಪಾಲಯಮಾಂ ....
ಮಾನದ ಅಭಿನವಪ್ರಾಣೇಶವಿಠಲನ
ಧ್ಯಾನಾಸಕ್ತನೆ ಜಯ ಜಯ ಭೋ" ॥ ೩ ॥

೪. "ವಂದಿಸುವೆನು ಭವಮಂದಾಧಿತಾರಕ

. . . .

ಕೋಲಜ ಕೂಲದ ಆಲಯವಾಸರಿಂ।
ದೇಳನೆ ಯತಿಯನಿಸಿ ಕಾಲರಾಮರಾಜ್ಯ ॥
ಪಾಲಿಸಿ ವಿಭವದಲಿ ಮೂಲರಾಮಚರಣ।
ಊಳಿಗವನು ಗೈದ ಶೀಲಸುಗಣಮಣಿಯೇ ॥
ಕಾಲಾಭಿನವಪ್ರಾಣೇಶವಿಠಲಪಾದ
ಕೀಲಾಲಜಮಧುಪ ಪಾಲಿಸು ಬಿನ್ನಪ ॥"

೫. "ವರ್ಣಿಸಲು ಸಾಧ್ಯವೇ ಧರೆಯೊಳಿನ್ನು।
ವರದೇಂದ್ರ ಗುರು ನಿನ್ನ ವರಮಹಿಮೆಗಳನು ॥ ಪ ॥

. . . .

ಶ್ಯಾಮಸುಂದರ ಮೂಲಚಂದ್ರನ ಚರಣ।
ತಾಮರಸಷಟ್ಚರಣ ಪರಮ ಸುಗುಣ।
ಧೀಮಂತ ಶ್ರೀಮಂತಧಾಮ ನಿಲಯರ ಪೂರ್ಣ।
ಪ್ರೇಮ ಸತ್ಪಾತ್ರ ಮಮಸ್ವಾಮಿ ಸುಚರಿತ್ರ" ॥ ೫ ॥

೬. "ಶ್ರೀಪೂರ್ಣ–ಬೊಧ–ಗುರುತೀರ್ಥ ಸುಧಾಬ್ಧಿಮಗ್ನ
ಶ್ರೀಮಧ್ವನಾಥ ಪದಪಂಕಜ ಸಾರಭೃಂಗ।
ಆರಾಧಿತಾಮರ ವರಾರ್ಚಿತ ಮೂಲರಾಮ
ಮೌನೀಶ ದೇಹಿ ವರದೇಂದ್ರ ಕರಾವಲಂಬಮ್" ॥ ೧ ॥

– ಶ್ರೀಗುರುಜಗನ್ನಾಥದಾಸಾರ್ಯವಿರಚಿತಂ
'ಶ್ರೀವರದೇಂದ್ರ ಕರಾವಲಂಬನ ಸ್ತೋತ್ರಮ್'

ತತ್ತಳಿಸುತ್ತ ಮೆರೆವ ಸಿರಿರಾಮ
ಮುಕ್ತಿಪ್ರದಾಯಕ ಗೋಪಾಲವಿಠಲ
ಚಿತ್ತಶುದ್ಧನ ಮಾಡು ಭಕ್ತಿಜ್ಞಾನವ ನೀಡು

ಆದಿತಾಳ

....
ಸುರಾದಿ ವಿನುತ ಗೋಪಾಲವಿಠಲ
ಗುರು ವಸುಧೇಂದ್ರ ಮುನಿಯ ಈಶ

ಜತೆ

ಗುರು ವಸುಧೇಂದ್ರರ ಕರಕಮಲದೊಳು ತೋರ್ಪ
ಸಿರಿರಾಮ ಗೋಪಾಲವಿಠಲ ಶರಣು ಶರಣು''

ಶ್ರೀಜಗನ್ನಾಥದಾಸರು ರಚಿಸಿರುವ ಕೀರ್ತನೆಯಲ್ಲಿಯೂ ಸಹ ಶ್ರೀಮೂಲ–ರಾಮದೇವರನ್ನು **'ವಸುಧೇಂದ್ರಾರ್ಯರಪ್ರಿಯ'**ನೆಂದೇ ವರ್ಣಿಸಿರುವುದು ಗಮನಾರ್ಹ –

''ರಾಮನ ನೋಡಿರ್ರೈ ನಿಮ್ಮಯ ಕಾಮಿತ ಬೇಡಿರ್ರೈ ॥ ಪ ॥

ತಾಮರಸಸಖ ಸುವಂಶಾಬ್ಧಿಶರತ್ಸೋಮಾ ಕಮಲಧೀಮ ॥ ಅ.ಪ. ॥

ಧಾತನನುಜ್ಞದಿ ದೇವತ್ವಷ್ಟ್ರ ನಿರ್ಮಿಸಿದ । ಅಜ ಪೂಜಿಸಿದಾ ॥
ಜೋತಿರ್ಮಯ ಜಾಬಾಲಿ ಮುನಿಯ ತಪವರಿದಾ । ಕಾಮಿತ ನೆರೆದಾ ॥
ಭೂತಾಧಿಪ್ಪನ ಭವನದೊಳರ್ಚನೆಗೊಂಡ । ಧೃತಕೋದಂಡ ॥
ಮಾತಂಗಾರಿ ವರೂಥಿಯ ಜನಕ ಮೇದಾಗಾರಕೆ ಪೋದ ॥ ೧ ॥

ಸೌಭರಿ ಮುನಿಪಗೆ ಸೌಖ್ಯವ ಕರುಣಿಸಿ ಕೊಟ್ಟ । ಜಗಕತಿದ್ಧಿಟ್ಟ ॥
ನಾಭಿಜನ್ಮನಿಹ ನಗವರ ಸ್ಥಾನಕೆ ಬಂದ । ಶುಭಗುಣ ವೃಂದಾ ॥
ವೈಭವದಿಂದಲಯೋಧ್ಯಾ ನಗರದಿ ಮೆರೆದ । ಕಾಮಿತವೆರೆದ ॥
ಸ್ವಾಭಿಮಾನದಲಿ ಸತಿಯಳಿಗಿತ್ತನು ವರವಾ । ದೇವರ ದೇವಾ ॥ ೨ ॥

ಜಾಂಬವಂತನಿಗೆ ಜಾನಕಿರಮಣನು ಇತ್ತ । ತನ್ನಯಧ್ಯಾತ ॥
ಸಂಭ್ರಮದಲಿ ವೇದಗರ್ಭನೊಡನಾಡ್ದಾ । ಮುಕ್ತಿಯ ನೀಡ್ದ ॥
ಕುಂಭೀಶ್ವರನ ಸುಕೋಶದಿ ಬಹುದಿನ ವಾಸ । ವೆಸಗಿದನೀಶಾ ॥
ನಂಬಿ ತುತಿಸಿದ ನರಹರಿ ಮುನಿಪಗೆ ಒಲಿದಾ ಮೋದದಿ ನಲಿದ ॥ ೩ ॥

ಅಲವಬೋಧಮುನಿ ಅತಿಮೋದದಲರ್ಚಿಸಿದ । ಸಲೆ ಮೆಚ್ಚಿಸಿದ ॥
ಇಳೆಯೊಳು ಬಹು ಯತಿಕರ ಪೂಜಿತನಾದ । ಲೀಲ ವಿನೊದಾ ॥
ಬಲುನಂಬಿದ ಭಕುತರ ಕಲಿಮಲಗಳ ಕಳೆದ । ಮನದೊಳು ಪೊಳೆದ ॥
ಸುಲಲಿತ ಗುಣನಿಧಿ ವಸುಧೇಂದ್ರಾರ್ಯರ ಪ್ರೀಯ । ಕವಿಜನಗೇಯ ॥ ೪ ॥

ವಾರಿಧಿಬಂಧನ ವಾನರ ನಾಯಕರಾಳ್ದ । ದೈತ್ಯರ ಸೀಳ್ದಾ ॥
ನಾರದ ಮುಖ ಮುನಿನಮಿತ ಪದಾಂಬುಜನೀತಾ । ತ್ರಿಗುಣಾತೀತ ॥
ಆರಾಧಿಪರಿಗೆ ಅಖಿಳಾರ್ಥಗಳನು ಕೊಡುವಾ । ದುರಿತವ ತಡೆವ ॥
ನೀರಜಾಕ್ಷ ಜಗನ್ನಾಥವಿಠಲ ನಿಶ್ಚಿಂತಾ । ಸೀತಾಕಾಂತ'' ॥ ೫ ॥

ವರದೇಂದ್ರಪ್ರತಿವರದ ಶ್ರೀಮೂಲರಾಮ

ಶ್ರೀವಸುಧೇಂದ್ರತೀರ್ಥರ ಕರಕಮಲಸಂಜಾತರಾದ ಶ್ರೀವರದೇಂದ್ರತೀರ್ಥರು ಶ್ರೀಜಗನ್ನಾಥದಾಸರಿಗೆ ಸಪರಿಮಳ ಶ್ರೀಮನ್ನ್ಯಾಯಸುಧಾದಿ ಗ್ರಂಥಗಳನ್ನು ಪಾಠ ಹೇಳಿದ ವಿದ್ಯಾಗುರುಗಳು. ಪೂನಾನಗರದಲ್ಲಿ ಪರಮತನಿರಾಕರಣಪೂರ್ವಕ ಮಧ್ವಸಿದ್ಧಾಂತಸ್ಥಾಪನೆ ಮಾಡಿದ ದಿಗ್ವಿಜಯದ ಸಂದರ್ಭದಲ್ಲಿ ಗೆದ್ದ ಬೃಹತ್ಸೌಧ–ವನ್ನೇ ಶ್ರೀಮೂಲರಾಮನ ಪೂಜಾಮಂದಿರವನ್ನಾಗಿ ಸಮರ್ಪಿಸಿದವರು.

'ಸಪ್ತಮೋ ಮತ್ಸಮೋ ಯೋಗೀ 'ವರದೇಂದ್ರೋ' ಭವಿಷ್ಯತಿ'

['ಮುಂದೆ ನನ್ನಿಂದ ಏಳನೆಯವರಾಗಿ ನನ್ನ ಸಮಾನ ಯೋಗಸಾಮರ್ಥ–ರಾದ ವರದೇಂದ್ರರು ಬರುತ್ತಾರೆ'] ಎಂಬ ಶ್ರೀರಾಯರ ಭವಿಷ್ಯವಾಣಿಯನ್ನು ಸತ್ಯಗೊಳಿಸಿದವರು. ಆಂತೆಯೇ ಇವರ ಭಕ್ತರ ಸಂಖ್ಯೆ ಅಪಾರ.

ಶ್ರೀವರದೇಂದ್ರತೀರ್ಥರು ತಮ್ಮ ಶಿಷ್ಯರಾದ ಶ್ರೀಜಗನ್ನಾಥದಾಸರ ಪ್ರಾರ್ಥನೆಯ ಮೇರೆಗೆ ರಚಿಸಿದ, **'ಪಾಹಿ ಪಂಕೇರುಹೇಕ್ಷಣ ಸರ್ವಕಾಮದ । ಪಾಹಿ ಪದ್ಮಾ–ಲಯನಿಕೇತನ ಸದಾ ॥'** ಎಂದು ಆರಂಭವಾಗುವ ಕನ್ನಡ **'ತಂತ್ರಸಾರ'**ದ ಮುಕ್ತಾಯ ಪದ್ಯಗಳಲ್ಲಿ, 'ಮೂಲರಾಮ'ನೆಂಬ ಅಂಕಿತವನ್ನೇ ಬಳಸಿದ್ದಾರೆ.

ಸೀತಾರಮಣ ಮೂಲರಾಮನತಿ ಹರುಷದಿ ವಿಧಾತಗುಪದೇಶಿಸಿದ ಈ ತೆರದಲಿ ॥
ಪ್ರೀತಿಯಿಂದಲಿ ನಿರಂತರದಲಿದ ಪಠಿಸೆ ಶೇಷಾತಪತ್ರನು ಕಾಮಿತಾರ್ಥವೀವ ॥ ೨೩ ॥

ಧರ್ಮಾರ್ಥಕಾಮಮೋಕ್ಷಗಳೀವ ಗ್ರಂಥವಿದು ನಿರ್ಮಾಣಮಾಡಿಸಿದ ರಾಮಚಂದ್ರ ।
ಹೇಮಗರ್ಭಗೆ ಒಲಿದು ಪೇಳಿದ ಮಹಾಮಂತ್ರ ಮರ್ಮಗಳನರಿತು ಭಜಿಸುವನೆ ಧನ್ಯ ॥ ೨೬ ॥

ಮಂದಬುದ್ಧಿಗಳುಳ್ಳ ಜಗವ ಪಾಲಿಸುವರು.' 'ಮಂದಮತಿಗಳು ಇವರ ಮನುಜರೆಂದರಿದರೆ ಪೊಂದುವರು ಮಹದಾದಿ ನಿರಯದಲ್ಲಿ'. ಇವರ 'ಸಂದರುಶನದಿಂದೆ ಸಕಲ ದೋಷದೂರ. ಇಂದಿರೆ ಅರಸನು ಇಪ್ಪುವ ಇವರಲ್ಲಿ. ಬಂದ ಬಂದವರ ಅಭಿಷ್ಟವ ಪೂರೈಸಿ' ಮೆರೆವರು.

೩. **'ಘನ್ನ ಮಹಾಮಹಿಮ ಮೂಲರಾಮ'**ನನ್ನು, **'ಚರಣದಂದುಗೆ ಗೆಜ್ಜೆ,** ವರ ಜಾನು ಜಂಘೆ ಕಟಿ–ಕರ, ಮೇಲೆ ಒಲಿವ ಕಿಂಕಿಣಿಯ ಗಂಟೆ, ಪರಮಶೋಭಿತ ಉದರ, ವಕ್ಷಕೌಸ್ತುಭ, ಕೊರಳಪದಕ ನಾನ ಸರ–ಗಳಿಂದೊಪ್ಪುವ, ಸಿರಿಗಂಧ ಕಸ್ತೂರಿ ಪರಿಮಳಭೂಷಿತ, ವರಸಾರಂಗ–ಪಾಣಿ, ಕರ್ಣಕುಂಡಲಧರ, ಸರಸಿಜನಯನ, ಸಿರಿಕಿರೀಟಧರ, ಸ್ವರೂಪಾ–ಲಂಕಾರದಿಂದೊಪ್ಪುವ ಶ್ರೀರಾಮ'ಎಂದು ವರ್ಣಿಸಿದ್ದಾರೆ.

೪. ಶ್ರೀಮೂಲರಾಮದೇವರ ಸ್ಮರಣೆ, ದರ್ಶನಗಳಿಗೂ ವಿಶೇಷ ಫಲವಿದೆ: **'ನಿನ್ನ ನಾಮ ಒಮ್ಮೆ ಸ್ಮರಿಸಿದಡಾಯಿತೆ** (ಸ್ಮರಿಸಿದರೆ ಸಾಕು), **ಘನ್ನದುರಿತ–ಗಳೆಲ್ಲ ದೂರಾಗಿ ಪೋಗುವುವು. ನಿನ್ನ ಮೂರುತಿ ಒಮ್ಮೆ ನೋಡಿದ–ಡಾಯಿತೆ** (ನೋಡಿದರೆ ಸಾಕು) **ಜನುಮಾದಿಗಳು ಜಗದ ಕ್ಲೇಶಗಳು ತರಿವುವು. ನಿನ್ನ ಅವಯವಂಗಳು ಎಲ್ಲಿ ನೋಡಲು ಪೂರ್ಣ. ನಿನ್ನ ಬಳಿಯಲ್ಲಿ ಸಕಲಾದಿ ತೀರ್ಥಂಗಳುಂಟು. ನಿನ್ನ ಓಲೈಸುತ್ತ ಸುರರಿಪ್ಪುವರು.' 'ಶೋಧಿಸಿ ನಿನ್ನ ಪಾದಸೇವೆಯ ಮಾಳ್ಪರಿಗೆ ಜನನ ಮರಣಗಳಬಾಧೆ ಗೆಲಿಸುವುದು'** ಇತ್ಯಾದಿ ಸ್ಪಷ್ಟೋಕ್ತಿಗಳಿಂದ ಭಕ್ತವೃಂದಕ್ಕೆ ಶ್ರೀಮೂಲರಾಮದೇವರ ವಿಶೇಷತೆ–ಗಳನ್ನು ತಿಳಿಸಿಕೊಟ್ಟಿದ್ದಾರೆ. **'ಭಕ್ತರಿಂದಲಿ ಉತ್ಸವಗಳು ಕೊಂಡು ಬಹು ಧರ್ಮದಿಂದಲಿ' 'ಚಿತ್ತಶುದ್ಧನ ಮಾಡು ಭಕ್ತಿಜ್ಞಾನವ ನೀಡು'** ಎಂದು ಪ್ರಾರ್ಥಿಸಿದ್ದಾರೆ.

ಈ ಮಹತ್ವಪೂರ್ಣ ಸುಳಾದಿಯಲ್ಲಿ **೮ ಕಡೆ ಶ್ರೀವಸುಧೇಂದ್ರರ ಪ್ರಸ್ತಾಪ–ವಿದೆ.** ಶ್ರೀಮೂಲರಾಮ ಸ್ತುತಿರೂಪವಾದ ಈ ಸುಳಾದಿಯು ಶ್ರೀಮೂಲರಾಮ ಪ್ರತಿಮೆ ಶ್ರೀರಾಯರ ಮಠದಲ್ಲಿ ಇರುವ ಬಗ್ಗೆ ಆಧಾರವಾಗಿದೆ.

ಧ್ರುವತಾಳ

"ತರಣಿ ಕುಲೋತ್ಪನ್ನ ತಪುತ ಕಾಂಚನವರ್ಣ
....

ನಿರುತದಿ ನಮ್ಮ ವಸುಧೇಂದ್ರ ಮುನಿಯ ಚೆಲ್ವ
ಕರಕಮಲದಲಿ ನಿಂದು ಮೆರೆವ ದಾತ
ಪರಮದಯಾಳು ರಾಮ ಗೋಪಾಲವಿಠಲ ನಿನ್ನ
ದರುಶನವೇ ಇಂದಿನ ದಿನವೆ ಸುದಿನವು ॥

ಮಠ್ಯತಾಳ

....
ಶ್ರೀಧರ ರಾಮ ಗೋಪಾಲವಿಠಲ
ವಾದೀಂದ್ರಸುತರಿಗೊಲಿದು ಮೆರೆವ ಪ್ರೀತ

ರೂಪಕತಾಳ

...........**ವಸುಧೇಂದ್ರಮುನಿಯ ಮನ–**
ಮಂದಿರದೊಳೊಪ್ಪುವ ರಾಮ ಗೋಪಾಲವಿಠಲ
ಬಂಧಕ ಮೋಚಕ ಮಾಳ್ಪ ಶಕ್ತ

ಝಂಪೆತಾಳ

....
ಘನ್ನ ಮಹಾಮಹಿಮ ಮೂಲರಾಮ
ನಿನ್ನ ಪರಿವಾರಸಹಿತ ಎನ್ನ ಗುರು ವಸುಧೇಂದ್ರ
ಮುನ್ನೆ ನಿನ್ನರ್ಚಿಸುವ ಭಾಗ್ಯವೆಂತೊ
ಚಿನುಮಯಮೂರುತಿ ಗೋಪಾಲವಿಠಲ
ನಿನ್ನ ಭಕುತರು ನಿನ್ನ ಮಹಿಮೆಗೆ ನಮೋ

ತ್ರಿಪುಟತಾಳ

....
ಪರಮಶೋಭಿತನಾಮ ಗೋಪಾಲವಿಠಲ
ನಿರುತ ವಸುಧೇಂದ್ರ ಮುನಿಯ ಮನದಿ ವಾಸ

ಅಟ್ಟತಾಳ

....
ನಿತ್ಯ ವಸುಧೇಂದ್ರ ಹೃತ್ಕಮಲದಿ

ಪರಿ ಪರಿಯಲಿ ಬಂದ ಪಾತ್ರರಲ್ಲುಚಿತವನರಿತು ।
ವಾಂಛಿತವಿತ್ತೆನೋ ।
ಪೆರಿಮೆಯಿಲ್ಲದೆ ವಾಜಪೇಯಾದಿ ಮಖದಿಂದ ।
ಧರೆಯಲ್ಲಿ ಯಾಜಿಸಿದ್ದೆನೋ ॥
ಹರಿಕಥೆಗಳ ಕೇಳಿ ಹಸನಾಗಿ ಮನದಲ್ಲಿ ।
ಧರಿಸಿ ಹರುಷದಲ್ಲಿದ್ದೆನೋ ।
ವರತಪೋವನ ದಲ್ಲಿ ವರ್ತಿಸಿ ಹೃದಯದಲಿ ।
ಚಿರಕಾಲದಲ್ಲಿ ನಿನ್ನ ಚಿಂತಿಸಿದ್ದೆನೋ ಹ್ಯಾಂಗೋ ॥ ೨ ॥

ಆದೇಶಿಕಾಶ್ರಮದಾರ್ಯೋಚಿತ ಮತ ।
ಭೇದವನ್ನರಿತಿದ್ದೆನೋ ।
ವೇದಮೂರುತಿ ರಾಘವೇಂದ್ರ ದೇಶಿಕರ ಶ್ರೀ ।
ಪಾದವ ಪಿಡಿದಿದ್ದೆನೋ ।
ಉದಾರ ಉತ್ತಮ ಗುಣವುಳ್ಳ ಉಪೇಂದ್ರಗುರುಗಳ ।
ಮೋದಪಡಿಸಿದ್ದೆನೋ ।
ವಾದೀಂದ್ರಯತಿಕುಲವರಿಯನಾಳುವ ನಿಮ್ಮ ।
ಸಾದರ ಭಜನೆಯ ಸಾಧಿಸಿದ್ದೆನೋ ಹ್ಯಾಂಗೋ'' ॥ ೩ ॥

ಈ ಕೀರ್ತನೆಯಲ್ಲಿ 'ಇಷ್ಟೆಲ್ಲ ಪ್ರಕಾರಗಳ, ಅನಂತಜನ್ಮಗಳ ಪುಣ್ಯರಾಶಿ ಒದಗಿ ಬಂದರೆ ಮಾತ್ರ ಶ್ರೀಮೂಲರಾಮದೇವರನ್ನು ಪೂಜಿಸುವ ಸೌಭಾಗ್ಯವು ಒದಗಿ ಬಂದಿರಬಹುದು' ಎಂಬ ಧ್ವನಿ ವ್ಯಕ್ತವಾಗಿದೆ.

'ದರಹಾಸ ಸರಿತೆತೀರ ಮಂತ್ರಾಲಯದಲ್ಲಿ, ಗುರುರಾಯ ಆಜ್ಞೆಯಿಂದವರ ಸನ್ನಿಧಿಯಲ್ಲಿ, ಸ್ಥಿರವಾಗಿ ನಿಂದೆ' ಎಂಬಲ್ಲಿ; ರಾಯರಿಗೆಂದೇ ನಿರ್ಮಿತವಾಗಿದ್ದ ಸುಂದರ ವೃಂದಾವನದಲ್ಲಿ, ಶ್ರೀರಾಯರ ಅಪ್ಪಣೆಯಂತೆ, ಶ್ರೀರಾಯರ ಸನಿಹ–ದಲ್ಲೇ ತಪೋನಿರತರಾದ ಶ್ರೀವಾದೀಂದ್ರರ ಮಹಿಮೆಯನ್ನು ವಿವರಿಸಿದ, ಗಾಯತ್ರೀಮಂತ್ರಸಂಸಿದ್ಧಿಯಿಂದ ತ್ರಿಕಾಲಜ್ಞಾನಿಗಳಾಗಿದ್ದ ಶ್ರೀಗೋಪಾಲದಾಸರು; **'ಸುಮಹಿಮೆಯಲಿ ಮೆರೆವೆ ನೀ ಮುಂದೆ',** ಎಂದು ಶ್ರೀವಾದೀಂದ್ರರ ಬಗ್ಗೆ ನುಡಿದ ಭವಿಷ್ಯವಾಣಿ ಸತ್ಯವಾಗಿದೆ. ಶ್ರೀವಾದೀಂದ್ರಸ್ವಾಮಿಗಳವರ ಈ ಮೂರೂ ರಚನೆ–ಗಳು ಶ್ರೀಮೂಲರಾಮದೇವರ ಅಸ್ತಿತ್ವ ವಿಚಾರದಲ್ಲಿ ಪ್ರಬಲ ಪ್ರಮಾಣಗಳಾಗಿವೆ.

ಸಾಗರಕಟ್ಟೆಮಠದ ಶ್ರೀಪ್ರದ್ಯುಮ್ನತೀರ್ಥರು ಪರಮತದ ಸಮಕಾಲೀನ ಯತಿಗಳನ್ನು ಕುರಿತು ನಾಲ್ಕು ಕೀರ್ತನೆಗಳನ್ನು ರಚಿಸಿದ್ದರೂ ಎಲ್ಲಿಯೂ, ಮೂಲರಾಮದೇವರ ಹೆಸರನ್ನು ಪ್ರಸ್ತಾಪಿಸಿಲ್ಲ. ಆದರೆ ಶ್ರೀವಾದೀಂದ್ರರನ್ನು ಕುರಿತು ರಚಿಸಿದ ಕೀರ್ತನೆಯಲ್ಲಿ ಮಾತ್ರ ಮೂಲರಾಮದೇವರ ಹೆಸರನ್ನು ಸ್ಪಷ್ಟವಾಗಿ ಪ್ರಸ್ತಾಪಿಸಿದ್ದಾರೆ (ಅನುಬಂಧ ನೋಡಿ) –

''ವಾದೀಂದ್ರ ಗುರುರಾಜ ನಿನ್ನ
ಪಾದವ ತೋರಿಸಯ್ಯಾ
ವಾದೀಂದ್ರ ಗುರು ನಿನ್ನ ಪಾದವ ನಂಬಿದೆ
ಮೋದವ ಕೊಡುವುದು ಮದಗಳೋಡಿಸಿ ॥ ಪ ॥

ಮೂಲರಾಮರ ಪಾದಪದುಮದಿ ಅಳಿಯಂತಿಪ್ಪ ಧೀರ
ಶೀಲಾದಿಗುಣವಿತ್ತು ಶ್ರೀಲೋಲನಂಘ್ರಿಯ
ಮಲಿನ ಮನವ ಕಳದು ಪೊಳೆಯುವಂತೆ ಮಾಡೋ'' ॥ ೨ ॥

ವಸುಧೇಂದ್ರರ ಕರದೊಳುತೋರ್ಪ ಶ್ರೀಮೂಲರಾಮ

ಗಣಪತ್ಯಂಶಸಂಭೂತರಾದ ಶ್ರೀಗೋಪಾಲದಾಸರು **'ತರಣಿಕುಲೋತ್ಪನ್ನ ತಪುತಕಾಂಚನವರ್ಣ'** ಎಂಬ ಉತ್ತಮ ಸುಳಾದಿಯನ್ನು ರಚಿಸಿದ್ದು, ಇದರಲ್ಲಿ ಶ್ರೀಮೂಲರಾಮದೇವರನ್ನು **'ಪರಮಮಂಗಳಮೂರ್ತಿ', 'ಧೀರ ಶೂರ ದಿವ್ಯವಿಗ್ರಹ', 'ಪಾವನ್ನ ಸುಕೀರ್ತಿ', 'ಪರಿಪೂರ್ಣ ಗುಣಭರಿತ', 'ಸರಿಯಿಲ್ಲದ ದೇವ', 'ಸರ್ವೋತ್ತಮ', 'ವರಜ್ಞಾನ ಪ್ರದಾತ', 'ಧರ್ಮ ಪ್ರತಿಪಾದಕ', 'ಶರಣ ಜನರ ಪಾಲ',** ಮುಂತಾದ ವಿಶೇಷಣಗಳಿಂದ ಸ್ತುತಿಸಿದ್ದಾರೆ.

೧. **'ಸಾಧು ಜೀವರ ಪೊರೆಯೆ ಕ್ರೋಧರಹಿತ ನಿನ್ನ ಮೇದಿನಿಯೊಳಗಿಟ್ಟು ಹಾದಿಯ ತೋರಿದ ಅಜನು'** (ಬ್ರಹ್ಮದೇವರು ಸಜ್ಜನರ ರಕ್ಷಣಾರ್ಥವಾಗಿ ಶ್ರೀಮೂಲರಾಮದೇವರನ್ನು ಈ ಭೂಮಂಡಲದಲ್ಲಿಟ್ಟು ಉದ್ಧಾರದ ಮಾರ್ಗವನ್ನು ತೋರಿದ್ದಾರೆ).

೨. ಶ್ರೀಮೂಲರಾಮದೇವರನ್ನು ಪೂಜಿಸುವ ಗುರುಗಳ ಮಹಿಮೆಯನ್ನೂ ತಿಳಿದು ಭಕ್ತಿಮಾಡಬೇಕು: **'ಚೆಂದದಿ ಬೊಮ್ಮ ರುದ್ರ ಇಂದ್ರಾದಿಗಳು ಕುಂದದೆ ಸುರಋಷಿ ಗಂಧರ್ವಾದಿಗಳು ಒಂದೊಂದಂಶದಿಂದ ಬಂದು ನಿನ್ನನರ್ಚಿಸಿ**

ಶ್ರೀವಾದೀಂದ್ರಸ್ವಾಮಿಗಳವರು ರಚಿಸಿರುವ ಈ **'ಶ್ರೀಮದ್ರಾಘವೇಂದ್ರಮಠಾ–ಗತಾರ್ಚಾಗತಿಕ್ರಮಃ'** ಎಂಬ ಗ್ರಂಥವನ್ನು ಪ್ರಕಟಿಸಿದ ಪುರೋಹಿತ ತಮ್ಮಣ್ಣಾ–ಚಾರ್ಯರ 'ವಿದ್ವದಭ್ಯರ್ಥನಾ' ಎಂಬ ಭಾಗದಲ್ಲಿರುವ –

'ಅಸ್ಮಿನ್ ನ ಕೇವಲಂ ಶ್ರೀಮನ್ಮೂಲರಾಮಚಂದ್ರಪ್ರತಿಮಾಯಾ ಐತಿಹ್ಯ–ಮೇವ ಕಿಂತು 'ತತ್ಪ್ರತಿಮಾ ಸಾಂಪ್ರತಂ ಕುತ್ರ ವರ್ತತ ಇತ್ಯಪಿ ಸ್ಪಷ್ಟಂ ಸಮುಲ್ಲಿ–ಖಿತಮ್ ।' ಅತೋ ನಿಖಿಲ ವೈಷ್ಣವೈಃ ವಿಶೇಷತೋ ರಾಘವೇಂದ್ರ ಮಠಾನು–ಯಾಯಿಭಿಃ ಆವಶ್ಯಂ ಸಂಗ್ರಹಣೀಯಮೇತದಿತಿ ಮನ್ಯೇ ।' ಎಂಬ ಪ್ರಸ್ತಾವನೆಯ ಮಾತುಗಳೂ ಉಲ್ಲೇಖಾರ್ಹವಾಗಿವೆ.

ಶ್ರೀರಾಘವೇಂದ್ರಸ್ವಾಮಿಗಳವರ **'ಉಭಯವಂಶಾಬ್ಧಿಚಂದ್ರಮ'**ರಾದ ಶ್ರೀವಾದೀಂದ್ರತೀರ್ಥರು ರಚಿಸಿರುವ ಶ್ರೀಮೂಲರಾಮದೇವರ ಚರಿತ್ರವರ್ಣನ–ಪರವಾದ ಪದ ಹೀಗಿದೆ. (ಹಸ್ತಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ) –

ರಾಗ : ಕಾಂಬೋಧಿ ತಾಳ : ಝಂಪೆ

"ಮೂಲರಾಮನ ದಿವ್ಯಮೂರ್ತಿ ಅರ್ಚಿಸಲೆನ್ನ
ಮೇಲುಮೇಲೆಂಬೆನಯ್ಯ ॥ ಪ ॥

ಶೀಲದಿಂದಿಳೆಯಲ್ಲಿ ಶಿವನು ಪೊಸಲು ಪೂರ್ವ ।
ಶಿಷ್ಟಾರ್ಚನೆ ಮಾಡಿದ ಚೆಲುವ ॥ ಅ.ಪ. ॥

ಆದಿಯಲಿ ಅಜನಾಜ್ಞೆಯಿಂದಲಿ ದೇವರ ಬಡಿಗ್ಯಾ ।
ಆದರದಿ ನಿರ್ಮಿಸಿದ
ವೇದಗರ್ಭನು ದೇಹದಲ್ಲಿ ।
ಭಕುತಿಯೋಗದಿಂದರ್ಚಿಸಿದ ॥
ಮೋದದಿಂದಿಕ್ಷ್ವಾಕುರಾಮನರ್ಚಿಸಲವಗೆ ।
ಮೋಕ್ಷವನೆ ಪಾಲಿಸಿದ ।
ಮೇದಿನಿಪತಿಗಳಲ್ಲಮಿತ ವೈಭವ ।
ದಿಂದ ಮೆರೆದ ಸಂತೋಷದಾ ಚೆಲುವ ॥ ೧ ॥

ದಾಶರಥಿ ಜಾಂಬವಂತಗೆ ಹರುಷದಿ ಕೊಡಲು ।
ದಾಸನೆಂದವನ ಪೊರೆದಾ ।

ಕೋಶದೊಳ್ಗಜಪತಿಗಳನರಸಿ ।
ನರಹರಿ ಮುನಿಯು ಕೊಂಡು ಬರಲಂದು ಮೆರೆದ ।
ದೇಶಿಕಾನಂದತೀರ್ಥಾರ್ಯರರ್ಚಿಸಿ ।
ತಮ್ಮ ದೇವರೆಂದಾಗ ಕರೆದು ।
ಈಶನೆಂದಿವರ ಕುಲಯೋಗಿಗಳಿಂದ ।
ರ್ಚಿಸಲವರಾಭೀಷ್ಟಗಳ ತಂದು ಸುರಿದಾ ಚೆಲುವ ॥ ೨ ॥

ವಿನುತ ವಿಬುಧೇಂದ್ರ ವಂಶಾಬ್ಧಿ ।
ಪೂರ್ಣವಿಧುಬಿಂಬನೆನಿಸುತಿಹ ।
ಅನುದಿನವು ಸನ್ನುತೋಪೇಂದ್ರರಾಯರ ।
ಮತನನುಸರಿಸಿ ನಡೆಯುತಿಹ ।
ಘನಭಕುತ ವಾದೀಂದ್ರ ಮನೋರಥವನ್ನು ಘ ।
ಟನೆಯನು ಮಾಡುತಿಹ ಚಲುವ" ॥ ೩ ॥

ಶ್ರೀವಾದೀಂದ್ರತೀರ್ಥರೇ ರಚಿಸಿರುವ ಮತ್ತೊಂದು ಕೀರ್ತನೆಯಲ್ಲಿ, ತಮಗೆ 'ಶ್ರೀಮೂಲರಾಮದೇವರನ್ನು ಪೂಜಿಸುವ ಸೌಭಾಗ್ಯವು ಯಾವ ಪುಣ್ಯದಿಂದ ಒದಗಿಬಂದಿರಬಹುದು?' ಎಂಬ ಆತ್ಮವಿಶ್ಲೇಷಣೆಯ ಸುಂದರ ವಿವರಗಳಿವೆ –

ರಾಗ : ಕಲ್ಯಾಣ ತಾಳ : ಝಂಪೆ

"ಮುನ್ನೇನು ಸುಕೃತವ ರಚಿಸಿದ್ದೆನೋ ।
ನಿನ್ನನರ್ಚಿಸಲಾದೆನೋ ।
ಸನ್ನುತ ಶುಭಗಣಸಂದೋಹ ।
ರಘುಕುಲರನ್ನ ಮೂಲರಾಮನೆ ನಾನು ॥ ಪ ॥

ಗಂಗಾದಿ ಶುಭತೀರ್ಥಗಳನು ।
ಮರೆತಾರುತಿಂಗಳು ಧರಿಸಿದ್ದೆನೋ ।
ಮಂಗಳವನ್ನು ನಮಗೆ ಮನ್ನಿಸಿ ।
ಕೊಡುವ ಶ್ರೀರಂಗಾದಿಗಳಲ್ಲಿದ್ದೆನೋ । ಹಿಂಗಾದೆ
ಗುರುಹಿರಿಯರ ಪದಾಂಭೋಜ ।
ಸಂಗತಿಯನು ಬಲು ಸಂಪಾದಿಸಿದ್ದೆನೋ ಹ್ಯಾಂಗೋ ॥ ೧ ॥

ವಾದೀಂದ್ರವಂದ್ಯ ಶ್ರೀಮೂಲರಾಮ

ಶ್ರೀವಾದೀಂದ್ರರು ಮಹಾಮಹಿಮರು. **‘ಭೂಮಂಡಲದೊಳು ಮೆರೆವ ಯತಿಗಳ ಮಂಡಲಾಬ್ಧಿಗೆ ಸೋಮನೆನಿಪ ಅಖಂಡಮಹಿಮ ವಾದೀಂದ್ರಗುರುಗಳ’**ನ್ನು ಕಣ್ಣಾರೆ ಕಂಡ ಶ್ರೀವಿಜಯದಾಸರು ರಚಿಸಿದ ಕೀರ್ತನೆಯಲ್ಲಿ –

‘ನಸುನಗಿಯ ಮೊಗ, ಪಸರಿಸಿದ ದ್ವಾದಶನಾಮಗಳು, ಶ್ರೀಮುದ್ರೆ, ಮುದದಿಂದ ನೊಸಲಿಲೊಪ್ಪುವ ಗಂಧ, ಅಕ್ಷತಿ, ಎಸೆವ ಸಣ್ಣಂಗಾರ, ಕಿವಿಯಲಿ ಹಸನಾದ ಎಳೆತುಳಸಿ’ ಶೋಭಿಸುವ ಇವರು, **‘ಶಿಶುವು ಮೊದಲಾದವರು ತಮತಮ ಬೆಸನೆ ಪೇಳಲು ಕೇಳಿ ಅವರುಬ್ಬಸವ ಕಳೆದಿಷ್ಟಾರ್ಥ ತೋರುವ ಋಷಿಕುಲೋತ್ತಮರಾದ ಗುರುಗಳು’, ‘ವಿದ್ಯಾ ವಸುವಿನಲಿ ಪಂಡಿತರ ಮೆಚ್ಚಿಸಿ ಆವಾಗ ತಲೆದೂಗಿಸುವರು’, ‘ಎನಗೆ ಇವರ ಪೊಗಳಲು ವಶವೆ!’, ‘ದರುಶನದಿಂದಲಿ ಗತಿಗೆ ಪಥ ನಿಮಿಷದೊಳಗೆ’, ‘ಇದು ಸಿದ್ಧವೆಂದು ವಂದಿಸಿರೊ ಮರೆಯದೆ ಈ ಗುರುಗಳ’** ಎಂದು ಸಾಧಕ ಸಮೂಹಕ್ಕೆ ಸಲಹೆ ನೀಡಿದ್ದಾರೆ. ಇವರು **‘ಬೆಸಸುವ ಒಂದೊಂದು ಮಾತಾಲಿಸಿದರದು ವೇದಾರ್ಥತುಲ್ಯ’** (ಶ್ರೀವಾದೀಂದ್ರರು ಆಡುವ ಒಂದೊಂದು ಮಾತೂ ವೇದಾರ್ಥಕ್ಕೆ ಸಮಾನವಾದದ್ದು) ಎಂದೇ ನಿರ್ಣಯಿಸಿದ್ದಾರೆ.

ಇಂತಹ ಮಹಾಮಹಿಮರಾದ, ಶ್ರೀರಾಘವೇಂದ್ರಗುರುಸಾರ್ವಭೌಮರ ಮಂತ್ರಿಗಳಂತೆ ಶೋಭಿಸುವ ಶ್ರೀವಾದೀಂದ್ರಸ್ವಾಮಿಗಳವರು ತಾವು ರಚಿಸಿರುವ ‘ಶ್ರೀಮದ್ರಾಘವೇಂದ್ರಮಠಾಗತಾರ್ಚಾಗತಿಕ್ರಮಃ’ (ಹಸ್ತಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ) ಗ್ರಂಥದಲ್ಲಿ **ಶ್ರೀಮೂಲರಾಮಪ್ರತಿಮಾವಿಚಾರ**ವನ್ನು ಪ್ರತಿಪಾದಿಸಿದ ಭಾಗಗಳು ಹೀಗಿವೆ –

“ಅಥಾಽಸನ್ನಿಹಿತೇ ಶಿಷ್ಯೇ ರಾಮಚಂದ್ರೋಽಪಿ ಸಂಯಮೀ ।
ನಿಧಾಯಾರ್ಚಾದಿಕಂ ಶಿಷ್ಟಂ ಕ್ವಾಪಿ ದಿಷ್ಟಗತಿಂ ಗತಃ ॥ ೨೬ ॥”

ಕೆಲದಿನಗಳಾದ ಮೇಲೆ ಶ್ರೀರಾಮಚಂದ್ರತೀರ್ಥರ ಅವಸಾನಕಾಲ ಪ್ರಾಪ್ತವಾಯಿತು.

ಆಗ ಶ್ರೀವಿಬುಧೇಂದ್ರತೀರ್ಥರು ಹತ್ತಿರವಿಲ್ಲದಿದ್ದುದರಿಂದ ತಮ್ಮಲ್ಲಿದ್ದ ಶ್ರೀಮೂಲಸೀತಾರಾಮಪ್ರತಿಮೆ ಹಾಗೂ ಇನ್ನಿತರ ಉಳಿದ ಸಮಸ್ತವನ್ನೂ ಶ್ರೀವಿಬುಧೇಂದ್ರರು ಬಂದಾಗ ಒಪ್ಪಿಸಬೇಕೆಂದು ತಮ್ಮ ನಂಬಿಕೆಗೆ ಪಾತ್ರರಾದ

ಶಿಷ್ಯರಿಗೆ ಕಟ್ಟಪ್ಪಣೆ ಮಾಡಿ ಒಂದು ಸ್ಥಳದಲ್ಲಿಟ್ಟು ನಾರಾಯಣಧ್ಯಾನಪರವಶರಾದರು.

“ಏತಸ್ಮಿನ್ನಂತರೇ ಕಶ್ಚಿತ್ ವಿದ್ಯಾನಿಧಿರಿತಿ ಶ್ರುತ: ।
ಯತಿರಾಗತ್ಯ ತತ್ಸರ್ವಂ ಜಹಾರಾರ್ಚಾದ್ಯುಪಾಯವಿತ್ ॥ ೨೭ ॥”

ಅದೇ ಸಮಯದಲ್ಲಿ ವಿದ್ಯಾನಿಧಿಗಳೆಂಬ ಸನ್ಯಾಸಿಗಳು ಅಲ್ಲಿಗೆ ಬಂದು ಶ್ರೀಮದಾಚಾರ್ಯಸಂಸ್ಥಾನದ ಮುಖ್ಯಪ್ರತಿಮೆ ಮುಂತಾದವು ಅಲ್ಲಿರುವುದನ್ನು ಅರಿತು ಉಪಾಯವಾಗಿ ಶ್ರೀಮೂಲರಾಮ–ಸೀತಾಪ್ರತಿಮಾದಿ ಸಮಸ್ತವನ್ನೂ ಒಯ್ದರು.

“ತತೋ ವಿದಿತವೃತ್ತಾಂತೋ ವಿಬುಧೇಂದ್ರ: ಸಮಾಗತ: ।
ಪ್ರತ್ಯಾಖ್ಯಾತೋ ಭವದ್ವಿದ್ಯಾನಿಧಿನಾ ಬಲಶಾಲಿನಾ ॥ ೨೮ ॥”

ಶ್ರೀವಿಬುಧೇಂದ್ರತೀರ್ಥರು, ಶ್ರೀರಾಮಚಂದ್ರತೀರ್ಥರು ನಿರ್ಯಾಣ ಹೊಂದಿದ ವಿಚಾರ ತಿಳಿದು ಅಲ್ಲಿಗೆ ಬಂದು ಗುರುಗಳ ನಂಬಿಕಸ್ಥರಾಗಿದ್ದ ಆ ಜನರನ್ನು ವಿಚಾರಿಸಲಾಗಿ ಜರುಗಿದ ಎಲ್ಲ ವಿಚಾರ ತಿಳಿದು, ಶ್ರೀಗುರುಗಳ ಬೃಂದಾವನ ದರ್ಶನ ಮಾಡಿ, ಶ್ರೀವಿದ್ಯಾನಿಧಿಗಳಿದ್ದಲ್ಲಿಗೆ ಬಂದು ದೇವರನ್ನು ಕೊಡುವಂತೆ ಕೇಳಿದಾಗ ಅರವತ್ನಾಲ್ಕು ಜನ ಮಠದ ಕರ್ಮಕಾರಕರ ಬೆಂಬಲ ಪಡೆದು ಬಲಶಾಲಿಗಳಾಗಿದ್ದ ವಿದ್ಯಾನಿಧಿಗಳು ಶ್ರೀವಿಬುಧೇಂದ್ರರಿಗೆ ದೇವರನ್ನು ಕೊಡುವುದಿಲ್ಲ ಎಂದು ನಿರಾಕರಿಸಿದರು.

“ಮಧ್ವತಂತ್ರಪ್ರತಿಷ್ಠಾಯಾಂ ನಾಸ ಸಂಜಾತಕೌತುಕ: ।
ವಿಬುಧೇಂದ್ರಸ್ತದಾಹರ್ತುಂ ನೈಚ್ಛದರ್ಚಾಂ ಪರಂಗತಾಮ್ ॥ ೨೯ ॥”

ಶ್ರೀಮಧ್ವಸಿದ್ಧಾಂತ ಪ್ರತಿಷ್ಠಾಪನೆಯಲ್ಲಿಯೇ ಕುತೂಹಲವುಳ್ಳ ಶ್ರೀವಿಬುಧೇಂದ್ರತೀರ್ಥರು ಪರರ ಪಾಲಾಗಿದ್ದ ಶ್ರೀಮೂಲರಾಮ ವಿಗ್ರಹವನ್ನು ಶ್ರೀವಿದ್ಯಾನಿಧಿಗಳಿಂದ ಹಿಂತಿರುಗಿ ಪಡೆಯಲು ಇಚ್ಛೆಸಲಿಲ್ಲ.

“ಅನ್ಯೈರಪಹೃತಾಮರ್ಚಾಂ ರಾಮಸ್ಯ ರಘುನಂದನ: ।
ಆಜಹಾರ ಪುನರ್ಮೌಲ್ಯಾತ್ ಶ್ರೀಸುರೇಂದ್ರಗುರೋಃ ಗುರುಃ ॥ ೩೦ ॥”

ಮುಂದೆ ಶ್ರೀಸುರೇಂದ್ರತೀರ್ಥರ ಗುರುಗಳಾದ ಶ್ರೀರಘುನಂದನತೀರ್ಥರು ಗುರ್ವಾಜ್ಞೆಯಂತೆ ಇತರರು ಅಪಹರಿಸಿದ್ದ, ತಮ್ಮ ಹಕ್ಕಿನದ್ದಾದ ಶ್ರೀಮೂಲರಾಮಚಂದ್ರನ ಪ್ರತಿಮೆಯನ್ನು ಶಿಷ್ಯಮೌಲ್ಯದಿಂದ ಮತ್ತೆ ತರಿಸಿಕೊಂಡರು.

ಗೈದ ಶ್ರೀಸುಮತೀಂದ್ರತೀರ್ಥರ ಹೆಸರು ಅನ್ವರ್ಥಕನಾಮವಾಗಿತ್ತು. ಇವರ ಅಸದೃಶ ವಿದ್ವತ್ತಿಗೆ ಮನಸೋತು ಪರಮತದ ಸುಭಾನುರಾಯ ಎನ್ನುವವನು ಇವರನ್ನು ಕುರಿತು –

"ಪ್ರತಿಮಠಮುದರಂಭರಯೋ ಬಹವೋ ಹಂತ ವರ್ತಂತ।
ಸುಮತೀಯತೇ ವಿತತಮತೇ ಭವತಾ ಸಮತಾಂ ಕಃ ಪುಮಾನಿಯೇತ"

[ಎಲ್ಲ ಮಠಗಳಲ್ಲಿಯೂ ಸನ್ಯಾಸಿಗಳಿದ್ದಾರೆ, ಅದರೆ ಸುಮತೀಂದ್ರಗುರು–ಗಳೇ ನಿಮ್ಮನ್ನು ಸರಿಗಟ್ಟುವವರಾರಿದ್ದಾರೆ?] ಎಂದು ಉದ್ಗಾರ ತೆಗೆದಿದ್ದಾನೆ.

ಅಗಾಧಪಾಂಡಿತ್ಯ ಉಳ್ಳ ಶ್ರೀಸುಮತೀಂದ್ರರು ಪೂರ್ವಾಶ್ರಮದಲ್ಲೇ ಸಕಲ ಗ್ರಂಥಗಳನ್ನು ರಚಿಸಿದವರು. ಅವರು ಆಶ್ರಮಾನಂತರ ರಚಿಸಿದ **'ಶ್ರೀರಾಮದಂಡಕ'** ದಲ್ಲಿ ಶ್ರೀಮೂಲರಾಮದೇವರನ್ನು ವ್ಯಕ್ತವಾಗಿ ಹೆಸರಿಸಿ ವರ್ಣಿಸಿದ್ದಾರೆ –

'ನಮದಮರಕಿರೀಟಪಾಲೀ' ಎಂದು ಆರಂಭವಾಗುವ ೧ನೇ ಖಂಡವು **'....ತಂ ಮೂಲರಾಮದೇವಂ ನಮಃ ಶ್ರೀಪತಿಮ್'** ಎಂದು ಮುಕ್ತಾಯವಾಗುತ್ತದೆ.

'ಸುಲಲಿತ ನವಕಂಬುನಿಂದಾ ಸಮುದ್ಧಾನ ಕಂದಾಯಿತಾ' ಎಂದು ಆರಂಭ–ವಾಗುವ ೪ನೇ ಖಂಡವು **"ಜಾನಕೀ ಮಂಗಲಾ ಪಾಂಗಕಾಲಿಂದಿಕಾಸಂಗಿ ಲಾವಣ್ಯ ಗಂಗಾದೃತಾನಂಗಮಾತಂಗಮೀಡೇ ಜಗನ್ಮಂಗಲಂ ಶ್ರೀಮೂಲರಾಮದೇವಮ್ ॥"** ಎಂದು ಮುಕ್ತಾಯವಾಗುತ್ತದೆ.

ಅವರು ಕೆಲವು ರಾಜರುಗಳಿಗೆ ಬರೆಸಿದ ಶ್ರೀಮುಖಗಳಲ್ಲೂ, ಅವರು ತಮ್ಮನ್ನು ಶ್ರೀಮೂಲರಾಮದೇವರ ಪಾದಪದ್ಮಾರಾಧಕರೆಂದೇ ಉಲ್ಲೇಖಿಸಿದ್ದಾರೆ.

೧. ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಣಾಂ ಪದವಾಕ್ಯಪ್ರಮಾಣ–ಪಾರಾವಾರಪಾರೀಣ ಸರ್ವತಂತ್ರಸ್ವತಂತ್ರಾಣಾಂ ಶ್ರೀಮದ್ವೈಷ್ಣವಸಿದ್ಧಾಂತ–ಪ್ರತಿಷ್ಠಾಪನಧುರೀಣಾನಾಂ ಶ್ರೀಮನ್ಮೂಲರಾಮಚಂದ್ರದೇವದಿವ್ಯಶ್ರೀಚರಣ–ನಲಿನಯುಗಲಸಪರ್ಯಾವಿಧಿಸಪರ್ಯಾಯಚರ್ಯಾಚಾತುರ್ಯಾತಿಶ–ಯಧುರ್ಯಾಣಾಂ ಶ್ರೀಮದ್ಯೋಗೀಂದ್ರತೀರ್ಥಶ್ರೀಮಚ್ಚರಣಾನಾಂ ದಿವ್ಯಶ್ರೀ–ಕರಕಮಲಜನನಭಾವಿತಭಾಷಿತಮಹಿಮಭರಭಾಸುರಾಣಾಂ ಲಾಲಿತ ನಿಜವಿನೇಯ

ಭೂಸುರಾಣಾಂ ಶ್ರೀಮತ್ಸೂರಿಂದ್ರತೀರ್ಥಶ್ರೀಪಾದಾನಮಂತೇವಸದಗ್ರಣೀ ಶ್ರೀಸುಮ–ತೀಂದ್ರತೀರ್ಥ ಸಂಯಮೀಂದ್ರ ....।

– ಶ್ರೀತ್ರ್ಯಂಬಕಂ ರಾಜಾನಂ ಪ್ರತಿಪತ್ರಂ – **'ಸಂಸ್ಕೃತ ಪತ್ರಿಕಾಜಾಲಃ'**

(ಶ್ರೀರಘುನಂದನತೀರ್ಥರ ೫೦೦ನೇ ಆರಾಧನಾ ಸಂದರ್ಭದಲ್ಲಿ ಈ ಗ್ರಂಥ ಬಿಡುಗಡೆಯಾಗಿದೆ)

೨. ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಣಾಂ ಪದವಾಕ್ಯಪ್ರಮಾಣ ಪಾರಾವಾರಪಾರೀಣ ಸರ್ವತಂತ್ರಸ್ವತಂತ್ರಾಣಾಂ ಶ್ರೀಮದ್ವೈಷ್ಣವಸಿದ್ಧಾಂತ ಪ್ರತಿಷ್ಠಾಪನ ಧುರೀಣಾನಾಂ ಶ್ರೀಮನ್ಮೂಲರಾಮಚಂದ್ರದೇವದಿವ್ಯ ಶ್ರೀಚರಣನಲಿನಯುಗಲ–ಸಪರ್ಯಾವಿಧಿ ಸಪರ್ಯಾಯಚರ್ಯಾ ಚಾತುರ್ಯಾತಿಶಯ ಧುರ್ಯಾಣಾಂ ಶ್ರೀಮತ್ಪಾವನಪವನಾಂಶಸಂಭೂತ ಶ್ರೀಮದನಾಂದತೀರ್ಥಭಗವತ್ಪಾದ ಸಂಸ್ಥಾಪಿತ......

– ಶ್ರೀ(ಶಾಹುಜಿಭೂಪಾಲಂ)ಏಕೋಜಿಮಹಾರಾಜಂ ಪ್ರತಿಪತ್ರಂ

(ಶ್ರೀರಘುನಂದನತೀರ್ಥರ ೫೦೦ನೇ ಆರಾಧನಾ ಸಂದರ್ಭದಲ್ಲಿ ಈ ಗ್ರಂಥ ಬಿಡುಗಡೆಯಾಗಿದೆ)

ಉಪೇಂದ್ರೋಪಾಸಿತಚರಣ ಶ್ರೀಮೂಲರಾಮ

'ಗುರುಗುಣಸ್ತವನ'ದಲ್ಲಿ ಶ್ರೀವಾದೀಂದ್ರತೀರ್ಥರು ತಮ್ಮ ಗುರುಗಳಾದ ಶ್ರೀಉಪೇಂದ್ರತೀರ್ಥರನ್ನು ಪ್ರಾರ್ಥಿಸಿದ ಶ್ಲೋಕ –

"ಯೇ ರಾಮವ್ಯಾಸಪಾದಪ್ರಣಿಹಿತಮನಸೋ ಮದ್ವತಂತ್ರಪ್ರತಿಷ್ಠಾಧುರ್ಯಾ–
ಮರ್ಯಾದಸಂವಿತ್ ಸುಮಹಿತಸುಮತೀಂದ್ರಾರ್ಯಶಿಷ್ಯಾಗ್ರಗಣ್ಯಾಃ ॥

ನಿತ್ಯತ್ರಯ್ಯಂತಚಿಂತಾಪರಿಣತವಿಶದಾಶೇಷತತ್ವಾವಬೋಧ–
ಪ್ರಖ್ಯಾತಾನ್‌ತಾನುಪೇಂದ್ರವ್ರತಿವಿಬುಧಮಣೀನ್ದೇಶಿಕಾನಾಶ್ರಯೇಹಮ್ ॥ ೧೧ ॥"

ಶ್ರೀಧೀರೇಂದ್ರತೀರ್ಥರು ಗುರುಗುಣಸ್ತವನಕ್ಕೆ ರಚಿಸಿದ 'ಶ್ರೀಗುರುಗುಣನುತಿ–ವ್ಯಾಖ್ಯೆ'ಯಲ್ಲಿ ಈ ಶ್ಲೋಕದ **'ಯೇ ರಾಮವ್ಯಾಸಪಾದ ಪ್ರಣಿಹಿತ ಮನಸಃ'** ಎಂಬ ವಿಶೇಷಣಕ್ಕೆ –

'ರಾಮವ್ಯಾಸೌ 'ಮೂಲರಾಮ' ವೇದವ್ಯಾಸೌ ತಯೋಃ ಪಾದೇಷು ಅಂಘ್ರಿಷು ಪ್ರಕರ್ಷೇಣ ನಿಹಿತಂ ಮನೋ ಯೇಷಾಂ ತೇ ತಥೋಕ್ತಾಃ।' ಎಂದೇ ವ್ಯಾಖ್ಯಾ–ನಿಸಿದ್ದಾರೆ.

ಹೀಗೆ ಶ್ರೀಉಪೇಂದ್ರತೀರ್ಥರು ಶ್ರೀಮೂಲರಾಮದೇವರನ್ನು ಪೂಜಿಸಿದ ಬಗ್ಗೆ ಶ್ರೀವಾದೀಂದ್ರರ ಹಾಗೂ ಶ್ರೀಧೀರೇಂದ್ರರ ವಾಕ್ಯಗಳು ದೊರೆತಿವೆ.

"ಶ್ರೀರಾಘವೇಂದ್ರ ತವಚರಣಂ ಭಜಾಮಿ ।
ಶರಣಾಗತಜನಭವತರಣಂ ॥ ಪ ॥

..

ವಾಸುದೇವಕವಿ ಸನ್ನುತ ಶರಣಮ್ ।
ಮೂಲರಾಮ ವರಕರುಣಾಭರಣಮ್" ॥ ೩ ॥

೮) ಅಣುಸುಧಾ ಎಂದೇ ಖ್ಯಾತವಾದ 'ಹರಿಕಥಾಮೃತಸಾರ'ದ ಮೂಲಕ ಜಗನ್ಮಾನ್ಯರಾದ ಶ್ರೀಜಗನ್ನಾಥದಾಸರು ರಾಯರನ್ನು ಕುರಿತು ರಚಿಸಿದ ಕೀರ್ತನೆ–ಗಳ ಪಲ್ಲವಿ ಹಾಗೂ ಚರಣಗಳಲ್ಲಿ ರಾಯರು 'ಮೂಲರಾಮಾರಾಧಕ'ರೆಂದು ಘಂಟಾಘೋಷವಾಗಿ ಸಾರಿರುವ ಭಾಗಗಳು ಹೀಗಿವೆ –

೯) **"ಶ್ರೀರಾಘವೇಂದ್ರ ನಿಮ್ಮ ಚಾರುಚರಣವ**
ಸಾರಿದೆ ಶರಣಮಂದಾರ ಕರುಣವ ॥ ಪ ॥

..

ಮೂಲರಾಮರ ಪಾದಕೀಲಾಲಜ ಮಧುಪಾ
ಬಾಲಕನ ಬಿನ್ನಪವ ಲಾಲಿಸೋ ಮುನಿಪಾ..." ॥ ೨ ॥

೧೦) **"ಪೊಂದಿಬದುಕಿರೋ ರಾಘವೇಂದ್ರರಾಯರಾ**
ಕುಂದದೆಮ್ಮನೂ ಕರುಣದಿಂದ ಪೊರೆವರಾ ॥ ಪ ॥

..

ಫಾಲಲೋಚನ ವಿನುತ ಮೂಲರಾಮನಾ
ಶೀಲಸದ್ಗುಣ ನುತಿಪ ಮೇಲುಭರಿತನಾ" ॥ ೨ ॥

೧೧) **"ಸ್ಮರಿಸಿಬೇಡುವೆನು ನಾ ಗುರುಸಾರ್ವಭೌಮಾ ॥ ಪ ॥**
ನಿರುತ ನೀ ಪೊರೆಯೆನ್ನ ವಾದಿಗಜಸಿಂಹ ॥ ಅ.ಪ ॥

..

ಕಾಮರಿಪುನುತ ಮೂಲರಾಮ ಪದಯುಗ ಕುಮುದ
ಸೋಮನೆನಿಸುವೆ ಭಕ್ತಸ್ತೋಮಕೆಲ್ಲ....." ॥ ೩ ॥

೧೨) **'ತಂ ನಮಾಮಿ ಮುನಿವೃಂದವಂದಿತಂ'** ಎಂದು ಆರಂಭವಾಗುವ ಶ್ರೀಗುರುಜಗನ್ನಾಥದಾಸವಿರಚಿತ 'ಶ್ರೀರಾಘವೇಂದ್ರ ಆಪಾದಮೌಳಿಪರ್ಯಂತ ವರ್ಣನ ಸ್ತೋತ್ರ'ದ ಸಪ್ತಮ ಶ್ಲೋಕವು ಹೀಗಿದೆ –

"ಮೂಲರಾಮ ಶುಭವಿಗ್ರಹಾರ್ಚಕಂ ಮಾನವಾಲಿ ಸುಖದಾಯಕಂ ಸದಾ ।
ಸಾನುರಾಗಮತಿದಾನದೀಕ್ಷಿತಂ ದಾನಸಂಜಿತಸುರದ್ರುಮಂ ಭಜೇ ॥ ೭ ॥"

೧೩) ಶ್ರೀಮೋದವಿಠ್ಠಲರ ಪದದಲ್ಲೂ ಈ ವಿಷಯದ ಪ್ರಸ್ತಾಪವಿದೆ (ಇದರ ಹಸ್ತಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ) –

"ಮಂತ್ರಾಲಯದೊಳು ನಿಂತಿಹ ಯತಿವರ
ರೆಂತುಬಣ್ಣಿಸಲಿ ಎನ್ನಳವೆ ॥
ಯಂತ್ರೋದ್ಧಾರಕ ಪ್ರಾಣಪತಿಯೆ ತಾ
ನಿಂತು ನುಡಿಸುವನು ಕೇಳ್ಮನವೇ ॥ ಪ ॥

..

ಮೂಲರಾಮನಾರಾಧಕಗುರು
ಶ್ರೀಲೋಲಸನ್ನಿಧಿವುಳ್ಳವರು ।
ಕಾಲ ಮೀರದಲೆ ಜಪಗಳಮಾಳ್ಪರು
ಸ್ಥೂಲರ ಕಣ್ಣಿಗೆ ಕಾಣಿಸರು" ॥ ೧ ॥

೧೪) ಶ್ರೀಶಾಮಸುಂದರದಾಸರು ಸಹ ಮೇಲಿನ ಕೀರ್ತನೆಗಳಿಗೆ ತಮ್ಮ ಸಹಮತವನ್ನು ತೋರಿಸಿರುವುದನ್ನು ಕಾಣಬಹುದು –

"ಕೂಲದೇವತನಯಾ ಕೂಲಸುನಿಲಯಾ ।
ಪಾಲಿಸೋಜೀಯಾ ॥ ಪ ॥

..

ಶಾಮಸುಂದರ ಮೂಲರಾಮಪದಾರ್ಚಕ ।
ಕಾಮಕಾರ್ಮುಕ ಗಜಸ್ತೋಮಸಿಂಗ ಮಂಗಳಾಂಗ ॥ ೩ ॥

ಸುಮತೀಂದ್ರ ಸಂಸ್ತುತ ಶ್ರೀಮೂಲರಾಮ

ಶ್ರೀರಾಯರ ನಂತರ ಕ್ರಮವಾಗಿ ಶ್ರೀಯೋಗೀಂದ್ರತೀರ್ಥರು, ಶ್ರೀಸೂರೀಂದ್ರ–ತೀರ್ಥರು, ನಂತರ ಮೂಲಮಹಾಸಂಸ್ಥಾನವನ್ನು ಆಳಿ, ಶ್ರೀಮೂಲರಾಮಾರ್ಚನೆ–

ಶ್ರೀಮೂಲರಾಮಚಂದ್ರದೇವರು ಯತಿಗಳಿಂದಲೇ ಪೂಜೆಗೊಳ್ಳಬೇಕೆಂಬುದು ನಿಯಮ. ಅತ ಏವ ಅವರಲ್ಲಿ ನಾನು ನಿತ್ಯವೂ ವಾಸಿಸುತ್ತೇನೆ. ನೀನು ಮೂಲ–ರಾಮನ ಪೂಜೆಗಾಗಿ ಯತ್ಯಾಶ್ರಮವನ್ನು ಸ್ವೀಕರಿಸು' ಎಂದು ವಾಗ್ದೇವಿಯು ಆಜ್ಞಾಪಿಸುತ್ತಾಳೆ.

೩) ತುಂಗಾತೀರದ ಬಿಚ್ಚಾಲೆಯ ಮಹಾತಪಸ್ವಿ ಶ್ರೀಅಪ್ಪಣಾಚಾರ್ಯರು ಗುರುರಾಜರ ವಿದ್ಯಾಶಿಷ್ಯರು. ಪರಮಭಕ್ತರು. ಅವರು ರಚಿಸಿದ 'ಶ್ರೀರಾಘ–ವೇಂದ್ರಸ್ತೋತ್ರ', 'ಶ್ರೀರಾಘವೇಂದ್ರಮಂಗಳಾಷ್ಟಕ', 'ಶ್ರೀರಾಘವೇಂದ್ರಕವಚ', 'ಶ್ರೀರಾಘವೇಂದ್ರ ಅಷ್ಟೋತ್ತರಶತನಾಮಾವಳಿ' ಮತ್ತು 'ಶ್ರೀರಾಘವೇಂದ್ರಗದ್ಯ' (ದಂಡಕ)ಗಳೆಂಬ ಕೃತಿಪಂಚಕಗಳು ಪ್ರಸಿದ್ಧವಾಗಿವೆ.

'ಶ್ರೀರಾಘವೇಂದ್ರಗದ್ಯ'ವು ಗುರುರಾಜರ ನಿತ್ಯಕರ್ಮಾನುಷ್ಠಾನವನ್ನು ಅವರ ವಿಶಿಷ್ಟ ಗುಣಸಂಕಥನದೊಂದಿಗೆ ವರ್ಣಿಸುವ ಸರಳ, ಸುಂದರ, ಕೃತಿಯಾಗಿದೆ. ಶ್ರೀರಾಯರು ಉಷಃಕಾಲದಲ್ಲಿ ಭಗವತ್ಸ್ಮರಣೆಯಿಂದ ತಮ್ಮ ದಿನಚರಿಯನ್ನು ಆರಂಭಿಸುತ್ತಿದ್ದ ಸಂಗತಿಯನ್ನು ತಿಳಿಸುವಲ್ಲಿ ಅಪ್ಪಣಾಚಾರ್ಯರು –

"ರಮಾದೇವಸಂಘಾನ್ ಋಷೀನ್ ಸಿದ್ಧಮುಖ್ಯಾನ್ ಗುರೂಂಶ್ಚಾಪಿ ಮೂಲಾದಿಸಂಜ್ಞಾನ್ ನಮಸ್ಕೃತ್ಯ"

ಎಂಬ ವಾಕ್ಯಖಂಡವನ್ನು ಬಳಸಿದ್ದಾರೆ. ಇಲ್ಲಿ 'ಮೂಲಾದಿ ಸಂಜ್ಞಾನ್' ಎಂದರೆ 'ಮೂಲರಾಮನೇ ಮೊದಲಾದ ತಮ್ಮ ಉಪಾಸ್ಯಮೂರ್ತಿಗಳಿಗೆ ನಮಸ್ಕರಿಸಿ' ಎಂದರ್ಥ.

೪) ಇದೇ ಕೃತಿಯಲ್ಲಿ, ಶ್ರೀಗುರುರಾಜರು ಮಧ್ಯಾಹ್ನ ಕಾಲದಲ್ಲಿ ನಡೆಸುತ್ತಿದ್ದ ಪಾಠಪ್ರವಚನ ಹಾಗೂ ಸಂಸ್ಥಾನಪೂಜೆಯ ವಿವರಗಳಿವೆ –

"ಲಸತ್ಕಾಂತಿಶೋಭಾಯಮಾನೇ ಶುಭೇಮಂಟಪೇ ಮಧ್ಯ ಆಸ್ಥಾಯ ಸದ್ರತ್ನಪುಂಜಾತಿ ಮಂಜುಜ್ವಲದ್ ಭೂಷಣೈರ್ಭೂಷಿತಂ ಮೂಲರಾಮಂ । ತತಃ ಸ್ವರ್ಣಕುಂಭಂ ಲಸದ್ಗಾಂಗತೋಯೇನಪೂರ್ಣಂ ಸಮಭ್ಯರ್ಚ ಪುಷ್ಪೈಃ ಶುಭೈರ್ಧೂಪದೀಪೈಃ ......"

ಎಂಬಲ್ಲಿಯೂ ಶ್ರೀಅಪ್ಪಣಾಚಾರ್ಯರು ಶ್ರೀರಾಯರು ಗೈದ ಶ್ರೀಮೂಲರಾಮ–ದೇವರ ಪೂಜೆಯ ಪ್ರತ್ಯಕ್ಷದರ್ಶಿಗಳಾಗಿದ್ದ ಬಗ್ಗೆ ಪುರಾವೆ ದೊರೆತಂತಾಗಿದೆ.

೫) ಅಪ್ಪಣಾಚಾರ್ಯ ವಿರಚಿತ 'ಶ್ರೀರಾಘವೇಂದ್ರ ಅಷ್ಟೋತ್ತರಶತ–ನಾಮಾವಳಿ'ಯು **"ಓಂ ಶ್ರೀಶ್ರೀ ಮೂಲರಾಮಾರ್ಚಕ ರಾಘವೇಂದ್ರ ಯತೀಂದ್ರಾಯ ನಮಃ ॥"** ಎಂಬ ಮಹತ್ವಪೂರ್ಣ ಉಲ್ಲೇಖದಿಂದ ಮುಕ್ತಾಯವಾಗುತ್ತದೆ. ಅಂದಿನಿಂದ ಇಂದಿನವರೆಗೆ ಪ್ರತಿದಿನ ಸತ್ಯ–ಧರ್ಮರತರಾದ ಶ್ರೀಮದ್ರಾಘವೇಂದ್ರ–ತೀರ್ಥಗುರುಸಾರ್ವಭೌಮರ ಮೂಲವೃಂದಾವನಕ್ಕೆ ಇದೇ ನಾಮಾವಳಿ–ಯಿಂದ ತುಲಸೀ–ಪುಷ್ಪಾರ್ಚನೆಗಳು ನಡೆಯುತ್ತವೆ. ಕಳೆದ ಮೂರು ಶತಮಾನ–ಗಳಿಂದ ಗುರುರಾಜರ ಭಕ್ತರಿಗೆ ಫಲಪ್ರದ ಮಂತ್ರಾತ್ಮಕವಾದ ಅಪ್ಪಣಾಚಾರ್ಯರ ಈ ಉಲ್ಲೇಖಗಳು ಪರಮ ಚರಮ ಪ್ರಮಾಣಗಳಾಗಿವೆ.

೬) ಶ್ರೀಮದಪ್ಪಣಾಚಾರ್ಯ ಸಂಸೂಚಿತ ಶ್ರೀರಾಘವೇಂದ್ರಸ್ತೋತ್ರದ ಪುನಶ್ಚರಣಪದ್ಧತಿಯಲ್ಲಿ –

"ಶ್ರೀರಾಘವೇಂದ್ರಾಷ್ಟಕ್ಷರಜಪಕ್ರಮಃ । ಹೋಮಪ್ರಕಾರಃ । ಸರ್ವತ್ರ ಶ್ಲೋಕೇ ರಾಘವೇಂದ್ರತೀರ್ಥಗುರ್ವಂತರ್ಗತ ಶ್ರೀಮಧ್ವಾಂತರ್ಗತಸೀತಾಪತಿ ಶ್ರೀಮೂಲ–ರಾಮಚಂದ್ರಾಯ ಸ್ವಾಹಾ । ಸೀತಾಪತಿ ಶ್ರೀಮೂಲರಾಮಚಂದ್ರಾಯ ಇದಂ ನ ಮಮ ಇತಿ ತ್ಯಾಗಃ ॥ ಎಂದಿದೆ.

[ಎಲ್ಲ ಶ್ಲೋಕಗಳನ್ನು ಪುನಶ್ಚರಣಮಾಡಿದಾಗಲೂ ಶ್ರೀರಾಯರ ಅಂತರ್ಗತ–ನಾದ ಮಧ್ವಾಂತರ್ಗತ ಸೀತಾಪತಿ ಶ್ರೀಮೂಲರಾಮಚಂದ್ರನಿಗೇ ಆಹುತಿ ನೀಡಬೇಕು. "ಈ ಆಹುತಿ ಶ್ರೀಮೂಲರಾಮಚಂದ್ರನಿಗೆ, ಇದು ನನ್ನದಲ್ಲ" ಎಂಬ ತ್ಯಾಗವನ್ನೂ ಹೇಳಬೇಕು ಎಂದೇ ಸೂಚಿಸಿದ್ದಾರೆ].

ಹೀಗೆ ಶ್ರೀರಾಯರ ಭಕ್ತರು ನಡೆಸುವ 'ಗುರುಸ್ತೋತ್ರ ಅಷ್ಟೋತ್ತರಶತ–ಪಾರಾಯಣ', 'ಪುನಶ್ಚರಣೆ', ಶ್ರೀರಾಘವೇಂದ್ರಾಷ್ಟಾಕ್ಷರಮಂತ್ರಜಪ – ಹೋಮ'–ಗಳಿಗೆಲ್ಲ ಶ್ರೀಮೂಲರಾಮನೇ ಪ್ರಧಾನದೇವತೆಯಾಗಿದ್ದಾನೆ.

೭) ವ್ಯಾಸ–ದಾಸಸಿದ್ಧಾಂತ ಸವ್ಯಸಾಚಿ, ತುಂಗಭದ್ರಾತೀರದ ವೇಣೀಸೋಮ–ಪುರದ ಮಹಾತಪಸ್ವಿ ಶ್ರೀವ್ಯಾಸತತ್ವಜ್ಞರು ರಾಯರ ಪರಂಪರೆಯ ಶ್ರೀಭುವನೇಂದ್ರ–ರಿಂದ ಯತ್ಯಾಶ್ರಮವನ್ನು ಸ್ವೀಕರಿಸಿದವರು. ೧೨ ಬಾರಿ ನ್ಯಾಯಸುಧಾಮಂಗಳ–ವನ್ನಾಚರಿಸಿದ ಇವರು ಅಡವೀ ಆಚಾರ್ಯರೆನಿಸಿದ್ದ ಮಾದನೂರು ಶ್ರೀವಿಷ್ಣು–ತೀರ್ಥರ ವಿದ್ಯಾಗುರುಗಳು. ಇವರ ಸಂಸ್ಕೃತ ಕೀರ್ತನೆಯ ರೂಪದ ಗುರು–ಸ್ತೋತ್ರವು ಉಲ್ಲೇಖಾರ್ಹವಾಗಿದೆ –

ಗಳನ್ನು ಸಲ್ಲಿಸಿದವರು. ಶ್ರೀವ್ಯಾಸರಾಯರ ವಿದ್ಯಾಶಿಷ್ಯರೂ, ಶ್ರೀಸುರೇಂದ್ರ–ತೀರ್ಥರ ಸ್ವೀಕೃತ ಶಿಷ್ಯರೂ ಆಗಿರುವ ಇವರು ಶ್ರೀರಾಯರ ಪರಮಗುರುಗಳು. ಅಂತೆಯೇ ಕುಂಭಕೋಣನಗರ ನಿವಾಸಿಗಳಾದ ಇವರು ಪರಮತೀಯ–ರಿಂದಲೂ ಪರಮಠೀಯರಿಂದಲೂ ಪರಮಮಾನ್ಯರಾಗಿದ್ದಾರೆ, ಆಪ್ತತಮ–ರಾಗಿದ್ದಾರೆ. ಶ್ರೀವಿಜಯೀಂದ್ರತೀರ್ಥರು ಕೆಲವು ಕೀರ್ತನೆಗಳನ್ನು ರಚಿಸಿ ಹರಿದಾಸ ಪರಂಪರೆಯನ್ನೂ ಬೆಳಗಿರುವ ವಿಚಾರವು ಪ್ರಸಿದ್ಧವಾಗಿದೆ. **"ಪರಬೊಮ್ಮ ಹರಿಯು ತಾ ನರರೂಪವ ತಾಳಿದ"** ಎಂಬ ಸುಳಾದಿಯಲ್ಲಿ ಅವರು ಶ್ರೀಮೂಲ–ರಾಮದೇವರೇ ತಮ್ಮ ಉಪಾಸ್ಯಮೂರ್ತಿಯೆಂಬ ವಿಚಾರವನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ –

ಆದಿತಾಳ

"ಉರವಣಿಸಿ ಬಾಹ ತಾಟಕಿಯ ಮಹಾ
ಕರಗಳ ನಿಮಿಷದಿ ಕತ್ತರಿಸುಯೆಂದು
ಹಿರಿಯರು ಪೇಳಲು ಇದಿರುಪೇಳದೆ ಅಸುರೆಯ
ಕರಗಳ ಕಡಿದ ವಿಜಯೀಂದ್ರರಾಮ

ಸರಸಿಜಾಸನ ವಿನುತ ಸಿರಿ ಮೂಲರಾಮ ॥ ೬ ॥"

ಸುಧೀಂದ್ರ ಸುಪೂಜಿತ ಶ್ರೀಮೂಲರಾಮ

ಶ್ರೀರಾಘವೇಂದ್ರವಿಜಯದ ದ್ವಿತೀಯ ಸರ್ಗದಲ್ಲಿ, ಶ್ರೀನರಹರಿತೀರ್ಥರು ಗಜೇಶಕೋಶದಿಂದ ತಂದ ಮೂಲರಾಮಪ್ರತಿಮೆಯನ್ನು, ಗುರುಗಳಾದ ಶ್ರೀವಿಜಯೀಂದ್ರರಿಂದ ಶ್ರೀಸುಧೀಂದ್ರತೀರ್ಥರು ಪಡೆದ ವಿವರಗಳಿವೆ –

"ಸಾ ರಾಮಚಂದ್ರಪ್ರತಿಮಾ ಜಯೀಂದ್ರಾತ್ ಸುಧೀಂದ್ರಯೋಗೀಂದ್ರಮಗಾತ್ ಕ್ರಮೇಣ।
ವಿಸ್ತೀರ್ಣಕೀರ್ತಿರ್ವಿಭಾವವನ್ಯಾಂ ವಿಖ್ಯಾತ ವಿದ್ವಜ್ಜನವಂದ್ಯಪಾದಃ ॥

ಬಾಲಬೋಧಿನೀ ವ್ಯಾಖ್ಯಾನ :

"ಸಾ ರಾಮಚಂದ್ರಪ್ರತಿಮಾ 'ಮೂಲರಘುಪತಿಪ್ರತಿಮಾ' ಜಯೀಂದ್ರಾತ್ ಸುಧೀಂದ್ರಯೋಗೀಂದ್ರಂ ಕ್ರಮೇಣ ಅಗಾತ್ ಪ್ರಾಪ್ತಾ ॥" [ಆ ಮೂಲರಘುಪತಿ ಪ್ರತಿಮೆಯು ವಿಜಯೀಂದ್ರರ ದೆಸೆಯಿಂದ ಕ್ರಮವಾಗಿ ಸುಧೀಂದ್ರರಿಂದ ಹೊಂದಲ್ಪಟ್ಟಿತು].

ಸುಧೀಂದ್ರತೀರ್ಥರು ಇದೇ ಪ್ರತಿಮೆಯನ್ನು ತಮ್ಮ ಪ್ರಿಯಶಿಷ್ಯರಾದ ಶ್ರೀರಾಘವೇಂದ್ರತೀರ್ಥರಿಗೆ ವೇದಾಂತ ಸಾಮ್ರಾಜ್ಯಪಟ್ಟಾಭಿಷೇಕ ಸಂದರ್ಭ–ದಲ್ಲಿ ಅನುಗ್ರಹಪೂರ್ವಕವಾಗಿ ನೀಡಿದರು.

ಮೂಲರಾಮಶುಭವಿಗ್ರಹಾರ್ಚಕ ಶ್ರೀರಾಘವೇಂದ್ರತೀರ್ಥರು

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು ಶ್ರೀಮೂಲರಾಮದೇವರನ್ನು ಪೂಜಿಸಿದ ಐತಿಹಾಸಿಕ ವಿಚಾರದಲ್ಲಿ ಕೆಲವು ಪ್ರಮಾಣಗಳು –

೧) ಕಲಿಯುಗದ ಕಾಮಧೇನು ಕಲ್ಪವೃಕ್ಷರಾದ, ವಾಯ್ವಾವೇಶಯುಕ್ತ–ರಾದ, ಇಂದ್ರನ ವಿಶಿಷ್ಟ ಸನ್ನಿಧಾನ ಸಹಿತರಾದ, ಮಹಾನ್ ಶಂಕುಕರ್ಣಾಖ್ಯ ದೇವತೆಯೇ 'ಶ್ರೀರಾಘವೇಂದ್ರತೀರ್ಥರು'. ಇವರು ಹಿಂದೆ ಕೃತಯುಗದಲ್ಲಿ ಪ್ರಹ್ಲಾದರಾಜರಾಗಿದ್ದಾಗ ಶ್ರೀವಾಮನರೂಪಿ ಪರಮಾತ್ಮ ಇವರನ್ನು ಕುರಿತು –

"ಯದ್ಯದ್ವೈಧ ಸಮಾತ್ಮನೀನಮನಘ ಯಚ್ಚಾಂತಿಮೇ ಚಾಂತಿಮೇ ॥"

– ವಾಮನ ಪುರಾಣ

ಎಂದು ಹೇಳಿದ್ದಾನೆ. ಇದರ ತಾತ್ಪರ್ಯವು ಇಂತಿದೆ – "ಹೇ ಪಾಪರಹಿತನಾದ ಪ್ರಹ್ಲಾದನೇ ನೀನು ಬ್ರಹ್ಮಸಂಬಂಧಿಯಾದ (ಬ್ರಹ್ಮದೇವರಿಂದ ಕರಾರ್ಚಿತನಾದ) ನನ್ನದೇ ಆದ (ಮೂಲರಾಮದೇವರ ಪ್ರತಿಮೆಯನ್ನು) ಮೂರ್ತಿಯನ್ನು ಅಂತಿಮ ಯುಗವಾದ ಕಲಿಯುಗದಲ್ಲಿ, ನಿನ್ನ ಅಂತಿಮ ಅವತಾರದಲ್ಲಿ (ಶ್ರೀರಾಘವೇಂದ್ರ ತೀರ್ಥರಾದಾಗ), ಕೊನೆಯ ಆಶ್ರಮದಲ್ಲಿ (ಯತ್ಯಾಶ್ರಮದಲ್ಲಿ), ಬಹುಕಾಲ ಪೂಜಿಸಿ ನಂತರ ನನ್ನನೇ ಸೇರುತ್ತೀ" ಎಂದು ಆಜ್ಞಾಪಿಸಿದನು.

೨) ಇದಕ್ಕೆ ಪುಷ್ಟಿ ನೀಡುವಂತೆ ಶ್ರೀರಾಘವೇಂದ್ರವಿಜಯದಲ್ಲಿ ಮೇಲೆ ಹೇಳಿದ ಮಹತ್ಕಾರ್ಯಗಳನ್ನು ಮಾಡಲೋಸುಗ ಪರಮಹಂಸಾಶ್ರಮವನ್ನು ಸ್ವೀಕರಿಸಬೇಕೆಂದು ವಾಗ್ದೇವಿಯು ಈ ರೀತಿ ತಿಳಿಸಿದ್ದಾಳೆ –

"ಶ್ರೀರಾಮಾರ್ಚಾ ಪೂಜ್ಯತೇ ಯೇನ ತಸ್ಮಿನ್ ವಾಸೋ ಯನ್ಮೇಕಲ್ಪಯದ್ವ್ಯಾಸದೇವಃ ॥
ಕರ್ಮಂದೀದ್ರೈರೇವ ಪೂಜಾಪಿ ಕ್ಲಪ್ತಾ ತಸ್ಮಾತ್ಸಾಹಂ ತೇಷು ನಿತ್ಯಂ ವಸಾಮಿ ॥"

– ಶ್ರೀರಾಘವೇಂದ್ರವಿಜಯ ೬ನೇ ಸರ್ಗ

ಇದರ ತಾತ್ಪರ್ಯ ಹೀಗಿದೆ – "ಶ್ರೀಬ್ರಹ್ಮಕರಾರ್ಚಿತವಾದ ಶ್ರೀಮೂಲ–ರಾಮನು ಪೂಜೆಗೊಂಬಲ್ಲಿ ನಾನು ವಾಸಿಸಬೇಕೆಂದು ವೇದವ್ಯಾಸರ ಆಜ್ಞೆ,

ಈ ಮಹತ್ವಪೂರ್ಣ ಶಾಸನದ ಚಿತ್ರ ಹಾಗೂ ಈ ಪೂರ್ಣಪಾಠವನ್ನು ಅನುಬಂಧದಲ್ಲಿ ನೋಡಬಹುದು.

೨) ಇವರ ಶಿಷ್ಯಂದಿರಾದ ಶ್ರೀಸುರೇಂದ್ರತೀರ್ಥರು ಉಪವಾಸವ್ರತನಿರತ–ರಾಗಿ ಮೂರು ಬಾರಿ ಆಸೇತುಹಿಮಾಚಲಪರ್ಯಂತ ಪಾದಯಾತ್ರೆ ನಡೆಸಿದ ಧೀಮಂತರು, ಮಾನಸಪೂಜಾದುರಂಧರರು. ಲೋಕಪೂಜ್ಯರಾದ ಶ್ರೀವಿಜ–ಯೀಂದ್ರತೀರ್ಥರಿಂದ ವಿರಚಿತವಾದ ಬಹುಪಾಲು ಗ್ರಂಥಗಳಲ್ಲಿ –

“ಶ್ರೀಸುರೇಂದ್ರತೀರ್ಥಗುರೋಃ ಪಾದಪದ್ಮೇ ರಾಗಸ್ಯಪೀಡನಾತ್ ।
ರಕ್ತೇ ನಖದಲೋಪೇತೇ ಸೇವೇ ಶಿಷ್ಯಾಲಿ ಸೇವಿತೇ ॥”

ಎಂದು ಸ್ತುತರಾದವರು. ಇವರು ತಮ್ಮ ಗುರುಗಳಾದ ಶ್ರೀರಘುನಂದನತೀರ್ಥ–ರನ್ನು ಕುರಿತು ರಚಿಸಿದ ಚರಮಶ್ಲೋಕ –

“ಪರೈರಪಹೃತಾ ಮೂಲರಾಮಾರ್ಚಾ ಗುರ್ವನುಗ್ರಹಾತ್ ।
ಯೇನಾನೀತಾ ನಮಸ್ತಸ್ಮೈ ರಘುನಂದನಭಿಕ್ಷವೇ ॥”

[ಪರರಿಂದ ಅಪಹರಿಸಲ್ಪಟ್ಟ ಮೂಲರಾಮಪ್ರತಿಮೆಯು ಯಾರಿಂದ ತರಿಸ–ಲ್ಪಟ್ಟಿತೋ ಅಂತಹ ಶ್ರೀರಘುನಂದನತೀರ್ಥರಿಗೆ ನಮಸ್ಕಾರಗಳು] ಎಂದು ಹೇಳುವ ಮೂಲಕ ತಮ್ಮ ಪರಂಪರೆಗೆ ಶ್ರೀರಘುನಂದನತೀರ್ಥರು ಸಲ್ಲಿಸಿದ ಚಿರಸ್ಮರಣೀಯ ಐತಿಹಾಸಿಕ ಸೇವೆಯನ್ನು ಸ್ಮರಿಸಿದ್ದಾರೆ. (ಇದರ ಹಸ್ತಪ್ರತಿಯನ್ನು ಅನುಬಂಧ–ದಲ್ಲಿ ನೀಡಲಾಗಿದೆ).

೩) ಶ್ರೀಮಧ್ವಕವಿಗಳು ತಾವು ರಚಿಸಿರುವ ‘ಶ್ರೀವಿಜಯೀಂದ್ರವಿಜಯ’ದಲ್ಲಿ –

“ತದ್ವಂಶೇ ಜನಿತೋ ಜ್ಞಾನೀ ರಘುನಂದನಸಂಜ್ಞಿತಃ ।
ತೇನ ಸಂಪಾದಿತಾ ರಾಮಪ್ರತಿಮಾ ಪರಹಸ್ತಗಾ ॥
ರಘುನಂದನಃ ಸ್ವಶಿಷ್ಯೇಣ ವಿಪ್ರೇಣ ಪ್ರಿಯವಾದಿನಾ ।
ಆನಯಾಮಾಸ ರಾಮಸ್ಯ ಆರ್ಚಾಂ ತಾಂ ಸೀತಯಾ ವಿನಾ ॥”

[ಪರರ ಕೈ ಸೇರಿದ್ದ ಶ್ರೀಮೂಲರಾಮಪ್ರತಿಮೆಯು ಶ್ರೀಮಧ್ವರ ಪರಂಪರೆ–ಯಲ್ಲಿ ಉದಿಸಿದ, ಜ್ಞಾನಿಗಳಾದ ಶ್ರೀರಘುನಂದನರೆಂಬ ಯತಿಗಳಿಂದ ಸಂಪಾ–ದಿಸಲ್ಪಟ್ಟಿತು. ಶ್ರೀರಘುನಂದನತೀರ್ಥರು ತಮ್ಮ ಶಿಷ್ಯನಾದ, ಆಕರ್ಷಕ ಮಾತು–ಗಾರನಾದ ವಿಪ್ರನಿಂದ ಶ್ರೀಮೂಲರಾಮಪ್ರತಿಮೆಯನ್ನು ತರಿಸಿದರು. ಆದರೆ

ಸೀತಾಪ್ರತಿಮೆಯನ್ನು ತರಲು ಸಾಧ್ಯವಾಗಲಿಲ್ಲ] ಮುಂತಾದ ಶ್ಲೋಕ–ಗಳಿಂದ ಈ ಘಟನೆಯನ್ನು ವಿವರವಾಗಿ ಸಾದರಪಡಿಸುತ್ತಾರೆ. (ಇದರ ಹಸ್ತಪ್ರತಿ– ಯನ್ನು ಅನುಬಂಧದಲ್ಲಿ ನೀಡಲಾಗಿದೆ.)

೪) ಶ್ರೀವಾದೀಂದ್ರತೀರ್ಥರು ರಚಿಸಿದ **‘ಶ್ರೀಮದ್ರಾಘವೇಂದ್ರಮಠಾಗತಾ–ರ್ಚಾಗತಿಕ್ರಮಃ’** ಎಂಬ ಗ್ರಂಥದಲ್ಲಿ ಈ ವಿಚಾರವನ್ನು ಎತ್ತಿಕೊಟಿದ್ದಾರೆ –

“ಅನ್ಯೈರಪಹೃತಾಮರ್ಚಾಂ ರಾಮಸ್ಯ ರಘುನಂದನಃ ।
ಆಜಹಾರ ಪುನರ್ಮೌಲ್ಯಾತ್ ಶ್ರೀಸುರೇಂದ್ರಗುರೋರ್ಗುರುಃ ॥”

[ಶ್ರೀಸುರೇಂದ್ರತೀರ್ಥರ ಗುರುಗಳಾದ ಶ್ರೀರಘುನಂದನತೀರ್ಥರು ಅನ್ಯ–ರಿಂದ ಅಪಹೃತವಾಗಿದ್ದ ಶ್ರೀಮೂಲರಾಮಪ್ರತಿಮೆಯನ್ನು ಪುನಃ ಬಾಡದ ಚಂದ್ರಭಟ್ಟನಿಗೆ ಸಂಪತ್ತನ್ನು ನೀಡುವ ಮೂಲಕ ತರಿಸಿಕೊಂಡರು.]

(ಹೀಗೆ ನಾಲ್ಕು ಪ್ರಬಲ ಆಕರಗಳಲ್ಲಿ ಪ್ರತಿಪಾದಿತವಾದ ಈ ಘಟನೆಯನ್ನು ಯಾವುದೇ ಕಾರಣಕ್ಕೂ ಅನುಮಾನಿಸಲು ಆಸ್ಪದವಿಲ್ಲ.)

ಸುರೇಂದ್ರಮುನಿಪ ತಂದು ತೋರಿದ ಶ್ರೀಮೂಲರಾಮ

ಶ್ರೀರಘುನಂದನತೀರ್ಥರಿಂದಲೇ ಚತುರ್ಥಾಶ್ರಮವನ್ನೂ, ಶ್ರೀಮೂಲ–ರಾಮದೇವರನ್ನೂ ಸ್ವೀಕರಿಸಿದ ಮಹಾಮಹಿಮರಾದ ಶ್ರೀಸುರೇಂದ್ರತೀರ್ಥರು (೧೫೦೪–೧೫೭೫) ಶ್ರೀಮೂಲರಾಮದೇವರ ಪೂಜೆಯನ್ನು ಮಾಡುವ ಸಂದರ್ಭದಲ್ಲಿ ಶ್ರೀಪುರಂದರದಾಸರು ರಚಿಸಿದ ಪದವು ಹೀಗಿದೆ –

“ಇಂದಿನ ದಿನ ಸುದಿನವಾಯಿತು ॥ ಪ ॥

ಇಂದಿರೇಶ ಮುಲರಾಮಚಂದ್ರನ ಪದಕಮಲಗಳ ಸು ।
ರೇಂದ್ರತೀರ್ಥಮುನಿಯು ತೋರಲು ॥ ಅ.ಪ ॥”

ಈ ಕೀರ್ತನೆಯನ್ನು ತಮ್ಮ ಸ್ವಹಸ್ತಾಕ್ಷರದಿಂದ ಬರೆದಿಟ್ಟ ಶ್ರೀಗೊರೇಬಾಳು ಹನುಮಂತರಾಯರ ಹಸ್ತಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ವಿಜಯೀಂದ್ರರಾಮ ನೀ ಮೂಲರಾಮ –

ಚತುಃಷಷ್ಠಿಕಲಾಸಂಸಿದ್ಧರಾದ ಶ್ರೀವಿಜಯೀಂದ್ರತೀರ್ಥರು ತಮ್ಮ ಅಸದೃಶ ಚತುರಧಿಕಶತಗ್ರಂಥರತ್ನಗಳಿಂದ ಮಾಧ್ವಸಿದ್ಧಾಂತದ ಉತ್ಕರ್ಷಕ್ಕೆ ಅನನ್ಯ ಕೊಡುಗೆ–

ಕೊಡಿಸಿದ" ಶ್ರೀಮಜ್ಜಯತೀರ್ಥಗುರುಸಾರ್ವಭೌಮರು. ಶ್ರೀಟೀಕಾಕೃತ್ಪಾದರ ವರಕುಮಾರರಾಗಿ ಶ್ರೀವಿದ್ಯಾಧಿರಾಜತೀರ್ಥರೆಂಬ ವಿದ್ವನ್ಮಣಿಗಳು ಸರ್ವಜ್ಞಪೀಠ–ವನ್ನೇರಿದರು. ಶ್ರೀವಿದ್ಯಾಧಿರಾಜತೀರ್ಥರ ನಂತರ ಅವರ ಸಮರ್ಥ ಶಿಷ್ಯದ್ವಯ–ರೆಂದೆನಿಸಿದ ಶ್ರೀರಾಜೇಂದ್ರತೀರ್ಥರು ಮತ್ತು ಶ್ರೀಕವೀಂದ್ರತೀರ್ಥರು ಆಚಾರ್ಯರ ಪೀಳಿಗೆಯನ್ನು ಮುಂದುವರಿಸಿದರು. ಶ್ರೀಕವೀಂದ್ರತೀರ್ಥರ ಪರಂಪರೆಯಲ್ಲಿ ಶ್ರೀವಾಗೀಶತೀರ್ಥರು, ಶ್ರೀರಾಮಚಂದ್ರತೀರ್ಥರಂತಹ ಜ್ಞಾನಿವರೇಣ್ಯರು ಉದಿಸಿ ಬಂದರು. ಶ್ರೀರಾಮಚಂದ್ರತೀರ್ಥರ ಕರಕಮಲಸಂಜಾತರಾದ ಶ್ರೀವಿಬುಧೇಂದ್ರ–ತೀರ್ಥರು ಶ್ರೀಮೂಲಸೀತಾರಾಮದೇವರ ವಿಗ್ರಹಗಳನ್ನು ಕೆಲವು ಕಾಲ ಪೂಜಿಸಿ ಗುರುಗಳ ಆಜ್ಞಾನುಸಾರ ಉತ್ತರಭಾರತದ ವಾರಣಾಸಿಯೇ ಮೊದಲಾದ ಸ್ಥಳಗಳಿಗೆ ಪ್ರವಾಸ ಕೈಗೊಂಡು ಮಧ್ವಸಿದ್ಧಾಂತವನ್ನು ವ್ಯಾಪಕವಾಗಿ ಪ್ರಚುರ ಪಡಿಸಿದರು.

ನಂತರ ಶ್ರೀವಿಬುಧೇಂದ್ರತೀರ್ಥರು ತಮ್ಮ ದಿಗ್ವಿಜಯಯಾತ್ರೆಯನ್ನು ಪೂರ್ಣ–ಗೊಳಿಸಿ, ತಮ್ಮ ಗುರುಗಳಿದ್ದ ಯರಗೊಳಕ್ಕೆ ಬರುವಷ್ಟರಲ್ಲಿ ಶ್ರೀರಾಮಚಂದ್ರ–ತೀರ್ಥರು ಬೃಂದಾವನಸ್ಥರಾಗಿದ್ದರು. ಧರ್ಮಕರ್ಮ ಸಂಯೋಗದಿಂದ ಅವರಿಗೆ ಶ್ರೀಮೂಲರಾಮದೇವರ ಪೂಜಾಯೋಗ ತಪ್ಪಿಹೋಯಿತು. ತಮ್ಮ ಗುರು–ಗಳಿಂದ ಪೂಜಿತವಾದ ಸಂಸ್ಥಾನದ ಮುಖ್ಯಪ್ರತಿಮೆಗಳಾದ ಶ್ರೀಮೂಲಸೀತಾ ರಾಮದೇವರ ವಿಗ್ರಹಗಳನ್ನು ಪಡೆಯಲು ಶ್ರೀವಿಬುಧೇಂದ್ರತೀರ್ಥರು ಪ್ರಯತ್ನ ಪಟ್ಟರು. ಆದರೆ ಅದು ಫಲಕಾರಿಯಾಗಲಿಲ್ಲ. ವಿಶಾಲಹೃದಯವುಳ್ಳ ಆ ತಪೋ–ನಿಧಿಗಳು ಅದಕ್ಕಾಗಿ ಹೆಚ್ಚು ವ್ಯಥೆಪಡದೆ ದೈವೇಚ್ಛೆಗೆ ತಲೆಬಾಗಿ, ಸ್ವಪ್ನಸೂಚನೆ–ಯಂತೆ ಅಹೋಬಲ ಕ್ಷೇತ್ರಕ್ಕೆ ತೆರಳಿದರು.

ರಘುನಂದನಸಮಾನೀತ ಶ್ರೀಮೂಲರಾಮ

ಶ್ರೀವಿಬುಧೇಂದ್ರತೀರ್ಥರು ಮುಂದೆ ಮಹಾಸಂಸ್ಥಾನವನ್ನು ಬೆಳಗಿಸಲು ಶ್ರೀಜಿತಾಮಿತ್ರತೀರ್ಥರಿಗೆ ವಿಧ್ಯುಕ್ತವಾಗಿ ಆಶ್ರಮ ನೀಡಿದರು. ಶ್ರೀಜಿತಾಮಿತ್ರತೀರ್ಥರು ಮಹಾವಿರಾಗಿಗಳು, ತಪೋನಿರತರೂ ಆಗಿದ್ದರು. ನಂತರ ಕ್ರಮೇಣ ಪಂಡಿತ–ಪ್ರಕಾಂಡರಾದ ಲೌಕಿಕ–ವೈದಿಕಕುಶಲರಾದ ಶ್ರೀರಘುನಂದನತೀರ್ಥರಿಗೆ ಆಶ್ರಮ ನೀಡಿ ಶ್ರೀಮೂಲರಾಮದೇವರ ಪ್ರತಿಮೆಯನ್ನು ಮರಳಿ ಮಹಾಸಂಸ್ಥಾನಕ್ಕೆ ತರಲು

ಆಜ್ಞಾಪಿಸುತ್ತಾರೆ. ಶ್ರೀರಘುನಂದನತೀರ್ಥರು ಗುರುವಾಜ್ಞೆಯಂತೆ ಉಪಾಯಾದಿ–ಗಳನ್ನು ಮಾಡಿ ಚಾಣಾಕ್ಷತನದಿಂದ ಪುನಃ ಶ್ರೀಮೂಲರಾಮದೇವರನ್ನು ಮಹಾಸಂಸ್ಥಾನಕ್ಕೆ ಮರಳಿ ತಂದು ಆನಂದತುಂದಿಲ– ರಾದರು.

೧) ಈ ಘಟನೆಯನ್ನು ವಿವರಿಸುವ, ಅವರ ಸಮಕಾಲೀನ ದಾಖಲೆ–ಯಾದ ತಾಮ್ರಶಾಸನದ ಸಂಕ್ಷಿಪ್ತ ಮುಖ್ಯಾಂಶಗಳು –

ಅ. ಬಾಡದ ಚಂದ್ರಭಟ್ಟರು ಆನಂದ ಸಂವತ್ಸರದ ಕಾರ್ತೀಕ ಶುದ್ಧ ದ್ವಾದಶೀ (ಉತ್ಥಾನದ್ವಾದಶೀ) ಪ್ರಾತಃಕಾಲದಲ್ಲಿ ಬಂಕಾಪುರ ಗ್ರಾಮದಿಂದ ಆ ಮಠದೊಳಗಿಂದ ರಘುಪತಿದೇವರನ್ನು ತೆಗೆದುಕೊಂಡು ಹೊರಟವರು; ಕಾರ್ತಿಕ ಬಹುಳ ಅಷ್ಟಮೀ ಮಧ್ಯಾಹ್ನ ಅಭಿಜನ್ ಮುಹೂರ್ತದಲ್ಲಿ ಪೆನಗೊಂಡೆಗೆ ಬಂದು ಅಲ್ಲಿದ್ದ ಶ್ರೀರಘುನಂದನತೀರ್ಥರಿಗೆ ಸಮರ್ಪಿಸಿದರು.

ಆ. ಶ್ರೀರಘುನಂದನತೀರ್ಥರು ಕೆಲವು ದಿನ ಶ್ರೀಮನ್ಮೂಲರಾಮಪ್ರತಿಮೆ–ಯನ್ನು ಪೂಜಿಸಿ, ತಮ್ಮ ಕರಕಮಲಸಂಜಾತರಾದ ಶ್ರೀಸುರೇಂದ್ರತೀರ್ಥ–ರಿಗೆ ಮಹಾಸಂಸ್ಥಾನದ ಶ್ರೀಮೂಲರಘುಪತಿ ವೇದವ್ಯಾಸಾದಿ ಸಮಸ್ತ ದೇವತಾಪ್ರತಿಮೆಗಳನ್ನು ನೀಡಿ ಅನುಗ್ರಹಿಸಿದರು.

ಇ. ಶ್ರೀಮೂಲರಾಮದೇವರನ್ನು ತಂದ ಚಂದ್ರಭಟ್ಟನಿಗೆ ಪರಮಠದಿಂದ ಒದಗಬಹುದಾದ ಭೀತಿಯನ್ನು ಕಳೆದು ಅಭಯ, ರಕ್ಷಣೆ ಹಾಗೂ ಅಲ್ಲಿಗಿಂತ ಅಧಿಕೋದ್ಯೋಗ ನೀಡಿದರು.

ಈ. ಶ್ರೀರಘುನಂದನತೀರ್ಥರ ಆಜ್ಞೆಯಂತೆ ಮುಂದೆ ಶ್ರೀರಕ್ತಾಕ್ಷಿನಾಮಸಂವತ್ಸರ (ಕ್ರಿ.ಶ.) ಮಾಘಮಾಸ ಕೃಷ್ಣಪಕ್ಷ ಅಮಾವಾಸ್ಯೆಯಂದು ಸೂರ್ಯ–ಗ್ರಹಣದ ಮಹಾಪರ್ವಕಾಲದಲ್ಲಿ ಪ್ರಯಾಗಕ್ಷೇತ್ರದ ತ್ರಿವೇಣೀಸಂಗಮ–ದಲ್ಲಿ ಶ್ರೀಸುರೇಂದ್ರತೀರ್ಥರು ಆತ್ರೇಯಸ ಗೋತ್ರದ ಬಾಡದ ರಾಮಚಂದ್ರ–ಭಟ್ಟರಿಗೆ ಶ್ರೀಮಠದಲ್ಲಿ ರಾಯಸ ಬರೆಯುವ ಉದ್ಯೋಗ ಹಾಗೂ ಇತರ ಸೌಲಭ್ಯಗಳನ್ನು ಅನುಗ್ರಹಿಸಿ ಈ ತಾಮ್ರಶಾಸನವನ್ನು ಹೊರಡಿಸುತ್ತಾರೆ.

"ಗುರೋರ್ನಿಯೋಗಾದಧಿಗಮ್ಯ ರಾಜ್ಯಂ ಶಿಷ್ಯಸ್ತದೀಯೋ ನೃಹರಿವ್ರತೀಂದ್ರಃ ।
ಗಜೇಶಕೋಶಸ್ಥಿತರಾಮಮೂರ್ತಿಂ ಪೂರ್ಣಪ್ರಬೋಧಾಯ ಸಮಾರ್ಪಯತ್ತಾಮ್ ॥ ೭॥"

ಹೀಗೆ ತಮ್ಮ ಬಳಿಗೆ ಬಂದ ಚತುರ್ಯುಗಮೂರ್ತಿಗಳಾದ ಶ್ರೀಮೂಲ–ರಾಮ ಮತ್ತು ಸೀತಾದೇವಿಯ ವಿಗ್ರಹಗಳನ್ನು ನೋಡಿ ಸಂತೋಷಭರಿತರಾದ ಆಚಾರ್ಯರು –

"ಅರ್ಚಯಿತ್ವಾ ಚ ತಾಮರ್ಚಾಮಾಚಾರ್ಯೋऽನ್ಯೈಶ್ಚ ವಿಗ್ರಹೈ: ।
ಯತೀನಾಂ ಸ್ವಾನ್ವಯಸ್ಥಾನಾಮರ್ಚಾಯ್ಯೈ ಸಮಕಲ್ಪಯತ್ ॥ ೨೧॥"

ಶ್ರೀಮದಾಚಾರ್ಯರು ಸೀತಾಸಮೇತ ಶ್ರೀರಾಮಚಂದ್ರದೇವರ ಪ್ರತಿಮೆ–ಯನ್ನು ಎಂಭತ್ತು ದಿನ ಪರ್ಯಂತ ಮಹಾಸಂಸ್ಥಾನದ ಇತರ ವಿಗ್ರಹಗಳೊಡನೆ ಪೂಜಿಸಿ, ತಮ್ಮ ಮಹಾಸಂಸ್ಥಾನಾಧಿಪತಿಗಳಾದ ಪರಮಹಂಸರು, ಪರಂಪರೆ–ಯಿಂದ ಪೂಜಿಸಿಕೊಂಡು ಬರುವಂತೆ ಆಜ್ಞಾಪೂರ್ವಕ ವ್ಯವಸ್ಥೆಮಾಡಿದರು.

ಮಧ್ವೋಪದಿಷ್ಟ 'ಶ್ರೀಮೂಲರಾಮ ಪ್ರತಿಮಾ ಪ್ರಭಾವ'

ಶ್ರೀರಾಯರ ಪೂರ್ವಾಶ್ರಮದ ಅಕ್ಕನ ಮಕ್ಕಳಾದ (ಸೋದರಳಿಯ) ವಿದ್ವತ್ಕುಲಾವತಂಸ ಶ್ರೀನಾರಾಯಣಾಚಾರ್ಯರು ರಚಿಸಿದ 'ಶ್ರೀರಾಘವೇಂದ್ರ ವಿಜಯ'ವನ್ನು ಸ್ವತಃ ರಾಯರೇ ಅವಲೋಕಿಸಿ ಅನುಗ್ರಹಿಸಿದ್ದಾರೆ. ಈ ಗ್ರಂಥದ ದ್ವಿತೀಯ ಸರ್ಗದ ೮ನೇ ಶ್ಲೋಕದಲ್ಲಿ ಶ್ರೀಮದಾಚಾರ್ಯರು ತಮ್ಮ ಶಿಷ್ಯರಿಗೆ ಉಪದೇಶಿಸಿದ ಶ್ರೀಮೂಲರಾಮಪ್ರತಿಮಾ ಪ್ರಭಾವವು ನಿರೂಪಿತವಾಗಿದೆ –

"ಸಾ ಯತ್ರರಾಮ ಪ್ರತಿಮಾಸ್ತಿ ತತ್ರ ಚತುಃಪುಮರ್ಥೀ ಸತತಂ ಚಕಾಸ್ತಿ ।
ಆದಿಶ್ಯ ಚೈವಂ ಗುರುಣೈವ ದತ್ತಮಥಾರ್ಚಯತ್ತಾಮನಿಶಂ ಯಮೀಂದ್ರಾಃ ॥"

ಈ ಶ್ಲೋಕಕ್ಕೆ ಶ್ರೀಸುಜ್ಞಾನೇಂದ್ರತೀರ್ಥಶ್ರೀಪಾದಂಗಳವರ ಪೂರ್ವಾಶ್ರಮದ ತಂದೆಯವರಾದ, ಶ್ರೀರಾಘವೇಂದ್ರಸ್ವಾಮಿಗಳವರ ಪೂರ್ವಾಶ್ರಮ ಸದ್ವಂಶ–ಜಾತರಾದ, ಶ್ರೀರಾಮಾಚಾರ್ಯರಿಂದ ರಚಿತವಾದ **ಬಾಲಬೋಧಿನೀ** ವ್ಯಾಖ್ಯಾನ –

"ಅಥ ತಸ್ಯಾಃ ಪ್ರತಿಮಾಯಾಃ ಮಹಾತ್ಮ್ಯಮಾಹ ॥ ಸೇತಿ ॥ ಸಾ ರಾಮ ಪ್ರತಿಮಾ ಯತ್ರ ವರ್ತತೇ ತತ್ರ ಚತುರ್ಣಾಂ ಪುಮರ್ಥಾನಾಂ ಸಮಾಹಾರಃ ಅನವರತಂ ದೀಪ್ಯಮಾನಾ ಭವತೀ (ಭಾಸತೇ) । ಏವಂ ಪ್ರಕಾರೇಣ ಆಚಾರ್ಯೇಣ

ಆಜ್ಞಪ್ಯ ತೇನ ದತ್ತಾಂ ತಾಂ ಪ್ರತಿಮಾಂ ಶ್ರೀಮದಾಚಾರ್ಯಾಣಾಂ ಶಿಷ್ಯಪ್ರಶಿಷ್ಯ ಸನ್ಯಾಸಿನಃ ಪೂಜಾಂ ಕೃತವಂತಃ ॥"

[ಸಾ ಎಂದು ಪ್ರಾರಂಭವಾಗುವ ಈ ಶ್ಲೋಕದಲ್ಲಿ ಮೂಲರಾಮ ಪ್ರತಿಮೆಯ ಮಹಾತ್ಮ್ಯವನ್ನು ಹೇಳಿದ್ದಾರೆ – ಈ **"ಮೂಲರಾಮಪ್ರತಿಮೆಯು ಎಲ್ಲಿ ಇರು–ತ್ತದೆಯೋ ಅಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಫಲಗಳೂ ಸ್ಫುಟವಾಗಿ ಗೋಚರಿಸುತ್ತವೆ"** ಎಂದು ಸ್ವತಃ ಶ್ರೀಮನ್ಮಧ್ವಾಚಾರ್ಯರೇ ಶ್ರೀಪದ್ಮನಾಭತೀರ್ಥರನ್ನೊಳಗೊಂಡ ಶಿಷ್ಯರಿಗೆ ಆದೇಶ ನೀಡಿದರು. ಹೀಗೆ ಮಹಿ–ಮೋಪದೇಶಪೂರ್ವಕ ಅನುಗ್ರಹಿಸಲ್ಪಟ್ಟ ಆ ಪ್ರತಿಮೆಯನ್ನು ಶ್ರೀಪದ್ಮನಾಭತೀರ್ಥಾದಿ ಯತಿಪರಂಪರೆಯು ನಿರಂತರವಾಗಿ ಪೂಜಿಸಿಕೊಂಡು ಬರುತ್ತಿದ್ದಾರೆ ಎಂಬ ದಿವ್ಯಪ್ರಭಾವವನ್ನು ಹೇಳಲಾಗಿದೆ].

ಮಠದ ಭಿನ್ನಾಭಿಪ್ರಾಯಗಳೇನೇ ಇದ್ದರೂ, ಶ್ರೀಮದಾಚಾರ್ಯರ ತ್ರಿಕಾಲಸತ್ಯವಾದ ಅಭಯವಾಣಿಯಲ್ಲಿ ದೃಢವಿಶ್ವಾಸವಿಟ್ಟು ಅನೇಕ ಪರಮಠೀಯ ಶಿಷ್ಯರೂ ಸಹ ಶ್ರೀಮೂಲರಾಮದೇವರ ನೆಲೆಯಾದ ಶ್ರೀರಾಯರ ಮಠದ ಸಂಸ್ಥಾನಪೂಜೆಗೆ ಆಗಮಿಸಿ, ದರ್ಶನ ಪಡೆದು ಕೃತಾರ್ಥರಾಗಿ ಅಭೀಷ್ಟ–ಗಳನ್ನು ಹೊಂದುತ್ತಿರುವ ಪದ್ಧತಿಯು ನಡೆದುಬಂದಿದೆ.

ಮಧ್ವಸಂಸ್ಥಾನ ಸಂಸ್ಥಿತ ಶ್ರೀಮೂಲರಾಮ

"ಆಚಾರ್ಯಚರಣಾದೇಶಾತ್ ಪದ್ಮನಾಭ ಪುರೋಗಮಾ: ।
ಯತಯ: ಪೂಜಯಾಮಾಸುರರ್ಚಾಸ್ತು ನಿಖಿಲಾ ಅಪಿ ॥ ೨೨॥"

ಶ್ರೀಮದಾನಂದತೀರ್ಥರ ಆದೇಶದಂತೆ, ಆಚಾರ್ಯರ ನಂತರ ಮಧ್ವ ಸಿದ್ಧಾಂತವೆಂಬ ರಥದ ಸಾರಥ್ಯ ವಹಿಸಿದ ಅವರ ನಾಲ್ಕು ಜನ ಶಿಷ್ಯರಾದ ಶ್ರೀಪದ್ಮನಾಭತೀರ್ಥರು, ಶ್ರೀನರಹರಿತೀರ್ಥರು, ಶ್ರೀಮಾಧವತೀರ್ಥರು, ಶ್ರೀಅಕ್ಷೋಭ್ಯತೀರ್ಥರು ಶ್ರೀಮೂಲಸೀತಾರಾಮದೇವರ ವಿಗ್ರಹಗಳೇ ಮೊದಲಾದ ಆ ಎಲ್ಲ ಪ್ರತಿಮೆಗಳನ್ನೂ, ಒಬ್ಬರ ನಂತರ ಒಬ್ಬರು, ಕ್ರಮವಾಗಿ ಪೂಜಿಸಿದರು.

ಶ್ರೀಅಕ್ಷೋಭ್ಯತೀರ್ಥರ ನಂತರ ಆಚಾರ್ಯರ ಪವಿತ್ರ ಪೀಠದಲ್ಲಿ ವಿರಾಜ–ಮಾನರಾಗಿ ಬ್ರಹ್ಮಕರಾರ್ಚಿತ ಶ್ರೀಮನ್ಮೂಲರಾಮ–ಸೀತಾದೇವಿಯರನ್ನು ಪೂಜಿಸಿದ್ದು "ಶ್ರೀಅಕ್ಷೋಭ್ಯತೀರ್ಥರ ಕರದಿಂದ ಜನಿಸಿ ಮೋಕ್ಷಕ್ಕೆ ಜಯಪತ್ರಿಕೆ

"ರಾಮಸ್ತಾಮರ್ಚಯಿತ್ವಾರ್ಚಾಂ ಸ್ವೋಪಾಸ್ತಿಮನುತಿಷ್ಠತೇ ।
ಪ್ರೀತ್ಯಾ ಜಾಂಬವತೇ ಪ್ರಾದಾತ್ ಸೋಽರ್ಚಯಾಮಾಸ ತಾಂ ಚಿರಮ್ ॥ ೧೫ ॥

ಭಗವಂತನು ಅದನ್ನು ಅರ್ಚಿಸಿದ. ಸೀತಾದೇವಿಯವರೂ ಪೂಜೆಮಾಡಿ–ದರು. ಲಕ್ಷ್ಮಣನೂ ಆರಾಧಿಸಿದ. ಶ್ರೀರಾಮಚಂದ್ರನು ಸೀತಾಸಹಿತವಾದ ಶ್ರೀಮೂಲ ರಾಮಚಂದ್ರ ಪ್ರತಿಮೆಯನ್ನು ಪ್ರೀತಿಯಿಂದ ಜಾಂಬವಂತನಿಗೆ ಕೊಟ್ಟನು. ಅವನು ಅದನ್ನು ಬಹುಕಾಲ ಪೂಜಿಸಿದನು.

"ವೇದಗರ್ಭನೆಂಬ ಭೂಸುರ ರಾಮನ್ನ
ಪಾದಸಂದರ್ಶನವಾಗದಲೆ ಅ
ನ್ನೋದಕ ಕೊಳದಿರೆ ರಾಘವ ಭಕ್ತನಿಂ
ದಾದ ಪ್ರತಿಜ್ಞೆಯ ತಿಳಿದು ತನ್ನ ಮೂರ್ತಿಯ
ಆದರದಿಂದ ಕೊಟ್ಟು ಕಳುಹಲಿತ್ತಾ
..................."

ರಾಮದರ್ಶನಾಕಾಂಕ್ಷಿಯಾಗಿದ್ದ ವೇದಗರ್ಭನೆಂಬುವನಿಗೆ ರಾಮದೇವರು ಈ ಪ್ರತಿಮೆಗಳನ್ನು ಪೂಜೆಗಾಗಿ ಕೊಟ್ಟರು. ಅವನು ಕೊನೆಯವರೆಗೂ ಪೂಜಿಸಿ ಮತ್ತೆ ರಾಮರ ಆಸ್ಥಾನಕ್ಕೆ ಒಪ್ಪಿಸಿದನು.

"ಸಾ ಚ ದೈವವಶಾದರ್ಚಾ ರಘುನಾಥಸ್ಯ ವಿಶ್ರುತಾ ।
ಜಗನ್ನಾಥೇ ಗಜಪತೇಃ ಕೋಶಮೇವಾಭ್ಯಪದ್ಯತ ॥ ೧೬ ॥"

ಮುಂದೆ ರಾಮ ಹನುಮಂತನಿಗೆ ಕೊಟ್ಟನು. ಹನುಮಂತದೇವರು ತ್ರೇತಾ ಯುಗ ಮುಗಿದು ದ್ವಾಪರಯುಗದವರೆಗೂ ಪ್ರತಿಮೆಗಳನ್ನು ಆರಾಧಿಸುತ್ತಿದ್ದು, ಸೌಗಂಧಿಕಾಪುಷ್ಪ ತರಲು ಬಂದ ಸ್ವಾಂಶರಾದ ಭೀಮಸೇನದೇವರಿಗೆ ಕೊಟ್ಟರು. ಪಾಂಡವರಿಂದ ಆರಾಧಿತವಾದ ಈ ಪ್ರತಿಮೆಗಳು ಪರೀಕ್ಷಿತರಿದಾರಂಭಿಸಿ, ಕ್ಷೇಮಕ ರಾಜನ ಪರ್ಯಂತವೂ ಅರಸರಿಂದ ಪೂಜಿತವಾಗಿ ಗಜಪತಿಯ ಕೋಶಾಗಾರ–ದಲ್ಲಿ ನೆಲೆಸಿದ್ದವು. ಹೀಗೆ –

"ಆದಿತ್ಯವಂಶಜ ವಿಜಯವಿಠ್ಠಲರಾಮಾ
ರಾಧನೆಗೊಳುತಿದ್ದ ಅಜನಿಂದ ಕೋಶದಲ್ಲಿ ॥ ೫ ॥"

– ಶ್ರೀವಿಜಯದಾಸರು

ಗಜೇಶ ಕೋಶದಿಂದ ರಜತಪೀಠಪುರಕ್ಕೆ

"ಭಗವತ್ಪಾದಸಂಪ್ರಾಪ್ತ ಸನ್ಯಾಸೋ ನೃಹರಿರ್ಯತಿಃ ।
ತದಾಜ್ಞಯಾ ಜಗನ್ನಾಥಂ ಗತ್ವಾ ತೇಪೇ ತಪಶ್ಚಿರಮ್ ॥ ೧೭ ॥"

ಶ್ರೀಮದಾನಂದತೀರ್ಥಭಗವತ್ಪಾದರಿಂದ ಪರಮಹಂಸಾಶ್ರಮವನ್ನು ಪಡೆದ ಶ್ರೀನರಹರಿತೀರ್ಥರು ಶ್ರೀಮದಾಚಾರ್ಯರ ಅಪ್ಪಣೆಯಂತೆ ಶ್ರೀಮೂಲಸೀತಾ ರಾಮಪ್ರತಿಮೆಯನ್ನು ತರಲು ಜಗನ್ನಾಥಕ್ಕೆ ಹೋಗಿ ಅಲ್ಲಿ ತಮ್ಮ ಕಾರ್ಯ–ಸಿದ್ಧಿಗೋಸ್ಕರ ಬಹುಕಾಲ ತಪಸ್ಸುಮಾಡಿದರು.

"ಗತೇ ಗಜಪತೌ ತಸ್ಯ ಮಹಿಷ್ಯಾ ಪ್ರಾಪ್ತಗರ್ಭಯಾ ।
ವಿಚಿನ್ವತ್ಯಾಧಿಪಂ ಹಸ್ತಿಕಂಠೇ ಕಿಪ್ತಾ ಮುದಾ ತು ಸ್ರಕ್ ।
ಸ ತು ಶೀಘ್ರಂ ಮುನಿಶ್ರೇಷ್ಠಗಲೇ ಮಾಲಾಂ ಚ ಚಿಕ್ಷಿಪೇ ॥ ೧೮ ॥"

ತತಃ ಪ್ರಕೃತಿಭಿರ್ಗಾಢಮರ್ಥಿತೋ ಮುನಿಪುಂಗವಃ ।
ಸ್ವಧರ್ಮನಿರತೋ ನಿತ್ಯಂ ಶಶಾಸ ಪೃಥಿವೀಮಿಮಾಮ್ ॥ ೧೯ ॥

ರಾಜಪತ್ನ್ಯಾಭ್ಯನುಜ್ಞಾತಃ ಪ್ರಸೂತ ಪುಮಪತ್ಯಯಾ ।
ಕೋಶಾದಾನೀಯ ತಾಮರ್ಚಾಂ ಮುನಿಃ ಪೂರ್ಣಧಿಯೇ ದದೌ ॥ ೨೦ ॥"

ಗಜಪತಿರಾಜನು ಮೃತನಾಗಲು ಗರ್ಭಿಣಿಯಾಗಿದ್ದ ಅವನ ರಾಣಿಯು ತನಗೆ ಜನಿಸಲಿರುವ ಪುತ್ರನು ದೊಡ್ಡವನಾಗಿ ರಾಜ್ಯಭಾರವನ್ನು ಮಾಡಲು ಸಮರ್ಥನಾಗುವ ತನಕ ತಮ್ಮ ರಾಜ್ಯವನ್ನಾಳಲು ಸಮರ್ಥನಾದ ಓರ್ವ ಅಧಿಪತಿಯನ್ನು ಆರಿಸಲು ಪಟ್ಟದ ಆನೆಯ ಕಂಠದಲ್ಲಿ ಮಾಲೆ ಹಾಕಿ ಸಂತೋಷ–ದಿಂದ ಅದನ್ನು ಕಳುಹಿಸಿದಳು. ಆ ಗಜವು ಶೀಘ್ರವಾಗಿ ಶ್ರೀನರಹರಿತೀರ್ಥರಿದ್ದ ಸ್ಥಳಕ್ಕೆ ಬಂದು ಅವರ ಕೊರಳಿಗೆ ಮಾಲೆ ಹಾಕಿತು. ಆ ಗಜವನ್ನು ಅನುಸರಿಸಿ ಬಂದ ಆ ರಾಜ್ಯದ ಮಂತ್ರಿ ಮೊದಲಾದವರಿಂದ ವಿಶೇಷವಾಗಿ ಪ್ರಾರ್ಥಿಸಲ್ಪಟ್ಟ ಶ್ರೀನರಹರಿತೀರ್ಥರು ಪ್ರತಿದಿನ ತಮ್ಮ ಯತ್ಯಾಶ್ರಮ ಧರ್ಮಗಳನ್ನು ಪಾಲಿಸುತ್ತಾ ಈ ಪೃಥಿವಿಯನ್ನಾಳಿದರು.

ರಾಣಿಯು ಒಂದು ಶುಭಮುಹೂರ್ತದಲ್ಲಿ ಪುತ್ರಸಂತಾನವನ್ನು ಪಡೆದಳು. ಯುವರಾಜನು ಪ್ರಾಪ್ತವಯಸ್ಕನಾದಮೇಲೆ ಅವನಿಗೆ ರಾಜ್ಯವನ್ನೊಪ್ಪಿಸಿ, ಶ್ರೀನರಹರಿ–ತೀರ್ಥರು ಗಜಪತಿಭಂಡಾರದಲ್ಲಿದ್ದ ಸೀತಾಸಹಿತನಾದ ಶ್ರೀಮೂಲರಾಮ ಪ್ರತಿಮೆ–ಯನ್ನು ಸ್ವೀಕರಿಸಿ, ಉಡುಪಿಗೆ ಆಗಮಿಸಿ ಶ್ರೀಮದಾಚಾರ್ಯರಿಗೆ ಸಮರ್ಪಿಸಿದರು.

ಗಳನ್ನು ರಚಿಸುವಂತೆ ವಿಶ್ವಕರ್ಮನಿಗೆ ಆಜ್ಞೆಮಾಡಿದರು. ವಿಶ್ವಕರ್ಮನಿಂದ ರಚಿತವಾದ ಆ ಶುದ್ಧ ತಾಮ್ರಮಯ ಪ್ರತಿಮೆಗಳನ್ನು ತಾವು ಬಹುಕಾಲ ಪೂಜಿಸಿ, ಲೋಕೋದ್ಧಾರಕ್ಕಾಗಿ ಜಾಬಾಲಿ ಮುನಿಗಳಿಗೆ ಕೊಟ್ಟರು. ಅಲ್ಲಿಂದ ಅವುಗಳನ್ನು ಕೈಲಾಸಪತಿಯಾದ ಮಹರುದ್ರದೇವರೂ, ಪಾರ್ವತಿಯೂ ಪೂಜಿಸುತ್ತಿದ್ದರು. ಅನಂತರ ದಕ್ಷಪ್ರಜೇಶ್ವರನಲ್ಲಿಗೆ ಬಂದವು. ಸೌಭರಿ ಋಷಿಗಳು ಅದನ್ನು ಪೂಜಿಸಿ ಪುನಃ ಬ್ರಹ್ಮದೇವರಿಗೆ ಸಮರ್ಪಿಸಿದರು. ಈ ಕಥೆಯೇ ಸಂಕ್ಷೇಪ–ವಾಗಿ ಶ್ರೀವಿಜಯದಾಸರ ಸುಳಾದಿಯಲ್ಲಿ ಹೀಗೆ ಪ್ರತಿಬಿಂಬಿತವಾಗಿದೆ –

ಅಟ್ಟತಾಳ

ಪೆರ್ಮೆಯಿಂದಲಿ **ವಿಶ್ವಾಕರ್ಮನಿಂದಲಿ ಅಂದು** ।
ನಿರ್ಮಿತವಾಗಿದ್ದ ನಿರ್ಮಳ ಶರೀರ ।
ಧರ್ಮಬೋಧಕ ರಾಮಾ ನಿರ್ಮಯನೆ ಚ– ।
ತುರ್ಮೊಗ ನಿತ್ಯ ನಿಷ್ಕರ್ಮಭಾವದಲ್ಲಿ ।
ನಿರ್ಮತ್ಸರನಾದ ವಿಜಯವಿಠ್ಠಲರೇಯನ ।
ನಿರ್ಮಲ ಚಿತ್ತದಲ್ಲಿ ಅರ್ಚನೆ ಮಾಡಿದನೋ ॥ ೨ ॥

ಬಲುಕಾಲ ಲೋಕೇಶ ತನ್ನ ಮನಿಯಲಿ
ಚೆಲುವ ರಾಮನ ಪೂಜೆಮಾಡುತಿರಲು
ಒಲಿದು ಜಾಬಾಲಿಮುನಿ ಪ್ರಾರ್ಥನೆಯಿಂದಲಿ
ಜಲಜಸಂಭವನ ಮೆಚ್ಚಿಸಿಬೇಡಲು
ಸಲಿಸಿ ಮಾತನು ಋಷಿಗೆ ಈ ಪ್ರತಿಮೆ ಕೊಡಲಾಗಿ
ಒಲಿಸಿಕೊಂಡಲ್ಲಿಂದ ಶಿವಗೆ ಕೊಡಲು
ಸುಲಭಾದಿಂದಲಿ ಶಿವನು ತನ್ನಯ ನಿಜ
ಲಲನೆಗೆ ಕೊಡಲಾಗಿ ವಿನಯದಿಂದ
ಕೆಲವು ದಿವಸ ಗಿರಿಜೆ ಪೂಜಿಸಿ ಆಮೇಲೆ
ತಿಳಿದು ದಕ್ಷನ ಯಾಗದಲ್ಲಿಗೆ ಬಂದು
ಇಳಿದು ಪೋಗುವಾಗ ಸೌಭರಿ ಋಷಿ ಕೈ
ಯಲ್ಲಿಕೊಟ್ಟ ತರುವಾಯ ರಾಮಪ್ರತಿಮೆಯನ್ನು
ಜಲಜಗರ್ಭನ ವಶಕೆ ತಂದು ಕೊಡಲು
ಪೊಳೆವ ಸುಮೇರು ಪರ್ವತದಲ್ಲಿ ಇಟ್ಟು ನಿ

ಶ್ಚಲಪೂಜೆ ಮಾಡುತಿದ್ದನಂದು
ಬಲುದೈವ ವಿಜಯವಿಠ್ಠಲ ಜಾನಕಿಪತಿ
ಬಲವಂತ ಭಕ್ತರ ಪ್ರಿಯ ಸುಜನಗೇಯಾ ॥ ೩ ॥

ರಾಮನಿಗೂ ಮೂಲ ನೀ ಮೂಲರಾಮ :

"ತಾಮರ್ಚಯಿತ್ವಾ ವಿಧಿವದ್ರಂಗನಾಥಾರ್ಚಯಾ ಸಹ ।
ವಿಧಿರಿಕ್ಷ್ವಾಕವೇ ಪ್ರಾದಾತ್ ಅರ್ಚಯಾಮಾಸ ತೇ ಚ ಸ: ॥ ೧೩ ॥"

ಶ್ರೀಬ್ರಹ್ಮದೇವರು ಶ್ರೀರಂಗನಾಥನ ಪ್ರತಿಮೆಯೊಂದಿಗೆ ಆ ಸೀತಾರಾಮ–ಚಂದ್ರರ ಪ್ರತಿಮೆಯನ್ನು ವಿಧ್ಯುಕ್ತಪ್ರಕಾರವಾಗಿ ಭಕ್ತಿಯಿಂದ ಪೂಜಿಸಿ, ಅದನ್ನು ಇಕ್ಷ್ವಾಕು ಮಹಾರಾಜನಿಗೆ ಅನುಗ್ರಹಿಸಿದರು. ಇಕ್ಷ್ವಾಕು ಮಹಾರಾಜರು ಈ ಪ್ರತಿಮೆಗಳನ್ನೇ ತನ್ನ ಕುಲದೇವತೆಗಳೆಂದು ಆರಾಧಿಸಿದರು.

"ತಪಮಾಡಿ ಇಕ್ಷ್ವಾಕು ಬ್ರಹ್ಮಗೆ ಮೆಚ್ಚಿಸಿ
ಕೃಪೆಯಲ್ಲಿ ಮೂಲರಾಮನ ಕೊಡಲಿತ್ತಲು
ಕ್ಷಿತಿಯೊಳಗೆ ಅಯೋಧ್ಯದಲ್ಲಿ ಪೂಜಿಸಲಾಗಿ"

– ಶ್ರೀವಿಜಯದಾಸರು

"ನಿಜಾನ್ವಯನೃಪೈರರ್ಚಾಮರ್ಚಿತಾಂ ಜಾನಕೀಪತೇ: ।
ಅರ್ಚನ್ ದಶರಥಶ್ಚಕ್ರೇ ತನ್ನಾಮಾತ್ಮತನೂಭವ: ॥ ೧೪ ॥"

ತನ್ನ ವಂಶದ ಹಿಂದಿನ ನೃಪತಿಗಳಾದ ಮಾಂಧಾತ, ಅನರಣ್ಯ, ತ್ರಿಶಂಕು, ಹರಿಶ್ಚಂದ್ರ, ಸಗರ, ಭಗೀರಥ, ಅಂಬರೀಷ, ದಿಲೀಪ, ರಘು ಮೊದಲಾದ ಚಕ್ರವರ್ತಿಗಳು ಅರ್ಚಿಸಿದ ಈ ಪ್ರತಿಮೆಗಳನ್ನು ದಶರಥ ಚಕ್ರವರ್ತಿಯು ಇಷ್ಟ–ದೈವವೆಂದು ಶ್ರದ್ಧಾಭಕ್ತಿಗಳಿಂದ ಆರಾಧಿಸಿ, ಶ್ರೀರಾಮಚಂದ್ರನ ಅವತಾರವಾದ ಮೇಲೆ ತನ್ನ ಕುಮಾರನಿಗೆ ಈ ಪ್ರತಿಮೆಯ ಹೆಸರನ್ನೇ ಇಟ್ಟನು. ಅಂದಿನಿಂದ ಈ ಪ್ರತಿಮೆ "ಮೂಲರಾಮ ಪ್ರತಿಮೆ" ಎಂದು ಪ್ರಸಿದ್ಧವಾಯಿತು.

"ಅತಿಶಯವಾಗಿ ರಾಮಚಂದ್ರಪರ್ಯಂತ
ಮಿತಿಯಿಲ್ಲದ ವಾಲಗದಲ್ಲಿ ಒಪ್ಪಲು
ಕ್ಷಿತಿಸುತೆ ತಾನೆ ಪೂಜಿಸಿ ......"

– ಶ್ರೀವಿಜಯದಾಸರು

ಸಾ ಯತ್ರ ರಾಮಪ್ರತಿಮಾಸ್ತಿ ತತ್ರ :

"ಸಾ ಯತ್ರ ರಾಮಪ್ರತಿಮಾ ಅಸ್ತಿ ತತ್ರ ಚತುಃಪುಮರ್ಥೀ ಸತತಂ ಚಕಾಸ್ತಿ ।
ಆದಿಶ್ಯ ಚೈವಂ ಗುರುಣೈವ ದತ್ತಾಮಥಾರ್ಚಯತ್ತಾಮನಿಶಂಯಮೀಂದ್ರಃ ॥ ೮ ॥"

– ರಾ.ವಿ. ಸರ್ಗ ೨

ಇಂತಹ ಪ್ರತಿಮೆಯು ಎಲ್ಲಿದೆಯೋ ಅಲ್ಲಿ ಧರ್ಮಾರ್ಥಾದಿ ನಾಲ್ಕೂ ಪುರುಷಾರ್ಥಗಳು ಮನೆ ಮಾಡಿಕೊಂಡು ಇರುತ್ತವೆ ಎಂದು ರಾಘವೇಂದ್ರ ವಿಜಯಕಾರರು ಬಣ್ಣಿಸಿದ್ದಾರೆ. ಇಂದಿಗೂ ಸಮಸ್ತ ಜನತೆಯು ಇದರ ಫಲ ರೂಪವನ್ನು ಅಪೇಕ್ಷಿಸಿ ದರ್ಶನಭಾಗಿಗಾಳಾಗುತ್ತಿರುವುದೇ ಸಾಕ್ಷಿಯಾಗಿದೆ.

ಜನ್ಮಜನ್ಮಾಂತರೇಷ್ವಪಿ :

"ಸುರಾಶ್ಚ ಯತಯೋ ಭೂತ್ವಾ ರಾಮಚಂದ್ರಮಪೂಜಯನ್ ।
ಏವಂ ರಘೂತ್ತಮೋ ವಿಪ್ರಯತೀನ್ ಪ್ರಾಪ್ಯ ಮಹಾಮತೇ ॥"

ಎಂಬ ವಾಸಿಷ್ಠ ರಾಮಾಯಣದ ವಚನದಂತೆ ದೇವತೆಗಳೂ ಸಹ ಈ ಪ್ರತಿಮೆಯನ್ನು ಪೂಜಿಸಲು ಅಪೇಕ್ಷಿಸುತ್ತಾರೆ. ಆದ್ದರಿಂದಲೇ ದೇವಾಂಶಸಂಭೂತ–ರಾದ ಆಚಾರ್ಯರಿಂದ ಪ್ರಾರಂಭಿಸಿ **ಶ್ರೀಟೀಕಾಕೃತ್ಪಾದರು, ಶ್ರೀವಿಬುಧೇಂದ್ರರು, ಶ್ರೀವಿಜಯೀಂದ್ರರು, ಶ್ರೀರಾಯರೇ ಮೊದಲಾದ ಈ ವಂಶದಲ್ಲಿ ಬಂದ ಯತಿ ಶ್ರೇಷ್ಠರುಗಳು ಈ ಪೂಜೆಯ ಸೌಭಾಗ್ಯವನ್ನು ಪಡೆದರು.**

ಕಾಲಪರಿಪಾಕದಿಂದ ಬ್ರಹ್ಮಕರಾರ್ಚಿತ ಶ್ರೀಮನ್ಮೂಲರಾಮದೇವರನ್ನು ಈ ಜನ್ಮದಲ್ಲಿ ಪೂಜಿಸಲು ಸಾಧ್ಯವಾಗದೇ ಹೋದಾಗ ಮುಂದೆ ಮತ್ತೊಂದು ಜನ್ಮವನ್ನೆತ್ತಿ ಬಂದಾದರೂ ಪೂಜಿಸಲೇಬೇಕೆಂದು ದೇವತಾಂಶಸಂಭೂತರೂ ಬಯಸುತ್ತಾರೆ. ಶ್ರೀಮನ್ಮೂಲರಾಮ ಪ್ರತಿಮಾಪೂಜೆಯ ಮಹದ್ಭಾಗ್ಯಕ್ಕಾಗಿ ಶ್ರೀಹರಿ–ಗುರುಗಳ ಚಿತ್ತದಂತೆ ಶ್ರೀವಿಭುದೇಂದ್ರರು ಶ್ರೀವಿಜಯೀಂದ್ರರಾದರು. ಶ್ರೀಜಿತಾಮಿತ್ರರೇ ಶ್ರೀಸುಧೀಂದ್ರರಾಗಿ ಪುನರವತರಿಸಿದರು. ಶ್ರೀವ್ಯಾಸತೀರ್ಥ ಗುರುಸಾರ್ವಭೌಮರು ಶ್ರೀರಾಘವೇಂದ್ರರಾಗಿ ಮತ್ತೊಮ್ಮೆ ಉದಿಸಿಬಂದು 'ಶ್ರೀರಾಮಮಾನಸ'ರೆಂದು ಸಂಸ್ತುತರಾಗಿ ಶ್ರೀಮನ್ಮೂಲರಾಮರಘುಪತಿವೇದ–ವ್ಯಾಸರನ್ನು ಪೂಜಿಸಿ ಪ್ರಸನ್ನೀಕರಿಸಿಕೊಂಡು ಗಳಿಸಿದ ಪುಣ್ಯಶೇಷವನ್ನೇ ಇಂದು ತಾವು ವೃಂದಾವನಸ್ಥರಾಗಿ ಕುಳಿತಾಗಲೂ, ತಮ್ಮ ಸನ್ನಿಧಿಗೆ ಅನನ್ಯಶರಣಾಗತ–

ರಾಗಿ, ಬಂದ–ಬಂದ ಭಕ್ತವೃಂದಕ್ಕೆ ವಿತರಿಸುತ್ತಿರುವಾಗಲೂ ನಿರ್ಮಮ–ನಿರಹಂಕಾರಚಿತ್ತರಾಗಿ ಕಂಗೊಳಿಸುತ್ತಿದ್ದಾರೆ. ಶ್ರೀಮನ್ಮಂತ್ರಾಲಯ ಪ್ರಭುಗಳು ಕಾರುಣ್ಯಸಿಂಧು, ಅತ್ಯಂತ ದಯಾಲು, ಕಾಮಧೇನು, ಕಲ್ಪವೃಕ್ಷ ಎಂದೆಲ್ಲ ಸಂಸ್ತುತರಾಗಿ ಜಾತಿ–ಮತ–ಮಠ–ವೇಷ–ಭಾಷೆ–ಪ್ರದೇಶ–ಲಿಂಗ–ವಯಸ್ಸು–ವಿದ್ಯೆ–ಸಂಪತ್ತುಗಳನ್ನು ಪರಿಗಣಿಸದೆ "ವಿಪ್ರಕ್ಷತ್ರವಿಡಂಘ್ರಿ ಜಾತ ಮುಖರಾನೇಕ ಪ್ರಜಾಸೇವಿತ"ರಾಗಿ ಕರೆದಲ್ಲಿಗೆ ಬರುವ ಕಾಮಧೇನುವಾಗಿ,ಅನಂತ ವೃಂದಾವನ ನಿಲಯರಾಗಿ, ಕೋಟ್ಯಂತರ ಭಕ್ತರ ಮನೆ–ಮನಗಳಲ್ಲಿ ನೆಲೆಸಿ ಸೌಖ್ಯವನ್ನು ಸುರಿಯುತ್ತಿರುವ ಸೌಭಾಗ್ಯ, ಶ್ರೀರಾಯರಿಗೆ ಒದಗಿ ಬಂದದ್ದು ಇದೇ ಶ್ರೀಮನ್ಮೂಲ–ರಾಮದೇವರ ಪೂಜಾಫಲವಾಗಿ.

ಚತುರ್ಮುಖಾದಿ ಪೂಜಿತ ಚತುರ್ಯುಗ ಮೂರ್ತಿ :

ಶ್ರೀಮೂಲರಘುಪತಿಪ್ರತಿಮೆಯು ಯುಗಯುಗಾಂತರಗಳಿಂದ ಪೂಜೆ–ಗೊಳ್ಳುತ್ತ ಬಂದ ಕ್ರಮವನ್ನು, ಶ್ರೀರಾಘವೇಂದ್ರಗುರುಸಾರ್ವಭೌಮರ ಮಂತ್ರಿ–ಗಳಂತೆ ಶೋಭಿಸುವ ಶ್ರೀವಾದೀಂದ್ರಸ್ವಾಮಿಗಳವರು ತಾವು ರಚಿಸಿರುವ 'ಶ್ರೀಮದ್ರಾಘವೇಂದ್ರಮಠಗತಾರ್ಚಾಗತಿಕ್ರಮಃ' ಎಂಬ ಗ್ರಂಥದಲ್ಲಿ ಹೀಗೆ ವರ್ಣಿಸಿದ್ದಾರೆ –

"ಅರ್ಚಾತು ರಾಮಚಂದ್ರಸ್ಯ ನಿರ್ಮಿತಾ ವಿಶ್ವಕರ್ಮಣಾ ।
ವೃತ್ತಪೀಠಾ ಲಂಬಕರ್ಣಾ ತ್ರಿವಕ್ರಾ ಸೀತಯಾ ಸಹ ॥ ೧೨ ॥"

ಶ್ರೀಬ್ರಹ್ಮದೇವರ ಆದೇಶದಂತೆ ವಿಶ್ವಕರ್ಮನಿಂದ, ಸೀತಾಸಹಿತವಾದ ದುಂಡುಪೀಠದ, ಉದ್ದ ಕಿವಿಗಳ, ಮೂರು ಕಡೆ ಡೊಂಕಾಗಿರುವ ಶ್ರೀರಾಮಚಂದ್ರನ ಪ್ರತಿಮೆಯು ನಿರ್ಮಿಸಲ್ಪಟ್ಟಿತು. ಅಂದರೆ, ಭಗವದಾಜ್ಞೆಯಂತೆ ಸೃಷ್ಟಿಕರ್ತರಾದ, ಅಶೇಷ ಭಗವದ್ರೂಪಗಳ ನಿತ್ಯಾಪರೋಕ್ಷವುಳ್ಳ, ಅಪ್ರತೀಕಾಲಂಬನರಾದ ಚತುರ್ಮುಖ ಬ್ರಹ್ಮದೇವರು, ಪ್ರತಿಮೆಗಳ ಅಗತ್ಯವಿಲ್ಲದೆ ಅನಂತ ಭಗವದ್ರೂಪ–ಗಳನ್ನು ಸದಾ ದರ್ಶಿಸಿ, ಪೂಜಿಸಿ, ಆನಂದಪಡುತ್ತಾರೆ. ಪ್ರತೀಕಾಲಂಬನ–ರಾದ ಸಜ್ಜೀವಿಗಳ ಉದ್ಧಾರಾರ್ಥವಾಗಿ, ಪರಮಾತ್ಮನನ್ನು ಪ್ರತಿಮೆಯ ಮೂಲಕವೂ ಪೂಜಿಸಿ ತುತಿಸಬೇಕೆಂದು ಬಯಸಿದ ಅವರಿಗೆ ಪ್ರತ್ಯಕ್ಷರಾದ ದಿವ್ಯಮಂಗಳ ಮೂರ್ತಿಗಳಾದ ಸೀತಾರಾಮಚಂದ್ರರೂಪಗಳ ಲೋಹಮಯ ಪ್ರತಿಮೆ–

ತೃಣ ಜೀವನಿಂದ ಹಿಡಿದು ಬ್ರಹ್ಮನವರೆಗೂ ಜೀವಿಗಳಲ್ಲಿ ತಾರತಮ್ಯಾನುಸಾರ ಜ್ಞಾನ–ಭಕ್ತಿಗಳು ಅತಿ ಹೆಚ್ಚುತ್ತಾ ಹೋಗುತ್ತವೆ. ಅತ್ಯಧಿಕ ಜ್ಞಾನ–ಭಕ್ತಿಯು ಜೀವರುಗಳ ಮಧ್ಯ ಬ್ರಹ್ಮನಿಗೇ ಅರ್ಥಾತ್ ಋಜುಗಳಿಗೇ ಇರುತ್ತದೆ. ಇಂತಹ ಬ್ರಹ್ಮ ವಾಯುಗಳು ಯಾವುದೇ ಪ್ರತಿಮೆಗಳನ್ನು ಮುಟ್ಟಿ ಪೂಜಿಸಿದರೆಂದರೆ ಅತ್ಯಧಿಕ ಭಗವಂತನ ಸನ್ನಿಧಾನವು ಅದರಲ್ಲಿ (ಪ್ರತಿಮೆಯಲ್ಲಿ) ಉಳ್ಳದ್ದಾಗುತ್ತದೆ.

ಈ ದೃಷ್ಟಿಯಿಂದ ವಾಯುದೇವರ ಅಂಶ ಸಂಭೂತರಾದ ಶ್ರೀಮದಾ–ಚಾರ್ಯರಿಂದ ಪೂಜಿಸಿ ಅವರಿಂದ ಕೊಡಲ್ಪಟ್ಟ ಎಲ್ಲ ಪ್ರತಿಮೆಗಳೂ (ಗೃಹಸ್ತ–ರಿಗಾಗಲಿ–ಸಂನ್ಯಾಸಿಗಳಿಗಾಗಲಿ–ಸಂಸ್ಥಾನಕ್ಕಾಗಲಿ) ಭಗವಂತನ ನಿತ್ಯಸನ್ನಿಧಾನ ಉಳ್ಳವುಗಳು. ಈ ದೃಷ್ಟಿಯಲ್ಲಿ ಶ್ರೀಮದಾಚಾರ್ಯರಿಂದ ಪೂಜಿಸಿ ಅವರಿಂದ ಕೊಡಲ್ಪಟ್ಟ ಎಲ್ಲ ಸಂಸ್ಥಾನದಲ್ಲಿರುವ ಪ್ರತಿಮೆಗಳು ಅನ್ಯ ಪ್ರತಿಮೆಗಳಿಗಿಂತ ವಿಶೇಷ ಸನ್ನಿಧಾನ ಉಳ್ಳವುಗಳೆಂದು ಪ್ರಸಿದ್ಧವಾಗಿ, ಸಮಾಜದಲ್ಲಿ ವಿಶಿಷ್ಟ ಸ್ಥಾನ–ವನ್ನು ಗಳಿಸಿವೆ. ಇನ್ನು ಶ್ರೀಮೂಲರಾಮ ಪ್ರತಿಮೆಯಾದರೋ ಚತುರ್ಮುಖ ಬ್ರಹ್ಮ – ವಾಯು ಇಬ್ಬರು ಋಜುಶ್ರೇಷ್ಠರು ಪೂಜಿಸಿರುವುದರಿಂದ, ಸ್ವಯಂ ರಾಮನೂ ಅರ್ಚಿಸಿರುವುದರಿಂದ ವಿಶೇಷ ಸನ್ನಿಧಾನವೆಂದು ಜ್ಞಾನಿಗಳ ಪ್ರಪಂಚದಲ್ಲಿ, ಆಸ್ತಿಕ ಪ್ರಪಂಚದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಚತುರ್ಯುಗ ಮೂರ್ತಿಯೂ ಆಗಿದೆ.. ಆದುದರಿಂದಲೇ ಶ್ರೀರಾಘವೇಂದ್ರವಿಜಯದಲ್ಲಿ ಈ ಮೂರ್ತಿಯ ಬಗ್ಗೆ **'ಸಾ ಯತ್ರ ರಾಮ ಪ್ರತಿಮಾಸ್ತಿ ತತ್ರ ....'** ಎಂದು ವಿಶೇಷವಾಗಿ ಹೇಳಲಾಗಿದೆ. ಇದರ ಮಹತ್ವವನ್ನು ಸರ್ವಜ್ಞರಾದ ಮಧ್ವರು ಅರಿತೇ ತಮ್ಮ ಶಿಷ್ಯರಾದ ಶ್ರೀನರಹರಿತೀರ್ಥರ ದೆಸೆಯಿಂದ ಗಜಪತಿಯ ಕೋಶದಿಂದ ತರಿಸಿ ಸರ್ವಜ್ಞಪೀಠದಲ್ಲಿ ಸ್ಥಾಪಿಸಿ ಸಕಲ ಸಾತ್ವಿಕರ ಉದ್ಧಾರ–ಕ್ಕಾಗಿಯೇ ಅನುಗ್ರಹಿಸಿದ್ದಾರೆ. ಇಂತಹ ವಿಶಿಷ್ಟ ಶ್ರೀಮೂಲರಾಮನ ದರ್ಶನ, ಉಪಾಸನೆ ಯಾವ ಮುಮುಕ್ಷುಗಳಿಗೆ ತಾನೆ ಬೇಡ? ಸರ್ವರೂ ಇಚ್ಛಿಸು–ವಂತಹುದ್ದೇ. ಆದರೆ ಇಚ್ಛಿಸಿದವರಿಗೆಲ್ಲಾ ಸಿಗುವವನು ಭಗವಂತನಲ್ಲ.

'ಯಮೈವೇಷ ವೃಣುತೇ ತೇನ ಲಭ್ಯಃ' ತಾನು ಯಾರಿಗೆ ಲಭ್ಯನಾಗ–ಬೇಕೆಂದು ಸಂಕಲ್ಪಿಸುತ್ತಾನೋ ಅವರಿಗೇ ಲಭ್ಯ. ಹಾಗೆಂದು ಯಾವ ಮುಮುಕ್ಷು ಅಧಿಕಾರಿಗಳನ್ನೂ ಕೈ ಬಿಡುವವವನಲ್ಲ. ಕಾಲಾನುಗುಣವಾಗಿ, ಯೋಗ್ಯತಾ–ನುಗುಣವಾಗಿ (ಕೆಲವರಿಗೆ ಬೇಗ, ಕೆಲವರಿಗೆ ವಿಲಂಬವಾಗಿ) ಎಲ್ಲರಿಗೂ ಲಭ್ಯನಾಗುವವನೇ. ಇದನ್ನರಿತು ಶ್ರೀಮೂಲರಾಮ ಎಲ್ಲಿದ್ದರೂ ನಮ್ಮನ್ನು

ಉದ್ಧರಿಸಲೆಂದೇ ಇದ್ದಾನೆ ಎಂದು ತಿಳಿಯಬೇಕೆ ಹೊರತು, ನಾವು ಕಲ್ಪಿಸಿ–ಕೊಂಡ ಕಡೆಯಲ್ಲೆಲ್ಲಾ ಇದ್ದಾನೆಂದೂ, ಯಥಾರ್ಥವನ್ನು ಅಯಥಾರ್ಥವ–ನ್ನಾಗಿಯೂ, ಅಯಥಾರ್ಥವನ್ನು ಯಥಾರ್ಥವನ್ನಾಗಿಯೂ ಚಿತ್ರಿಸಬಾರದು. ಹಾಗೆ ಚಿತ್ರಿಸಿದ್ದಲ್ಲಿ ನರಕಾದ್ಯನರ್ಥಗಳನ್ನು ಹೊಂದಬೇಕಾಗುತ್ತದೆ. ಇನ್ನು ಅದೃಷ್ಟ ವಿಷಯದಲ್ಲಿ ಜ್ಞಾನಿಗಳ ಮಾತೇ ಪರಮ ಪವಿತ್ರವೇ ಹೊರತು ಮನುಷ್ಯನ ಬುದ್ಧಿ, ಪ್ರಯತ್ನ ಇವೆಲ್ಲವೂ ಮಿತಿಯನ್ನು ಹೊಂದಿರುವಂತಹುದು. **'ಇದಮಿತ್ಥಂ'** ಎಂದು ಹೇಳಲು ಮನುಷ್ಯ ಬುದ್ಧಿ ಎಂದೂ ನಿಷ್ಪ್ರಯೋಜಕವು. ಆದುದ–ರಿಂದಲೇ ಶ್ರೀಟೀಕಾಕೃತ್ಪಾದರು ಪ್ರಮಾಣ ಪದ್ಧತಿಯಲ್ಲಿ ಮನುಷ್ಯರನ್ನು ಅಯೋಗಿ–ಗಳೆಂದು (ಯೋಗಿಜ್ಞಾನರಹಿತರೂ – ವಿಜ್ಞಾನದೃಷ್ಟಿಯಿಂದ ಅಲೌಕಿಕ ವಿಷಯ–ವನ್ನು ತಿಳಿಯದವರು) ಎಂದು ಕರೆದಿದ್ದಾರೆ. ಅಯೋಗಿಗಳು, ಶಬ್ದಗಳನ್ನು ಅನುಸರಿಸಿ ಬುದ್ಧಿ ಬಳಸಬಹುದೇ ಹೊರತು ಯೋಗಜ್ಞಾನದಿಂದ ವಸ್ತು ಯಥಾ ಸ್ಥಿತಿಯನ್ನು ತಿಳಿಯಲಾರರು.

ಶಬ್ದವನ್ನು ಅನುಸರಿಸಿ ನಾವು ನಿಶ್ಚಯಮಾಡಿದರೂ – ಯೋಗಿಜ್ಞಾನ ತದ್ವಿರುದ್ಧವಾಗಿರುವುದುಂಟು. ಉದಾಹರಣೆಗೆ ಶ್ರೀಮೂಲರಾಮನ ಪ್ರತಿಮೆಯು ಕಾಲಾದಿಗಳನ್ನು ವೈಜ್ಞಾನಿಕವಾಗಿ ಸಂಶೋಧಿಸಿ ನಿಶ್ಚಯಕ್ಕೆ ಬರುವುದಾದರೆ ಕೋಟ್ಯಾನುಕೋಟಿ ವರ್ಷಗಳ ಈ ಪ್ರತಿಮೆ ಈಗಿರುವ ಅವಸ್ಥೆಯಲ್ಲಿರಲು ಶಕ್ಯವೇ ಇಲ್ಲ! ಎಂದು ವಿಜ್ಞಾನಿಗಳು ಘಂಟಾಘೋಷವಾಗಿ ವೈಜ್ಞಾನಿಕವಾಗಿ ಯಂತ್ರ–ಗಳಿಂದ ಪರೀಕ್ಷಿಸಿ ಅರ್ಹತಾ ಪತ್ರವನ್ನು ನಿಸ್ಸಂಶಯವಾಗಿ ನೀಡಬಲ್ಲರು.

ಆದರೆ ಅದೃಷ್ಟವನ್ನು ನಂಬಿರುವ ಆಸ್ತಿಕ ಸಮಾಜ ಪ್ರಪಂಚದ ವಿಜ್ಞಾನ–ವನ್ನೆಲ್ಲಾ ಉಪೇಕ್ಷಿಸಿ – ಭಗವಂತನ ಅಚಿಂತ್ಯ ಶಕ್ತಿಯಿಂದ ಪ್ರತಿಮೆ ಇದೇ ಎಂಬುದಾಗಿ ಬಲವಾದ ಶ್ರದ್ಧೆ, ನಂಬಿಕೆಗಳಿಂದ ಉಪಾಸನೆ ಮಾಡುತ್ತಿದ್ದೇವೆ. ಅಂದಮೇಲೆ ನಮ್ಮ ನಂಬಿಕೆ ನಿಂತಿರುವುದೇ ಯೋಗಿಗಳಾದ ಜ್ಞಾನಿಗಳ ನಿಶ್ಚಿತ ವಾಕ್ಯಗಳ ಮೇಲೆ. ಇಂತಹ ಯೋಗಿಗಳ ಮಧ್ಯ ಸರ್ವಜನಸಮ್ಮತರಾದ, ಕಲಿಯುಗದ ಕಾಮಧೇನು ಕಲ್ಪವೃಕ್ಷರೆಂದು ಖ್ಯಾತರಾದ ಅನುಭವಸಿದ್ಧರಾದ ಸಕಲ ಆಸ್ತಿಕರನ್ನೂ ಸಲಹುವ ಯೋಗಿಶ್ರೇಷ್ಠರೇ ಶ್ರೀರಾಘವೇಂದ್ರತೀರ್ಥರು. ಅಂತಹ ಮಹಾತ್ಮರೇ ಉಪಾಸನೆ ಮಾಡಿದ ಈ ಪ್ರತಿಮೆಯಲ್ಲಿ ಭಗವತ್ಸಾನ್ನಿಧ್ಯ ಅದೆಷ್ಟಿರಬೇಡ ?

ಅಂತಹ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ಪೂಜಾಪೀಠದಲ್ಲಿ, '**ಸ್ವಮೂರ್ತಿ–ಗಣಮಧ್ಯಗ**'ನಾಗಿ, ಪಂಚಕಲಶಗಳಿಂದಲೂ, ವಿದ್ರುಮ ಮೌಕ್ತಿಕಾದಿ ರತ್ನಾಲಂಕೃತ ಪ್ರತ್ಯೇಕ ಸುವರ್ಣಛತ್ರದ ವಿಶೇಷ ಗೌರವ ವೈಭವಯುಕ್ತ ಮಧ್ಯ ಪ್ರಭಾ–ವಳಿಯಲ್ಲಿ ಮಂಡಿತವಾದ ಸರ್ವಾಭರಣಾಲಂಕೃತ ಪ್ರಾಚೀನತಮ ಶುದ್ಧ ತಾಮ್ರಮಯ ಚತುರ್ಯುಗಮೂರ್ತಿಯೇ 'ಶ್ರೀಬ್ರಹ್ಮದೇವರ ಕರಾರ್ಚಿತ ಶ್ರೀಮನ್ಮೂಲರಾಮಪ್ರತಿಮಾ'. 'ಬಹುಯತಿಕರ ಪೂಜಿತ'ನಾದ ಈ ಸ್ವಾಮಿಯ ದಿವ್ಯ ಪ್ರಭಾವವನ್ನು ಅನೇಕ ಜ್ಞಾನಿಗಳು ಸ್ತುತಿಸಿದ್ದಾರೆ ಅನೇಕ ಹರಿದಾಸರು ಹಾಡಿ ಕುಣಿದು ತಣಿದಿದ್ದಾರೆ.

ಸತ್ಯಲೋಕನಿವಾಸಿಯಾದ 'ಶಂಕುಕರ್ಣ'ನೆಂಬ ಕರ್ಮಜದೇವತೆಯು, ಬ್ರಹ್ಮದೇವರು ಗೈದ ಶ್ರೀಮೂಲರಾಮ ಪೂಜಾವೈಭವವನ್ನು ಸಂದರ್ಶಿಸಿ, ಆನಂದಾನುಭೂತಿಯಲ್ಲಿ ಪರವಶನಾಗಿ, ಭಗವತ್ಸಂಕಲ್ಪದಂತೆ, ತಾನೂ ಪೂಜಿಸ ಬಯಸಿ, ಅಲ್ಲೇ ನೆಟ್ಟ ಕಣ್ಮನಗಳುಳ್ಳವನಾಗಿ, ಬ್ರಹ್ಮದೇವರ ಪೂಜಾಸಂಭ್ರಮ–ದಲ್ಲಿ ತುಲಸೀ–ಪುಷ್ಪಗಳನ್ನು ಅಣಿಗೊಳಿಸುವಲ್ಲಿ ಕಿಂಚಿತ್ ವಿಳಂಬ ಘಟಿಸಿ–ದಾಗ, ಭೂಲೋಕದಲ್ಲಿ ಅವತರಿಸುವಂತೆ ಬ್ರಹ್ಮದೇವರು ನೀಡಿದ ಶಾಪರೂಪ ವರವನ್ನು ಶಿರಸಾವಹಿಸಿ, ನಿತ್ಯವಾಯ್ವಾವೇಶ ಯುಕ್ತ ಪ್ರಹ್ಲಾದ–ಬಾಹ್ಲೀಕ–ವ್ಯಾಸರಾಜಾವತಾರಿಗಳಾಗಿದ್ದ ಮಹಿತಾತ್ಮರೇ ಮುಂದೆ ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರಾಗಿ ಅವತರಿಸಿ, ಗುರುಪ್ರದತ್ತ ಶ್ರೀಮನ್ಮೂಲರಘುಪತಿ–ಯನ್ನು ತ್ರಿಕರಣ ಪೂರ್ವಕ ಪೂಜಿಸಿ ಪ್ರಸನ್ನೀಕರಿಸಿಕೊಂಡದ್ದಲ್ಲದೆ; ಸಾಂಶ ದೇವತೆಗಳಾದ ಅವರು ಇಂದಿಗೂ ತಮ್ಮ ಪರಂಪರೆಯ ಯತಿಗಳಲ್ಲಿ ಸನ್ನಿಹಿತ–ರಾಗಿ, ಶ್ರೀಮನ್ಮೂಲರಾಮದೇವರನ್ನು ತಾವೇ ಪೂಜಿಸುತ್ತ ಆನಂದಿಸುವ–ರೆಂಬುದು ಭಕ್ತವೃಂದದ ದೃಢವಿಶ್ವಾಸ.

ಇಂತಹ ಶ್ರೀಗುರುರಾಜರ ಅನುಗ್ರಹಸಂಪಾದನೆಗಾಗಿ ಎಲ್ಲ ಭಕ್ತರು ಕೈಗೊಳ್ಳುವ ಪೂಜಾ, ಸೇವಾದಿ ಸಕಲ ಕೈಂಕರ್ಯಗಳೆಲ್ಲ '**ಸೀತಾಪತಿ ಶ್ರೀಮನ್ಮೂಲ ರಾಮಚಂದ್ರ ಪ್ರೇರಣಯಾ ಸೀತಾಪತಿ ಶ್ರೀಮನ್ಮೂಲರಾಮಚಂದ್ರ ಪ್ರೀತ್ಯರ್ಥಂ**' ಎಂಬ ಸಂಕಲ್ಪದಿಂದಲೇ ಪ್ರರಂಭವಾಗುತ್ತವೆ. ಈ ಎಲ್ಲ ಶುಭ ಕರ್ಮಗಳನ್ನು '**ಸೀತಾಪತಿ ಶ್ರೀಮನ್ಮೂಲರಾಮಚಂದ್ರಃ ಪ್ರೀಯತಾಮ್**' ಎಂದೇ ಸಮರ್ಪಿಸುವ

ಸತ್ಸಂಪ್ರದಾಯವು ಶತಮಾನಗಳಿಂದಲೂ ಆಚರಣೆಯಲ್ಲಿದೆ. ಪ್ರತಿವರ್ಷದ ಶ್ರೀರಾಮ ನವಮೀ ಹಾಗೂ ಬಲಿಪಾಡ್ಯಮಿಗಳಂದು ನಡೆಯುವ ಶ್ರೀಮನ್ಮೂಲರಾಮ–ದೇವರ ಮಹಾಭಿಷೇಕವಂತೂ ನಯನಾನಂದಕರ. ಮನಸ್ಸಿನ ಮಲಿನಗಳನ್ನು ತೊಡೆದು, ಮಾರರಮಣನತ್ತ ಕೊಂಡೊಯ್ಯುವ ಮನೋಹರ ಸನ್ನಿವೇಶವದು.

ಹೀಗೆ ಹತ್ತಾರು ಪ್ರತ್ಯಕ್ಷ ನಿದರ್ಶನಗಳಿಂದ, ಶ್ರೀಮನ್ಮೂಲರಾಮದೇವರು ಶ್ರೀರಾಘವೇಂದ್ರ ಸ್ವಾಮಿಗಳವರ ಮಠದಲ್ಲೇ ಪೂಜೆಗೊಳ್ಳುತ್ತಿರುವುದು ಸರ್ವ ಜನವಿದಿತ ವಿಚಾರವಾಗಿದೆ.

ಈ ಗ್ರಂಥದ ಮೊದಲ ಅಧ್ಯಾಯದಲ್ಲಿ, ಅಂದಿನಿಂದ ಇಂದಿನವರೆಗೆ ನಡೆದುಬಂದ, ಶ್ರೀಮನ್ಮೂಲರಾಮದೇವರ ಪೂಜಾವೈಭವದ ಪರಂಪರೆ–ಯನ್ನು; ಪ್ರಾಚೀನ ಐತಿಹಾಸಿಕ ಆಧಾರಗಳಿಗೆ ಹಾಗೂ ಅಪರೋಕ್ಷಜ್ಞಾನಿಗಳ ಆಪ್ತವಾಕ್ಯಗಳಿಗೆ ಅನುಗುಣವಾಗಿ ಭಕ್ತಜನರ ಅನುಸಂಧಾನಕ್ಕೆ ಸೌಕರ್ಯ–ವಾಗುವಂತೆ, ಸಂಕ್ಷಿಪ್ತವಾಗಿ ನಿರೂಪಿಸಲಾಗುವುದು.

ಅಪ್ರತಿಮ ಪ್ರತಿಮೆ :

ಶ್ರೀಮಧ್ವಾಚಾರ್ಯರ ಮೂಲಮಹಾಸಂಸ್ಥಾನವಾದ ಶ್ರೀರಾಘವೇಂದ್ರ–ಸ್ವಾಮಿಗಳವರ ಮಠದಲ್ಲಿ ಕಂಗೊಳಿಸುತ್ತಿರುವ ಚತುರ್ಯುಗ ಮೂರ್ತಿಯಾದ ಶ್ರೀಮೂಲರಾಮ ಪ್ರತಿಮೆಯು ವಿಶಿಷ್ಟ ಸನ್ನಿಧಾನ ಉಳ್ಳದ್ದು. ತಿರುಪತಿಯ ವೇಂಕಟೇಶ್ವರನು 'ಶಿಲಾವತ್ ದೃಶ್ಯತೇ ಹರಿಃ' ಎಂಬ ಖ್ಯಾತಿ ಉಳ್ಳವನಾದರೆ ಈ ಮೂಲರಘುಪತಿಯು 'ಲೋಹವತ್ ದೃಶ್ಯತೇ ಹರಿಃ' ಎಂಬ ಕೀರ್ತಿ ಉಳ್ಳವನು. ಚತುರ್ಮುಖ ಬ್ರಹ್ಮದೇವರಿಂದ ಪೂಜಿತವಾದ ರಾಮ–ಸೀತಾ ಪ್ರತಿಮೆಗಳು ಇಕ್ಷ್ವಾಕು ವಂಶದವರಿಂದ ಪೂಜಿತವಾಗಿ, ಸ್ವತಃ ಮರ್ಯಾದಾ ಪುರುಷೋತ್ತಮನಾದ ಶ್ರೀ ರಾಮನಿಂದಲೇ ಪೂಜಿತವಾದವುಗಳು. ಗಜಪತಿ ಭಂಡಾರದಿಂದ ನರಹರಿ ತೀರ್ಥರಿಗೊಲಿದು ಆಚಾರ್ಯ ಮಧ್ವರ ಮುಖಾಂತರ ಮೂಲ ಸಂಸ್ಥಾನದಲ್ಲಿ ಪರಂಪರೆಯಾ ಪೂಜಿತವಾಗುತ್ತಿವೆ.

ಪ್ರತಿಮಾಯಾಂತು ಸಾನ್ನಿಧ್ಯಂ :

"ಪ್ರತಿಮಾಯಾಂತು ಸಾನ್ನಿಧ್ಯಂ ಅರ್ಚಕಸ್ಯ ತಪೋಬಲಾತ್"

ಲೋಹಾದಿ ಪ್ರತಿಮೆಗಳಲ್ಲಿ ಪೂಜೆಮಾಡುವವನ ತಪಃಶಕ್ತಿ (ಯೋಗ್ಯತಾನು–ಸಾರ ಭಕ್ತಿ)ಯನ್ನು ಅನುಸರಿಸಿ ಅತಿ ಹೆಚ್ಚು ಸಾನ್ನಿಧ್ಯ ಉಳ್ಳದ್ದಾಗಿರುತ್ತದೆ.

ಅಧ್ಯಾಯ – 1

ಶ್ರೀಮೂಲರಘುಪತಿಪೂಜಾಪರಂಪರಾ

ಮರುದ್ವಂಶರಿಂದ ಸದ್ವಾಲಗಕೊಂಡ ಮೂರ್ತಿ :

'ಮಧ್ವವಲ್ಲಭ'ನೂ, 'ಸದ್ವೈಷ್ಣವರ ಪ್ರಿಯ'ನೂ, 'ಸದ್ವರ್ಣಭೂತ'ನೂ, 'ಜಗದ್ವಿಲಕ್ಷಣ'ನೂ ಆದ ಶ್ರೀಮೂಲರಾಮನನ್ನು; ಶ್ರೀವಿಜಯದಾಸರು ತಮ್ಮ ಒಂದು ಸುಳಾದಿಯಲ್ಲಿ **'ಮರುದ್ವಂಶರಿಂದ ನಿತ್ಯ ಸದ್ವಾಲಗಕೊಂಡ ಮೂರ್ತಿ'** ಎಂದು ಮನದುಂಬಿ ಕೊಂಡಾಡಿದ್ದಾರೆ.

'ರಂಗವಲಿದದಾಸ'ರಾದ ಶ್ರೀಜಗನ್ನಾಥದಾಸರು, ಈ ಪರಮ ಮಂಗಳ ಮೂರ್ತಿಯನ್ನು ಕಂಡು, ಮುದಗೊಂಡು –

"ಬಲುನಂಬಿದ ಭಕುತರ ಕಲಿಮಲಗಳ ಕಳೆದ । ಮನದೊಳು ಪೊಳೆದ
ಆರಾಧಿಪರಿಗೆ ಅಖಿಳಾರ್ಥಗಳನು ಕೊಡುವಾ । ದುರಿತವ ತಡೆವ ॥"

ಎಂದು ಮುಕ್ತಕಂಠದಿಂದ ಸ್ತುತಿಸಿದ್ದಾರೆ.

ಕಳೆದ ನೂರಾರು ವರ್ಷಗಳಿಂದ, ಸಹಸ್ರಾವಧಿ ಶಿಷ್ಯ–ಭಕ್ತವೃಂದವು, ಯಾವ ಮಾಧ್ವಸಂಸ್ಥಾನದ ಪೀಠಾಧಿಪತಿಗಳು ತಮ್ಮ ಊರಿಗೆ ಆಗಮಿಸಿದರೆ **'ಶ್ರೀಮನ್ಮೂಲರಾಮೋ ವಿಜಯತೇ'** ಎಂಬ ಜಯಘೋಷದಿಂದ ಸಂಭ್ರಮಿಸಿ ಸ್ವಾಗತಿಸುತ್ತಾರೋ;

ಕಳೆದ ನೂರಾರು ವರ್ಷಗಳಿಂದ ಯಾವ ಮಾಧ್ವಸಂಸ್ಥಾನದ ಪೀಠಾ–ಧಿಪತಿಗಳ ಸಂಸ್ಥಾನಪೂಜಾ ಮುಕ್ತಾಯಕಾಲದಲ್ಲಿ, ಪ್ರಧಾನಪ್ರತಿಮೆಯನ್ನು ದರ್ಶನಮಾಡಿಸುವಾಗ **'ಶ್ರೀಬ್ರಹ್ಮದೇವರ ಕರಾರ್ಚಿತ ಶ್ರೀಮನ್ಮೂಲರಾಮ–ದೇವರು'** ಎಂದು ಉಚ್ಚಕಂಠದಿಂದ ಉದ್ಘೋಷಿಸುವ ಪ್ರಾಚೀನ ಪದ್ಧತಿಯು,

ಹಲವು ತಲೆಮಾರುಗಳಿಂದಲೂ ನಡೆದುಬಂದಿರುವ ವಿಚಾರವನ್ನು ಎಲ್ಲರೂ ಬಲ್ಲರೋ;

ಯಾವ ಮಾಧ್ವಸಂಸ್ಥಾನದ ಪೀಠಾಧಿಪತಿಗಳು, ದಿಗ್ವಿಜಯ ಕೈಗೊಂಡು ದೇವರ ಪೆಟ್ಟಿಗೆಯೊಂದಿಗೆ ಹೊರಟರೆಂದರೆ ಸಹಸ್ರಾವಧಿ ಶಿಷ್ಯ–ಭಕ್ತರು **'ಶ್ರೀಮನ್ಮೂ–ಲರಾಮೋ ವಿಜಯತೇ'** ಎಂಬ ಉದ್ಘೋಷದಿಂದಲೇ ಬೀಳ್ಕೊಡುತ್ತಾರೋ;

ಯಾವ ಮಾಧ್ವಸಂಸ್ಥಾನದ ಮೂಲಕೇಂದ್ರ ಹಾಗೂ ಭಾರತದಾದ್ಯಂತ ಹಬ್ಬಿರುವ ವಿವಿಧ ನಗರಗಳ ಶಾಖಾಮಠಗಳ ಒಳ – ಹೊರಗೆ ಕಂಡುಬರುವ, ಅಸಂಖ್ಯ ನಾಮಫಲಕಗಳಲ್ಲಿ; [ಮಾತ್ರವಲ್ಲದೆ ಶ್ರೀರಾಯರ ಅನುಗ್ರಹವಾಗ–ಬೇಕಾದರೆ, ಶ್ರೀರಾಯರ ಸಂಪ್ರದಾಯವನ್ನೇ ಅನುಸರಿಸಬೇಕೆಂಬ ದೀಕ್ಷೆಯುಳ್ಳ ನೂರಾರು ಖಾಸಗಿ ಮಠಗಳ ನಾಮಫಲಕಗಳಲ್ಲೂ] **'ಶ್ರೀಮನ್ಮೂಲರಾಮೋ ವಿಜಯತೇ'** ಎಂಬ ಒಕ್ಕಣೆಯೇ ವಿರಾಜಿಸುವುದೋ;

ಯಾವ ಮಾಧ್ವಸಂಸ್ಥಾನವು ಪ್ರಕಟಿಸಿದ ನೂರಾರು ಗ್ರಂಥಗಳ, ಸಾವಿರಾರು ಲೇಖನಗಳ, ಲಕ್ಷಾವಧಿ ಸಂಖ್ಯೆಯ ಸಭಾ – ಆರಾಧನಾದಿ ಆಮಂತ್ರಣ ಪತ್ರಿಕೆಗಳ, ಕೋಟ್ಯಾಂತರ ರಶೀದಿಗಳ, ಮೊದಲಿನಿಂದಲೂ ಪ್ರಕಟಿಸುತ್ತ ಬಂದ ಪಂಚಾಂಗಗಳ ಶಿರೋಭಾಗದಲ್ಲೂ **'ಶ್ರೀಮನ್ಮೂಲರಾಮೋ ವಿಜಯತೇ'** ಎಂಬ ಅಧಿಕೃತ ಅಕ್ಷರಾತ್ಮಕ ಮೂರ್ತಿಯೇ ಶೋಭಿಸುವುದೋ;

ಯಾವ ಮಾಧ್ವಸಂಸ್ಥಾನದ ಶಿಷ್ಯಮನೆತನಗಳ ಮನೆಯಬಾಗಿಲ ಮೇಲ್ಭಾಗ–ದಲ್ಲೂ, ಬರೆಯುವ ಪತ್ರಗಳ ಮೇಲೂ, ಶುಭಶೋಭನಾದಿ ಮಂಗಳಕಾರ್ಯ–ಗಳ ಆಮಂತ್ರಣಪತ್ರಿಕೆಗಳ ಮೇಲ್ಭಾಗದಲ್ಲೂ, **'ಶ್ರೀಮನ್ಮೂಲರಾಮೋ ವಿಜಯತೇ'** ಎಂಬ ಶ್ರೀಕಾರವೇ ಕಂಗೊಳಿಸುವುದೋ;

ಬಹುಕಾಲ ಸಂತಾನವಿಲ್ಲದ ದಂಪತಿಗಳು ಯಾವ ಮಾಧ್ವಸಂಸ್ಥಾನಾ–ಧೀಶ್ವರರಿಂದ ಅನುಗ್ರಹಪೂರ್ವಕ ಫಲಮಂತ್ರಾಕ್ಷತೆ ಪಡೆದ ಪುಣ್ಯದ ಫಲ–ವಾಗಿ ಪುತ್ರಲಾಭ ಹೊಂದಿದ ಕೃತಜ್ಞತೆಗಾಗಿ, ಆ ಮಕ್ಕಳನ್ನು **'ಮೂಲರಾಮ'**–ನೆಂಬ ಪ್ರೀತಿನಾಮದಿಂದಲೇ ಸಂಬೋಧಿಸುವ ಮೂಲಕ ಧನ್ಯತೆಯನ್ನು ಅನುಭವಿಸುವ ವಿಶಿಷ್ಟ ಸಂಪ್ರದಾಯವು ಇಂದಿಗೂ ಆಚರಣೆಯಲ್ಲಿದ್ದು, ಅವರು–ಗಳ ಪರಿಚಿತ ವಲಯದಲ್ಲಿ ಪ್ರಸಿದ್ಧವೇ ಆಗಿದೆಯೋ;

ಹಿಂದೊಮ್ಮೆ ಶ್ರೀವಾದಿರಾಜರ ಋಜುತ್ವ ಹಾಗು ಶ್ರೀರಾಘವೇಂದ್ರತೀರ್ಥರ ಪಾದೋದಕ ಪ್ರಾಶನಾದಿ ವಿಚಾರಗಳಲ್ಲಿ, ಪ್ರಾಕೃತಭಾಷೆಯ ಹರಿದಾಸ ವಾಙ್ಮಯೋಕ್ತ ವಿಚಾರಧಾರೆಯನ್ನು ಅಪ್ರಮಾಣವೆಂದು ಶಂಕಿಸಿದವರೇ, ಇಂದು ಶ್ರೀಮೂಲರಾಮ ಪ್ರತಿಮೆಯ ಅಸ್ತಿತ್ವ ವಿಚಾರದಲ್ಲಿ ಮಾತ್ರ ಹರಿದಾಸರ ಕೃತಿಗಳನ್ನು ಪ್ರಮಾಣವೆಂದು ಅಂಗೀಕರಿಸುವ ಔದಾರ್ಯವನ್ನು ತೋರುತ್ತಿರುವುದು ಸಂತೋಷಕರ ಸಂಗತಿಯೇ ಸರಿ!

ಶ್ರೀಪುರಂದರದಾಸರು ಶ್ರೀಮೂಲರಾಮನನ್ನು ಶ್ರೀಸುರೇಂದ್ರರು ತಂದು ತೋರಿದರೆಂದದ್ದು, ಶ್ರೀವಿಜಯದಾಸರ ವಿರೋಧವಿಲ್ಲದ್ದು, ಶ್ರೀಗೋಪಾಲದಾಸರು 'ತರಣಿಕುಲೋತ್ಪನ್ನ' ಎಂಬ ಮೂಲರಾಮಸ್ತುತಿರೂಪದ ಸುಳಾದಿಯಲ್ಲಿ ೮ ಕಡೆ ಶ್ರೀವಸುಧೇಂದ್ರ ಕರಾರ್ಚಿತನೆಂದು ನಿಸ್ಸಂಶಯವಾಗಿ ಸ್ತುತಿಸಿದ್ದು, ಶ್ರೀಜಗನ್ನಾಥದಾಸರು ೮ಕ್ಕಿಂತಲೂ ಹೆಚ್ಚು ಕೃತಿಗಳಲ್ಲಿ ಶ್ರೀರಾಯರ ಮಠದ ಪರಂಪರೆಯಲ್ಲೇ ಶ್ರೀಮೂಲರಾಮದೇವರ ಇರುವಿಕೆಯನ್ನು ದೃಢೀಕರಿಸಿದ್ದು – ಹೀಗೆ ಪ್ರಸಿದ್ಧ ದಾಸಚತುಷ್ಟಯರಲ್ಲಿ ಸರ್ವರೂ ಶ್ರೀರಾಯರಮಠದ ಪರಂಪರೆಯಲ್ಲೇ ಶ್ರೀಮೂಲರಾಮದೇವರ ಪ್ರತಿಮೆಯ ಇರುವಿಕೆಗೆ ಸಹಮತ ವ್ಯಕ್ತಪಡಿಸಿದ್ದಾರೆ. ಇದೇ ಮಹನೀಯರು ಪರಮಠದ ಯತಿ ಸ್ತುತಿಗಳಲ್ಲಿ ಶ್ರೀಮೂಲರಾಮದೇವರ ಅಸ್ತಿತ್ವವನ್ನು ಪ್ರತಿಪಾದಿಸಿಲ್ಲವೆಂಬುದನ್ನು ಮರೆಯುವಂತಿಲ್ಲ.

ಕರ್ನಾಟಕ ಸರ್ಕಾರದ ಸಮಗ್ರ ದಾಸಸಾಹಿತ್ಯ ಸಂಪುಟಗಳು ಉಭಯರಿಗೂ ಆಕರಗಳಾಗಿದ್ದು, ಅಲ್ಲಿಯ ಕೀರ್ತನೆಗಳ ತೌಲನಿಕ ಪರಿಶೀಲನೆಯ ವಿವರಗಳನ್ನು ಅನುಬಂಧದಲ್ಲಿ ನೋಡಬಹುದು.

ಹಲವಾರು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಸ್ವಹಸ್ತಾಕ್ಷರದಿಂದ ಶುದ್ಧ ಪ್ರತಿಗಳನ್ನು ಬರೆದಿಟ್ಟ, ಲಿಂಗಸೂಗೂರಿನ ವರದೇಂದ್ರಸಾಹಿತ್ಯಮಂಡಲಿಯ ಗೊರಾಬಾಳ ಹನುಮಂತರಾಯರು, ಅವುಗಳನ್ನು ಶಾಸ್ತ್ರ ಸಾಂಗತ್ಯದೊಂದಿಗೆ ಅಭ್ಯಾಸಮಾಡಿದ ಪ್ರಸಿದ್ಧ ಸಂಶೋಧಕರು. ಇಂತಹವರು ತಮ್ಮ ಸಂಗ್ರಹಿತ ಸಾಹಿತ್ಯದ ಅಧ್ಯಯನದ ಅಂತಿಮ ಫಲಿತವಾಗಿ, 'ಮೂಲರಾಮನನ್ನು ವರದೇಂದ್ರ ಪೂಜಿತ'ನೆಂದು ಸ್ತುತಿಸಿ ಕೀರ್ತನೆ ರಚಿಸಿರುತ್ತಾರೆ. ಅಂದಮೇಲೆ ಮೂಲರಾಮನು ರಾಯರಮಠದಲ್ಲೇ ಇರುವನೆಂಬುದು ಗೋರೆಬಾಳರ ಕಂಠೋಕ್ತ ಅಭಿಪ್ರಾಯವೇ ಆಗುತ್ತದೆ.

ಹೀಗೆ ಇದುವರೆಗಿನ ವಿಮರ್ಶೆಯಿಂದ ಹಾಗೂ ಅನೇಕಾನೇಕ ಪ್ರಮಾಣಗಳ ಆಧಾರದಿಂದ **"ಶ್ರೀರಘುನಂದನತೀರ್ಥರು ಪುನಃ ಶ್ರೀಮೂಲರಾಮ ಪ್ರತಿಮೆಯನ್ನು ನಮ್ಮ ಸಂಸ್ಥಾನಕ್ಕೆ ತಂದುಕೊಟ್ಟರು"** ಎಂಬ ಹಿರಿಯರ ಹೇಳಿಕೆಯು ಸತ್ಯ ಶುದ್ಧವೆಂಬುದು ಸ್ಥಾಪಿತವಾಯಿತು.

"ಬ್ರಹ್ಮ ಮಧ್ವ ಜಯಾರ್ಯಾದಿ ಪೂಜ್ಯಪಾದೋ ವಿರಾಜತೇ।
ರಘುನಂದನ ಸಂಪ್ರಾಪ್ತೋ ಮೂಲರಾಮಸ್ತು ಮನ್ಮತೇ ॥"

ಎಂದು ಹೇಳುವುದು ಸಮುಚಿತವಾಗುತ್ತದೆ.

ಆದ್ದರಿಂದ ಶ್ರೀಬ್ರಹ್ಮದೇವರ ಕರಾರ್ಚಿತ ಶ್ರೀಮೂಲರಾಮದೇವರು, ಶ್ರೀಪದ್ಮನಾಭತೀರ್ಥರ ಮುಖಾಂತರ ಶ್ರೀನರಹರಿತೀರ್ಥರು, ಶ್ರೀಮಾಧವತೀರ್ಥರು ಹಾಗೂ ಶ್ರೀಅಕ್ಷೋಭ್ಯತೀರ್ಥರಿಗೆ ದೊರೆತು ಶ್ರೀಮಟ್ಟೀಕಾಕೃತ್ಪಾದರಿಗೆ ಪ್ರಾಪ್ತರಾದರು. ನಂತರ ಮುಂದುವರೆದ ಪರಂಪರೆಯಲ್ಲಿ ಶ್ರೀರಾಮಚಂದ್ರತೀರ್ಥರ ನಂತರ ಪರಗತವಾಗಿದ್ದ ಶ್ರೀಮೂಲರಾಮ ಪ್ರತಿಮೆಯನ್ನು ಶ್ರೀರಘುನಂದನತೀರ್ಥರು ಪುನಃ ಸಂಪಾದಿಸಿದ ಫಲವಾಗಿ ಶ್ರೀಸುರೇಂದ್ರರು, ಶ್ರೀವಿಜಯೀಂದ್ರರು, ಶ್ರೀಸುಧೀಂದ್ರರು, ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರೇ ಮೊದಲಾದ ವಿಭೂತಿಪುರುಷರ ಪರಂಪರೆಯಲ್ಲಿ ನಿಕಟಪೂರ್ವ ಪೀಠಾಧಿಪತಿಗಳಾಗಿದ್ದ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರ ಮೂಲಕ ಪ್ರಸ್ತುತ ಪೀಠಾಧಿಪತಿಗಳಾದ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಗಳಿಂದ ಪರಿಪೂಜಿತರಾಗಿ ಶ್ರೀಮೂಲರಾಮದೇವರು, ಶ್ರೀರಾಘವೇಂದ್ರಸ್ವಾಮಿಗಳವರಮಠದಲ್ಲೇ ವಿರಾಜಿಸುತ್ತಿದ್ದಾರೆ ಎಂಬುದು ಸೂರ್ಯಪ್ರಕಾಶದಷ್ಟು ಸತ್ಯ.

✳✳✳

ಎಂಬ ಪುಸ್ತಕದಲ್ಲಿ ' ಮಾತ್ರ 'ಮರೆಯದಿರು ಮರೆಯದಿರು **ಮೂಲರಾಮಾ**' ಎಂದಿದ್ದರೆ ಆ ಗ್ರಂಥವು ನಿಜಕ್ಕೂ ಶ್ರೀಯುತರಿಂದ ಸಂಶೋಧಿಸಲ್ಪಟ್ಟಿರುವುದೇ ಅನುಮಾನಾಸ್ಪದವಾಗುತ್ತದೆ.

೬. ಸ.ಸೀ.ಮೂ. ಗ್ರಂಥಕಾರರು ಒಂದೊಮ್ಮೆ ನಿಜಕ್ಕೂ ಡಾ. ಶ್ರೀನಿವಾಸ ಹಾವನೂರರ ಬಗ್ಗೆ ಅಷ್ಟೊಂದು ಪ್ರಾಮಾಣಿಕ ಬುದ್ಧಿಯನ್ನು ಹೊಂದಿದ್ದರೆ, ಡಾ. ಹಾವನೂರರೇ ಸಂಶೋಧಿಸಿ, ಸಂಪಾದಿಸಿ, ಪ್ರಕಟಿಸಿದ 'ಹರಿದಾಸರು ಹಾಡಿಹೊಗಳಿದ ಶ್ರೀವಾದಿರಾಜರು' ಎಂಬ ಗ್ರಂಥದಲ್ಲಿ, ವಿವಿಧ ಹರಿದಾಸರ ಕೀರ್ತನೆಗಳಲ್ಲಿ ತುಂಬಿನಂತ ನೂರಕ್ಕೂ ಹೆಚ್ಚು ಸಂಖ್ಯೆಯ 'ಶ್ರೀವಾದಿರಾಜರ ಋಜುತ್ವ ಪ್ರತಿಪಾದಕ ವಾಕ್ಯಗಳನ್ನೂ ಇಷ್ಟೇ ಪ್ರಾಮಾಣಿಕ ಬುದ್ಧಿಯಿಂದ ಸ್ವೀಕರಿಸಿ ಗೌರವಿಸುತ್ತಾರೆಯೇ?' ಈ ಪ್ರಶ್ನೆಗೆ ಕಾಲವೇ ಉತ್ತರಿಸಬೇಕು!

೭. ಒಂದೊಮ್ಮೆ ಡಾ. ಹಾವನೂರರಂತಹ ಸುಪ್ರಸಿದ್ಧರ ಸಂಶೋಧಿತ ಕೃತಿಗಳಲ್ಲೂ, ಮಾನವ ಸಹಜ ಕಣ್ತಪ್ಪಿನಿಂದ ಇಂತಹ ವ್ಯತ್ಯಾಸಗಳು ಸಂಭವಿಸಿದಾಗ, ವಿವೇಕಿಗಳಾದ ಸಹೃದಯರು, ತಮ್ಮ ಅನುಕೂಲಕ್ಕಾಗಿ ವ್ಯತ್ಯಸ್ತ ವಾಕ್ಯವನ್ನು ಬಳಸಿಕೊಂಡು, ಸಂಶೋಧಕರ ಹೆಸರನ್ನು ಮುದ್ರಿಸಿ ಅವರಿಗೆ ಮುಜುಗರ ಉಂಟುಮಾಡುವುದು ಸರಿಯೆ? ಅಷ್ಟೇ ಅಲ್ಲದೆ, ಶ್ರೀನಿವಾಸ ಹಾವನೂರು ಅವರು ಉತ್ತರಾದಿ ಮಠದವರೇ ಎನ್ನುವುದು ಗಮನಿಸಬೇಕಾದ ಅಂಶ.

ಈ ಎಲ್ಲ ಚರ್ಚೆಯಿಂದ ಶ್ರೀವಿಜಯದಾಸರ ಪ್ರಿಯಶಿಷ್ಯರಾದ ಶ್ರೀವ್ಯಾಸವಿಠಲರಂತೂ 'ಮರೆಯದಿರು ಮರೆಯದಿರು ಮೂಲರಾಮಾ' ಎಂದು ಪ್ರಯೋಗಿಸಿಲ್ಲವೆಂಬುದು ಸ್ಪಷ್ಟವಾಯಿತು. 'ಮರೆಯದಿರು ಮರೆಯದಿರು ಮಾರಮಣನೇ' ಎಂಬುದೇ ಶುದ್ಧಪಾಠವೆಂದು ನಿರ್ಣಯವಾಯಿತು.

ಇದೇ ಪುಟದಲ್ಲಿ ಮುಂದುವರಿದು 'ಶ್ರೀವಿಜಯದಾಸರ ಸಾಕುಮಕ್ಕಳಾದ ಶ್ರೀಮೋಹನದಾಸರು ಶ್ರೀಸತ್ಯಬೋಧತೀರ್ಥರನ್ನು ಹೊಗಳುವ ಕೃತಿಯಲ್ಲಿ (ಸಮಕಾಲೀನ ಕೃತಿ) **ಅತಿಸ್ಪಷ್ಟವಾಗಿ** ಶ್ರೀಮಠದಲ್ಲಿ ಪೂಜೆಗೊಳ್ಳುತ್ತಿರುವ ಪ್ರತಿಮೆಗಳ ಬಗ್ಗೆ ಸಾರಿದ್ದಾರೆ' ಎಂಬ ಅವತಾರಿಕೆಯೊಂದಿಗೆ 'ಆವನೆದುರು ಮೂರ್ಜಗದೊಳು' ಎಂಬ ಕೀರ್ತನೆಯನ್ನು ಕೊಟ್ಟಿದ್ದಾರೆ. ತಮಾಷೆಯೆಂದರೆ ಇದರಲ್ಲಿ 'ಮೂಲರಾಮ' ಎಂಬ ನೇರ ಪ್ರಸ್ತಾಪವೇ ಇಲ್ಲ.

ಹೀಗೆ ವಿಜಯರಾಯರು, ವ್ಯಾಸವಿಠಲರು, ಮೋಹನದಾಸರು ಹೇಳದಿರುವ ವಿಚಾರಗಳನ್ನು ಪ್ರಸನ್ನವೆಂಕಟದಾಸರು ಮತ್ತು ಐಹೊಳೆ ವೆಂಕಟದಾಸರು ಹೇಳಿರುವರೆಂದು ಉಲ್ಲೇಖಿಸಿರುವ ಕೀರ್ತನೆಗಳನ್ನು ಪ್ರಾಮಾಣಿಕಗಳೆಂದು ಪ್ರಾಜ್ಞರು ಅಂಗೀಕರಿಸಬಹುದೆ? ಎಂದಿಗೂ ಸಾಧ್ಯವಿಲ್ಲ.

ಶ್ರೀಜಗನ್ನಾಥದಾಸವರ್ಯರೇ ಸ್ಪಷ್ಟವಾಗಿ ಶ್ರೀರಾಯರು ಶ್ರೀಮೂಲರಾಮದೇವರನ್ನು ಪೂಜಿಸಿದ ಬಗ್ಗೆ ಉಲ್ಲೇಖಿಸಿದ್ದಾರೆ. ಶ್ರೀವಸುಧೇಂದ್ರರು, ಶ್ರೀವರದೇಂದ್ರರು, ಶ್ರೀಭುವನೇಂದ್ರರು ಆ ದಿವ್ಯ ಪ್ರತಿಮೆಯನ್ನು ಪೂಜಿಸಿರುವ ದೃಶ್ಯವನ್ನು ಕಣ್ಣಾರೆಕಂಡು ಮನದುಂಬಿ ಸ್ತುತಿಸಿದ ೮ಕ್ಕಿಂತ ಹೆಚ್ಚು ಕೀರ್ತನೆಗಳು ಇಂದಿಗೂ ಮಾನವಿಯ ಶ್ರೀದಾಸರ ಸನ್ನಿಧಿಯಲ್ಲಿ, ಅವರ ಪುತ್ರರಾದ ಶ್ರೀದಾಮೋದರದಾಸರ ಹಸ್ತಲಿಖಿತ ಪುಸ್ತಕದಲ್ಲಿ ಮತ್ತು ಇಂದಿನ ಎಲ್ಲ ಪ್ರಕಟಿತ ಆವೃತ್ತಿಗಳ ಪಾಠಾಂತರಗಳಿಲ್ಲದೆ ಏಕರೂಪವಾಗಿ ಕಂಡುಬರುತ್ತಿವೆ. ಇಂದಿನ ಯಾವ ಸಂಶೋಧಕರೂ ಈ ಕೃತಿಗಳ ಬಗ್ಗೆ ಭಿನ್ನಾಭಿಪ್ರಾಯದ ಚಕಾರವೆತ್ತದಿರುವುದು ಪರಿಗಣನೀಯ.

ವಸ್ತುಸ್ಥಿತಿ ಹೀಗಿರುವಾಗ ಶ್ರೀಜಗನ್ನಾಥದಾಸಾರ್ಯರ ಪ್ರಿಯಶಿಷ್ಯರೂ, ಅವರಿಂದಲೇ ಉದ್ಧೃತರೂ, ಅವರಿಂದಲೇ ಶ್ರೀದವಿಠ್ಠಲಾಂಕಿತವನ್ನು ಹೊಂದಿದವರೂ ಆದ ಶ್ರೀಕರ್ಜಗಿದಾಸರು ತಮ್ಮ ಸಮಕಾಲೀನರಲ್ಲದ ಶ್ರೀರಘೂತ್ತಮತೀರ್ಥರನ್ನು ಕೊಂಡಾಡುವ ಕೃತಿಯಲ್ಲಿ ಶ್ರೀಮೂಲರಾಮ ಪ್ರತಿಮೆಯನ್ನು ಪ್ರಸ್ತಾಪಿಸಿದ್ದು ನಿಜವಾದರೆ ಅವರು ಪ್ರತ್ಯಕ್ಷಕ್ಕೆ ವಿರೋಧವಾಗಿ, ಗುರುವಾಕ್ಯಕ್ಕೆ ವಿರೋಧವಾಗಿ ಕೀರ್ತನೆ ರಚಿಸಿದರೆಂದು ಊಹಿಸುವುದೂ ಸಹ ಅಪರಾಧವಾಗುವುದಲ್ಲವೇ?

ಶ್ರೀದವಿಠ್ಠಲದಾಸರ 'ನೋಡಿದೆ ಗುರುಗಳ ನೋಡಿದೆ' ಎಂಬ ಈ ಕೀರ್ತನೆಯನ್ನು ಇಷ್ಟೊಂದು ಆದರಿಸುವ ಸ.ಸೀ.ಮೂ.ಗ್ರಂಥಕಾರರು ಇದೇ ದಾಸರ 'ರಾಘವೇಂದ್ರ ಗುರುರಾಯರ ಸೇವಿಸಿರೋ' ಕೀರ್ತನೆಯಲ್ಲಿರುವ 'ವೃಂದಾವನಗತ ಮೃತ್ತಿಕೆ ಜಲಪಾನ ಮುಕ್ತಿಗೆ ಸೋಪಾನ' ಎಂಬ ವಾಕ್ಯವನ್ನೂ ಗೌರವಿಸಿ, ಶ್ರೀಗುರುರಾಜರ ಪಾದೋದಕ, ಮೃತ್ತಿಕೋದಕ ಪ್ರಾಶನಾದಿ ಪರಂಪರಾಗತ ಸದಾಚಾರವನ್ನು ಸಮ್ಮತಿಸಿ ಸ್ವತಃ ಆಚರಣೆಗೆ ತರುವರೆಂದು ಆಶಿಸಬಹುದೇ?

ತೀರ್ಥರ ನಂತರದ ಕಾಲವೆಂಬುದು ಗಮನಾರ್ಹ' ಎಂಬ ಮಾತು ನಿಲ್ಲುವುದಿಲ್ಲ.

೨. ಈ ಸುಳಾದಿಯಲ್ಲಿ ತಿಳಿಸಿದಂತೆ 'ಶ್ರೀಮೂಲರಾಮಾದಿ ಪಂಚ ಪ್ರತಿಮೆ–ಗಳನ್ನು ಒಟ್ಟಾಗಿ ಪರಂಪರೆಯಗಿ ಪೂಜಿಸುತ್ತಾ ಬಂದಿರುವ' ಮಠದ ಹೆಸರನ್ನು ಗುರುಪುರಂದರದಾಸರು ಉಲ್ಲೇಖಿಸದಿರಲು ಕಾರಣವೇನು?

೩. ಸುಳಾದಿಯಲ್ಲಿರುವ 'ವ್ಯಾಸರಾಜಾಯಮುನಿಕಾಲ'ವೆಂದರೇನು? ಅದರ ಅಗತ್ಯವಾದರೂ ಏನಿತ್ತು?

೪. ಪರಮತದ ಪೂಜಾವಿವರವನ್ನು ಹೇಳುವಾಗ ಕೃತಿಕಾರರು ತಮಗೆ ಅಂಕಿತ–ವಿತ್ತ ಶ್ರೀವ್ಯಾಸರಾಜನ್ನು ಸ್ಮರಿಸುವ ಔಚಿತ್ಯವೇನು?

೫. 'ವ್ಯಾಸರಾಯರ ಕಾಲದಲ್ಲಿ ಶ್ರೀಮೂಲರಾಮ, ಶ್ರೀಮೂಲಸೀತಾ, ಶ್ರೀದಿಗ್ವಿಜಯ–ರಾಮ, ಶ್ರೀವಂಶರಾಮ, ಶ್ರೀಪ್ರಸನ್ನವಿಠಲ ಈ ಐದೂ ಪ್ರತಿಮೆಗಳ ಪೂಜೆ ಒಂದೇ ಕಡೆ ನಡೆಯುತ್ತಿರುವುದಾಗಿ' ಉಲ್ಲೇಖಿಸಿ, ಪೂಜಿಸಿದ ಯತಿಗಳ ಹೆಸರನ್ನು ಹೇಳದಿರುವುದರ ರಹಸ್ಯವೇನು?

೬. ಅವರ ಹೆಸರು ಕೃತಿಕಾರರಿಗೆ ತಿಳಿದಿರಲಿಲ್ಲವೇ?

ಇವೆಲ್ಲ ಕ್ಲೇಶಗಳನ್ನು ಕಂಡಾಗ – 'ಶ್ರೀವ್ಯಾಸರಾಜರ ಕಾಲದ ಪೂರ್ವದ ಅವಧಿಯಲ್ಲಿ ನಡೆದಿದೆ ಎನ್ನಲಾಗುವ ಶ್ರೀಮೂಲರಾಮನ ಪ್ರತಿಮೆಯ ಅಪಹರಣದ ಕಥೆಯು ನಿರಾಧಾರವಾದದ್ದೆಂದು ಸ್ಪಷ್ಟವಾಗುತ್ತದೆ' – ಎಂದು ಹೇಳಿಕೊಳ್ಳುವ ಅನಿವಾರ್ಯತೆ ಇದ್ದವರು ಇಂತಹ ಸುಳಾದಿಯ ಭಾಗಗಳನ್ನು ಪ್ರಕ್ಷೇಪಿಸಿ ಅದರ ಹೊಣೆಗಾರಿಕೆಯನ್ನು ಗುರುಪುರಂದರದಾಸರ ತಲೆಗೆ ಕಟ್ಟಿರುವುದು ಎದ್ದುಕಾಣು–ತ್ತದೆ. ಇದು ವಿಷಾದನೀಯ.

ಪ್ರಸಿದ್ಧ 'ಮಾರಮಣ'ನೂ 'ಮೂಲರಾಮ'ನಾದನೇ?

ಸ.ಸೀ.ಮೂ. ಪು:೩೪ರಲ್ಲಿ ಶ್ರೀವ್ಯಾಸವಿಠಲರು 'ಮರೆಯದಿರು ಮರೆಯದಿರು ಮೂಲರಾಮಾ' ಎಂಬ ಕೀರ್ತನೆ ರಚಿಸಿರುವುದಾಗಿ ಹೇಳಲಾಗಿದೆ. ಆದರೆ ಇಂದಿಗೂ ಹರಿದಾಸವಾಙ್ಮಯವೇತ್ತರಾದ ಸಹಸ್ರಾರು ಭಕ್ತ ಭಾವುಕರ ನಾಲಿಗೆಯ ಮೇಲೆ –

"ಮರೆಯದಿರು ಮರೆಯದಿರು ಮಾರಮಣನೇ ।
ಗುರುಸತ್ಯಬೋಧಾರ್ಯಗೊಲಿದ ರಘುರಾಮ" ॥ ಪ ॥

ಎಂಬ ಪಾಠವು ನಲಿದಾಡುತ್ತರುವುದನ್ನು ಪ್ರತ್ಯಕ್ಷವಾಗಿ ಕಾಣುತ್ತಿದ್ದೇವೆ.

೧. 'ಮರೆಯದಿರು ಮರೆಯದಿರು ಮಾರಮಣನೇ' ಎಂದಿದ್ದರೆ, ಅನುಪ್ರಾಸ (ಮೂರನೇ ಗಣದ ದ್ವಿತೀಯಾಕ್ಷರ ಪ್ರಾಸ) ಲಭಿಸುತ್ತದೆ. ಒಂದೊಮ್ಮೆ 'ಮರೆಯದಿರು ಮರೆಯದಿರು ಮೂಲರಾಮಾ' ಎಂದಿದ್ದರೆ ಅನುಪ್ರಾಸ ಲೋಪವಾಗುತ್ತದೆ.

೨. ಪ್ರಥಮ ಪಾದಾಂತದಲ್ಲಿ 'ಮೂಲರಾಮ' ಎಂದಿದ್ದು, ದ್ವಿತೀಯ ಪಾದಾಂತ–ದಲ್ಲಿ 'ರಘುರಾಮ' ಎಂದಿದ್ದರೆ ಪುನರಾವೃತ್ತಿ ದೋಷ ಬರುತ್ತದೆ.

೩. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ–ದಿಂದ ಪ್ರಕಾಶಿಸಲ್ಪಟ್ಟು ಡಾ.ಶ್ರೀನಿವಾಸ ಹಾವನೂರರನ್ನು ಒಳಗೊಂಡತೆ ಅನೇಕ ಖ್ಯಾತ ಸಂಶೋಧಕರಿಂದ ಸಂಶೋಧಿಸಲ್ಪಟ್ಟ ಸಮಗ್ರ ಹರಿದಾಸ ಸಂಪುಟಗಳಲ್ಲಿ, ಡಾ. ರಮಾ ಕಲ್ಲೂರಕರ್ ಮತ್ತು ಡಾ. ಸೀತಾ ಗುಡೂರರು ಸಂಪಾದಿಸಿದ ಸಂಪುಟ : ೧೩ರ ಪುಟ. ೧೮೫ರಲ್ಲಿ ಮರೆಯದಿರು ಮರೆಯದಿರು ಮೂಲರಾಮಾ' ಎಂದು ಮುದ್ರಿಸದೆ 'ಮರೆಯದಿರು ಮರೆಯದಿರು ಮಾರಮಣನೇ' ಎಂಬ ಪಾಠವನ್ನೇ ಮುದ್ರಸಿರುವುದು ಅವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ.

೪. ೨೦ನೇ ಶತಮಾನದ ಅನೇಕ ಹರಿದಾಸರ ನೇತಾರರಾಗಿ, 'ಹರಿದಾಸ ಕುಲತಿಲಕರು' ಎನಿಸಿದ ಶ್ರೀಗುರುಗೋವಿಂದದಾಸರು, ಸದರಿ ಕೃತಿಯನ್ನು ಪ್ರಕಟಿಸಿದಾಗಲೂ, 'ಮರೆಯದಿರು ಮರೆಯದಿರು ಮಾರಮಣನೇ' ಎಂಬ ನೈಜಪಾಠವನ್ನೇ ಮುದ್ರಿಸಿ ವಾಸ್ತವವನ್ನು ಎತ್ತಿಹಿಡಿದಿರುವುದು ಗಮನಾರ್ಹ. [ಗುರುಗೋವಿಂದದಾಸರು (ಸಂ), ೧೯೬೯, **ಹರಿಭಕ್ತ ವಿಜಯ,** ಗುರುಕೃಪಾ ಗ್ರಂಥಮಾಲೆ, ಮೈಸೂರು, ಪುಟ: ೨೫೫]

೫. ಆದರೆ ಸ.ಸೀ.ಮೂ.ಗ್ರಂಥಕಾರರು ಪು: ೩೫ರಲ್ಲಿ ಹೇಳಿರುವಂತೆ, 'ಡಾ. ಶ್ರೀನಿವಾಸ ಹಾವನೂರರ ಸಂಶೋಧಿತ 'ಹರಿದಾಸರು ಕಂಡ ಸತ್ಯಬೋಧರು'

ಅದರ ತರುವಾಯ ಹೃಷಿಕೇಶತೀರ್ಥರಿಗೊಂದು
ರಾಮಮೂರ್ತಿಯನು ಕೊಟ್ಟು।
ಬುಧಜನಾರ್ಚಿತ ನೃಸಿಂಹರ್ಯರಿಗೆ
ಕಾಳಿಯ ಮರ್ದನನಾದ ಶ್ರೀ ಕೃಷ್ಣಮೂರ್ತಿ।
ಹೃದಯ ನಿರ್ಮಲ ಜನಾರ್ದನತೀರ್ಥರಿಗೆ
ಕಾಳೀಮರ್ದನ ಶ್ರೀಕೃಷ್ಣಮೂರ್ತಿಯ ಕೊಟ್ಟು ॥ ೨ ॥

ಯತಿವರ ಉಪೇಂದ್ರರಾಯರಿಗೆ ವಿಠ್ಠಲನ
ವಾಮನತೀರ್ಥರಿಗೆ ವಿಠ್ಠಲನಾ।
ನತ ಸುರದ್ರುಮ ವಿಷ್ಣುತೀರ್ಥರಿಗೆ ವರಹ
ಶ್ರೀರಾಮತೀರ್ಥರಿಗೆ ನರಸಿಂಹ।
ಅತಿ ಸುಗುಣ ಅಧೋಕ್ಷಜತೀರ್ಥರಿಗೆ
ವಿಠಲ ನಿಂತು ಒಂಬತ್ತು ಮೂರ್ತಿಗಳ ಕೊಟ್ಟು।
ಕ್ಷಿತಿಯೊಳಗೆ ರೌಪ್ಯಪೀಠಪುರಸ್ಥ
ಪ್ರಾಣೇಶವಿಠ್ಠಲನ ಅರ್ಚನೆಗಿಟ್ಟರು ಕೇಳಿ" ॥ ೩ ॥

ಎಂದು, ಶ್ರೀಪ್ರಾಣೇಶದಾಸರು ವಾಸ್ತವ ವಿಚಾರವನ್ನು ತಪ್ಪಿಲ್ಲದೆ ವರ್ಣಿಸಿದ್ದಾರೆ.

ಹೀಗೆ ಮಾಧ್ವವಲಯದಲ್ಲಿ ಅಷ್ಟಮಠ ಪ್ರತಿಮಾ ಪ್ರದಾನದ ಪ್ರಸಿದ್ಧ ನಿರ್ವಿವಾದ ವಿಚಾರವನ್ನು ಸರಿಯಾಗಿ ತಿಳಿಯದೆ ತಪ್ಪಾಗಿ ಉಲ್ಲೇಖಿಸಿರುವ ಮೇಲ್ಕಂಡ ಸುಳಾದಿಗೆ ಎಷ್ಟು ಮನ್ನಣೆ ಕೊಡಲಾದೀತು?

ಸಂಪ್ರದಾಯಪದ್ಧತಿ ಹಾಗೂ ಶ್ರೀಪ್ರಾಣೇಶದಾಸರ ಕೀರ್ತನೆಗಳ ವಿವರಣೆ–ಗಳು ಅಧಿಕೃತ ಹಾಗೂ ಸರ್ವಸಮ್ಮತವಾಗಿರುವ ಕಾರಣ ಇವುಗಳಿಗೆ ವಿರುದ್ಧ–ವಾದ ಮತ್ತು ಐತಿಹ್ಯದ ಬೆಂಬಲವಿಲ್ಲದ 'ತಂದೆಯಷ್ಟೇ ಅಲ್ಲ ಮಗನಿಂದಲೂ ಪುಷ್ಟಿ' ಎಂದು ಹಿಗ್ಗಿದ್ದ (ಸಸೀ.ಮೂ. ಪು: ೨೦) ಉಕ್ತಿಗಳನ್ನು ನಿರಾಕರಿಸದೆ ವಿಧಿಯಿಲ್ಲ.

ಈ ಎರಡು ಉಲ್ಲೇಖಗಳ ಮಾತ್ರದಿಂದಲೇ ಮೂಲರಾಮ ಪ್ರತಿಮೆಯ ಅಸ್ತಿತ್ವವನ್ನು ಸ್ಥಾಪಿಸ ಹೊರಡುವುದು ಹೆಚ್ಚು ಸಮರ್ಥನೀಯವೆನಿಸುವುದಿಲ್ಲ.

ಎರಡು :

ಸ.ಸೀ.ಮೂ. ಪುಟ : ೨೦ರಲ್ಲಿ ಗುರುಪುರಂದರದಾಸರ ಸುಳಾದಿಯ ಅಟ್ಟತಾಳದಲ್ಲಿ –

"ಮಾಧವತೀರ್ಥರ ಕಾಲದಲಿ ಪೀಳಿಗೆ
ರಾಮಚಂದ್ರನು ಸ್ವಪ್ನದಿ ದ್ವಿ ತಂದಾ।
ಅಕ್ಷೋಭ್ಯತೀರ್ಥರ ಕಾಲದಿ ಪ್ರಸನ್ನವಿಠ್ಠಲನೆಂಬ
ಮೂರುತಿಯ ಲಕ್ಷ್ಮೀಧರಶಾಸ್ತ್ರಿ ತಂದಿತ್ತ।
ಪಂಚಮನ। ವ್ಯಾಸರಾಜಾಯಮುನಿ ಕಾಲದಲ್ಲಿ
ಐದು ಪ್ರತಿಮೆ ಒಂದಾಗಿ ಪೂಜಿಸಿ
ಗುರುಪುರಂದರವಿಠ್ಠಲನ್ನ ಸನ್ನಿಧಾನ ವಿಶೇಷದಿ" ॥ ೧೯ ॥

ಎಂಬ ಭಾಗವನ್ನು ಮುದ್ರಿಸಿದ್ದಾರೆ. ಅದನ್ನೇ ಬಲವಾಗಿ ನಂಬಿಕೊಂಡು –

'ಈ ಕೃತಿಯ ೧೯ನೇ ನುಡಿಯಲ್ಲಿ ಕೃತಿಕಾರರು ತಮಗೆ ಅಂಕಿತವಿತ್ತ ಶ್ರೀವ್ಯಾಸ–ರಾಜರನ್ನು ಸ್ಮರಿಸುತ್ತಾ ಅವರ ಕಾಲದಲ್ಲಿ ಶ್ರೀಮೂಲರಾಮ, ಶ್ರೀಮೂಲಸೀತಾ, ಶ್ರೀದಿಗ್ವಿಜಯರಾಮ, ಶ್ರೀವಂಶರಾಮ, ಶ್ರೀಪ್ರಸನ್ನವಿಠಲ ಈ ಐದೂ ಪ್ರತಿಮೆ–ಗಳ ಪೂಜೆ ಒಂದೇ ಕಡೆ ನಡೆಯುತ್ತಿರುವುದಾಗಿ ಉಲ್ಲೇಖಿಸಿರುವುದು ಗಮನಾರ್ಹ–ವಾಗಿದೆ. ಶ್ರೀವ್ಯಾಸರಾಜರ ಕಾಲ ಶ್ರೀರಘುನಂದನತೀರ್ಥರ ನಂತರದ ಕಾಲ–ವೆಂಬುದು ಗಮನಾರ್ಹ. ಹೀಗಾಗಿ ಈ ಸುಳಾದಿಯಲ್ಲಿ ತಿಳಿಸಿದಂತೆ ಶ್ರೀಮೂಲ–ರಾಮಾದಿ ಪಂಚಪ್ರತಿಮೆಗಳನ್ನು ಒಟ್ಟಾಗಿ ಪರಂಪರೆಯಗಿ ಪೂಜಿಸುತ್ತಾ ಬಂದಿರುವುದು ಉತ್ತರಾದಿ ಮಠದಲ್ಲಿಯೇ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಶ್ರೀವ್ಯಾಸರಾಜರ ಕಾಲದ ಪೂರ್ವದ ಅವಧಿಯಲ್ಲಿ ನಡೆದಿದೆ ಎನ್ನಲಾಗುವ ಶ್ರೀಮೂಲರಾಮನ ಪ್ರತಿಮೆಯ ಅಪಹರಣದ ಕಥೆಯು ನಿರಾಧಾರವಾದದ್ದೆಂದು ಸ್ಪಷ್ಟವಾಗುತ್ತದೆ.' – ಎಂದು ಬಹಳ ಉತ್ಸಾಹದಿಂದ ಪ್ರತಿಪಾದಿಸಲಾಗಿದೆ. ತಮಾಷೆಯೆಂದರೆ –

೧. ಶ್ರೀರಘುನಂದನತೀರ್ಥರ ಕಾಲ ಕ್ರಿ.ಶ. ೧೪೭೫ ರಿಂದ ೧೫೦೪ ಮತ್ತು ಶ್ರೀವ್ಯಾಸರಾಯರ ಕಾಲ ಕ್ರಿ.ಶ. ೧೪೭೫ ರಿಂದ ೧೫೩೯ ಆಗಿರುವುದ–ರಿಂದ ಶ್ರೀವ್ಯಾಸರಾಯರು ಶ್ರೀರಘುನಂದನತೀರ್ಥರ ಕಿರಿಯ ಸಮಕಾಲೀನ–ರಾಗುತ್ತಾರೆ. ಉಭಯರು ೨೯ ವರ್ಷಗಳ ಕಾಲ ಸಂಪರ್ಕ ಹೊಂದಿರಲು ಅವಕಾಶವಿದೆ. ಆದ್ದರಿಂದ 'ಶ್ರೀವ್ಯಾಸರಾಜರ ಕಾಲ ಶ್ರೀರಘುನಂದನ–

- ಇಲ್ಲವಾದಲ್ಲಿ ಶ್ರೀರಘುನಾಥತೀರ್ಥರ ಕಾಲ ಕ್ರಿ.ಶ. ೧೫೬೪–೧೬೨೨ ಎಂದು ಪರಿಗಣಿಸಿದರೆ, ಆ ಸಮಯಕ್ಕಾಗಲೇ ಶ್ರೀಪುರಂದರದಾಸರು ಹರಿಪದವನ್ನೈದಿದ್ದರು. ಹೀಗಾಗಿ ಪುರಂರದಾಸರು ಈ ಕೃತಿಯನ್ನು ರಚಿಸಿದರೆಂದು ತಿಳಿಯಲು ಬರುವುದಿಲ್ಲ.
- ಈ ವಿಷಯದ ಬಗ್ಗೆ ಹೆಚ್ಚಿನ ಚರ್ಚೆಗಾಗಿ ಡಾ। ಬಿ.ಎನ್.ಕೆ.ಶರ್ಮಾ ಅವರು ಬರೆದಿರುವ 'ಸತ್ಯಮೇವಜಯತೇ' ಪುಸ್ತಕವನ್ನು ನೋಡಿ.

ಆದರೆ ಶ್ರೀಸುರೇಂದ್ರತೀರ್ಥರ ಮೇಲೆ ರಚಿಸಿರುವ ಕೃತಿಯಲ್ಲಿ ಛಂದಸ್ಸು, ಪ್ರಾಸಾದಿಗಳೆಲ್ಲ ಬಹಳ ಸ್ಫುಟವಾಗಿವೆ. ಈ ಕೀರ್ತನೆಯ ವಿಷಯ ಐತಿಹಾಸಿಕವೂ ಆಗಿದೆ, ಶ್ರೀವ್ಯಾಸರಾಜರ ಒಡನಾಡಿಗಳೂ ಸಮಕಾಲೀನರೂ ಆದ ಶ್ರೀಸುರೇಂದ್ರ–ತೀರ್ಥರ ಕಾಲ (೧೫೦೪–೧೫೪೯), ಶ್ರೀಪುರಂದರದಾಸರ ಕಾಲ (೧೫೧೪–೧೫೬೪). ಇವುಗಳನ್ನು ಗಮನಿಸಿದರೆ ಶ್ರೀಸುರೇಂದ್ರತೀರ್ಥರಕಾಲ ಹಾಗೂ ಶ್ರೀಪುರಂದರದಾಸರಕಾಲ ಹೊಂದಿಕೆಯಾಗುವುದರಿಂದ ಶ್ರೀಸುರೇಂದ್ರತೀರ್ಥರು ಶ್ರೀಮೂಲರಾಮನನ್ನು ಪೂಜಿಸುವ ವೈಭವವನ್ನು ಶ್ರೀಪುರಂದರದಾಸರು ಕಣ್ಣಾರೆ ಕಂಡು ಸ್ತುತಿಸಿರುವುದರಲ್ಲಿ ಪ್ರಾಮಾಣಿಕತೆಯು ಕಂಡುಬರುತ್ತದೆ.

ಗುರುಪುರಂದರದಾಸರದೆಂದ ಕೃತಿಯಲ್ಲಿ ಎದ್ದುಕಾಣುವ ಪ್ರಬಲ ದೋಷಗಳು

ಸ.ಸೀ.ಮೂ ಪರಿಶಿಷ್ಟ ೨, ಪುಟ : ೫೫ರಲ್ಲಿರುವ, ಗುರುಪುರಂದರ–ದಾಸರದೆಂದು ಉದಾಹರಿಸಲ್ಪಟ್ಟ ೨೧ ತಾಳಗಳ ಸುಳಾದಿಯಲ್ಲೂ ಉತ್ತರ–ಕಾಲೀನರ ಕೈವಾಡ ಸಾಕಷ್ಟು ನಡೆದಂತಿದೆ.

ಒಂದು :

"ಮತ್ತೆಂಟು ಮೂರ್ತಿಗಳ ಪೂಜಿಸಿ ಕೃಷ್ಣಾರ್ಚಕರಿಗೆ।
ಒಂದೊಂದು ಪ್ರತಿಮೆ ಬ್ಯಾರೆ ಬ್ಯಾರೆ ಇತ್ತು।
ಬಟ್ಟು ಕೋದಂಡರಾಮ ಕಾಳಿಂಗ ಮರ್ದನ।
ತ್ರಿವಿಕ್ರಮ ವರಹ ನರಸಿಂಹ **ಹಯಗ್ರೀವ** ಕೃಷ್ಣನೆಂಬ।
ಮೂರುತಿಯನ್ನು ಪೂಜಿಸಿಕೊಂಡು ಇದ್ದಲ್ಲೆ ಇರು।
ಎಂದು ಪೂರ್ಣಪ್ರಜ್ಞರಾಯರು ವೇದವ್ಯಾಸರಲ್ಲಿಗೆ ಪೋದರಾಗಿ।
ವೇದವ್ಯಾಸ ಗುರು ಪುರಂದರವಿಠ್ಠಲನ್ನ ಮತವಿದು ॥ ೧೭ ॥" ಎಂದಿದೆ.

ಅಸ್ವಾರಸ್ಯವೆಂದರೆ –

೧. 'ಬಟ್ಟು' ಎಂದರೇನು?

೨. ತ್ರಿವಿಕ್ರಮ ಪ್ರತಿಮೆಯನ್ನು ಆಚಾರ್ಯರು ಯಾವ ಮಠಕ್ಕೆ ಕೊಟ್ಟರು?

೩. ಹಯಗ್ರೀವ ಪ್ರತಿಮೆಯನ್ನು ಆಚಾರ್ಯರು ಯಾವ ಮಠಕ್ಕೆ ಕೊಟ್ಟರು?

ಹೀಗೆ ಮತ್ತೆ ಪ್ರಶ್ನೆಗಳ ಸರಮಾಲೆ.

ಆದರೆ ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಾದ ಫಲಿಮಾರುಮಠದ ಮೂಲಯತಿಗಳಾದ ಶ್ರೀಹೃಷೀಕೇಶತೀರ್ಥ ವಿರಚಿತ **'ಸಂಪ್ರದಾಯಪದ್ಧತಿ'**–ಯಲ್ಲಿ ಆಚಾರ್ಯರು ಅಷ್ಟಮಠಾಧೀಶರಿಗೆ ಅನುಗ್ರಹಿಸಿದ ಮೂಲದೇವರ ಪ್ರತಿಮೆ–ಗಳ ವಿವರ ಇಂತಿದೆ –

"ಮಧ್ವಾಹ್ವಯೋಯಂ ಮರುದೀಶ್ವರೋದಾತ್
ಮುದಾ ಹೃಷೀಕೇಶ ನೃಸಿಂಹತೀರ್ಥಯೋಃ।
ಸೀತಾನುಜಾಭ್ಯಾಂ ಸಹಿತಂ ರಘೂತ್ತಮಂ
ಚತುರ್ಭುಜಂ ಕಾಲಿಯಮರ್ದನಂ ಹರಿಮ್ ॥ ೧೪ ॥

ಜನಾರ್ದನೋಪೇಂದ್ರ ಸುಯೋಗಿನೋರದಾತ್
ಕೃಷ್ಣಂ ದ್ವಿಹಸ್ತಂ ಭುಜಗಸ್ಯ ಮರ್ದನಮ್।
ಶ್ರೀವಿಠ್ಠಲಂ ವಾಮನಯೋಗಿನೋಪಿ ತಂ
ಶ್ರೀವಿಷ್ಣುತೀರ್ಥಸ್ಯ ಚ ಸೂಕರಾತ್ಮಕಮ್ ॥ ೧೫ ॥

ಶ್ರೀರಾಮತೀರ್ಥಸ್ಯ ನೃಸಿಂಹರೂಪಿಣಂ
ದದೌ ತಥಾಧೋಕ್ಷಜ ಯೋಗಿನಃ ಪುನಃ।
ಶ್ರೀವಿಠ್ಠಲಂ ಶ್ರೀರಘುವಂಶ ಶೇಖರಂ
ಶ್ರೀಪದ್ಮನಾಭಾಹ್ವಯ ಯೋಗಿಮೌಲಯೇ" ॥ ೧೬ ॥

ಶ್ರೀಪ್ರಾಣೇಶದಾಸರು ರಚಿಸಿರುವ **'ಸುಖತೀರ್ಥರೆದುವರನ'** ಎಂಬ ಕೀರ್ತನೆಯು ಸಹ ಈ ಶ್ಲೋಕಗಳಿಗೆ ಸಂವಾದಿಯಾಗಿದೆ.

"ಪದುಮನಾಭರಿಗೆ ರಾಮನ ಕೊಟ್ಟು
ಸಕಲ ದೇಶವನಾಳಿ ಧನ ತಾ ಎನುತಲೀ।

ಯಲ್ಲಿ ಬಳಸದ ಮಾತ್ರಕ್ಕೆ ಈ ಮಹನೀಯರೆಲ್ಲ ಚತುರ್ಯುಗ ಮೂರ್ತಿ ಶ್ರೀಮೂಲರಾಮದೇವರನ್ನು ಪೂಜಿಸಿದ ಐತಿಹಾಸಿಕ ಸತ್ಯವನ್ನು ನಿರಾಕರಿಸಲು ಸಾಧ್ಯವಿಲ್ಲ.

ಮೇಲ್ಕಂಡ ಜ್ಞಾನಿಗಳು ತಮ್ಮ ಜ್ಞಾನಪ್ರಕರ್ಷಕ್ಕಾಗಲಿ, ವೈರಾಗ್ಯಭಾಗ್ಯಕ್ಕಾಗಲೀ, ಭಕ್ತಿಯ ಉತ್ಕರ್ಷಕ್ಕಾಗಲೀ, ಪುರೋವಸ್ಥಿತ ದಿವ್ಯ ಪ್ರತಿಮಾಂತರ್ಗತ ಭಗವಂತ–ನನ್ನು ವಾಚನಿಕವಾಗಿ ಸ್ತೋತ್ರಮಾಡಬಹುದಿತ್ತು. ಹಾಗೆ ಮಾಡದೆ ತಮ್ಮ ಗ್ರಂಥಗಳ ಮಂಗಳಾಚರಣೆಗಳಲ್ಲಿ ಶ್ರೀಮೂಲರಾಮನೆಂದು ಉಲ್ಲೇಖಿಸದ ಮಾತ್ರಕ್ಕೆ ಅವರಲ್ಲಿ ಜ್ಞಾನಪ್ರಕರ್ಷದ ಹ್ರಾಸ ಕಂಡುಬಂದಿಲ್ಲ. ಈ ಎಲ್ಲ ಜ್ಞಾನಿಗಳು ಶ್ರೀಮನ್ಮೂಲ–ರಘುಪತಿಯನ್ನು ಮನಸಾ ಸ್ತೋತ್ರ ಮಾಡಿರುವ ಸಾಧ್ಯತೆಯನ್ನು ಊಹಿಸುವು–ದಾದರೂ ಉಭಯತಾಪಿ ಸಮಾನ.

ಹೀಗಿರುವಾಗ ಸ.ಸೀ.ಮೂ. ಲೇಖಕರ **'ಉತ್ತರಾದಿಮಠದಲ್ಲೇ ಸೀತಾಸಹಿತ ಮೂಲರಾಮ, ದಿಗ್ವಿಜಯ ರಾಮಾದಿ ಪ್ರತಿಮೆಗಳ ಪೂಜೆ ಅವಿಚ್ಛಿನ್ನವಾಗಿ ನಡೆದು ಬರುತ್ತಿರುವುದು ಸ್ಪಷ್ಟವಾಗುತ್ತದೆ.'** ಎಂಬ ಮಾತುಗಳು ನಿರಾಧಾರವಾಗಿವೆ ಮತ್ತು ಸತ್ಯಕ್ಕೆ ದೂರವಾಗಿವೆ.

'ಒಂದೊ

ಐಚಿಣಚಿಣ ತುಜಜಶ ್ರಶಣ ಶಜಿ ್ಟಜಿಥಿಥಿ ಯಡಿಟ ಜಿಣಠಿ:// ಣಟಠಿಶಜುಟ:ಥಿಚ್ಚಶಶಶಶಶಶಟಜ@ಜಿಣಠಿ.ಟಜಟಛಜಢಿ.ಟಥಿಛಿಥಿ.ಛಿಶ.ಣಇ/ ್ಜಟಜಿಜಥಣಡಿಚಿಛಿಣ.ಜಥಜ

ಮ್ಮೆ ಕೃತ್ರಿಮ ಪ್ರತಿಮೆಗಳನ್ನು ಶ್ರೀಮೂಲರಾಮ, ಶ್ರೀದಿಗ್ವಿಜಯ– ರಾಮ ಎಂದು ಅನ್ಯಥಾ ತಿಳಿದು ಉಪಾಸನೆ ಮಾಡಿದ್ದರೆ ಶ್ರೀವಿಜಯೀಂದ್ರ–ತೀರ್ಥರು ಚತುರಧಿಕಶತ ಉದ್ಗ್ರಂಥಗಳನ್ನು ರಚಿಸಲು ಸಾಧ್ಯವಾದೀತೇ? ಸತ್ಯ ಧರ್ಮರತರಾದ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು ಕೃತ್ರಿಮ ಪ್ರತಿಮೆ–ಗಳನ್ನು ಮೂಲರಾಮ, ದಿಗ್ವಿಜಯರಾಮ ಎಂದು ಅನ್ಯಥಾ ತಿಳಿದು ಉಪಾಸನೆ ಮಾಡಿದ್ದರೆ ಪರಿಮಳಾದಿ ಗ್ರಂಥಗಳನ್ನು ರಚಿಸಲು ಹಾಗು 'ತವ ಸಂಕೀರ್ತನಂ ವೇದ ಶಾಸ್ತ್ರಾರ್ಥ ಜ್ಞಾನ ಸಿದ್ಧಯೇ' ಎಂದು ಅಶೇಷ ಭಕ್ತವೃಂದವು ಉಪಾಸಿಸಲು ಸಾಧ್ಯವಾಗುತ್ತಿತ್ತೇ?' ಎಂದಿಗೂ ಇಲ್ಲ.

ಹರಿದಾಸವಾಙ್ಮಯ

ಶ್ರೀಪುರಂದರದಾಸರ ಕೃತಿ – ವಿಮರ್ಶೆ

'ಸ.ಸೀ.ಮೂ. ಪು : ೧೯ರಲ್ಲಿ **'ಶ್ರೀಪುರಂದರದಾಸರ ಪುಷ್ಟಿ'** ಎಂಬ ಶೀರ್ಷಿಕೆ–ಯಡಿಯಲ್ಲಿ' ಶ್ರೀರಘುನಾಥರು ಶ್ರೀಮೂಲರಾಮನ್ನು ಪೂಜೆ ಮಾಡುವುದನ್ನು ವರ್ಣಿಸಿರುವ ಶ್ರೀಪುರಂದರದಾಸರ ಕೃತಿ ಎಂದು ಹೇಳಿ 'ಮಧ್ವರಾಯರ ದೇವತಾ–ರ್ಚನೆಯ' ಎಂಬ ಕೃತಿಯನ್ನು ಕೊಟ್ಟಿದ್ದಾರೆ. ಆದರೆ ಅದೇ ಶ್ರೀಪುರಂದರದಾಸರು ಶ್ರೀಸುರೇಂದ್ರತೀರ್ಥರು ಪೂಜೆಮಾಡುತ್ತಿರುವುದನ್ನೂ ವರ್ಣಿಸಿದ್ದಾರೆ (ಇಂದಿನ ದಿನವು ಸುದಿನವಾಯಿತು....). ಈ ಎರಡು ಪದಗಳಲ್ಲಿ ಯಾವುದಾದರು ಒಂದು ಕೃತಿ ಮಾತ್ರ ನಿಜವಾಗಿರಬೇಕು, ಮತ್ತೊಂದು ಪ್ರಕ್ಷಿಪ್ತವಾಗಿರಬೇಕಲ್ಲವೇ?

ಶ್ರೀರಘುನಾಥರ ಮೇಲೆ ರಚಿಸಿರುವ ಕೃತಿಯಲ್ಲಿ –

೧. ಈ ಪದದಲ್ಲಿ ಕಡೆಯ ನುಡಿಯಲ್ಲಿ ದ್ವಿತೀಯಾಕ್ಷರ ಪ್ರಾಸವಿಲ್ಲ.

೨. ೨೮ ಮೂರ್ತಿಗಳ ಲೆಕ್ಕದಲ್ಲಿ ಮೂರ್ತಿಗಳಲ್ಲದ ಅಭಿಷೇಕಶಂಖ, ಮುದ್ರೆ, ಅಕ್ಷಯಪಾತ್ರೆ ಮತ್ತು ಬಾಣ ಮುಂತಾದ ಉಪಕರಣಗಳನ್ನು ಸೇರಿಸಿ–ರುವುದು ಉಚಿತವಲ್ಲ.

೩. ಶ್ರೀರಘುನಾಥರ ಕಾಲ ಹಾಗೂ ಶ್ರೀಪುರಂದರದಾಸರ ಕಾಲ ಹೊಂದು–ವುದಿಲ್ಲ.

- ಸತ್ಕಥಾ ಪ್ರಕಾರ ಶ್ರೀರಘುನಾಥರ ಕಾಲ ಕ್ರಿ.ಶ. ೧೪೪೪–೧೫೦೩.
- 'ಮಿಸ್ಟಿಕ್ ಟೀಚಿಂಗ್ಸ್ ಆಫ್ ಹರಿದಾಸಾಸ್ ಆಫ್ ಕರ್ನಾಟಕ ' ಎಂಬ ಪುಸ್ತಕದ ಪ್ರಕಾರ, ಶ್ರೀಪುರಂದರದಾಸರ ಕಾಲ ಕ್ರಿ.ಶ. ೧೪೮೬ ೧೫೫೬.
- ಶ್ರೀವ್ಯಾಸರಾಜರ ಕಾಲ (ಶ್ರೀವ್ಯಾಸಯೋಗಿಚರಿತೆ ಪ್ರಕಾರ) ಕ್ರಿ.ಶ. ೧೪೪೬–೧೫೩೯.
- ಶ್ರೀಪುರಂದರದಾಸರು ದಾಸದೀಕ್ಷೆ ಸ್ವೀಕರಿಸಿದ್ದೇ ಕ್ರಿ.ಶ. ೧೫೧೪ರಲ್ಲಿ, ಆ ಸಮಯಕ್ಕಾಗಲೇ ಶ್ರೀರಘುನಾಥತೀರ್ಥರು ವೃಂದಾವನಸ್ಥರಾಗಿದ್ದರು.

ಉಪಾಸನೆ ಮಾಡಿದ್ದರೆ ಶ್ರೀಸತ್ಯವ್ರತರಿಗೆ ಸುಧಾಗ್ರಂಥಕ್ಕೆ ಟಿಪ್ಪಣಿ ರಚಿಸಲು ಸಾಧ್ಯವಾಗುತ್ತಿತ್ತೇ?" ಎಂಬ ಆಕ್ಷೇಪವನ್ನು ಎತ್ತಲಾಗಿದೆ.

ಅಲ್ಲಿಯೇ, ಶ್ರೀಸತ್ಯನಾಥತೀರ್ಥರು ತಮ್ಮ **'ಅಭಿನವ ಚಂದ್ರಿಕಾ'** ಗ್ರಂಥಾರಂಭದಲ್ಲಿ ಮೂಲರಾಮನನ್ನು ನಮಸ್ಕರಿಸಿರುವುದನ್ನು ಗುರುತಿಸಿದ್ದಾರೆ. ಅಷ್ಟಕ್ಕೇ ನಿಲ್ಲದೆ **"ಇದರಿಂದ ಉತ್ತರಾದಿಮಠದಲ್ಲೇ ಸೀತಾಸಹಿತ ಮೂಲರಾಮ, ದಿಗ್ವಿಜಯರಾಮಾದಿ ಪ್ರತಿಮೆಗಳ ಪೂಜೆ ಅವಿಚ್ಛಿನ್ನವಾಗಿ ನಡೆದುಬರುತ್ತಿರುವುದು ಸ್ಪಷ್ಟವಾಗುತ್ತದೆ. ಪರಂಪರಾಗತವಾದ ಇತರ ಪೀಠಾಧಿಪತಿಗಳಲ್ಲಿ ಯಾರೂ ಈ ರೀತಿಯಲ್ಲಿ ಮೂಲರಾಮ, ದಿಗ್ವಿಜಯರಾಮರ ಹೆಸರಿನಿಂದ ಟಿಪ್ಪಣೀ ಗ್ರಂಥಗಳಲ್ಲಿ ಮಂಗಳಾಚರಣೆ ಮಾಡದಿರುವುದು ಗಮನಾರ್ಹ"** ಎಂದು ದುಡುಕಿನ ನಿರ್ಣಯವನ್ನು ಮಂಡಿಸಿದ್ದಾರೆ.

ಈ ಬಗ್ಗೆ ನಮ್ಮ ಪ್ರತಿಕ್ರಿಯೆ :

೧. ಟೀಕಾ–ಟಿಪ್ಪಣಿಗಳ ಆದಿಯಲ್ಲಿ 'ಮೂಲರಾಮ'ನೆಂದು ಹೆಸರಿಸಿ, ನಮಸ್ಕರಿಸಿದರೆ ಮಾತ್ರ ಆ ಮಠದಲ್ಲಿ ಮೂಲರಾಮನ ಅಸ್ತಿತ್ವವನ್ನು ಒಪ್ಪಬೇಕೆಂಬ ನಿಯಮವೇನಿಲ್ಲ.

೨. ಕಳಿಂಗದೇಶದಲ್ಲಿ ಮೂಲರಾಮನ ಇರುವಿಕೆಯನ್ನು ತಮ್ಮ ಸರ್ವಜ್ಞತ್ವದಿಂದ ತಿಳಿದು ತರಿಸಿ, ಪೂಜಿಸಿದ ಶ್ರೀಮದಾಚಾರ್ಯರು ಯಾವುದೇ ಗ್ರಂಥದಲ್ಲಿ 'ಮೂಲರಾಮ' ಎಂಬ ಪದವನ್ನು ಒಮ್ಮೆಯಾದರೂ ಬಳಸಿರುವರೇ?

೩. ಪ್ರಥಮಬಾರಿಗೆ ಶ್ರೀಮದಾಚಾರ್ಯರಿಂದ ಮೂಲರಾಮನನ್ನು ಪಡೆದ ಪದ್ಮನಾಭತೀರ್ಥರು ಯಾವುದೇ ಗ್ರಂಥದಲ್ಲಿ 'ಮೂಲರಾಮ' ಎಂಬ ಪದವನ್ನು ಒಮ್ಮೆಯಾದರೂ ಬಳಸಿರುವರೇ?

೪. ಶ್ರೀಮೂಲರಾಮನನ್ನು ಕಳಿಂಗದೇಶದಿಂದ ತಂದು ಶ್ರೀಮದಾಚಾರ್ಯರಿಗೆ ಅರ್ಪಿಸಿ ಮಂದೆ ಶ್ರೀಪದ್ಮನಾಭತೀರ್ಥರಿಂದ ಪಡೆದು ಅರ್ಚಿಸಿ ಶ್ರೀಮಾಧವತೀರ್ಥರಿಗೆ ಹಸ್ತಾಂತರಿಸಿ,

"ಸಸೀತಾಮೂಲರಾಮಾರ್ಚಾ ಕೋಶೇಗಜಪತೇಸ್ಥಿತಾ ।
ಯೇನಾನೀತಾ ನಮಸ್ತಸ್ಮೈ ಶ್ರೀಮನ್ನೃಹರಿಭಿಕ್ಷವೇ ॥"

ಎಂಬ ಕೀರ್ತಿಭಾಜನರಾದ ಶ್ರೀನರಹರಿತೀರ್ಥರಾದರೂ ತಮ್ಮ ಯಾವುದೇ ಗ್ರಂಥದಲ್ಲಿ 'ಮೂಲರಾಮ' ಎಂಬ ಪದವನ್ನು ಒಮ್ಮೆಯಾದರೂ ಬಳಸಿರುವರೇ?

೫. ಸರ್ವಜ್ಞಕಲ್ಪರಾದ, ಮಾಧ್ವಸಿದ್ಧಾಂತಸೇನಾನಿಯಾದ, ಶ್ರೀಮಟ್ಟೀಕಾಚಾರ್ಯರೆಂದೇ ಪ್ರಸಿದ್ಧರಾದ ಶ್ರೀಮಜ್ಜಯತೀರ್ಥರೂ ಸಹ ತಮ್ಮ ಟೀಕಾ ಗ್ರಂಥಗಳ ಆದ್ಯಂತಗಳಲ್ಲಿ ಒಮ್ಮೆಯಾದರೂ ತಮ್ಮ ಉಪಾಸ್ಯಮೂರ್ತಿಯಾದ ಶ್ರೀಮೂಲರಾಮದೇವರನ್ನು ನಮಿಸದಿರುವುದು ಅತ್ಯಂತ ಆಶ್ಚರ್ಯವೆನಿಸುವುದು.

೬. ಸ್ವತಃ ಸತ್ಯವ್ರತರು ಮತ್ತು ಸತ್ಯನಾಥರ ಹಾಗೂ ಶ್ರೀಭಾವಬೋಧಕಾರರೇ ಮೊದಲಾದ ಜ್ಞಾನಿಗಳು ಯಾವುದೇ ಗ್ರಂಥದಲ್ಲಿ 'ಮೂಲ ರಾಮ' ಎಂಬ ಪದವನ್ನು ಒಮ್ಮೆಯಾದರೂ ಬಳಸಿರುವರೇ?

ಮೇಲಿನ ಆರೂ ಪ್ರಶ್ನೆಗಳಿಗೆ **'ಇಲ್ಲ'** ಎಂಬುದೇ ಉತ್ತರವಾಗಿದೆ. ವಸ್ತುಸ್ಥಿತಿ ಹೀಗಿರುವಾಗ ಶ್ರೀಮದಾಚಾರ್ಯರು, ಶ್ರೀಪದ್ಮನಾಭತೀರ್ಥರು, ಶ್ರೀನರಹರಿತೀರ್ಥರು, ಶ್ರೀಮಜ್ಜಯತೀರ್ಥರೂ ಶ್ರೀಮೂಲರಾಮನನ್ನು ಪೂಜಿಸಲಿಲ್ಲವೆಂದು ಅರ್ಥವೇ? ಖಂಡಿತ ಹಾಗೆ ಅರ್ಥ ಮಾಡಬಾರದು.

ಶ್ರೀಮದಾಚಾರ್ಯ ವಿರಚಿತ ಸರ್ವಮೂಲಗ್ರಂಥಗಳ ಆದ್ಯಂತಗಳಲ್ಲಿ ನಾರಾಯಣ, ವಿಷ್ಣು, ಹರಿ, ನೃಸಿಂಹ, ವಾಮನಾದಿ ಭಗವದ್ರೂಪಗಳಿಗೆ ನಮನ ಉಕ್ತವಾಗಿದೆಯೇ ವಿನಃ ಅರ್ಚಾಪ್ರತಿಮೆಗಳನ್ನು ನಮಿಸುವ ಕ್ರಮ ಯಾವುದೇ ಮಾಧ್ವ ಜ್ಞಾನಿಪರಂಪರೆಯಲ್ಲಿ ಕಂಡುಬಂದಿರುವುದಿಲ್ಲ. **ಶ್ರೀಸರ್ವಜ್ಞಮಾರ್ಗವನ್ನು ಅತಿಕ್ರಮಿಸಬಾರದೆಂಬ ವಿಶಿಷ್ಟ ವಿನಯದಿಂದಲೇ** ಶ್ರೀಪದ್ಮನಾಭತೀರ್ಥರು, ಶ್ರೀನರಹರಿತೀರ್ಥರು, ಶ್ರೀಮಜ್ಜಯತೀಂದ್ರರು, ಶ್ರೀವಾದೀಂದ್ರರು, ಶ್ರೀಧೀರೇಂದ್ರರು ಮೊದಲಾದ ಜ್ಞಾನಿಗಳು ತಮ್ಮ ಎಲ್ಲ ಗ್ರಂಥಗಳಲ್ಲಿ, ಮಧ್ವರು ತೋರಿದ ಮಾರ್ಗವನ್ನು ಅನುಸರಿಸಿ ನಾರಾಯಣಾದಿ ಭಗವದ್ರೂಪಗಳಿಗೆ ನಮಸ್ಕರಿಸಿದರು. ಇದು ಅಪರಾಧವೇ? ನಮ್ಮ ಪ್ರಕಾರ **ಶ್ರೀಮದಾಚಾರ್ಯರ ಅನುಸರಣೆ ಭೂಷಣವೇ ಹೊರತು ದೂಷಣವಲ್ಲ.** 'ಮೂಲರಾಮ' ಎಂಬ ಪದವನ್ನು ಮಂಗಳಾಚರಣೆ–

೬. ಬ್ರಹ್ಮ – ಭಾವಿಬ್ರಹ್ಮ ಕರಾರ್ಚಿತ ಪ್ರತಿಮೆಗಳಿಗೆ ಒಂದು ಪರಂಪರೆಯ ಮಠದಲ್ಲಿ ಉತ್ತಮೋತ್ತಮ ಸ್ಥಾನವಿರುವುದೇ ಒಂದು ದೊಡ್ಡಮಹಾತ್ಮೆ ಎಂದಾದರೆ, ಅದೇ ಪರಂಪರೆಯ ಪೂಜಾಪೀಠದ ಕೆಳಸಾಲಿನಲ್ಲಿ 'ಬ್ರಹ್ಮ–ನಿಗೂ ಬ್ರಹ್ಮನಾದ ಶ್ರೀವೇದವ್ಯಾಸರಿಂದಲೇ ಕೊಡಲ್ಪಟ್ಟ ಭಾವಿಬ್ರಹ್ಮ (ಮಧ್ವ) ಕರಾರ್ಚಿತ ವ್ಯಾಸಮುಷ್ಟಿಗಳ' ಸಂಪುಟವನ್ನಡುವುದಿಲ್ಲವೇ? **'ಕೆಳಭಾಗದಲ್ಲಿ ವಂಶರಾಮ, ಪ್ರಸನ್ನವಿಠಲ, ವೇದವ್ಯಾಸಾದಿ ಪ್ರತಿಮೆಗಳನ್ನು ಪೂಜಿಸು–ವುದನ್ನು ಕಾಣಬಹುದಾಗಿದೆ'** ಎಂದು ಅವರೇ ಹೇಳಿಕೊಂಡಿದ್ದಾರೆ. (ಸ.ಸೀ.ಮೂ. ಪು: ೨೭)

೭. ಪೂಜಾಪೀಠದಲ್ಲಿ ಮೂರು ಅಂತಸ್ತುಗಳನ್ನೇರ್ಪಡಿಸಿ ಅವುಗಳನ್ನು ಕೆಳಗಿನಿಂದ ಕ್ರಮವಾಗಿ ಅನಂತಾಸನ, ಶ್ವೇತದ್ವೀಪ, ವೈಕುಂಠಗಳೆಂದು ಚಿಂತಿಸಿ ತ್ರಿಧಾಮಸ್ಥಿತ ಭಗವದ್ರೂಪಗಳಲ್ಲಿ ಯಾವುದೇ ಭೇದವನ್ನು ಚಿಂತಿಸದೆ, ಅನಂತ ಭಗವದ್ರೂಪಗಳಲ್ಲಿ ಅಭೇದ ಮತ್ತು ಐಕ್ಯವನ್ನೇ ಚಿಂತಿಸಿ ಪೂಜಿಸುವುದು ಶ್ರೀಮಾಧ್ವ ಸಂಪ್ರದಾಯದ ಸಾರಸರ್ವಸ್ವ–ವಲ್ಲವೇ?

೮. ವೇದಾಂತಗುರುಸೋದರಾದ ಶ್ರೀವಿಷ್ಣುತೀರ್ಥಾಚಾರ್ಯರ ಪರಂಪರೆಯ ಸೋದಾ ವಾದಿರಾಜಮಠದಲ್ಲಿ, ಭಾವಿಬ್ರಹ್ಮರಾದ ಭೀಮಸೇನದೇವ–ಕರಾರ್ಚಿತ ನೃಸಿಂಹದೇವರನ್ನು ಉನ್ನತಸ್ತರದಲ್ಲೂ, ಮಧ್ವಕರಾರ್ಚಿತ ಭೂವರಾಹದೇವರು ಹಾಗೂ ಭಾವಿಸಮೀರ ಶ್ರೀವಾದಿರಾಜಕರಾರ್ಚಿತ ಹಯಗ್ರೀವದೇವರನ್ನು ಮಧ್ಯಸ್ತರದಲ್ಲೂ ಮಂಡಿಸಿ, ಭೂವರಾಹ – ಹಯಗ್ರೀವದೇವರ ಮಧ್ಯೆ, ವ್ಯಾಸಮುಷ್ಟಿಯನ್ನು ಸ್ಥಾಪಿಸಿ ಪೂಜಿಸುವ ಶಿಷ್ಟಾಚಾರವು ಪ್ರಾಚೀನವೂ ಸಮೀಚೀನವೂ ಆಗಿದೆ.

೯. ಅದೇ ವಿಷ್ಣುತೀರ್ಥಾಚಾರ್ಯರ ಪ್ರಿಯಶಿಷ್ಯರಾದ ಶ್ರೀಅನಿರುದ್ಧತೀರ್ಥರ ಪರಂಪರೆಯಾದ ಕುಕ್ಕೆ ಸುಬ್ರಹ್ಮಣ್ಯ ಮಠದಲ್ಲೂ ಮಧ್ವಕರಾರ್ಚಿತ ನೃಸಿಂಹ – ವಿಠ್ಠಲ – ವೇದವ್ಯಾಸಸಂಪುಟಗಳನ್ನು ಕ್ರಮವಾಗಿ ೧–೨–೩ನೇ ಸ್ತರದಲ್ಲಿ ಮಂಡಿಸಿ ಪೂಜಿಸುವುದು ಸಹ ಪ್ರಾಚೀನ ಹಾಗೂ ಸಮೀಚೀನ ಕ್ರಮವೇ ಆಗಿದೆ.

೧೦. ಆದರಂತೆ ಶ್ರೀರಾಯರ ಪರಂಪರೆಯಲ್ಲೂ, ಶ್ವೇತದ್ವೀಪ ಸ್ಥಿತನಾದ ಮುಕ್ತಿಪ್ರದಾಯಕ ವಾಸುದೇವನಿಂದ ಹೊರಟದ್ದೇ ಶ್ರೀರಾಮರೂಪ–ವಾದ್ದರಿಂದ, ಚತುರ್ಯುಗಮೂರ್ತಿ ಬ್ರಹ್ಮಕರಾರ್ಚಿತ ಶ್ರೀಮೂಲರಾಮ ದೇವರನ್ನು ವಾಸುದೇವರೂಪದಿಂದ ಅಭಿನ್ನನೆಂದು ಚಿಂತಿಸಿ, ಶ್ವೇತದ್ವೀಪ ಸ್ಥಾನೀಯವಾದ ಮಧ್ಯಸ್ತರದಲ್ಲಿ ಮಂಡಿಸಿ; ಎಡಬಲಗಳಲ್ಲಿ ತನ್ನದೇ ಆದ ಜಯರಾಮ – ದಿಗ್ವಿಜಯರಾಮ ರೂಪಗಳಿಂದಲೂ, ಸಮೀಪದಲ್ಲಿ ವ್ಯಾಸಮುಷ್ಟಿ ಹಾಗೂ ಸಂತಾನಗೋಪಾಲಕೃಷ್ಣದೇವರಿಂದ ಸಮಾವೃತನಾಗಿ, ಮೇಲೆ ವೈಕುಂಠಸ್ಥಾನದಲ್ಲಿ ನಾರಾಯಣ ಹಾಗೂ ಕೆಳಗೆ ಅನಂತಾಸನ ಸ್ಥಾನದಲ್ಲಿ ಅನಂತಾಸನನಾದ ವೈಕುಂಠವಾಸುದೇವ ಮತ್ತು ಇತರ ತನ್ನದೇ ಆದ ಮೂರ್ತಿಗಳಿಂದ ಸುತ್ತುವರಿಯಲ್ಪಟ್ಟ **'ಸ್ವಮೂರ್ತಿಗಣ–ಮಧ್ಯಗ'**ನೆಂದು ಧ್ಯಾನಿಸಿ ಪೂಜಿಸುವ ಕ್ರಮವೂ ಸಹ ಪ್ರಾಚೀನ ಸಮೀಚೀನ ಪದ್ಧತಿಯೇ ಆಗಿದೆ.

೧೧. ಶ್ರೀವಿದ್ಯಾಧಿರಾಜರ ಶಿಷ್ಯರೇ ಆದ ಶ್ರೀರಾಜೇಂದ್ರತೀರ್ಥ ಪರಂಪರೆಯ ಶ್ರೀವ್ಯಾಸರಾಜಮಠದಲ್ಲಿ ಶ್ರೀನೀಲಾದೇವಿಕರಾರ್ಚಿತ, ವೇದವ್ಯಾಸಪ್ರದತ್ತ, ಶ್ರೀಮದಾಚಾರ್ಯಕರಾರ್ಚಿತ ಶ್ರೀಮೂಲಗೋಪಾಲಕೃಷ್ಣದೇವರನ್ನು ಮೊದಲಸ್ತರದಲ್ಲೂ, ಶ್ರೀಮದಚಾರ್ಯಕರಾರ್ಚಿತವೇ ಆದ ಶ್ರೀಮೂಲ–ಪಟ್ಟಾಭಿರಾಮದೇವರು ಹಾಗೂ ವ್ಯಾಸಮುಷ್ಟಿಯನ್ನು ಪೀಠದ ಮಧ್ಯಸ್ತರ–ದಲ್ಲೂ ಮಂಡಿಸಿ ಪೂಜಿಸುವುದೂ ಸಹ ಪ್ರಾಚೀನ ಹಾಗೂ ಸಮೀಚೀನ ಕ್ರಮವೇ ಆಗಿದೆ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ, **"ಬ್ರಹ್ಮಕರಾರ್ಚಿತ ಹಾಗೂ ಭಾವಿ ಬ್ರಹ್ಮಕರಾರ್ಚಿತ ಪ್ರತಿಮೆಗಳಿಗೆ ಉನ್ನತೋತ್ತಮ ಸ್ಥಾನವಿರುವುದು ಗಮನಾರ್ಹ"** ಎಂದು ಹೇಳಿಕೊಂಡದ್ದರಲ್ಲಿ ಸ್ವಾರಸ್ಯವೇನೂ ಕಾಣಲಿಲ್ಲ.

ಟಿಪ್ಪಣಿಗಳ ಆದಿಯಲ್ಲಿ ಶ್ರೀಮೂಲರಾಮನಿಗೆ ನಮನ

ಸ.ಸೀ.ಮೂ. ಪು: ೨೧ರಲ್ಲಿ, ಶ್ರೀಸತ್ಯವ್ರತರು ನ್ಯಾಯಸುಧಾಟಿಪ್ಪಣಿಯ ಮಂಗಳಾಚರಣದಲ್ಲಿ ಶ್ರೀಮೂಲರಾಮನನ್ನು ನಮಸ್ಕರಿಸಿರುವುದನ್ನು ಪ್ರಸ್ತಾಪಿಸುತ್ತಾ **"ಕೃತ್ರಿಮ ಪ್ರತಿಮೆಗಳನ್ನು ಮೂಲರಾಮ, ದಿಗ್ವಿಜಯರಾಮ ಎಂದು ಅನ್ಯಥಾ ತಿಳಿದು**

೬. ಸ್ವಯಂವ್ಯಕ್ತ ಮೂಲರಾಮಪ್ರತಿಮೆಯಲ್ಲಿ ಮಾತ್ರ ನಿತ್ಯಸನ್ನಿಧಾನವೆಂದಾದರೆ, ಎಂಟು ಸ್ವಯಂವ್ಯಕ್ತಕ್ಷೇತ್ರಸ್ಥ ಮೂರ್ತಿಗಳ ವೈಲಕ್ಷಣ್ಯವೇನು? ಶ್ರೀರಂಗನಾಥನೂ ಬ್ರಹ್ಮಕರಾರ್ಚಿತ ಮತ್ತು ಸ್ವತಃ ರಾಮಕರಾರ್ಚಿತನಾದ್ದರಿಂದ ಮತ್ತು ಇಕ್ಷ್ವಾಕುಕುಲದೈವನಾದ್ದರಿಂದ; 'ಶ್ರೀರಂಗನಾಥ(ಪರವಾಸುದೇವ)' ಮತ್ತು 'ಮೂಲರಾಮ' ಪ್ರತಿಮೆಗಳಲ್ಲಿ ಭಗವತ್ಸನ್ನಿಧಾನದ ವ್ಯತ್ಯಾಸವನ್ನು ಚಿಂತಿಸಬೇಕೆ?

೭. ಸ್ವಯಂವ್ಯಕ್ತಪ್ರತಿಮೆಯಲ್ಲಿ ಮಾತ್ರ 'ನಿತ್ಯಸನ್ನಿಧಾನ', 'ಕಲಿವ್ಯಾಪ್ತಿರಾಹಿತ್ಯತ್ವ' ಮಹಿಮೆಗಳನ್ನು ಒಪ್ಪುವುದಾದರೆ, ತಮ್ಮ ಪರಂಪರೆಯ ಮೂರ್ತಿಗಳು ಮಾತ್ರ ಸ್ವಯಂವ್ಯಕ್ತವೆಂದು ಹೇಳಿಕೊಂಡರೆ, ಶ್ರೀಮದಾಚಾರ್ಯಕರಾರ್ಚಿತ ಪ್ರತಿಮೆಗಳಾದ ಶ್ರೀವ್ಯಾಸರಾಜಮಠದ ಶ್ರೀಮೂಲಗೋಪಾಲಕೃಷ್ಣದೇವರು, ಶ್ರೀಮೂಲಪಟ್ಟಾಭಿರಾಮದೇವರು, ಶ್ರೀಶ್ರೀಪಾದರಾಜಮಠದ ಶ್ರೀಗೋಪೀನಾಥದೇವರು, ಶ್ರೀಭೀಮಸೇತುಮುನಿವೃಂದಮಠದ ಶ್ರೀಸನಕಾದಿಮುನಿಪೂಜಿತ ರಾಮದೇವರು, ಉಡುಪಿ ಶ್ರೀಪಲಿಮಾರುಮಠದ ಶ್ರೀಕೋದಂಡರಾಮದೇವರು, ಶ್ರೀಅದಮಾರುಮಠದ ಶ್ರೀಚತುಭುಜಕಾಲೀಯಮರ್ದನಕೃಷ್ಣದೇವರು, ಶ್ರೀಕೃಷ್ಣಾಪುರಮಠದ ದ್ವಿಭುಜಕಾಲೀಯಮರ್ದನಕೃಷ್ಣ–ನೃಸಿಂಹದೇವರು, ಶ್ರೀಪುತ್ತಿಗೆ ಮಠದ ಶ್ರೀಉಪೇಂದ್ರವಿಠ್ಠಲದೇವರು, ಶ್ರೀಶಿರೂರುಮಠದ ಶ್ರೀವಾಮನವಿಠ್ಠಲದೇವರು, ಶ್ರೀಸೋದೆ ವಾದಿರಾಜಮಠದ ಶ್ರೀಭೂವರಾಹದೇವರು, ಶ್ರೀಕಾಣಿಯೂರುಮಠದ ಶ್ರೀನೃಸಿಂಹದೇವರು, ಶ್ರೀಪೇಜಾವರಮಠದ ಶ್ರೀಅಧೋಕ್ಷಜವಿಠ್ಠಲದೇವರು, ಕೂಡ್ಲಿಶ್ರೀಮದಾರ್ಯಅಕ್ಷೋಭ್ಯತೀರ್ಥಮಠದ ಶ್ರೀವೈಕುಂಠರಾಮದೇವರು, ಮತ್ತು ಬಾಳಗಾರು ಶ್ರೀಮದಾರ್ಯಅಕ್ಷೋಭ್ಯತೀರ್ಥ ಮಠದ ಶ್ರೀರಾಮದೇವರು, ಭಂಡಾರಕೆರೆಮಠದ ಶ್ರೀರಾಮದೇವರು, ತಂಬಿಹಳ್ಳಿ ಶ್ರೀಮಾಧವತೀರ್ಥಮಠದ ಶ್ರೀವೀರರಾಮದೇವರು, ಕುಕ್ಕೆ ಸುಬ್ರಹ್ಮಣ್ಯಮಠದ ಶ್ರೀವೇದವ್ಯಾಸಸಂಪುಟ–ನರಸಿಂಹ–ವಿಠ್ಠಲದೇವರು ಹಾಗೂ ಇತರ ಎಲ್ಲಾ ಮಾಧ್ವಮಠಗಳಲ್ಲಿರುವ ಶ್ರೀಮದಾಚಾರ್ಯ ಕರಾರ್ಚಿತ ಪ್ರತಿಮೆಗಳಲ್ಲೂ 'ನಿತ್ಯಸನ್ನಿಧಾನ' ಮತ್ತು 'ಕಲಿವ್ಯಾಪ್ತಿರಾಹಿತ್ಯತ್ವ'ವನ್ನು ಒಪ್ಪಲೇಬೇಕಲ್ಲವೆ?

'ಪೀಠದಲ್ಲಿ ಪ್ರತಿಮೆಯ ಸ್ಥಾನ' – ತಾತ್ವಿಕ ಜಿಜ್ಞಾಸೆ

ಸ.ಸೀ.ಮೂ. ಪು: ೨೭ರಲ್ಲಿ ತಮ್ಮ ಮಠದಲ್ಲಿ **"ಬ್ರಹ್ಮಕರಾರ್ಚಿತ ಹಾಗೂ ಭಾವಿಬ್ರಹ್ಮ ಕರಾರ್ಚಿತ ಪ್ರತಿಮೆಗಳಿಗೆ ಉನ್ನತೋತ್ತಮ ಸ್ಥಾನವಿರುವುದು ಗಮನಾರ್ಹ"** ಎನ್ನಲಾಗಿದೆ. ದಪ್ಪ ಅಕ್ಷರಗಳಲ್ಲಿ ಮುದ್ರಿಸಿರುವ ಈ ವಾಕ್ಯದಲ್ಲಿ ವಿಶೇಷ ಸ್ವಾರಸ್ಯವಿರಲೇಬೇಕಲ್ಲವೇ?

ಈ ಕುತೂಹಲದಿಂದ ಚರ್ಚಿಸ ಹೊರಟರೆ ಅನೇಕ ತಾತ್ವಿಕ ಸಮಸ್ಯೆಗಳು ಎದುರಾಗುತ್ತವೆ.

೧. ತಾರತಮ್ಯದ ಅತಿಸೂಕ್ಷ್ಮಗಳನ್ನು ಒಪ್ಪಿರುವ ಮಧ್ವಮತದಲ್ಲಿ, ಶ್ರೀವಾಯುದೇವರಿಗಿಂತ ಒಂದು ಕಲ್ಪಸಾಧನೆಯಲ್ಲಿ ಹಿರಿಯರಾಗಿರುವ ಬ್ರಹ್ಮದೇವರಿಂದ ಅರ್ಚಿತವಾದ ಪ್ರತಿಮೆಯಲ್ಲಿ ವಾಯು(ಮಧ್ವ)ಕರಾರ್ಚಿತ ಪ್ರತಿಮೆಗಿಂತ ಸನ್ನಿಧಾನ ವಿಶೇಷವನ್ನು ಹೇಳದಿದ್ದರೆ ಹೇಗೆ?

೨. ಬ್ರಹ್ಮಸಮರೂ, ಬ್ರಹ್ಮಪದವಾಚ್ಯರೂ ಆದ ವಾಯು(ಮಧ್ವ)ಕರಾರ್ಚಿತ ಪ್ರತಿಮೆಗೂ, ಬ್ರಹ್ಮಕರಾರ್ಚಿತಪ್ರತಿಮೆಗೂ, ಭಗವತ್ಸನ್ನಿಧಾನ ವಿಷಯದಲ್ಲಿ ವ್ಯತ್ಯಾಸವನ್ನು ಹೇಳಲಾದೀತೆ?

೩. ಈ ಎರಡು ಪ್ರತಿಮೆಗಳಲ್ಲಿ, ಬ್ರಹ್ಮಕರಾರ್ಚಿತ ಪ್ರತಿಮೆಗೆ ಉನ್ನತೋನ್ನತ ಸ್ಥಾನವೋ? ಭಾವಿಬ್ರಹ್ಮಕರಾರ್ಚಿತ ಪ್ರತಿಮೆಗೆ ಉನ್ನತೋತ್ತಮ ಸ್ಥಾನವೋ?

೪. ಬ್ರಹ್ಮ – ಭಾವಿಬ್ರಹ್ಮಕರಾರ್ಚಿತ ಪ್ರತಿಮೆಗಳಿಗೆ ಸನ್ನಿಧಾನ ವ್ಯತ್ಯಾಸ ಹೇಳಲು ಸಾಧ್ಯವಿಲ್ಲವೆಂದಾದಲ್ಲಿ, ಇಂದು ಮಾಧ್ವರೆಂದು ಹೇಳಿಕೊಳ್ಳುವ ಎಲ್ಲ ಗುರುಪರಂಪರೆಗಳಲ್ಲಿ ಹಾಗೂ ಕೆಲವೇ ಗೃಹಸ್ಥಾಶ್ರಮಿ ಶಿಷ್ಯಮನೆತನಗಳಲ್ಲಿ ಕಂಗೊಳಿಸುತ್ತಿರುವ ಮಧ್ವಕರಾರ್ಚಿತ ಸರ್ವಪ್ರತಿಮೆಗಳಲ್ಲೂ ಸಮಾನ ಸಾನಿಧ್ಯವನ್ನು ಚಿಂತಿಸಿ ಗೌರವಿಸದಿದ್ದರೆ ಶ್ರೀಮದಾಚಾರ್ಯರ ದ್ರೋಹ ಘಟಿಸುವುದೆಂದಾಯಿತಲ್ಲವೆ?

೫. ಬ್ರಹ್ಮ – ಭಾವಿಬ್ರಹ್ಮಕರಾರ್ಚಿತ ಪ್ರತಿಮೆಗಳನ್ನು ಪೀಠಾಗ್ರದಲ್ಲಿಟ್ಟು ಪೂಜಿಸುವುದೇ ಶಾಸ್ತ್ರಗಳ ವಿಧಿಯೆಂದೂ, ಒಂದೊಮ್ಮೆ ಆ ಪ್ರತಿಮೆಗಳನ್ನು ಪೂಜಾ ಪೀಠದ ಎರಡನೆಯ ಅಥವಾ ಮೂರನೆಯ ಹಂತದಲ್ಲಿಡುವುದಾದರೆ ನಿಷೇಧವೆಂದೂ ಪ್ರಮಾಣಗಳಿವೆಯೇ?

ಮೂಲರಾಮಪ್ರತಿಮೆಯು ಸ್ವಯಂವ್ಯಕ್ತವೆ?

ವಾಸಿಷ್ಠರಾಮಾಯಣದ ಪ್ರಕಾರ ಶ್ರೀಮೂಲರಾಮಪ್ರತಿಮೆ ಸ್ವಯಂವ್ಯಕ್ತ–ವಾದುದು. ಇತರ ಆಕರಗಳ ಪ್ರಕಾರ ಬ್ರಹ್ಮದೇವರ ಆಜ್ಞೆಯಂತೆ ವಿಶ್ವಕರ್ಮ ನಿರ್ಮಿತವಾದುದು.

ಪ್ರಮಾಣಗಳು –

"ನರಹರಿ ತೀರ್ಥರ ಮಹಿಮೆ ಕೇಳಿರೋ ॥ ಪ ॥

ಕಾರ್ಯಸ್ಥ ಬ್ರಹ್ಮ ಮಾಡಿಸಿಕೊಡಲು

....

ಸೂರ್ಯವಂಶಕೆ ರಾಮಸೀತೆ ಬರಲು" ॥ ೧ ॥

– ಶ್ರೀಪುರಂದರದಾಸರು

"ಅರ್ಚಾತು ರಾಮಚಂದ್ರಸ್ಯ ನಿರ್ಮಿತಾ ವಿಶ್ವಕರ್ಮಣಾ।
ವೃತ್ತಪೀಠಾ ಲಂಬಕರ್ಣಾ ತ್ರಿವಕ್ರಾ ಸೀತಯಾ ಸಹ ॥ ೧೨ ॥

ತಾಮರ್ಚಯಿತ್ವಾ ವಿಧಿವತ್ ರಂಗನಾಥಾರ್ಚಯಾ ಸಹ।
ವಿಧಿರಿಕ್ಷ್ವಾಕವೇ ಪ್ರಾದಾತ್ ಅರ್ಚಯಾಮಾಸ ತೇ ಚ ಸಹ" ॥ ೧೩ ॥

– ಶ್ರೀವಾದೀಂದ್ರತೀರ್ಥರ **'ಅರ್ಚಾಗತಿಕ್ರಮ'**

[ಶ್ರೀಬ್ರಹ್ಮದೇವರ ಆದೇಶದಂತೆ ಸೀತಾಸಹಿತವಾದ, ದುಂಡು ಪೀಠದ, ಉದ್ದ ಕಿವಿಗಳ, ಮೂರು ಕಡೆ ಡೊಂಕಾಗಿರುವ ಮೂಲರಾಮದೇವರ ಪ್ರತಿಮೆಯು **ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿತು.** ಶ್ರೀಬ್ರಹ್ಮದೇವರು ಆ ಪ್ರತಿಮೆಗಳನ್ನು ಶ್ರೀರಂಗ–ನಾಥನ ಪ್ರತಿಮೆಯೊಂದಿಗೆ ವಿಧ್ಯುಕ್ತಪ್ರಕಾರವಾಗಿ ಪೂಜಿಸಿ ಇಕ್ವಾಕು ರಾಜನಿಗೆ ಅನುಗ್ರಹಿಸಿದರು.]

"ಮೂಲರಾಮನ ದಿವ್ಯಮೂರ್ತಿ ಅರ್ಚಿಸಲೆನ್ನ ॥ ಪ ॥

....

ಆದಿಯಲಿ ಅಜನಾಜ್ಞೆಯಿಂದ ದೇವರಬಡಿಗ್ಯ
ಆದರದಿಂದ ನಿರ್ಮಿಸಿದ ॥"

– ಶ್ರೀವಾದೀಂದ್ರತೀರ್ಥರು

"ಪೆರ್ಮೆಯಿಂದಲಿ ವಿಶ್ವಾಕರ್ಮನಿಂದಲಿ ಅಂದು।
ನಿರ್ಮಿತವಾಗಿದ್ದ ನಿರ್ಮಳವಾಗಿ ದ್ದ ನಿರ್ಮಳ ಶರೀರ ॥"

– ಶ್ರೀವಿಜಯದಾಸರು

"ರಾಮನ ನೋಡಿರೈ ನಿಮ್ಮಯ ಕಾಮಿತ ಬೇಡಿರೈ ॥ ಪ ॥

....

ಧಾತನನುಜ್ಞದಿ ದೇವತ್ವಷ್ಟ ನಿರ್ಮಿಸಿದ ಅಜಪೂಜಿಸಿದ।

.... ॥ ೧ ॥

– ಶ್ರೀಜಗನ್ನಾಥದಾಸರು

ಸ್ವಯಂವ್ಯಕ್ತವೆಂದರೇನು?

ಸ.ಸೀ.ಮೂ. ಪು : ೩೧ ರಲ್ಲಿ **'ಶ್ರೀಸತ್ಯಸಂಧತೀರ್ಥರು ತಮ್ಮ ಪೂರ್ವಾ–ಶ್ರಮದಲ್ಲಿ (ಶ್ರೀಹಾವೇರಿ ರಾಮಚಂದ್ರಾಚಾರ್ಯರು) ಗುರುಗಳಾದ ಶ್ರೀಸತ್ಯಬೋಧರು ಪೂಜಿಸುತ್ತಿದ್ದ ಮಹಾಸಂಸ್ಥಾನದ ೨೮ ಸ್ವಯಂವ್ಯಕ್ತ ಮೂರ್ತಿಗಳ ಸ್ತುತಿ ರಚಿಸಿದ್ದಾರೆ'** ಎನ್ನಲಾಗಿದೆ. ಇಲ್ಲಿ ಮತ್ತಷ್ಟು ಗೊಂದಲಗಳು ಎದುರಾಗುತ್ತವೆ.

೧. ಅಲ್ಲಿರುವ '೨೮ ಪ್ರತಿಮೆಗಳೂ' ಸ್ವಯಂವ್ಯಕ್ತವೇ?

೨. ಶ್ರೀಮೂಲರಾಮಪ್ರತಿಮೆಯೇ ಸ್ವಯಂವ್ಯಕ್ತವೋ ಅಥವಾ ಬ್ರಹ್ಮದೇವರ ಆಜ್ಞೆಯಂತೆ ವಿಶ್ವಕರ್ಮ ನಿರ್ಮಿತವೋ? ಎಂಬುದನ್ನು ನಿರ್ಣಯಿಸು–ವುದೇ ಸಮಸ್ಯೆಯಾಗಿರುವಾಗ; ಪ್ರತಿಮೆಗಳಲ್ಲದ 'ಬಲಮುರಿ ಶಂಖ', 'ಅಭಿಷೇಕ ಶಂಖ', 'ಬಾಣಗಳು', 'ಅಕ್ಷಯಪಾತ್ರೆ' ಇವೂ ಸ್ವಯಂವ್ಯಕ್ತಗಳೇ?

೩. ಉತ್ತರ 'ಹೌದು' ಎಂದಾದರೆ, ಪ್ರಮಾಣವೇನು?

೪. ಇಷ್ಟಕ್ಕೂ ಲೋಹಮಯಪ್ರತಿಮೆ 'ಸ್ವಯಂವ್ಯಕ್ತ' ಎಂದರೇನು?

೫. ಸ್ವತಃ ಸ್ತುತಿಕಾರರಾದ ಶ್ರೀಸತ್ಯಸಂಧರೇ 'ಸ್ವಯಂವ್ಯಕ್ತ'ವೆಂದು ಬರೆಯದೆ ಕೇವಲ 'ಅಷ್ಟಾವಿಂಶತಿ ಮೂರ್ತೀನಾಂ ಸ್ತುತಿಃ' ಎಂಬ ಶೀರ್ಷಿಕೆ ನೀಡಿ–ರುವಾಗ; ಸ.ಸೀ.ಮೂ. ಗ್ರಂಥಕಾರರು 'ಸ್ವಯಂವ್ಯಕ್ತ'ವೆಂದು ಭ್ರಮಿಸಲು ಕಾರಣವೇನು?

೧. ಎರಡೂ ಗ್ರಂಥದಲ್ಲಿ ಪಟ್ಟಿ ಮಾಡಿದ ಎಲ್ಲ ವಸ್ತುಗಳೂ ಪ್ರತಿಮೆಗಳೇ? ಕೆಲವು ಪ್ರತಿಮೆಗಳನ್ನು ಬಿಟ್ಟು ಉಳಿದವುಗಳು ಪೂಜಾಸಾಧನಗಳಲ್ಲವೇ? ಶ್ರೀಸತ್ಯಸಂಧರ ಕೃತಿಯ ಕೊನೆಗೆ ಹಾಗೂ ಪ್ರಾರಂಭಕ್ಕೆ 'ಅಷ್ಟಾವಿಂಶತಿ ಮೂರ್ತಿನಾಂ' ಎಂದು ಹೇಳಿರುವ ಔಚಿತ್ಯವೇನು? ಹಾಗಾದರೆ ಬಲಮುರಿಶಂಖ, ಅಭಿಷೇಕ ಶಂಖ, ಅಕ್ಷಯಪಾತ್ರೆ, ಬಾಣಗಳು ಇವು ಮೂರ್ತಿಗಳೇ? ಅಥವಾ ಪೂಜಾ ಸಾಮಗ್ರಿಗಳೇ? ಎಂದು ಜಿಜ್ಞಾಸುಗಳೇ ಚಿಂತಿಸಬೇಕು.

೨. ಶ್ರೀಸತ್ಯಸಂಧಕೃತವಾದ ಸಂಸ್ಕೃತದ ಈ ಸ್ತುತಿಯಲ್ಲಿ ಶ್ರೀಮಧ್ವಾಚಾರ್ಯ ಕರಾರ್ಚಿತ ಶ್ರೀದಿಗ್ವಿಜಯ ರಾಮನನ್ನು ಮೊದಲ ಶ್ಲೋಕದಲ್ಲಿ ಆದ್ಯತೆ ಕೊಟ್ಟು ಸ್ತುತಿಸಿ, ನಂತರ ಋಜೂತ್ತಮರಾದ, ಈ ಕಲ್ಪದಲ್ಲಿ ವಿರಜಾನದಿ ಸ್ನಾನ ಮಾಡಿ ಮಾಡಿಸಿ ಮುಕ್ತಿಗೆ ಹೋಗುವ ಶ್ರೀಚತುರ್ಮುಖ ಬ್ರಹ್ಮದೇವರ ಕರಾರ್ಚಿತ ಶ್ರೀಮೂಲರಾಮದೇವರ ಸ್ತುತಿಯನ್ನು ಎರಡನೆಯದನ್ನಾಗಿ ಏಕೆ ಮಾಡಿದ್ದಾರೆ? ಮತ್ತು ಈ ಎರಡಕ್ಕೂ 'ಪೂರ್ಣಧಿಯಾರ್ಚಿತಮ್' ಎಂದೇ ಏಕೆ ಕರೆದಿದ್ದಾರೆ? ಬ್ರಹ್ಮವಾಯುಗಳ ಒಂದು ಕಲ್ಪಸಾಧನೆಯ ವ್ಯತ್ಯಾಸದ ತಾರತಮ್ಯವನ್ನು ಮೀರಿದಂತಾಗಲಿಲ್ಲವೇ?

೩. 'ಶ್ರೀಮಧ್ವಾಚಾರ್ಯ ಕರಾರ್ಚಿತ ಅಷ್ಟಾವಿಂಶತಿ ಮೂರ್ತಿನಾಂ ಸ್ತುತಿಃ' ಎಂದು ತಿಳಿಸಿ ಕೊನೆಯ ಎರಡು ಶ್ಲೋಕಗಳಲ್ಲಿ ಶ್ರೀಅಕ್ಷೋಭ್ಯತೀರ್ಥರ ಕಾಲಕ್ಕೆ ಬಂದ ಶ್ರೀಪ್ರಸನ್ನವಿಠ್ಠಲನನ್ನು ಹಾಗೂ ಶ್ರೀಮಾಧವತೀರ್ಥರ ಕಾಲಕ್ಕೆ ಬಂದ ಶ್ರೀವಂಶರಾಮನನ್ನು ೨೮ ಮೂರ್ತಿ ಸ್ತುತಿಯ ಶೀರ್ಷಿಕೆಯಡಿಯಲ್ಲಿ ಸೇರಿಸಿರುವ ಔಚಿತ್ಯವೇನು? ಇವುಗಳನ್ನು ಸೇರಿಸಿದರೆ ೩೦ ಮೂರ್ತಿಗಳು ಆಗುವುದಿಲ್ಲವೇ? ಇವುಗಳು ಕೂಡ ಶ್ರೀಮಧ್ವಾಚಾರ್ಯರ ಕರಾರ್ಚಿತವೇ? ಹಾಗಿದ್ದಲ್ಲಿ 'ಮಾಧವ ಮುನೀಡಿತಮ್' ಎಂಬುದರ ಅರ್ಥವೇನಾಗುತ್ತದೆ? ಜಿಜ್ಞಾಸುಗಳೇ ಉತ್ತರಿಸಬೇಕು.

೪. ಇನ್ನೂ ಮುಂದೆ ನೋಡಿದಾಗ ಆ ಸ್ತುತಿಯಲ್ಲಿ ಎರಡು ಬಾಣಗಳನ್ನೂ ಸ್ತುತಿಸಿದ್ದಾರೆ, ಹಾಗಿದ್ದಲ್ಲಿ ಎರಡು ಬಿಲ್ಲುಗಳನ್ನು ಏಕೆ ಸ್ತುತಿಸಿಲ್ಲ? ಬಾಣಗಳು ಇದ್ದಮೇಲೆ ಬಿಲ್ಲು ಇರಲೇಬೇಕಲ್ಲವೇ? ಅವೂ ಎರಡಾಗಿರಬೇಕು, ಮತ್ತು ಅವೆರಡು ಬಿಲ್ಲುಗಳು ಶ್ರೀರಾಯರ ಮಠದಲ್ಲಂತೂ ಇಲ್ಲ! ಹಾಗಿದ್ದಲ್ಲಿ ಆ

ಬಿಲ್ಲುಗಳು ಎಲ್ಲಿ ಹೋದವು? ಆ ಎರಡು ಬಿಲ್ಲುಗಳನ್ನೂ ಸ್ತುತಿಸಿದರೆ ೨೮ ರ ಸಂಖ್ಯೆಯ ಲೆಕ್ಕಾಚಾರ ತಪ್ಪುತ್ತದೆಯೇ?

೫. ಮೇಲೆ ಹೇಳಿದ ಎಲ್ಲ ಅಂಶಗಳನ್ನು ಗಮನಸಿದಾಗ ಆ ಕೃತಿಯು ಮಹಾಜ್ಞಾನಿಗಳಾದ ಶ್ರೀಸತ್ಯಸಂಧರ ಕೃತಿಯೇ ಅಲ್ಲವೆಂದು ಹೇಳಬೇಕಾಗುತ್ತದೆ. ಇಲ್ಲವಾದಲ್ಲಿ ಅವರ ಕೃತಿಯಲ್ಲಿ ತಾರತಮ್ಯ ಲೋಪಾದಿ ದೋಷ ಚಿಂತಿಸಿದಂತಲ್ಲವೇ? ಹಾಗಿಲ್ಲದೆ ಅವರ ಕೃತಿಯೇ ಆಗಿದ್ದರೆ ಬೇರೆ ಯಾರೋ ಮಾತ್ಸರ್ಯದಿಂದ ಇದರಲ್ಲಿ ಗುರುದ್ರೋಹ ಬಗೆದು ತಾವೇ ತಿದ್ದಿದ್ದಾರೆ ಎಂದೂ ಅನುಮಾನಪಡುವುದು ಸಹಜವಲ್ಲವೇ. ಹೀಗಾಗಿ ಶ್ರೀಸತ್ಯಸಂಧರ ಕೃತ ಸ್ತುತಿಯೇ ಸಂದೇಹಾಸ್ಪದವಾಗಿದೆ ಎಂದು ತೋರುತ್ತದೆ.

೬. ಅಷ್ಟೇ ಅಲ್ಲದೇ ಶ್ರೀಮದುತ್ತರಾದಿ ಮಠದ 'ಸಂಪ್ರದಾಯ ಪದ್ಧತಿ'ಯಲ್ಲಿ (ಮಠದ ಮಾಲೀಕರಾದ ೬೪ ಶ್ಯಾನುಭೋಗರಿಂದ ಬರೆಸಲ್ಪಟ್ಟ ಪತ್ರಗಳ) ೧೫೦ ನೇ ಪುಟದಲ್ಲಿ ಈ ಕೆಳಗಿನಂತೆ ಬರೆದಿದೆ ಇದಕ್ಕೆ ಶ್ರೀಮದುತ್ತರಾದಿ ಮಠದ ಆಗಿನ ಶ್ರೀಗಳ ಮೊಹರೂ ಇದೆ.

'ಶ್ರೀಮಧ್ವಾಚಾರ್ಯರ ಕರಾರ್ಚಿತ ೨೮ ಪದಾರ್ಥಗಳಲ್ಲಿ, ಬಲಮುರಿ ಶಂಖ–೧, ಅಭಿಷೇಕ ಶಂಖ–೧, ಬಾಣಗಳು–೨, ಧನಸ್ಸುಗಳು–೨, ಅಕ್ಷಯ ಪಾತ್ರೆ–೧. ಈ ಪದಾರ್ಥಗಳನ್ನು ಮಠದ ಎಡಬಲ ಸೇವಕರಲ್ಲದೇ ಇತರ ಯಾವ ಗೃಹಸ್ಥರೂ ಎಂಥ ಮಡಿಯಿಂದಿದ್ದರೂ ಮುಟ್ಟಬಾರದು. ಉಳಿದ ದೇವರು ಅಮ್ಮನವರು, ದಿಗ್ವಿಜಯ ರಾಮದೇವರು, ವೇದವ್ಯಾಸದೇವರನ್ನು ವಂಶರಾಮ, ಪ್ರಸನ್ನವಿಠಲರನ್ನೂ ಮುಟ್ಟಬಾರದು' ಎಂದಿದೆ.

ಅಂದರೆ ಈ ಪಟ್ಟಿಯ ಪ್ರಕಾರ ಎರಡು ಧನಸ್ಸುಗಳೂ ಸೇರಿವೆ. ಹಾಗಾದರೆ ೨೮ ಸಂಖ್ಯೆಯು ವ್ಯತ್ಯಾಸಗೊಳ್ಳುತ್ತದೆಯಲ್ಲವೇ?

ಅಲ್ಲದೇ ಇಲ್ಲಿ ಮೂಲರಾಮನ ಪ್ರಸ್ತಾಪವೇ ಇಲ್ಲದಿರುವುದು ಸ್ವಾರಸ್ಯಕರ ಸಂಗತಿ ಹಾಗು ಗುರುಪೀಳಿಗೆಯಲ್ಲಿ ಮಠದ ೨೮ ಪೂಜಾರ್ಹ ವಸ್ತುಗಳೆಂದು ಉಕ್ತವಾದ ಮುದ್ರೆ ಕೋಲು ಹಾಗು ಸರ್ವಮೂಲ ಪುಸ್ತಕಗಳು ಈ ಸಂಪ್ರದಾಯ ಪದ್ಧತಿಯಲ್ಲಿ ಏಕೆ ಹೇಳಿಲ್ಲ?

ಇನ್ನು ವಿದ್ಯಾನಿಧಿಗಳು ಮೂಲರಾಮನನ್ನು ತೆಗೆದುಕೊಂಡ ವಿಚಾರ ಶ್ರೀವಿಬುಧೇಂದ್ರರಿಗೆ ಗೊತ್ತಾಗಿ ದೈವ ಸಂಕಲ್ಪವೆಂದು ಭವಿಷ್ಯವನ್ನು ತಿಳಿದು ಸುಮ್ಮನಾದರು. ಕೆಲ ಕಾಲಾನಂತರ ವಿಬುಧೇಂದ್ರರ ಪ್ರಶಿಷ್ಯರಾದ ಶ್ರೀರಘುನಂದನತೀರ್ಥರು ಪರಮಗುರುಗಳ ಮನದ ಇಚ್ಛೆ ಆಜ್ಞೆಯನ್ನು ಅರಿತು, ಪರವಶವಾಗಿದ್ದ ಶ್ರೀಮೂಲರಾಮನನ್ನು ಮನುಷ್ಯ ಪ್ರಯತ್ನದಿಂದಲೇ ತಮ್ಮ ಶಿಷ್ಯರಾದ ಬಾಡದ ಚಂದ್ರಭಟ್ಟರ ಮೂಲಕ ಮತ್ತೆ ಚಾತುರ್ಯದಿಂದಲೇ ಸಂಪಾದಿಸಿದರು. ಅದನ್ನೇ ಅವರ ಚರಮ ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ –

"ಪರೈರಪಹೃತಾ ಮೂಲರಾಮಾರ್ಚಾ ಗುರ್ವನುಗ್ರಹಾತ್ ।
ಏನಾನೀತಾ ನಮಸ್ತಸ್ಮೈ ರಘುನಂದನ ಭಿಕ್ಷವೇ ॥"

ಅಪಹರಿಸಿದ ಸ್ವವಸ್ತುವನ್ನು ಮತ್ತೆ ಪಡೆದರೆ ಅದನ್ನು ಅಪಹರಣವೆಂದು ಯಾರೂ ಕರೆಯುವುದಿಲ್ಲ. ಕದ್ದ ವಸ್ತುವನ್ನು ಮರಳಿ ತಂದ ಆರಕ್ಷಕರನ್ನು (ಪೋಲೀಸರನ್ನು) ಪ್ರಶಂಸಿಸುತ್ತಾರೆ, ಇದು ಲೋಕ ನ್ಯಾಯ. ಶ್ರೀರಘುನಂದನತೀರ್ಥರ ಸತ್ಯ ಘಟನೆಯನ್ನು ಅಲ್ಲಗಳೆಯಲು ಕಾರಣವೇನು?

"ತಸ್ಮಾತ್ ವಸ್ತುಂ ಯಥಾರೂಪಂ ಜ್ಞೇಯಂ ಧ್ಯೇಯಂ ಚ ಸರ್ವದಾ ।
ಕಾರಣಂ ಪುರುಷಾರ್ಥಸ್ಯ ನಾನ್ಯಥಾ ಭವತಿ ಕ್ವಚಿತ್ ॥"

ವಸ್ತುವನ್ನು ಯಥಾಸ್ಥಿತಿ ತಿಳಿಯುವುದೇ ಪುರುಷಾರ್ಥಕ್ಕೆ ಕಾರಣವಲ್ಲವೇ!

ಶ್ರೀಸತ್ಯಸಂಧಕೃತ 'ಅಷ್ಟಾವಿಂಶತಿ ಮೂರ್ತಿನಾಂ' ಸ್ತುತಿಃ

ಶ್ರೀಸತ್ಯಸಂಧವಿಜಯದಲ್ಲಿ ಕೆಲವು ಶ್ಲೋಕಗಳನ್ನು ಕೊಟ್ಟು ಅದರಲ್ಲಿ ಶ್ರೀಸತ್ಯಸಂಧತೀರ್ಥರು ಶ್ರೀಮೂಲರಾಮನನ್ನು ಪೂಜೆ ಮಾಡುವ ಬಗೆಯನ್ನು ವರ್ಣಿಸಿದ್ದಾರೆ ಎಂದು ಲೇಖಕರು ಉಲ್ಲೇಖ ಮಾಡಿದ್ದಾರೆ.

೧. ಶ್ರೀಸತ್ಯಸಂಧರಿಂದಲೇ ಕೃತವಾದ (ಶ್ರೀಸತ್ಯಸಂಧತೀರ್ಥ ವಿರಚಿತ ಶ್ರೀಮದುತ್ತರಾದಿಮಠೇ ನಿತ್ಯ ಅರ್ಚನೀಯಾನಾಂ ಶ್ರೀಮನ್ಮಧ್ವಾಚಾರ್ಯ ಕರಾರ್ಚಿತ ಅಷ್ಟಾವಿಂಶತಿ ಮೂರ್ತಿನಾಂ ಸ್ತುತಿಃ) ಎಂದು ಅದರ ಪಕ್ಕದ ಪುಟದಲ್ಲಿ ಮುದ್ರಿಸಿದ್ದಾರೆ.

'ಸ.ಸೀ.ಮೂ.' ಪು : ೯ರಲ್ಲಿ, **'ಭವ್ಯ ಪರಂಪರೆಯಲ್ಲಿ ಪೂಜೆಗೊಳ್ಳುತ್ತಿರುವ ಪ್ರಧಾನ ಪ್ರತಿಮೆಗಳು'** [೨೮] **ಇವು ಅನೂಚಾನವಾಗಿ ೨೮ ಭಗವತ್ಸನ್ನಿಧಾನೋಪೇತ ಪ್ರತಿಮೆಗಳು. ಹಾಗೂ ಶ್ರೀಮದಾಚಾರ್ಯರ ಕಾಲದಿಂದಲೂ ಇಂದಿನವರೆಗೂ ಪೂಜೆಗೊಳ್ಳುತ್ತಿವೆ'** ಎಂದು ವಿವರ ಕೊಟ್ಟಿದ್ದಾರೆ. ಈಗ ಎರಡನ್ನೂ ಹೋಲಿಸಿ ನೋಡೋಣ –

೯ ನೇ ಪುಟದಲ್ಲಿನ ಪ್ರತಿಮಾ ವಿವರ		ಶ್ರೀಸತ್ಯಸಂಧರ ಕೃತಿಯಲ್ಲಿನ ಪ್ರತಿಮಾ ವಿವರ	
ಶ್ರೀಮೂಲರಾಮ	– ೧	ಶ್ರೀದಿಗ್ವಿಜಯರಾಮ	– ೧
ಶ್ರೀಮೂಲಸೀತಾ	– ೧	ಶ್ರೀಮೂಲರಾಮ	– ೧
ಶ್ರೀದಿಗ್ವಿಜಯರಾಮ	– ೧	ಶ್ರೀಮೂಲಸೀತಾ	– ೧
ಕಾಮಧೇನು ಲಕ್ಷ್ಮೀನಾರಾಯಣ	– ೧	ಶ್ರೀವೇದವ್ಯಾಸ	– ೪
ಹಯಗ್ರೀವ	– ೧	ಶ್ರೀಹಯಗ್ರೀವ	– ೧
ದಧಿವಾಮನ	– ೧	ಶ್ರೀಲಕ್ಷ್ಮೀನಾರಾಯಣ	– ೧
ಶ್ರೀಧರ ಸಾಲಿಗ್ರಾಮಗಳು	– ೧	ಶ್ರೀದಧಿವಾಮನ	– ೧
ವ್ಯಾಸಮುಷ್ಟಿಗಳು	– ೪	ಸುದರ್ಶನಗಳು	– ೪
ಮೂರು ಸುದರ್ಶನಗಳು	– ೩	ಚಕ್ರಾಂಕಿತಗಳು	– ೪
ದ್ವಿಮುಖೀ ಸುದರ್ಶನಗಳು	– ೨	ಶ್ರೀಧರ ಸಾಲಿಗ್ರಾಮ	– ೧
ಚಕ್ರಾಂಕಿತಗಳು	– ೪	ಬಲಮುರಿ ಶಂಖ	– ೧
ಅಭಿಷೇಕ ಶಂಖ	– ೧	ಅಭಿಷೇಕ ಶಂಖ	– ೧
ಬಲಮುರಿ ಶಂಖ	– ೧	ಅಕ್ಷಯಪಾತ್ರೆ	– ೧
ರಾಮಟಂಕಿ	– ೧	ರಾಮಟಂಕಿ	– ೧
ರಾಮಬಾಣಗಳು	– ೨	ರಾಮಬಾಣಗಳು	– ೨
ಅಕ್ಷಯಪಾತ್ರೆ	– ೧		
ಒಟ್ಟು : ೨೮		ಒಟ್ಟು : ೨೮	
		ವಂಶರಾಮ	– ೧
		ಪ್ರಸನ್ನವಿಠ್ಠಲ	– ೧
		೨೮ + ೨ = ೩೦	

ಮೇಲೆ ತಿಳಿಸಿರುವ ಹೋಲಿಕೆಯಲ್ಲಿ ಕೆಲವು ಅಂಶಗಳನ್ನು ಗಮನಿಸೋಣ [ಮುಖ್ಯವಾಗಿ ಶ್ರೀಸತ್ಯಸಂಧರ ಕೃತಿಯಲ್ಲಿ ಹೇಗಿದೆಯೋ ಹಾಗೇ, ಅದೇ ಅನುಕ್ರಮಣಿಕೆಯಲ್ಲಿ ಮೇಲಿನ ವಸ್ತುಗಳ ಪಟ್ಟಿ ತಯಾರಾಗಿದೆ]

ಸತ್ಯಾಭಿನವ ಸತ್ಯಸಾಕ್ಷೀ – ಕೆಲವು ಪ್ರಶ್ನೆಗಳು

೧) ಸ.ಸೀ.ಮೂ. ಪುಟ – ೨೫ ರಲ್ಲಿ ಸತ್ಯಾಭಿನವಕೃತ ಶ್ರೀಸತ್ಯನಾಥ–ಗುರುಸ್ತುತಿ ಎಂಬ ಯಮಕ ಶೈಲಿಯ ಸ್ತೋತ್ರದ ಕೆಲವು ಭಾಗಗಳನ್ನು ಶ್ರೀಸತ್ಯಾಭಿನವರೇ ರಚಿಸಿದರೆಂದು ಹೇಳಲಾದ ವ್ಯಾಖ್ಯಾನಸಹಿತ ಮುದ್ರಿಸಲಾಗಿದೆ.

ಅ. ಈ ವ್ಯಾಖ್ಯಾನವನ್ನು ಪ್ರಾಮಾಣಿಕವೆಂದು ನಂಬುವುದಾದರೆ ಅಲ್ಲಿರುವ 'ಮೂಲರಾಮಾದ್ಯಷ್ಟಪ್ರತಿಮಾರ್ಚಕಂ ಪದ್ಮನಾಭಮುನಿಂ ಸದಾ ನೌಮಿ' ಎಂಬ ವಾಕ್ಯವು ಸತ್ಯವೇ ಇರಬೇಕಲ್ಲವೇ?

ಆ. ಶ್ರೀಪದ್ಮನಾಭತೀರ್ಥರು ಶ್ರೀಮೂಲರಾಮಾದಿ ಎಂಟು ಪ್ರತಿಮೆಗಳನ್ನು ಪೂಜಿಸುತ್ತಿದ್ದುದು ನಿಜವಾದರೆ ಸ.ಸೀ.ಮೂ. ಪುಟ ೯, ೨೭, ೩೨, ಮುಂತಾದ ಕಡೆ ಶ್ರೀಮನ್ಮಧ್ವಾಚಾರ್ಯ ಕರಾರ್ಚಿತ ಅಷ್ಟಾವಿಂಶತಿ ಮೂರ್ತಿ–ಗಳ ಪಟ್ಟಿಯನ್ನು ವಿಶ್ವಾಸಾರ್ಹವೆಂದು ನಂಬುವುದಾದರೆ ಹೇಗೆ?

ಇ. ಸ.ಸೀ.ಮೂ. ಪುಟ – ೨೪ ರಲ್ಲಿ ಮೂರನೇ ಸರ್ಗದ ಐದನೇ ಶ್ಲೋಕ–ದಲ್ಲಿ 'ಸೋಽಷ್ಟೌಭೂತೀರಿವಾಪದಾಚಾರ್ಯಾತ್' ಇವರ ಗುರುಗಳಿಂದ ಎಂಟು ಪ್ರತಿಮೆಗಳನ್ನು ಪಡೆದರೆಂದು ಹೇಳಲಾಗಿದೆ.

ಹೀಗೆ ಶ್ರೀಸತ್ಯಾಭಿನವರಿಗೂ ಶ್ರೀಸತ್ಯಸಂಧರಿಗೂ ಶ್ರೀಸತ್ಯನಿಧಿವಿಲಾಸ–ಕಾರರಿಗೂ ಪರಸ್ಪರ ವಿರೋಧವೂ, ಎಂಟು – ಇಪ್ಪತ್ತೆಂಟರ ಗೊಂದಲವೂ ಹೀಗೆಯೇ ಮುಂದುವರೆಯುತ್ತದೆ.

೨. ಮಧ್ವಮತದ ಅನಾದಿ ಪರಂಪರಾ ಸಂಪ್ರದಾಯದಂತೆ, ಗುರುಗಳು ಶಿಷ್ಯನ ಮಸ್ತಕದಲ್ಲಿ ಸಾಲಿಗ್ರಾಮವನಿಟ್ಟು ಅಭಿಷೇಕ ಮಾಡಿ ಪೀಠದಲ್ಲಿ ಶಿಷ್ಯನನ್ನು ಸ್ಥಾಪಿಸುವುದೆ ಮುಖ್ಯ ಕಾರ್ಯ. ಈ ರೀತಿ ಗುರುಗಳ ಅನುಗ್ರಹದಿಂದಲೆ ಪರಂಪರೆಯ ಸನ್ನಿಧಾನ ಹಾಗೂ ಮಂತ್ರಸಿದ್ಧಿಗಳಿಗೆ ಕಾರಣವಾಗುತ್ತದೆ! ಆದರೆ ಮಹಾನಿಧಿಗಳು ಎಂದು ಹೇಳಿಕೊಳ್ಳುವ ವಿದ್ಯಾನಿಧಿಗಳಿಗೆ ಈ ರೀತಿ ಗುರುಗಳಿಂದ ಅಭಿಷೇಕ ನಡಿಯಿತೇ?

> **"ಪಶ್ಚಾತ್ ವಿದ್ಯಾನಿಧಿ ಮುನೀಶ್ವರಃ।**
> **ಶ್ರೀರಾಮಚಂದ್ರತೀರ್ಥಸ್ಯ ವೃಂದಾವನ ಸುಸನ್ನಿಧೌ ॥**
>
> **ಸ್ವಸ್ಯ ದಕ್ಷಿಣ ಹಸ್ತೇನ ಶಂಖತೋಯೇನ ಸತ್ತಮಃ।**
> **ಸ್ವಯಂ ಪಟ್ಟಾಭಿಷಿಚ್ಯಾಥ ..."**

ಈ ಮೇಲಿನ ಚರಿತ್ರೆಯನ್ನು ಅವರೇ ಒಪ್ಪುವ 'ಗುರುಚರ್ಯೆ' ಎಂಬ ಗ್ರಂಥ–ದಲ್ಲಿ ಹೇಳಲಾಗಿದೆ. ಆದ್ದರಿಂದ ವಿದ್ಯಾನಿಧಿಗಳಿಗೆ ಮೂಲರಾಮಾದಿ ಪ್ರತಿಮೆ–ಗಳು ಪೂಜಾರ್ಥವಾಗಿ ಸ್ವೀಕರಿಸುವ ಅಧಿಕಾರ ಒದಗಿ ಬಂದಿತು ಎಂಬುದು ಎಷ್ಟರ ಮಟ್ಟಿಗೆ ಸಾಧ್ಯವಾದೀತು? ಪರಂಪರಾ ವಿಚ್ಛಿತ್ತಿ ಎಂಬುದು ಅವರ ಗ್ರಂಥದಲ್ಲೇ ದಾಖಲಾಗಿಲ್ಲವೇ? ಜಿಜ್ಞಾಸುಗಳೇ ವಿಚಾರ ಮಾಡುವುದು!

ಶ್ರೀಮೂಲರಾಮದೇವರು ವಿದ್ಯಾನಿಧಿಗಳ ತಪಸ್ಸಿಗೆ ಒಲಿದರೆ?

ಶ್ರೀಮದಾಚಾರ್ಯರು ಗಜಪತಿ ಕೋಶದಲ್ಲಿದ್ದ ಮೂಲರಾಮನನ್ನು ತಮ್ಮ ಸರ್ವಜ್ಞತ್ವದಿಂದ ತಿಳಿದರು. ತಮ್ಮ ಶಿಷ್ಯರಾದ ಶ್ರೀನರಹರಿತೀರ್ಥರನ್ನು ಶ್ರೀಮೂಲ ರಾಮರನ್ನು ತರಲು ಕಳುಹಿಸಿದರು. ಶ್ರೀನರಹರಿತೀರ್ಥರು ಕೆಲವು ಕಾಲ ದೈವೇಚ್ಛೆ–ಯಿಂದ ರಾಜ್ಯಭಾರ ಮಾಡಿ, ಮೊದಲೇ ಗರ್ಭಿಣಿಯಾಗಿದ್ದ ರಾಣಿಗೆ ಪುತ್ರ ಸಂತಾನವಾಗಲು, ತಾವು ರಾಜ್ಯಭಾರವನ್ನು ಒಪ್ಪಿಸಿ, ಭಂಡಾರದಲ್ಲಿದ್ದ ಶ್ರೀಮೂಲ–ರಾಮನನ್ನು ಕಾಣಿಕೆಯನ್ನಾಗಿ ಪಡೆದು ಶ್ರೀಮೂಲರಾಮನನ್ನು ಆಚಾರ್ಯ–ರಿಗೆ ಒಪ್ಪಿಸಿದರು. ಈ ಕಥೆ ಉಭಯತಾಪಿ ಸಮ್ಮತ.

ಅಂದಮೆಲೆ ಕಲಿಯುಗದಲ್ಲಿ ವಾಯುದೇವರೇ ಮಧ್ವರಾಗಿ ಅವತ–ರಿಸಿದರೂ, ಸಕಲ ಸಿದ್ಧಿಗಳನ್ನೂ ಹೊಂದಿದ್ದರೂ, ತಮ್ಮ ಮಹಿಮಾ ಪ್ರಭಾವ–ದಿಂದ ಮೂಲರಾಮನನ್ನು ಆಕಾಶದಲ್ಲಿ ಹಾರಿ ಬರುವಂತೆ ಅಥವಾ ಗಜಪತಿ ಭಂಡಾರದಿಂದ ಅದೃಶ್ಯವಾಗಿ ತಮ್ಮ ಹತ್ತಿರ ಪ್ರತ್ಯಕ್ಷ್ಯವಾಗುವಂತೆ ತರಿಸಿಕೊಳ್ಳುವ ಸಾಮರ್ಥ್ಯವಿದ್ದರೂ ಹಾಗೆ ಮಾಡಲಿಲ್ಲ. ಕೇವಲ ಮನುಷ್ಯ ಪ್ರಯತ್ನದಿಂದಲೇ ನರಹರಿತೀರ್ಥರನ್ನು ಕಳುಹಿಸಿಯೇ, ಲೋಕಾನುಸಾರಿಯಂತೆ ಶ್ರೀಮೂಲ–ರಾಮನ ಪ್ರತಿಮೆ ಸಂಪಾದಿಸಿದರು. **ಹೀಗೆ ಶ್ರೀಮದಾಚಾರ್ಯರನ್ನೂ ಮೀರಿ ವಿದ್ಯಾನಿಧಿಗಳ ಮಹಾಮಹಿಮೆಗೆ ಮೂಲರಾಮ ಭೂಮಿ ಭೇಧಿಸಿಕೊಂಡು ಬಂದು ನಿಂತ ಎಂದರೆ ವಿದ್ಯಾನಿಧಿಗಳು ಶ್ರೀಮಧ್ವರನ್ನು ಮೀರಿದ ಮಹಾಮಹಿಮೆ ಉಳ್ಳವರೆಂದೂ, ಮಧ್ವರಿಗಿಂತ ಅತ್ಯಂತ ಅತಿಶಯ ಭಕ್ತಿಯುಕ್ತರೆಂದೂ ಹೇಳಿ–ದಂತಾಯಿತು. ಹೀಗೆ ವಿದ್ಯಾನಿಧಿಗಳ ಬಗ್ಗೆ ಕಥೆ ಕಲ್ಪಿಸಲು ಹೋಗಿ ಮೂಲ ಗುರುಗಳಾದ ಮಧ್ವಾಚಾರ್ಯರಿಗೆ ಅವಮಾನ ಮಾಡುವ ಸ್ಥಿತಿಯಾಗಿಲ್ಲವೆ? ಈ ಸ್ಥಿತಿಯನ್ನು ಊಹಿಸಲೂ ಸಾಧ್ಯವಿಲ್ಲ!**

ಶ್ರೀರಾಘವೇಂದ್ರಸ್ವಾಮಿಗಳವರ ಪರಂಪರೆಯ ಅನುಯಾಯಿಗಳಿಗೆ 'ಶ್ರೀವಿಬು–ಧೇಂದ್ರವಿಜಯ', 'ಶ್ರೀವಿಜಯೀಂದ್ರವಿಜಯ', 'ಶ್ರೀರಾಘವೇಂದ್ರವಿಜಯ', 'ಶ್ರೀರಾಘ–ವೇಂದ್ರಮಠಗತಾರ್ಚಾಗತಿಕ್ರಮ' ಮೊದಲಾದ ಗ್ರಂಥ ಮತ್ತು ತತ್ರೋಕ್ತ ವಿಷಯ–ಗಳು ಪ್ರಮಾಣವಲ್ಲವೇಕೆ?

ಶ್ರೀವಿದ್ಯಾಧೀಶವಿಜಯದ ಮೇಲೆ ಬರುವ ಕೆಲವು ಪ್ರಶ್ನೆಗಳು

'ಸಸೀತಾ ಮೂಲರಾಮಾರ್ಚ'ದ ಲೇಖಕರು, ವಿದ್ಯಾಧೀಶವಿಜಯದಲ್ಲಿ ಶ್ರೀವಿದ್ಯಾಧೀಶರು ಪೂಜೆಮಾಡುತ್ತಿದ್ದ ಬಗೆಯನ್ನು ಈ ಕಾವ್ಯದ ಕವಿ ವರ್ಣಿಸಿದ್ದನ್ನು ಕೊಟ್ಟಿದ್ದಾರೆ. ಈ ಕಾವ್ಯದ ಕವಿಗಳು ಜನಾರ್ದನ ಸೂರಿಗಳು. ಇವರು ಶ್ರೀವಿದ್ಯಾಧೀಶರ ಮುಂದೆ ನಿತ್ಯವೂ 'ಭಾಗವತ' ಪ್ರವಚನ ಮಾಡುತ್ತಿದ್ದರೆಂದೂ, ನಿಕಟವರ್ತಿ–ಗಳೆಂದೂ ತಾವೇ ಕಾವ್ಯದ ಕೊನೆಯಲ್ಲಿ ಹೇಳಿಕೊಂಡಿದ್ದಾರೆನ್ನಲಾಗಿದೆ.

ಇಲ್ಲಿ ಬರುವ ಸಂದೇಹವೇನೆಂದರೆ, ಒಂದೊಮ್ಮೆ ಈ ಕಾಲಮಾನ–ವನ್ನು ಒಪ್ಪುವುದಾದರೆ ಶ್ರೀವಿದ್ಯಾಧೀಶರ ಕಾಲ [೧೬೮೯–೧೬೩೧], ಆದರೆ ಜನಾರ್ದನ ಸೂರಿಗಳ ಕಾಲ [೧೬೨೦–೧೬೭೦], ಅಂದರೆ ಶ್ರೀವಿದ್ಯಾಧೀಶರು ಆಶ್ರಮ ಸ್ವೀಕರಿಸಿ ಒಂದು ವರ್ಷದ ಮೇಲೆ ಕವಿಯ ಜನನ. ಶ್ರೀವಿದ್ಯಾಧೀಶರು ವೃಂದಾವನಸ್ಥರಾಗುವ ಸಮಯಕ್ಕೆ ಆ ಕವಿಗಳಿಗೆ ಕೇವಲ ೧೦ ವರ್ಷಗಳು ಕಳೆದು ಕೆಲವು ದಿನಗಳಾಗಿದ್ದವು.

೧. 'ಸಾಮಾನ್ಯವಾಗಿ ೬ ವರ್ಷಕ್ಕೆಯೇ ಉಪನಯನವಾಗಿದ್ದರೂ, ಆ ಕವಿಯು ಶ್ರೀಗಳಿಗೆ ನಿಕಟವರ್ತಿಗಳು ಎಂದರೆ ಅರ್ಥವೇನು? ಆ ಕವಿಗೆ ಕೇವಲ ೧೦ ವರ್ಷದಲ್ಲಿಯೇ 'ಭಾಗವತ' ('ಅರ್ಥೋ಼ಯಂ ಬ್ರಹ್ಮಸೂತ್ರಾಣಾಂ...') ಪುರಾಣವನ್ನು, 'ಪುರಾಣರಾಜವೆಂದೇ' ಹೆಗ್ಗಳಿಕೆಯಿಂದ ಕರೆಯಿಸಿ–ಕೊಳ್ಳುವ ಗ್ರಂಥವನ್ನು ಉಪನ್ಯಾಸ ಮಾಡುವ ಕರ್ತೃತ್ವವಿದೆ ಎಂದರೆ ಆಶ್ಚರ್ಯವಲ್ಲವೆ?

೨. ಇನ್ನೊಂದು ವಿಶೇಷವೇನೆಂದರೆ ಈ ನಾಡಿನ ಖ್ಯಾತ ಸಂಶೋಧಕ–ರಾದ, ವಿದ್ವಾಂಸರಾದ ಶ್ರೀವ್ಯಾಸನಕೆರೆ ಪ್ರಭಂಜನಾಚಾರ್ಯರು ಬರೆದ "ದ್ವೈತಮತಕ್ಕೆ ಶ್ರೀರಾಘವೇಂದ್ರ ಮಠದ ಕೊಡುಗೆ" ಎನ್ನುವ ಪುಸ್ತಕದ (೩೩ –೩೪) ಪುಟದಲ್ಲಿ ಹೀಗೆ ಹೇಳಿದ್ದಾರೆ –

"ಶ್ರೀವಿದ್ಯಾಧೀಶವಿಜಯದಲ್ಲಿ ವಾದೀಂದ್ರನೆಂಬ ವಾದಿಯನ್ನು ಜಯಿಸಿದ ಉಲ್ಲೇಖವಿದೆ, ಅದರ ವ್ಯಾಖ್ಯಾನದಲ್ಲಿ ಆ ವಾದೀಂದ್ರರು ಶ್ರೀಸುಧೀಂದ್ರ ಮಠದ ವಾದೀಂದ್ರರೆಂದು ಹೇಳಲಾಗಿದೆ. ಆದರೆ, ವಿದ್ಯಾಧೀಶರಿಗೂ [೧೬೮೯ – ೧೬೩೧] ವಾದೀಂದ್ರರಿಗೂ ಸುಮಾರು ಒಂದು ಶತಮಾನದಷ್ಟು ಅಂತರವಿದ್ದು, ಅವರ ಭೇಟಿಗೆ ಆಸ್ಪದವೇ ಇಲ್ಲವಾಗಿ, ವ್ಯಾಖ್ಯಾನದ ಆ ಭಾಗವು ಸಂಪೂರ್ಣವಾಗಿ ಅಪ್ರಮಾಣಿಕವಾಗಿದೆ" ಎಂದು ಸಂಶೋಧಿಸಿ ಪ್ರಕಟಿಸಿದ್ದಾರೆ.

ಶ್ರೀವಿದ್ಯಾಧೀಶವಿಜಯದ ವ್ಯಾಖ್ಯಾನವೂ ಜನಾರ್ದನ ಸೂರಿಗಳದೇ ಆಗಿದೆ ಎಂಬುದು ಗಮನಿಸಬೇಕಾದ ಅಂಶ. (ಜನಾರ್ದನಾಚಾರ್ಯ ಇತಿ ವಿದ್ಯಾಧೀಶವಿಜಯಾದ್ಯನೇಕ ಪ್ರಬಂಧಕವಯಿತಾ । ಏತಟ್ಟೀಕಾಪಿ ತತ್ಕೃತೇ–ತ್ಯವಧೇಯಂ – ಪು. ೧೧೯).

ಮೇಲ್ಕಂಡಂತೆ ತಿಳಿದು ಬರುವ ಸಂದೇಹ – ಸಂಶಯಗಳಿಗೆ ಉತ್ತರಗಳು ಸಿಗುವುದೇ ಇಲ್ಲವಾಗಿದೆ. ಇದರ ಬಗ್ಗೆ ಲೇಖಕರು ಹಾಗೂ ಪಂಡಿತರು ವಿಚಾರ ನಡೆಸುವುದು ಒಳಿತು.

ಶ್ರೀಸತ್ಯನಿಧಿವಿಲಾಸ

ಸತ್ಯನಿಧಿವಿಲಾಸದಲ್ಲಿ, ರಾಮಚಂದ್ರತೀರ್ಥರು ವಿದ್ಯಾನಿಧಿಗಳಿಗೆ ಆಶ್ರಮ ಕೊಟ್ಟ ವಿಚಾರ – ಶ್ಲೋಕ ೨೧ ರಲ್ಲಿ ತಿಳಿಸಿದಂತೆ, ಪುನಃ ಶ್ರೀರಘುನಾಥ–ತೀರ್ಥರನ್ನು ವರ್ಣಿಸಿದ ಕವಿಗಳು ಅವರ ಗುರುಗಳಾದ ವಿದ್ಯಾನಿಧಿಗಳಿಗೆ ಮೂಲರಾಮನ ಪೆಟ್ಟಿಗೆಯು ಬಂದಿರುವ ಅತ್ಯಂತ ಮುಖ್ಯವಾದ ವಿಷಯ–ವನ್ನು ಬಿಡಲು ಕಾರಣವೇನು? ಶ್ರೀರಘುನಾಥತೀರ್ಥರನ್ನು ಅತಿಶಯಯುಕ್ತ–ವಾಗಿ ಶ್ರೀಮಠದ ಮೂಲಪುರುಷರೆಂದು ವರ್ಣಿಸಿದ ಕವಿಗಳು, ಶ್ರೀವಿದ್ಯಾನಿಧಿ–ಗಳ ಬಗ್ಗೆ ಸೂಕ್ಷ್ಮವಾಗಿ ಕಡಿಮೆ ವರ್ಣನೆ ಮಾಡಿರುವ ರಹಸ್ಯವೇನು? ಅಗಾಧ ತಪಶ್ಶಕ್ತಿ ಇರುವ ಸತ್ಯನಿಧಿವಿಲಾಸದ ಕರ್ತೃಗಳಾದ ಶ್ರೀನಿವಾಸಾಚಾರ್ಯರೆ ಮಹತ್ವದ ವಿವಾದ ವಿಷಯವನ್ನೇ ಬಿಡಲು ಕಾರಣವೇನು? ಅಷ್ಟೇ ಅಲ್ಲದೆ ಶ್ರೀಮೂಲರಾಮದೇವರನ್ನು ಆ ಮಠದ ಯಾವುದೇ ಸನ್ಯಾಸಿಗಳು ಪೂಜಿಸಿರು–ವದನ್ನು ಸತ್ಯನಿಧಿವಿಲಾಸದಲ್ಲಿ ವರ್ಣಿಸಿಲ್ಲವೇಕೆ?

೧. ವಿವಿಧ ಮಾಧ್ವಮಠಗಳಲ್ಲಿರುವ ಶ್ರೀಮದಾಚಾರ್ಯಪ್ರದತ್ತವಾದ ಎಲ್ಲ ಸೀತಾಪ್ರತಿಮೆಗಳಿಗೆ ಕಿರೀಟವಿರುವಾಗ, ಮೂಲರಾಮಪ್ರತಿಮೆಗೂ ಕಿರೀಟ–ವಿರುವಾಗ, ಜೋಡಿ ಪ್ರತಿಮೆಯಾದ ಮೂಲಸೀತಾಪ್ರತಿಮೆಗೆ ಕಿರೀಟವೇಕಿಲ್ಲ?

೨. ವಿವಿಧ ಮಾಧ್ವಮಠಗಳಲ್ಲಿರುವ ಶ್ರೀಮದಾಚಾರ್ಯಪ್ರದತ್ತವಾದ ಎಲ್ಲ ಸೀತಾ–ರಾಮಪ್ರತಿಮೆಗಳು ಸಮಾನಲೋಹದಲ್ಲಿ ರಚಿತವಾಗಿರುವಾಗ, ಮೂಲರಾಮಪ್ರತಿಮೆಗೂ ಮೂಲಸೀತಾಪ್ರತಿಮೆಗೂ ಲೋಹಸಾಮ್ಯ–ವೇಕಿಲ್ಲ?

೩. ವಿವಿಧ ಮಾಧ್ವಮಠಗಳಲ್ಲಿರುವ ಶ್ರೀಮದಾಚಾರ್ಯಪ್ರದತ್ತವಾದ ಎಲ್ಲ ಸೀತಾ–ರಾಮಪ್ರತಿಮೆಗಳ ಪೀಠದಲ್ಲಿ ಹೋಲಿಕೆ ನಿಯತವಾಗಿ ಕಂಡು ಬರುತ್ತಿರುವಾಗ, ಮೂಲರಾಮಪ್ರತಿಮೆಗೂ ಮೂಲಸೀತಾಪ್ರತಿಮೆಗೂ ಪೀಠ ಸಾಮ್ಯವೇಕಿಲ್ಲ?

೪. ವಿವಿಧ ಮಾಧ್ವಮಠಗಳಲ್ಲಿರುವ ಶ್ರೀಮದಾಚಾರ್ಯಪ್ರದತ್ತವಾದ ಎಲ್ಲ ಸೀತಾಪ್ರತಿಮೆಗಳು, ಕಿರೀಟದ ಅಳತೆಯನ್ನು ಬಿಟ್ಟರೆ ರಾಮಪ್ರತಿಮೆಗಳ ಭುಜದ ಮಟ್ಟಕ್ಕೂ, ಕಿರೀಟದ ಅಳತೆಯನ್ನು ಸೇರಿಸಿದರೆ ರಾಮಪ್ರತಿಮೆ–ಗಳ ಕಿವಿಯ ಮಟ್ಟಕ್ಕೂ, ಹೊಂದಿಕೆಯಾಗುತ್ತಿರುವಾಗ, ಮೂಲರಾಮ ಪ್ರತಿಮೆಗೂ ಮೂಲಸೀತಾಪ್ರತಿಮೆಗೂ ಪರಿಮಾಣಸಾಮ್ಯವೇಕಿಲ್ಲ?

೫. ವಿವಿಧ ಮಾಧ್ವಮಠಗಳಲ್ಲಿರುವ ಶ್ರೀಮದಾಚಾರ್ಯಪ್ರದತ್ತವಾದ ಎಲ್ಲ ಸೀತಾಪ್ರತಿಮೆಗಳೂ, ಬಲಗೈಯಲ್ಲಿ ಕಮಲವನ್ನು ಧರಿಸಿ, ಎಡಗೈಯನ್ನು ನೀಳವಾಗಿ ಇಳಿಬಿಟ್ಟಿರುವ ಒಂದೇ ಭಂಗಿಯಲ್ಲಿ ಕಂಡುಬರುವಾಗ ಸ.ಸೀ.ಮೂ. ಗ್ರಂಥೋಕ್ತ **'ಕರದಿ ಕಮಲಾ ಅಮೃತ ಕಲಶವಾ ಪಿಡಿದಿಹಳು'**, ಎಂಬ ಸುಳಾದಿಯ ವಾಕ್ಯವನ್ನು, ಮೂಲಸೀತಾಲಕ್ಷಣವೆಂದು ಒಪ್ಪ–ಬೇಕಾದ ಅನಿವಾರ್ಯತೆಯೇನು?

೬. ಶಿಲ್ಪಶಾಸ್ತ್ರದ ಪ್ರಕಾರ ಕಮಲ ಹಿಡಿದ ಕರವು ಮುದ್ರಾ ಭಂಗಿಯಲ್ಲಿ ದೇವರ ಕಡೆಗೆ ಇರಬೇಕೆಂಬ ನಿಯಮ ಇದೆ. ಕಿರೀಟ ಹಾಗೂ ಮುದ್ರಾಭಂಗಿ ಇಲ್ಲದೆ ಈ ವಿಗ್ರಹವು ಸೀತಾವಿಗ್ರಹವೇ ಎಂಬ ಸಂದೇಹವು ಬರುತ್ತದೆ. ಅಲ್ಲದೇ 'ಪ್ರತಿಮಾಯನ್ಮಯೀ ಕ್ಲೃಪ್ತಾ ಪ್ರಭಾಪೀಠಾದಿ ತನ್ಮಯಂ' ಎಂಬ

ಪದ್ಮ, ಜಯಾಖ್ಯ ಸಂಹಿತಿಗಳೂ, ಮತ್ಸ್ಯಪುರಾಣವೂ ಹಿತ್ತಾಳೆಯ ವಿಗ್ರಹಕ್ಕೆ ತಾಮ್ರದ ಪೀಠವನ್ನು ವಿರೋಧಿಸುತ್ತದೆ. ಈ ಬಗ್ಗೆ ಶಿಲ್ಪ ಶಾಸ್ತ್ರಜ್ಞರ ಅಭಿಪ್ರಾಯವೂ ಇದೇ ರೀತಿ ಇದ್ದು, "ಬಹುಶಃ ಇದನ್ನು ಯಾವುದೋ ಒಂದು ತುರ್ತು ಪರಿಸ್ಥಿತಿಯಲ್ಲಿ, ಅವಸರದಲ್ಲಿ ನಿರ್ಮಿಸಿರಬಹುದು" ಎಂದಿದ್ದಾರೆ.

ಆದ್ದರಿಂದ ಫಲಿತಾಂಶವೇನೆಂದರೆ ಶ್ರೀವಾದೀಂದ್ರರ ವಾಕ್ಯದಂತೆ ಅವರ ಕಾಲದಲ್ಲಿ ರಾಯರಮಠದ ಮೂಲರಾಮದೇವರ ವಿಗ್ರಹ ಹಾಗೂ ಉತ್ತರಾದಿ ಮಠದ ಮೂಲಸೀತಾವಿಗ್ರಹಗಳಿಗೆ ಸಾಮ್ಯವಿತ್ತು. ಇವತ್ತು ಆ ಮೂಲ ಸೀತಾ ವಿಗ್ರಹವು ಬದಲಾಗಿದೆ (ಉತ್ತರಾದಿಯವರದ್ದೇ ತಾಮ್ರದ ರಾಮವಿಗ್ರಹಕ್ಕೆ ಈ ಹಿತ್ತಾಳೆ ಸೀತಾವಿಗ್ರಹ ಜೋಡಿಯಾಗದು).

ಅಂತೂ ಸ.ಸೀ.ಮೂ. ಗ್ರಂಥಕಾರರು ಮೂಲರಾಮನು ಉತ್ತರಾದಿಮಠ–ದಲ್ಲಿ ಇರುವನೆಂದು ಪ್ರತಿಪಾದಿಸಲು ಹೋಗಿ, ವಾದೀಂದ್ರರನ್ನು ಖಂಡಿಸುವ ಆತುರದಲ್ಲಿ ತಮ್ಮಲ್ಲಿರುವ ಸೀತೆಯು ಹಿತ್ತಾಳೆಯ ವಿಗ್ರಹ ಎಂದು ಬಹಿರಂಗ ಪಡಿಸಿ ಆ ವಿಗ್ರಹವಂತೂ ಮೂಲಸೀತಾವಿಗ್ರಹವೇ ಅಲ್ಲವೇ ಎಂಬ ಸಂದಿಗ್ಧತೆಯ ವಿಪರ್ಯಯ ಪರ್ಯವಸಾನಕ್ಕೆ ಬಂದು ತಲುಪಿದಂತಾಯಿತು!

ವಿಜಯಕಾವ್ಯಗಳು

ಸ.ಸೀ.ಮೂ. ಪು : ೨೨ರಲ್ಲಿ **'ಪ್ರಾಚೀನ ವಿಜಯಕಾವ್ಯಗಳಲ್ಲಿ ಐತಿಹಾಸಿಕ ದಾಖಲೆ'** ಎಂಬ ಶೀರ್ಷಿಕೆಯಡಿಯಲ್ಲಿ ತಮ್ಮ ಮಠದಲ್ಲೇ ಶ್ರೀಮೂಲರಾಮ–ದೇವರ ಅಸ್ತಿತ್ವವನ್ನು ಪ್ರತಿಪಾದಿಸಲು, ಒಂಬತ್ತು ಕಾವ್ಯಗಳನ್ನು ಉಲ್ಲೇಖಿಸಿದ್ದಾರೆ. ಈ ಎಲ್ಲ ಕಾವ್ಯಗಳು ಸ್ವಮಠೀಯ ಶಿಷ್ಯ–ಭಕ್ತರಿಂದ ರಚಿಸಲ್ಪಟ್ಟವುಗಳೇ ಹೊರತು ಪರಮತೀಯನಾದ ಸೋಮನಾಥಕವಿ ವಿರಚಿತ 'ಶ್ರೀವ್ಯಾಸಯೋಗಿಚರಿತೆ'–ಯಂತೆ, ಪರಮಠೀಯರಾದ ಮಧ್ವಕವಿ ವಿರಚಿತ 'ಶ್ರೀವಿಜಯೀಂದ್ರವಿಜಯ'–ದಂತೆ ಮತ-ಮಠಾತೀತ ವಲಯದಿಂದ ಬಂದವುಗಳೇನಲ್ಲ. ಅವರವರ ಪರಂಪರೆಯ ಕಾವ್ಯಗಳು ಅವರವರಿಗೆ ಪರಮಪ್ರಮಾಣವಾಗಿರುವುದು ಲೋಕದ ಸಹಜ ಭಾವನೆಯಾಗಿದೆ.

ಆದ್ದರಿಂದ 'ಶ್ರೀವಿದ್ಯಾಧೀಶವಿಜಯ', 'ಶ್ರೀಸತ್ಯನಿಧಿವಿಲಾಸ', 'ಶ್ರೀಸತ್ಯ–ನಾಥಾಭ್ಯುದಯ' ಮುಂತಾದ ಕಾವ್ಯಗಳು ಅವರಿಗೆ ಪ್ರಮಾಣವಾಗುವುದಾದರೆ

ಸೀತಾಪ್ರತಿಮೆಯ ಲಕ್ಷಣ

ವಾಸಿಷ್ಠರಾಮಾಯಣಾದಿ ಪ್ರಾಚೀನ ಗ್ರಂಥಗಳ ಹಾಗೂ ಹರಿದಾಸರ ಕೀರ್ತನೆಗಳ ಪೂರ್ವೋಕ್ತ ಭಾಗಗಳಲ್ಲಿ ನಿರೂಪಿತವಾದ **ಶ್ರೀಮೂಲರಾಮ–ಪ್ರತಿಮೆಯ ಲಕ್ಷಣವೇ ಶ್ರೀಮೂಲಸೀತಾಪ್ರತಿಮೆಯ ಲಕ್ಷಣವೂ ಆಗಿರಬೇಕು. ಭಿನ್ನ ಲಕ್ಷಣಗಳನ್ನು ಹೊಂದಿದ್ದರೆ ಅದು ಜೋಡಿ ಪ್ರತಿಮೆಯಾಗಲಾರದು.** (ಸ.ಸೀ.ಮೂ.ದಲ್ಲಿನ ಅಭಿಷೇಕ ತಟ್ಟೆಯಲ್ಲಿನ ಚಿತ್ರ ನೋಡಿರಿ. ಸೀತಾಪ್ರತಿಮೆ ಅಲಂಕಾರ ಕವಚ ಸಮೇತ ಇರುವುದನ್ನು ಗಮನಿಸಿ). ಶ್ರೀಮೂಲರಾಮಪ್ರತಿಮೆಯು:

೧. **‘ಸರ್ವಲಕ್ಷಣ ಸಂಪನ್ನಾಂ’** ಅಂದರೆ ಸರ್ವ ಶುಭ ಲಕ್ಷಣಗಳಿಂದ ಕೂಡಿದೆ.

೨. **‘ಶುದ್ಧಾಂ ತಾಮ್ರಮಯೀಂ’** ಅಂದರೆ ಶುದ್ಧವಾದ ತಾಮ್ರದಿಂದ ಕೂಡಿದೆ.

೩. **‘ಪಾದೇ ದ್ವಿರದ ಸಂಯುತಾಂ’** ಅಂದರೆ ಪಾದಪೀಠದಲ್ಲಿ ಆನೆಗಳ ಚಿತ್ರ–ಗಳನ್ನು ಹೊಂದಿದೆ.

ಅಂದಮೇಲೆ ಶ್ರೀಮೂಲಸೀತಾಪ್ರತಿಮೆಯೂ –

೧. **‘ಸರ್ವಲಕ್ಷಣ ಸಂಪನ್ನಾಂ’** ಅಂದರೆ ಸರ್ವ ಶುಭ ಲಕ್ಷಣಗಳಿಂದ ಕೂಡಿರಬೇಕು.

೨. **‘ಶುದ್ಧಾಂ ತಾಮ್ರಮಯೀಂ’** ಅಂದರೆ ಶುದ್ಧವಾದ ತಾಮ್ರಮಯವಾಗಿರಬೇಕು.

೩. **‘ಪಾದೇ ದ್ವಿರದ ಸಂಯುತಾಂ’** ಅಂದರೆ ಪಾದಪೀಠದಲ್ಲಿ ಆನೆಗಳ ಚಿತ್ರ–ಗಳನ್ನು ಹೊಂದಿರಬೇಕು. ಆದರೆ,

> **“ತಥೈವ ಸೀತಾಪ್ರತಿಮಾ ವರ್ತತೇ ಪಿತ್ತಲಾತ್ಮಿಕಾ।**
> **ಪಶ್ಚಾದ್ ಭಾಗಸ್ಥಕಬರಾ ವೃತ್ತತಾಮ್ರಾ ಸುಪೀಠಗಾ॥”**

ಎಂದು **‘ಗುರುವಂಶಕಥಾಕಲ್ಪತರು’** ಗ್ರಂಥದಲ್ಲಿ ವಿವರಣೆಗಳಿರುವುದಾಗಿ ಸ.ಸೀ.ಮೂ. ಪುಟ ೨೮ ರಲ್ಲಿ ಹೇಳಿ, ಪುಟ ೨೯ ರಲ್ಲಿ **‘ಹಿತ್ತಾಳೆಯ ಬಣ್ಣ, ದುಂಡಾದ ತಾಮ್ರಪೀಠ, ಸುಂದರ ಜಡೆಯ ಆಭರಣ, ಕಬರಾದಿ ಲಕ್ಷಣಗಳಿಂದ ಕೂಡಿರುವುದು ಮೂಲಸೀತಾ ಪ್ರತಿಮೆ’** ಎಂದು ಅನುವಾದಿಸಲಾಗಿದೆ.

೧. ಅಂದಮೇಲೆ ಅಲ್ಲಿರುವ ಸೀತಾಪ್ರತಿಮೆಯು ಹಿತ್ತಾಳೆಯದು. ಆದರೆ ಮೂಲರಾಮಪ್ರತಿಮೆಯಂತೆ ಮೂಲಸೀತಾಪ್ರತಿಮೆಯೂ ಶುದ್ಧ ತಾಮ್ರ–ಮಯವಾಗಿರಬೇಕಲ್ಲವೇ?

೨. ಮೂಲಸೀತಾಪ್ರತಿಮೆಯ ಪೀಠವು ಮೂಲರಾಮಪ್ರತಿಮೆಯ ಪೀಠದಂತೆ, ಪಾದಪೀಠದಲ್ಲಿ ಆನೆಗಳ ಚಿತ್ರಗಳನ್ನು ಹೊಂದಿರಬೇಕು. ಆದರೆ ಅಲ್ಲಿರುವ ಸೀತಾಪ್ರತಿಮೆ ಹಿತ್ತಾಳೆಯದಾಗಿದ್ದು, ದುಂಡಾದ ತಾಮ್ರಪೀಠವಿದೆ. ಸೀತೆಯ ಪಾದಪೀಠದಲ್ಲಿ ಆನೆಗಳ ಚಿತ್ರವಿಲ್ಲದಿರುವುದೂ ಸ್ಪಷ್ಟವಾಗಿದೆ. ಅಂದರೆ **‘ಪ್ರತಿಮೆ ಬೇರೆ ಲೋಹದ್ದು, ಪೀಠ ಬೇರೆ ಲೋಹದ್ದು’**ಎಂದಾಯಿತು. ಹೀಗೆ ಪ್ರತಿಮೆ ಮತ್ತು ಪೀಠಗಳು ಭಿನ್ನಲೋಹದ್ದಾಗಿರುವುದು ಶಿಲ್ಪಶಾಸ್ತ್ರ ಸಮ್ಮತವೇ?

೩. ಅಲ್ಲಿರುವ ಸೀತಾಪ್ರತಿಮೆಗೆ **‘ಸುಂದರ ಜಡೆಯ ಆಭರಣ’**ವಿದೆ ಎಂದರೆ ಅದು ಪ್ರತಿಮಾಗತವೋ ಅಥವಾ ಹೊರಗಿನಿಂದ ಇಡುವ ಆಭರಣವೋ?

‘ಈ ಎಲ್ಲ ಲಕ್ಷಣಗಳ ವಿಷಯದಲ್ಲಿ ಮಾರ್ಕಂಡೇಯಪುರಾಣ ಉತ್ತರ ಕಾಂಡದ ೯೬ನೇ ಅಧ್ಯಾಯದ ‘ಪುಷ್ಕರ’ ಎಂಬ ಪ್ರಾಚೀನ ಗ್ರಂಥ ಹಾಗೂ ವಾಸಿಷ್ಠರಾಮಾಯಣಗಳ ಆಧಾರವನ್ನು ಈ ಕಾವ್ಯದ ಕವಿಗಳೇ ಉದಾಹರಿ–ಸಿರುವುದು ವಿಷಯದ ಪ್ರಾಮಾಣಿಕತೆಗೆ ಹಿಡಿದ ಕನ್ನಡಿಯಾಗಿದೆ’ ಎಂದು ಮೆಚ್ಚಿಕೊಳ್ಳಲಾಗಿದೆ. **‘ಈ ಸಮಸ್ತ ಲಕ್ಷಣಗಳನ್ನು ಅದ್ಯಾಪಿ ಶ್ರೀಮಠದ ಮೂರ್ತಿ–ಗಳಲ್ಲಿ ಕಾಣಬಹುದಾಗಿದೆ’** ಎಂಬ ವಿವರಣೆಯನ್ನು ನೀಡಿರುವಲ್ಲಿ, ಮತ್ತೆ ಕೆಲವು ಸಮಸ್ಯೆಗಳು ಎದುರಾಗುತ್ತವೆ.

೧. ವಾಸಿಷ್ಠರಾಮಾಯಣದ ಹಸ್ತಪ್ರತಿ ತಮ್ಮಲ್ಲಿದೆಯೆಂದು ಹೇಳಿಕೊಂಡಿ–ರುವ ಸ.ಸೀ.ಮೂ.ಗ್ರಂಥಕಾರರು, ಈ ಎಲ್ಲ ಗ್ರಂಥಗಳಲ್ಲಿ ಹೇಳಿದ ಮೂಲ ಸೀತಾಲಕ್ಷಣದ ಪ್ರಾಚೀನ ಶ್ಲೋಕಗಳನ್ನು ನೇರವಾಗಿ ಮುದ್ರಿಸದಿರಲು ಕಾರಣವೇನು?

೨. ೧೭೮೦ರಲ್ಲಿ ರಚಿತವಾದ ‘ಗುರುವಂಶಕಥಾಕಲ್ಪತರು’ವಿಗಿಂತ ಪ್ರಾಚೀನ–ವಾದ ಯಾವುದಾದರೂ ಪ್ರಮಾಣಗಳಿವೆಯೆ? ಇದ್ದರೆ ಮುದ್ರಿಸಿಲ್ಲವೇಕೆ?

೩. ೧೭೮೦ರಲ್ಲಿ ಗೃಹಸ್ಥಾಶ್ರಮಿಗಳಾದ ದೈವಜ್ಞಭೀಮಾಚಾರ್ಯರಿಂದ ರಚಿತ–ವಾದ ‘ಗುರುವಂಶಕಥಾಕಲ್ಪತರು’ ಗ್ರಂಥವು ಸೀತಾಲಕ್ಷಣಕ್ಕೆ ಪ್ರಮಾಣ–ವಾಗುವುದಾದರೆ ಅದಕ್ಕಿಂತ ಪ್ರಾಚೀನವಾದ, ೧೭೩೦ ರಲ್ಲೇ ಯತಿ–

ಪ್ರತಿಮೆಗಳನ್ನು ಕಂಡು, ಆನಂದ ಪುಲಕಿತರಾಗಿ, ಆಗಲೇ ಅವುಗಳನ್ನು ಪೂಜಿಸಿ ಆನಂದಿಸಿದರು' ಎಂಬ ಕತೆಯ ಮೂಲಕ, ಇಂದಿಗೂ ಉತ್ಥಾನ ದ್ವಾದಶೀ ಸಂಜೆ ಪೂಜೆಮಾಡುವ ಕಾರಣದಿಂದಲೇ ಕೆಲವರು ತಮ್ಮ ಮಠವನ್ನು ಶ್ರೀಮದಾಚಾರ್ಯರು ವಿರಾಜಿಸಿದ ಮೂಲಸಂಸ್ಥಾನವೆಂದು ಹೇಳಿಕೊಳ್ಳ-ಹೊರಟಿರುತ್ತಾರೆ.

೧. 'ಸಂಜೆಯ ಕಾಲದಲ್ಲೇ ಶ್ರೀನರಹರಿತೀರ್ಥರು ಶ್ರೀಪದ್ಮನಾಭತೀರ್ಥರ ಮೂಲಕ ಶ್ರೀಮೂಲರಾಮ ಪ್ರತಿಮೆಯನ್ನು ಶ್ರೀಮದಾಚಾರ್ಯರಿಗೆ ಸಮರ್ಪಿಸಿದರು' ಎಂಬುದಕ್ಕೆ ಶ್ರೀಮದಾಚಾರ್ಯರಿಂದ ಶ್ರೀರಾಮಚಂದ್ರ-ತೀರ್ಥರವರೆಗಿನ ಕಾಲಾವಧಿಯ ಯಾವುದೇ ಪ್ರಾಚೀನ ಪ್ರಮಾಣ-ಗಳಿವೆಯೇ?

೨. ಒಂದೊಮ್ಮೆ ಅದು ಸಂಜೆಯ ಕಾಲವೇ ಆಗಿದ್ದರೆ, ಶ್ರೀರಾಮಚಂದ್ರ-ತೀರ್ಥರ ಕರಕಮಲಸಂಜಾತರಾದ ಶ್ರೀವಿಬುಧೇಂದ್ರತೀರ್ಥರು ಸಹ 'ಉತ್ಥಾನ ದ್ವಾದಶೀ ಸಂಜೆಪೂಜೆಯ' ಸಂಪ್ರದಾಯವನ್ನೇ ಪಾಲಿಸು-ತ್ತಿದ್ದರಲ್ಲವೇ?

೩. ಆದರೆ ಅವರೇ ಪ್ರಮಾಣವೆಂದು ಒಪ್ಪಿ ಮುದ್ರಿಸಿರುವ 'ಗುರುಪುರಂದರ-ದಾಸರಸುಳಾದಿ'ಯಲ್ಲಿ ವಿಚಿತ್ರಸತ್ಯವೊಂದು ಸಾಕ್ಷಾತ್ಕಾರಗೊಂಡಿರು-ವುದು ಸೋಜಿಗವೇ ಸರಿ! **'ಮಧ್ವಮುನಿ ಪೂರ್ಣನಾದ ಕಾರಣ ಶ್ರೀಕೃಷ್ಣ-ಮೂರುತಿಯ । ಗೋಪಿಚಂದನದೊಳು ಬಂದುದಾ ಕಂಡು । ಆ ಗಡ್ಡೆಯಾ ತೆಗೆದುಕೊಂಡು ಅಭಿಷೇಕಮಾಡಿ । ಸಿರಿಕೃಷ್ಣ ಗುರುಪುರಂದರವಿಠ್ಠಲಗೆ ॥ ೧೫ ॥**

ತ್ರಿವಿಡಿ ತಾಳ

'ಶ್ರೀಕೃಷ್ಣನ್ನ ಪಂಚಾಮೃತವಭಿಷೇಕ ಮಾಡುವ ಕಾಲದಲ್ಲಿ । ಮೂಲರಾಮ-ಚಂದ್ರ ಸೀತಾದೇವಿಯರ ತಂದು । ಮುಂದಿಟ್ಟು' ಚರಣಗಳಿಗೆರಗಿ ಪದ್ಮನಾಭರು – ನರಹರಿತೀರ್ಥರು ಯಾತ್ರೆಯ ಮಾಡಿದ ಸೇವೆ ಕೈಗೊಂಡು । 'ಅತಿ ಹರುಷದಿ ಒಡನೆ ಅಭಿಷೇಕವನು ಮಾಡಿ ।.....' (ಸ.ಸೀ.ಮೂ. ಪುಟ ೫೮)

ಸುಳಾದಿಯ ಈ ಭಾಗದ ಪ್ರಕಾರ, ಶ್ರೀಮದಾಚಾರ್ಯರು ಉಡುಪಿಯ ಶ್ರೀಕೃಷ್ಣಮಠದಲ್ಲಿರುವ ಶ್ರೀಕೃಷ್ಣದೇವರಿಗೆ ಪಂಚಾಮೃತ ಅಭಿಷೇಕ ನಡೆಸುವ

ಕಾಲದಲ್ಲಿ, ಅಂದರೆ ಅಂದಾಜು ಪ್ರಾತಃಕಾಲ ಆರು ಗಂಟೆಗೆ; ಒಂದೊಮ್ಮೆ ಅಂದು ಉತ್ಥಾನ ದ್ವಾದಶಿಯೆಂದೇ ನಂಬುವುದಾದರೆ ಅಂದಾಜು ಪ್ರಾತಃಕಾಲ ನಾಲ್ಕು ಗಂಟೆಯ ಬ್ರಾಹ್ಮೀ ಮುಹೂರ್ತದಲ್ಲಿ ಸಮರ್ಪಿಸಿದರೆಂದು ತಿಳಿಯ-ಬೇಕಾಗುತ್ತದೆ.

೪. ಉಡುಪಿಯ ಶ್ರೀಕೃಷ್ಣದೇವರಿಗೆ ಪಂಚಾಮೃತಅಭಿಷೇಕವನ್ನು ಯಾವುದೇ ಕಾರಣಕ್ಕೂ, ಎಂದಿಗೂ, ಯಾರೂ ಸಂಜೆಯಹೊತ್ತು ನಡೆಸುವುದಿಲ್ಲ-ವಾದ್ದರಿಂದ; ಗುರುಪುರಂದರದಾಸರ ಪ್ರಕೃತ ಸುಳಾದಿಯ ಈ ಭಾಗ-ವನ್ನು ಪ್ರಮಾಣವೆಂದು ನಂಬುವುದಾದರೆ, **'ಶ್ರೀನರಹರಿತೀರ್ಥರು ಶ್ರೀಮದಾಚಾರ್ಯರಿಗೆ ಶ್ರೀಮೂಲರಾಮಪ್ರತಿಮೆಯನ್ನು ಸಮರ್ಪಿಸಿದ್ದು ಸಂಜೆಯಂತೂ ಅಲ್ಲವೇ ಅಲ್ಲ'** ಎಂದು ಹೇಳಬೇಕಾಗುತ್ತದೆ.

೫. ಇದರಿಂದ, ಆ ಮಠದಲ್ಲಿ ಮಾತ್ರ ಆಚರಣೆಯಲ್ಲಿರುವ ಉತ್ಥಾನದ್ವಾದಶೀ ಸಂಜೆಯ ಪ್ರತಿಮಾಪೂಜೆಗೂ, ಶ್ರೀಮೂಲರಾಮದೇವರ ಅಸ್ತಿತ್ವಕ್ಕೂ ಸಾಂಗತ್ಯವೇ ಇಲ್ಲವಾಗುತ್ತದೆ.

೬. ಅಥವಾ ಗುರುಪುರಂದರದಾಸರ ಪ್ರಕೃತಸುಳಾದಿಯು ಅಪ್ರಮಾಣ-ವೆಂದು ಸ.ಸೀ.ಮೂ. ಗ್ರಂಥಕಾರರು ಒಪ್ಪಕೊಳ್ಳಬೇಕಾಗುತ್ತದೆ.

ವಸ್ತುಸ್ಥಿತಿ ಹೀಗಿರುವಾಗ ಉತ್ಥಾನದ್ವಾದಶೀ ಸಂಜೆ ಪೂಜೆ ಮಾಡು-ವುದರಿಂದಲೇ 'ಶ್ರೀಮದಾಚಾರ್ಯರ ಮೂಲಮಹಾಸಂಸ್ಥಾನ' ಎಂದು ಹೇಳಿ-ಕೊಳ್ಳುವ ಮಾತಿಗೆ ಎಷ್ಟು ಬೆಲೆ ಬಂದೀತು! ವಾಚಕರೇ ಗಮನಿಸಬಹುದು.

ಹಾಗೆ ನೋಡಿದರೆ ಎಲ್ಲ ಮಠ / ಮನೆಗಳಲ್ಲೂ ಅಂದು ಸಾಯಂಪೂಜೆ ಜರುಗುವುದು (ಪ್ರತಿಮೆಗಳನ್ನು ತೆಗೆದಾಗಲೀ, ಪೆಟ್ಟಿಗೆಗಾಗಲೀ).

ಇದುವರೆಗಿನ ಚರ್ಚೆಯಿಂದ ತಿಳಿದುಬರುವುದೇನೆಂದರೆ 'ದ್ವಿರದ' ಎನ್ನುವ ವಾಸಿಷ್ಠ ರಾಮಾಯಣದ ವಾಕ್ಯವು 'ಗೆಜ್ಜೆಯ' ಬಗ್ಗೆ ಹೇಳಲು ಹೊರಟಿಲ್ಲ. ಒಂದೊಮ್ಮೆ ಹಾಗೆ ಅರ್ಥಮಾಡಿದರೂ ಗೆಜ್ಜೆ ಹಾಗೂ ಅಂದಿಗೆ ಇವೆಲ್ಲವೂ ಪ್ರತಿಮೆಗೆ ಹೊರಗಿನಿಂದ ತೊಡಿಸಿರಬಹುದಾದ ಚಿನ್ನದ ಆಭರಣಗಳಾಗಿ-ರಬೇಕು ಎಂದು ನಿರ್ಣಯಿಸಬಹುದಾಗಿದೆ. ಪೀಠದಲ್ಲಿ ಆನೆಯಿರುವ ಲಕ್ಷಣ-ವನ್ನು ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿರುವ ಮೂಲರಾಮನ ಪ್ರತಿಮೆ-ಯಲ್ಲಿ ಮಾತ್ರ ಕಾಣಬಹುದಾಗಿದೆ.

ಗುರುವಂಶಕಥಾಕಲ್ಪತರು ಗ್ರಂಥೋಕ್ತ ಲಕ್ಷಣ ವಿಮರ್ಶೆ

ಸ.ಸೀ.ಮೂ. ಪುಸ್ತಕದ ಪು. ೨೮ರ ಪ್ರಕಾರ ದೈವಜ್ಞ ಭೀಮಾಚಾರ್ಯರು ೧೭೮೦ರಲ್ಲಿ ರಚಿಸಿದ ಕಾವ್ಯ 'ಶ್ರೀಪೂರ್ಣಬೋಧಗುರುವಂಶಕಥಾಕಲ್ಪತರು'. ಇದರ ೩ನೇ ಸರ್ಗದಲ್ಲಿ ಮೂಲರಾಮನ ಲಕ್ಷಣ ಹೇಳುವಲ್ಲಿ –

"ವಾಮಜಂಘಾಲಸದ್ವೀರಕಂಕಣಾಮಿತಲಕ್ಷಣಾ ।
ಭಾತಿ ಯಸ್ಯಾಃ ಸವ್ಯಪಾದೇ ಬ್ರಹ್ಮನಿರ್ಮಿತನೂಪುರಃ ॥" ಎಂದಿದೆ.

ಈ ಲಕ್ಷಣಗಳನ್ನು ಆ ಮಠದಲ್ಲಿರುವ ಮೂರ್ತಿಗೆ ಹೊಂದುವಂತೆ ಹೇಳಿರುವರೇ ವಿನಃ, ಮಾರ್ಕಂಡೇಯ ಪುರಾಣ, ವಾಸಿಷ್ಠ ರಾಮಾಯಣದ ಮೂಲ ಶ್ಲೋಕಗಳಲ್ಲಿ ಕಂಕಣ, ನೂಪುರಗಳ ಸ್ಪಷ್ಟ ಪ್ರಸ್ತಾಪವಿಲ್ಲ. ಒಂದೊಮ್ಮೆ ಇದ್ದರೆ ಮಾರ್ಕಂಡೇಯ ಪುರಾಣ, ವಾಸಿಷ್ಠ ರಾಮಾಯಣದ ಮೂಲ ಶ್ಲೋಕಗಳನ್ನು ಕೊಡದಿರಲು ಕಾರಣವೇನು?

ನೂಪುರವು ಬ್ರಹ್ಮನಿರ್ಮಿತವೇ?

ಮೂಲರಾಮ ಪ್ರತಿಮೆಯು ವಾಶಿಷ್ಠ ರಾಮಾಯಣದ ಪ್ರಕಾರ ಸ್ವಯಂವ್ಯಕ್ತ. ಎಲ್ಲ ಹರಿದಾಸರ ಪ್ರಕಾರ ಮತ್ತು ಶ್ರೀವಾದೀಂದ್ರತೀರ್ಥರ 'ಅರ್ಚಾಗತಿಕ್ರಮ'ದ ಪ್ರಕಾರ ಮೂಲರಾಮಪ್ರತಿಮೆಯು ಬ್ರಹ್ಮದೇವರ ಆಜ್ಞೆಯ ಪ್ರಕಾರ ವಿಶ್ವಕರ್ಮನಿಂದ ರಚಿತವಾಗಿದೆ. ಹೀಗಿರುವಾಗ ಮೂಲರಾಮದೇವರ ಎಡಪಾದದಲ್ಲಿ ಬ್ರಹ್ಮನಿರ್ಮಿತ ನೂಪುರವಿದೆ ಎಂಬ ದೈವಜ್ಞ ಭೀಮಾಚಾರ್ಯರ **'ಶ್ರೀಪೂರ್ಣಬೋಧಗುರುವಂಶಕಥಾಕಲ್ಪತರು'** ಕಾವ್ಯದ ಹೇಳಿಕೆಗೆ ಅರ್ಥವೇನು?

೧. ಪ್ರತಿಮೆ ಸ್ವಯಂವ್ಯಕ್ತವಾಗಿದ್ದು ನೂಪುರವನ್ನು ಮಾತ್ರ ಬ್ರಹ್ಮದೇವರು ನಿರ್ಮಿಸಿದರೇ?

೨. ಪ್ರತಿಮೆ ವಿಶ್ವಕರ್ಮ ನಿರ್ಮಿತವಾಗಿದ್ದು ನೂಪುರವನ್ನು ಮಾತ್ರ ಬ್ರಹ್ಮದೇವರು ನಿರ್ಮಿಸಿದರೇ?

ಇತ್ಯಾದಿ ಸಂದೇಹಗಳು ಉತ್ತರವಿಲ್ಲದೆ ಉಳಿಯುತ್ತವೆ.

- ವಾಸಿಷ್ಠ ರಾಮಾಯಣದಲ್ಲಿ **'ಪಾದೇ ದ್ವಿರದ ಸಂಯುತಾ'** ಎಂದು ಮಾತ್ರ ಇದ್ದು. ಅಲ್ಲಿ

೧. ಗೆಜ್ಜೆ ಒಂದೋ / ಎರಡೋ,

೨. ಎಡಗಾಲಿನಲ್ಲೊ – ಬಲಗಾಲಿನಲ್ಲೋ,

೩. ಅಥವಾ ಎರಡೂ ಪಾದಗಳಲ್ಲೋ ಎಂಬುದು ಸ್ಪಷ್ಟವಿಲ್ಲ.

- ಶ್ರೀಪಾದರಾಜರ ಕೀರ್ತನೆಯಲ್ಲಿ **'ಕಿರುಗೆಜ್ಜೆ'** ಮತ್ತು **'ಪೊನ್ನಂದುಗೆ'** ಎಂದು ಎರಡು ಆಭರಣಗಳಾದವು.
- ಮುದ್ದುವಿಠಲರ ಸುಳಾದಿಯಲ್ಲಿ ಅವು ಎಡದ ಪಾದದಲ್ಲಿ ಎಂದು ಹೇಳಲಾಯಿತು.
- ಭೀಮಾಚಾರ್ಯರ ಕಾವ್ಯದಲ್ಲಿ ಒಂದು ವೀರಕಂಕಣವೆಂದೂ, ಅದು ವಾಮಜಂಘೆಯಲ್ಲಿದೆಯಂದೂ, ಮತ್ತೊಂದು ಬ್ರಹ್ಮನಿರ್ಮಿತ ನೂಪುರವೆಂದೂ, ಅದು ಸವ್ಯ(ಎಡ)ಪಾದದಲ್ಲಿದೆಯೆಂದೂ, ಸ್ಪಷ್ಟಪಡಿಸಲಾಯಿತು.
- ಬಲಗಾಲಿನ ಕಡಗವನ್ನು ಯಾರೂ ಪ್ರಸ್ತಾಪಿಸಿದಂತಾಗಲಿಲ್ಲ. ಯಾರೂ ಹೇಳಲಿಲ್ಲವಾದ್ದರಿಂದ ಪ್ರತಿಮೆಯ ಬಲಗಾಲಿನಲ್ಲಿ ಕಣ್ಣಾರೆ ಕಾಣುತ್ತಿರುವ ಪ್ರತಿಮಾಗತ ತಾಮ್ರಮಯ ಕಡಗವು ಹಾಗು ವೀರಕಂಕಣವು ಕಾಣಲಿಲ್ಲವೆಂದುಕೊಳ್ಳಬೇಕೆ?
- ಉತ್ತರಾದಿಯವರದೇ ಆದ ಗುರುಪೀಳಿಗೆ (ORI. Mysore – No. KB 431) ಪ್ರಕಾರ 'ಮೂಲರಾಮದೇವರ ಎಡದ ಕಾಲಲ್ಲಿ ಜಂಘೆಯಲ್ಲಿ ಸ್ವರ್ಣದಿಂದಿಗೆ ಕಾಲುಸುತ ತಿರುಗೋದು ಹಾಂಗೆ ತೆಗೆಯಲಿಕ್ಕೆ ಬಾರದು' ಎಂದಿದೆ. ಅದು ಆಭರಣವೇ ಹೊರತು ವಿಗ್ರಹಗತ ಲಕ್ಷಣವಲ್ಲ. ಈಗ ಕಾಲಲ್ಲಿ ಸಡಿಲಾಗಿ ತಿರುಗುವ ಕಡಗವಿದೆಯೇ?

ಅಂತೂ ಸ.ಸೀ.ಮೂ.ಗ್ರಂಥದಲ್ಲಿ ಹೇಳಿರುವ ಮೂಲರಾಮ ಪ್ರತಿಮಾ ಲಕ್ಷಣಗಳು ಪರಸ್ಪರ ಗೊಂದಲಗಳಿಂದ ಕೂಡಿವೆ ಮತ್ತು ಕಾಲದಿಂದ ಕಾಲಕ್ಕೆ ಹೆಚ್ಚಿನ ವಿವರಗಳನ್ನು ಸೇರಿಸಿಕೊಳ್ಳುತ್ತಾ ಹೋದಂತಿವೆ. ಹೀಗಾಗಿ ಇವುಗಳ ವಿಶ್ವಾಸಾರ್ಹತೆ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಮೂಲರಾಮನನ್ನು ಸಂಜೆ ಪೂಜಿಸಿದರೇ?

ಸ.ಸೀ.ಮೂ. ೧೩ರಲ್ಲಿ, **'ಅಂದು ಉತ್ಥಾನದ್ವಾದಶೀ. ಸಂಜೆಯ ಸಮಯವಾಗಿತ್ತು. ಶ್ರೀಮದಾಚಾರ್ಯರು ತಮ್ಮ ಹಿಂದಿನ ಅವತಾರಗಳಲ್ಲಿ ಪೂಜಿಸಿದ್ದ ಆ**

೪. ಸ.ಸೀ.ಮೂದಲ್ಲಿರುವ ರಾಮದೇವರ ತಾಮ್ರದ ಪ್ರತಿಮೆಯ ಎಡಗಾಲಿ–ನಲ್ಲಿ ಚಿನ್ನದ ಗೆಜ್ಜೆ ಕಂಡುಬರುವುದಿಲ್ಲವಾದ್ದರಿಂದ **'ಕಾಲಲ್ಲಿ ಕಿರುಗೆಜ್ಜೆ ಮ್ಯಾಲೆ ಪೊನ್ನಂದಿಗೆ'** ಎಂಬ ಸಾಲು ಪ್ರತ್ಯಕ್ಷ ವಿರೋಧವಾಗುತ್ತದೆ.

೫. ತಾಮ್ರದ ಪ್ರತಿಮೆಗೆ ಹಿತ್ತಾಳೆ ಲೋಹವನ್ನು ಬೆರೆಸಿ ಆಭರಣ ಸ್ಥಾನದಲ್ಲಿ ಹಿತ್ತಾಳೆಯನ್ನು ಕೂಡಿಸಿರುವ ಮಿಶ್ರ ಲೋಹದ ಪ್ರತಿಮೆಗಳು ಸಾಕಷ್ಟು ಕಾಣಸಿಗುತ್ತವೆ. ಆದರೆ ತಾಮ್ರ ಪ್ರತಿಮೆಗೆ ಚಿನ್ನವನ್ನು ಬೆರೆಸಿ ಆಭರಣ ಸ್ಥಾನದಲ್ಲಿ ಚಿನ್ನವನ್ನು ಪ್ರತಿಮಾಗತವಾಗಿ ಕೂಡಿಸಿರುವ ಒಂದೇ ಒಂದು ಪ್ರತಿಮೆಯೂ ಇಲ್ಲ. ಅಂದರೆ ತಾಮ್ರ ಪ್ರತಿಮೆಗೆ ಚಿನ್ನದ ಲೋಹವನ್ನು ಬೆರೆಸಿ ಆಯಾ ಆಭರಣ ಸ್ಥಾನಗಳಲ್ಲಿ ಚಿನ್ನ ಒಂದನ್ನೇ ಕೂಡಿಸಿ ಪ್ರತಿಮೆ ನಿರ್ಮಿಸಲು ಸಾಧ್ಯವಿಲ್ಲ. ಆದ್ದರಿಂದ **'ಕಾಲಲ್ಲಿ ಕಿರುಗೆಜ್ಜೆ ಮ್ಯಾಲೆ ಪೊನ್ನಂದಿಗೆ'** ಎಂದು ವರ್ಣಿಸಿರುವುದು ಪ್ರತಿಮಾಶಾಸ್ತ್ರಾತೀತವಾಗುತ್ತದೆ. ಈ ರೀತಿಯ ಪ್ರತಿಮಾ ನಿರ್ಮಾಣದ ಸಾಧ್ಯತೆಯು ಪ್ರತಿಮಾಶಾಸ್ತ್ರ(ಲೋಹ ಸಂಯೋಜನ ಶಾಸ್ತ್ರ)ದಲ್ಲಿ ಹೇಳಿಲ್ಲ.

೬. ಈ ಕೀರ್ತನೆಯ ಇತರ ನುಡಿಗಳಲ್ಲಿ ಇತರ ಯಾವುದೇ ಪ್ರತಿಮೆಗಳಿಗೆ ಯಾವುದೇ ಲಕ್ಷಣ ಹೇಳದೆ ಮೂಲರಾಮನಿಗೆ ಮಾತ್ರ **'ಕಾಲಲ್ಲಿ ಕಿರುಗೆಜ್ಜೆ ಮ್ಯಾಲೆ ಪೊನ್ನಂದಿಗೆ'** ಎಂದು ಹೇಳಿರುವುದರಿಂದ ಈ ಕೀರ್ತನೆಯ ಪ್ರಾಮಾಣಿಕತೆಯ ಬಗ್ಗೆ ಸಂಶಯಗಳು ಎದುರಾಗುತ್ತವೆ.

ಈ ಆರೂ ಕಾರಣಗಳಿಂದಾಗಿ ಇಂತಹ ಪದವನ್ನು ಶ್ರೀಪಾದರಾಜರು ರಚಿಸಿರುವರೆಂದು ನಂಬುವುದೇ ಸಾಧ್ಯವಿಲ್ಲದಿರುವಾಗ **'ಮೋಹನದಾಸರ ಮೊಮ್ಮಕ್ಕಳಾದ ವೆಂಕೋಬದಾಸರ ಹಸ್ತಲಿಖಿತ ಪ್ರತಿ'** ಎಂದು ನಂಬುವುದಾದರೂ ಹೇಗೆ?

'ಎಡದ ಕಾಲಲ್ಲಿ 'ಸ್ವರ್ಣದಂದಿಗೆ' – ವಿಮರ್ಶೆ

ಸ.ಸೀ.ಮೂ. ಪು: ೧೭೭ರಲ್ಲಿ ಪ್ರತಿಮಾಲಕ್ಷಣವಿಚಾರದಲ್ಲಿ ಮುದ್ದುವಿಠಲರ ಕೃತಿಯನ್ನೂ ನೀಡಿದ್ದಾರೆ. **'ಎಡದ ಕಾಲಲ್ಲಿ ಸ್ವರ್ಣದಂದಿಗೆ ಗೆಜ್ಜೆ ಘಲಿವಾರಂದಿಗೆ ಧರಿಸಿ ಮೂಲರಾಮ...... ಎಂಬ ಸಾಲು ಮೇಲಿನ ಪ್ರಮಾಣಗಳಿಗೆ ಸಂವಾದಿ–ಯಾಗಿದೆ'** ಎಂದು ಬರೆದಿದ್ದಾರೆ. ಶ್ರೀಮುದ್ದುವಿಠಲರೂ ಕೂಡ 'ಸ್ವರ್ಣದಿಂದಿಗೆ'

ಎಂದೇ ಪ್ರಯೋಗಿಸಿದ್ದಾರೆ. ಇಲ್ಲಿಯೂ ಅದೇ ಪ್ರಶ್ನೆ ಬರುತ್ತದೆ, ತಾಮ್ರಮಯ ಪ್ರತಿಮೆಗೆ ಬಂಗಾರದ ಗೆಜ್ಜೆ ಎಂದು ಅರ್ಥಮಾಡಬೇಕೆ? ಹೀಗೆ ಮಾಡಿದರೆ ಅದು ಹೊರಗಿನಿಂದ ಇಟ್ಟ ಆಭರಣವೆಂಬ ಅರ್ಥ ಬರುತ್ತದೆಯೇ ಹೊರತು ಪ್ರತಿಮಾಗತ ಹೊನ್ನಿನ ಲಕ್ಷಣವಾಗಲಾರದು.

ಮುದ್ದುವಿಠಲರ ಸುಳಾದಿಯಲ್ಲಿ ಕಂಡುಬರುವ ಕ್ಲೇಶಗಳು

ಸ.ಸೀ.ಮೂ. ಪರಿಶಿಷ್ಟ ೨, ಪುಟ: ೬೦ರಲ್ಲಿ ಮುದ್ರಿಸಿದ ಮುದ್ದುವಿಠಲ–ದಾಸರ ಸುಳಾದಿಯು ಸಾಕಷ್ಟು ಅಬೋಧಕ ಪಾಠಗಳನ್ನು ಒಳಗೊಂಡಿದೆ. ಉದಾ:

೧. ತ್ರಿವಿಡಿ ತಾಳದಲ್ಲಿ 'ಲಾಂಗುಲ ಮಹಾನದಿಯೊಳು ಸ್ಥಾಪನಮಾಡಿ' ಎಂಬಲ್ಲಿ 'ಏನನ್ನು' ಎಂಬುದು ತಿಳಿಯುತ್ತಿಲ್ಲ.

೨. ೯ನೇ ಏಕತಾಳದಲ್ಲಿ **"ಅಕ್ಷೋಭ್ಯತೀರ್ಥರಿಂದ ಉಪದೇಶ । ಎನಗ ಕರುಣಾ ಕಟಾಕ್ಷದಿಂದ ಪೇಳಿದ ವಾಕ್ಯಗಳು । ಎನಗಿಂದೊಂದೆರಡು ಗುಣದುತ್ತಮ–ರಿಂದ । ಮಧ್ವಮುನಿ ಪರಿಯಂತ ತಾರತಮ್ಯವಾಗಿ ಋಜುಗಣದ ಜೀವರು ಅನಾದಿ ಕಾಲದಿ ಮುದ್ದುವಿಠಲನ ಪೂಜೆ ಮಾಡುವರು ॥"** ಎಂದಿದೆ.

೩. ಇಲ್ಲಿ ಅಕ್ಷೋಭ್ಯತೀರ್ಥರು ಯಾರಿಗೆ ಹೇಳಿದರು?

೪. ಮೂಲರಾಮನ ಪೂಜೆಯನ್ನು ಮಾಡುವವರೆಲ್ಲರೂ ಋಜುಗಳೆಂದು ಅಭಿಪ್ರಾಯವೇ?

೫. ಮುದ್ದುವಿಠಲರು ಅಕ್ಷೋಭ್ಯತೀರ್ಥರ ಕಾಲದವರೇ?

೬. ಹೌದಾದರೆ ಶ್ರೀಪಾದರಾಜರಿಗಿಂತ ಪ್ರಾಚೀನರಾಗುವುದಿಲ್ಲವೇ?

೭. ಪ್ರಾಚೀನರಾದರೆ ಪ್ರಸಿದ್ಧಿಯೇಕಿಲ್ಲ?

ಅರ್ವಾಚೀನರಾದರೆ ಅಕ್ಷೋಭ್ಯತೀರ್ಥರು ಮುದ್ದುವಿಠಲರಿಗೆ ಕರುಣಾ ಕಟಾಕ್ಷದಿಂದ ವಾಕ್ಯಗಳನ್ನು ಪೇಳುವ ಪ್ರಸಂಗವೇ ಬರುವುದಿಲ್ಲ. ಮುದ್ದುವಿಠಲರ ಸುಳಾದಿಯು ಪ್ರಾಸಾನುಪ್ರಾಸಗಳ ಅನಿಯತತೆ, ಅರ್ಥಸುಭಗತೆಯರಾಹಿತ್ಯ ಮುಂತಾದ ದೋಷಗಳಿಂದ ಗ್ರಸ್ತವಾಗಿದೆ. ಇದರ ಪ್ರಾಮಾಣ್ಯ ಶಂಕಾಸ್ಪದವೇ ಸರಿ.

ಶ್ರೀಶ್ರೀಪಾದರಾಜರ ಸರಳ, ಸುಂದರ, ಮನೋಹರ ಶೈಲಿ ಎಲ್ಲಿ? ಈ ಕೃತಿಯ ಸಪ್ಪೆ ಶೈಲಿ ಎಲ್ಲಿ? ಈ ಕೀರ್ತನೆಯ ಪಲ್ಲವಿಯಿಂದ ಹಿಡಿದು ಚರಣ–ಗಳೆಲ್ಲ ಒಂದೇ ರೀತಿಯ ಪಾದವಿಸ್ತಾರವನ್ನು ಹೊಂದಿಲ್ಲ. 'ರಘುನಾಥ ಮುನಿಪಗೆ ರಾಷ್ಟ್ರದೊಳೆಲ್ಲ ಯೋಗಿಯಂತೆ ಚರಿಸುತಲಿಂದ್ಯನ' ಎಂದರೇನು ಸ್ಪಷ್ಟವಾಗ–ಲಿಲ್ಲ. ಕೊನೆಯ ಚರಣದಲ್ಲಿ ಶ್ರೀಪಾದರಾಜರು ತಮ್ಮ ಆರಾಧ್ಯದೇವರಾದ ಗೋಪೀನಾಥ, ರಂಗವಿಠಲರನ್ನು ಪ್ರಸ್ತಾಪಿಸಿದಂತೆ ಕಂಡುಬಂದರೂ ಆ ಹೊತ್ತಿ–ಗಾಗಲೇ ಶ್ರೀಪಾದರಾಜರಿಗೆ ವಾದಿದಿಗ್ವಿಜಯ ಕರುಣಿಸಿದ ಶ್ರೀಹಯವದನ–ನನ್ನು ಪ್ರಸ್ತಾಪಿಸದಿರುವುದರಿಂದ ಕೀರ್ತನೆಯ ಪ್ರಾಮಾಣಿಕತೆಯ ಬಗ್ಗೆ ಸಂದೇಹ ದೃಢವಾಗುತ್ತದೆ. ಶ್ರೀವಾದಿರಾಜರು ಇದೇ ಸಂಸ್ಥಾನದ ದೇವರನ್ನು ಇದೇ ಲಾಲಿ ಶೈಲಿಯಲ್ಲಿ ಸ್ತುತಿಸಿದಾಗ 'ಲಾಲಿ ಶ್ರೀಹಯವದನ, ಲಾಲಿ ರಂಗವಿಠಲ, ಲಾಲಿ ಗೋಪೀನಾಥ ಲಕ್ಷ್ಮೀಸಮೇತ' ಎಂದೇ ಹೇಳಿದ್ದಾರೆ.

ಇನ್ನು ಈ ಕೀರ್ತನೆಯಲ್ಲಿ ಪ್ರತಿಪಾದಿತವಾದ ಭಗವನ್ಮೂರ್ತಿಗಳ ಹಾಗೂ ಅವುಗಳ ಲಕ್ಷಣಗಳ ಬಗ್ಗೆ ಬಹಳ ಕಾಲದಿಂದಲೂ ವಿವಾದಗಳು ಪ್ರಚಲಿತ–ದಲ್ಲಿರುವುದರಿಂದ ಅದನ್ನು ಹೇಳಿಕೊಳ್ಳಲು ಯಾರೋ ಈ ಪದವನ್ನು ಸುಮಾರು ೧೦೦ – ೨೦೦ ವರ್ಷಗಳ ಹಿಂದೆ ರಚಿಸಿ ತಾವೇ 'ರಂಗವಿಠಲ'ನೆಂಬ ಅಂಕಿತ ಇಟ್ಟು ಶ್ರೀಪಾದರಾಜರ ಕೀರ್ತನೆ ಎಂದು ಹೆಸರಿಟ್ಟಿರುವುದು ಮೇಲ್ನೋಟ–ಕ್ಕೇನೇ ಕಾಣುತ್ತದೆ. ಅಲ್ಲದೇ ೨೦೦ ವರ್ಷಗಳ ಹಿಂದೆ ರಚಿಸಿದ್ದರೂ ಮೊನ್ನೆ–ಯವರೆಗೆ ಅದು ಬೆಳಕಿಗೇಕೆ ಬರಲಿಲ್ಲ ಎಂಬ ಸಮಸ್ಯೆಯೂ ಎದುರಾಗು–ವುದು.

ಅಲ್ಲದೇ, ಒಂದು ವೇಳೆ ಈ ಕೃತಿಯು ಶ್ರೀಶ್ರೀಪಾದರಾಜರದೆಂಬುದು ನಿಜವೇ ಆಗಿದ್ದಲ್ಲಿ, ಅದರಲ್ಲಿನ ವಿಷಯಗಳು ಐತಿಹಾಸಿಕವಾಗಿದ್ದುದರಿಂದ ಅದು ಹಿಂದಿನಿಂದಲೂ ಪ್ರಚಾರಕ್ಕೆ ಬಂದಿರಬೇಕಾಗಿತ್ತು. ಕ್ರಿ.ಶ. ೧೪೧೨ ರಲ್ಲಿ ಪೀಠಾಧಿಪತಿಗಳಾದ, ರಾಜಗುರುಗಳಾದ ಲಕ್ಷ್ಮೀನಾರಾಯಣಯೋಗಿಗಳು (ಶ್ರೀಶ್ರೀಪಾದರಾಜರು) ಕ್ರಿ.ಶ. ೧೪೪೪ ರಲ್ಲಿ ಉತ್ತರಾದಿ ಮಠದ ಪೀಠವನ್ನೇರಿದ ಬಿಡಿ ಸನ್ಯಾಸಿಗಳಂತೆ ಸಂಚರಿಸುತ್ತಿದ್ದ ಶ್ರೀರಘುನಾಥತೀರ್ಥರ ಪೂಜೆಯನ್ನು ನೋಡಲು ಹೋಗಿ ಪದ ರಚಿಸಿದರೆಂಬ ಕಲ್ಪನೆಯೂ ಅಸಂಭವ. ಆದ್ದರಿಂದ ಇದು ಶ್ರೀರಘುನಾಥತೀರ್ಥರ ವ್ಯಕ್ತಿತ್ವವನ್ನು ಎತ್ತರಿಸುವ ಹವಣಿಕೆಯಾಗಿದ್ದು

ಶ್ರೀಪಾದರಾಜರಿಗೂ, ಶ್ರೀರಘುನಾಥತೀರ್ಥರಿಗೂ ಇಲ್ಲದ ಸಂಬಂಧವನ್ನು ಕಲ್ಪಿಸಲಾಗಿದೆ. ಈ ಹಿಂದೆ ಶ್ರೀಪುರಂದರದಾಸರು ಶ್ರೀರಘುನಾಥತೀರ್ಥರ ಪೂಜೆಯನ್ನು ವರ್ಣಿಸುವ ಪದವೂ ಕೃತ್ರಿಮ ಎಂದು ಡಾ. ಬಿ.ಎನ್.ಕೆ. ಶರ್ಮಾ–ರವರು, ಡಾ. ಹೆಚ್.ಕೆ. ವೇದವ್ಯಾಸಾಚಾರ್ಯರವರು ಮುಂತಾದ ಮೇಧಾವಿ–ಗಳು ನಿರಾಕರಿಸಿದಂತೆ ಈ ಕೃತಿಯೂ ಕೃತ್ರಿಮವೆಂದು ತಿರಸ್ಕರಿಸಲು ಯೋಗ್ಯ–ವಾಗಿದೆ.

ಉತ್ತರಾದಿ ಮಠೀಯರು ಪದೇ ಪದೇ ಇಂತಹ ಕೃತ್ರಿಮ ಕಾಗದಗಳನ್ನು ಸೃಷ್ಟಿಸುವುದನ್ನು ಬಿಟ್ಟು ಯಥಾರ್ಥ ವಿಷಯಗಳ ಕಡೆಗೆ ಗಮನ ಕೊಡಲೆಂದು ಅಸ್ಮದುಪಾಸ್ಯ ಶ್ರೀಹಯವದನ ರಂಗವಿಠಲ ಗೋಪೀನಾಥದೇವರನ್ನು ಪ್ರಾರ್ಥಿಸುವೆವು.

ಮುಳಬಾಗಿಲು — **ಶ್ರೀ ೧೦೮ ಶ್ರೀವಿಜ್ಞಾನನಿಧಿತೀರ್ಥಶ್ರೀಪಾದಂಗಳವರು**

೦೭–೦೬–೨೦೦೯ — ಶ್ರೀಶ್ರೀಪಾದರಾಜ ಮಠ, ಮುಳಬಾಗಿಲು

★★

೧. ಇದುವರೆಗೆ ಈ ಕೀರ್ತನೆಯನ್ನು ಶೈಲಿಯ ದೃಷ್ಟಿಯಿಂದ ಶ್ರೀಪಾದರಾಜ ವಿರಚಿತವೆಂದು ಯಾರೂ ಒಪ್ಪಿಲ್ಲ. ಪ್ರಕಟಿಸಿಲ್ಲ.

೨. ಮೂಲರಾಮ ಪ್ರತಿಮೆಯ ಲಕ್ಷಣವನ್ನು ಹೇಳಲು ಈ ಕೀರ್ತನೆಯನ್ನು ಬಳಸಿಕೊಳ್ಳಲಾಗಿದೆ. ಆದರೆ ಅಲ್ಲಿರುವ **'ಕಾಲಲ್ಲಿ ಕಿರುಗೆಜ್ಜೆ ಮ್ಯಾಲೆ ಪೊನ್ನಂದಿಗೆ'** ಎಂಬ ಲಕ್ಷಣ ಮೂಲರಾಮದೇವರ ಪ್ರತಿಮೆಗೆ ಹೊಂದುವುದಿಲ್ಲ.

೩. ಇಲ್ಲಿ ಸಮಸ್ಯೆ ಬರುವುದೇನೆಂದರೆ **'ಶುದ್ಧಾಂ ತಾಮ್ರಮಯೀಂ ಶಸ್ತಾಂ.....'** ಎಂದು ವಾಸಿಷ್ಠ ರಾಮಾಯಣದಲ್ಲಿ ಹೇಳಿದಂತೆ ಶ್ರೀಮೂಲರಾಮ–ದೇವರದು ಶುದ್ಧ ತಾಮ್ರಮಯವಾದ ಪ್ರತಿಮೆ. ಶ್ರೀಪಾದರಾಜರ ಕೀರ್ತನೆ–ಯನ್ನು ಒಪ್ಪುವುದಾದರೆ ಅದರಲ್ಲಿ ಹೇಳಿರುವ **'ಪೊನ್ನಂದುಗೆ'** ಅಂದರೆ **'ಚಿನ್ನದ ಗೆಜ್ಜೆಪೆಂಡೆ'** ಎಂಬುದು ಹೊರಗಿನಿಂದ ತೊಡಿಸಿದ ಆಭರಣವಾಗು–ತ್ತದೆಯೇ ಹೊರತು ಪ್ರತಿಮೆಯ ಸಹಜಾಭರಣ ಎಂಬ ಅರ್ಥ ಸಿಗುವುದಿಲ್ಲ.

ತ್ತಿರುವ ಶ್ರೀಮೂಲರಾಮನ ಪ್ರತಿಮೆಯ ಪೀಠದಲ್ಲಿ ಆನೆಯ ಚಿತ್ರಗಳು ಇರು–ವುದರಿಂದ ವಾಸಿಷ್ಠ ರಾಮಾಯಣದಲ್ಲಿ ಹೇಳಿದ ಲಕ್ಷಣವು ಸ್ಫುಟವಾಗಿ ಹೊಂದು–ತ್ತದೆ.

ಹೀಗಿರುವಾಗ 'ಮೂಲರಾಮದೇವರ ಪ್ರತಿಮೆಯು ಎಲ್ಲಿದೆ' ಎನ್ನುವ ಬಗ್ಗೆ ಸಂಶಯವೇ ಉಳಿಯುವುದಿಲ್ಲ. ಸರ್ವಲಕ್ಷಣಸಂಪನ್ನವಾದ, ಶುದ್ಧ ತಾಮ್ರಮಯವಾದ, ಪಾದಗಳಲ್ಲಿ ಆನೆಗಳಿಂದ ಕೂಡಿದ ಪ್ರತಿಮೆಯೇ ಮೂಲ ರಾಮಚಂದ್ರ ಪ್ರತಿಮೆ. ಆ ಪ್ರತಿಮೆಯು ಇಂದಿಗೂ ಶ್ರೀಮಧ್ವಾಚಾರ್ಯರ ಮೂಲಮಹಾಸಂಸ್ಥಾನವಾದ ಶ್ರೀರಾಘವೇಂದ್ರಸ್ವಾಮಿಗಳ ಮಠದಲ್ಲಿ ಇಂದಿಗೂ ವಿರಾಜಿಸುತ್ತಿದೆ.

'ಶ್ರೀಪಾದರಾಜರು'– ಎಂದವರು ಯಾರು?

೧. ಶ್ರೀಪಾದರಾಜರ ಆಶ್ರಮಗುರುಗಳಾದ ಶ್ರೀಸ್ವರ್ಣವರ್ಣತೀರ್ಥರೇ ಲಕ್ಷ್ಮೀ–ನಾರಾಯಣಮುನಿಗಳಿಗೆ ಪಟ್ಟಾಭಿಷೇಕ ಮಾಡುವಾಗ ಶ್ರೀಪಾದರಾಜ–ರೆಂದು ನಾಮಕರಣ ಮಾಡಿದರೋ? ಅಥವಾ

೨. ಶ್ರೀಲಕ್ಷ್ಮೀನಾರಾಯಣಮುನಿಗಳಿಗೆ 'ಶ್ರೀಪಾದರಾಜ'ರೆಂಬ ಬಿರುದು ಶ್ರೀರಘುನಾಥತೀರ್ಥರಿಂದ ದೊರೆಯಿತು ಎಂಬ ಕಾಲ್ಪನಿಕ ಕಥೆ ವಿವಿಧ ವಿಜಯಕಾವ್ಯಗಳಲ್ಲಿ ಕಂಡುಬಂದರೂ ಕಾಲಗಣನೆಯ ದೃಷ್ಟಿಯಿಂದ ಹೊಂದುವುದಿಲ್ಲ.

[ವಿವರಗಳಿಗೆ – **'ಸತ್ಯಮೇವ ಜಯತೇ',** ಮೂಲ: ಬಿ.ಎನ್.ಕೆ.ಶರ್ಮಾ, ಅನು: ಗೋವಿಂದರಾವ್ ನವಲಗುಂದ, ೨೦೦೫, ಪ್ರಕಾಶನ: ರಾಘವೇಂದ್ರ ಸಾಹಿತ್ಯ ಪರಿಷತ್, ನಂಜನಗೂಡು]

'ತೂಗಿರೋ ರಾಮನ' – ಕೃತಿ ವಿಮರ್ಶೆ

ಶ್ರೀಪಾದರಾಜರೇ ರಚಿಸಿದ್ದಾರೆ ಎಂದು ಉಲ್ಲೇಖಿಸಿರುವ ಕೃತಿ –

"ತೂಗಿರೊ ರಾಮನ ತೂಗಿರೊ ವ್ಯಾಸನ
ತೂಗಿರೊ ವಿಠಲನ್ನ ॥ ಪ ॥

ಕಾಲಲ್ಲಿ ಕಿರುಗೆಜ್ಜೆ ಮ್ಯಾಲೆ ಪೊನ್ನಂದಿಗೆ
ಲೋಲಾಕ್ಷಿ ಸೀತೆಯನಾಳಿದವನ
ಮೂಲರಾಮ ಪಂಚ ವೇದವ್ಯಾಸನಾಗಿ" ॥ ೧ ॥

ಎಂದು ಮುದ್ರಿಸಲಾಗಿದೆ.

★★

'ತೂಗಿರೋ ರಾಮನ' ಕೀರ್ತನೆಗೆ ಶ್ರೀಶ್ರೀಪಾದರಾಜ ಮಠಾಧೀಶರ ಅಭಿಪ್ರಾಯ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯತ್ಯಾದ್ಯನೇಕ ಗುಣಸಂಪನ್ನ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ ಸರ್ವತಂತ್ರ ಸ್ವತಂತ್ರ ಶ್ರೀಮದ್ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀಪದ್ಮನಾಭತೀರ್ಥ ಪರಂಪರಾ ಶ್ರೀಹಯವದನರಂಗವಿಠ್ಠಲಾತ್ಮಕ ಶ್ರೀಗೋಪೀನಾಥದೇವರ ದಿವ್ಯ ಶ್ರೀಪಾದಪದ್ಮಾರಾಧಕರಾದ ಶ್ರೀಪಾದರಾಜ–ವರವಿದ್ಯಾಸಿಂಹಾಸನಾಧೀಶ್ವರರಾದ ಶ್ರೀ ೧೦೮ ಶ್ರೀವಿಜ್ಞಾನನಿಧಿತೀರ್ಥ–ಶ್ರೀಪಾದಂಗಳವರು ಮಾಡುವ ನಾರಾಯಣ ಸ್ಮರಣೆಗಳು.

ಇತ್ತೀಚೆಗೆ ಶ್ರೀಶ್ರೀಪಾದರಾಜರ ಕೃತಿಯೆಂದು 'ತೂಗಿರೋ ರಾಮನ ತೂಗೀರೋ ವ್ಯಾಸನ' ಎಂಬ ಕೀರ್ತನೆಯೊಂದು ಪ್ರಕಟವಾಗಿರುವುದು ನಮ್ಮ ಗಮನಕ್ಕೆ ತರಲಾಯಿತು.

ಶ್ರೀಪಾದರಾಜರ ಕೃತಿಗಳು ಕಳೆದ ಐದು ಶತಮಾನಗಳಿಂದ ವೈಷ್ಣವ ಪ್ರಪಂಚಕ್ಕೆ ಸುಪರಿಚಿತವೇ ಆಗಿವೆ. ಅವರ ಎಲ್ಲ ಕೀರ್ತನೆಗಳು ಈಗಾಗಲೇ ಉಪಲಬ್ಧವಿದ್ದು ಲಕ್ಷಣಶುದ್ಧವಾಗಿದೆ. ಅವುಗಳನ್ನು ಶ್ರೀಮಠದಿಂದಲೇ 'ಶ್ರೀಪಾದರಾಜ ಸಂಪುಟ'ವೆಂಬ ಹೆಸರಿನಿಂದ ಪ್ರಕಟಿಸಿದ್ದೂ ಆಗಿದೆ. ಇತರ ಅನೇಕ ಸಂಘ–ಸಂಸ್ಥೆಗಳು ಅವರ ಕೃತಿಗಳನ್ನು ಪ್ರಕಾಶಿಸಿವೆ.

ಇಷ್ಟೆಲ್ಲ ಸಂದರ್ಭಗಳಲ್ಲಿ ಕಂಡು ಕೇಳಿ ಅರಿಯದ 'ತೂಗೀರೋ ರಾಮನ' ಎಂಬ ಕೀರ್ತನೆಯೊಂದು ಈಗ ಇದ್ದಕ್ಕಿದ್ದಂತೆ ಕಾಣಿಸಿಕೊಂಡಿರುವದು ವಿಚಿತ್ರವೇ ಸರಿ.

೧. ನಿಜಕ್ಕೂ **'ದ್ವಿರದ'** ಎಂದರೇನು?

೨. 'ದ್ವಿರದ' ಎಂದರೆ 'ಗೆಜ್ಜೆ'ಯೋ ಅಥವಾ 'ಕಡಗ'ವೋ?

೩. 'ಗೆಜ್ಜೆ' ಮತ್ತು 'ಕಡಗ' ಎಂಬ ಎರಡೂ ಅರ್ಥಗಳನ್ನು ಮಾಡಲು ಆಧಾರ–ವೇನು?

೪. ಹೀಗೆ ಅರ್ಥಮಾಡಲು ನಿಷ್ಪತ್ತಿ ಅಥವಾ ಶಬ್ದಕೋಶಗಳ ಸಮ್ಮತಿ ಇದೆಯೆ?

- ಅಮರಸಿಂಹನ ಜಗತ್ಪ್ರಸಿದ್ಧ 'ಅಮರಕೋಶ'ದ ದ್ವಿತೀಯ ಕಾಂಡದಲ್ಲಿ 'ದ್ವಿರದ' ಪದವನ್ನು ಕ್ಷತ್ರಿಯ ವರ್ಗದಲ್ಲಿ ಹೇಳಿರುವುದು ಗಮನಾರ್ಹ.

  "ದಂತೀ ದಂತಾವಲೋ ಹಸ್ತೀ ದ್ವಿರದೋಽನೇಕಪೋ ದ್ವಿಪಃ ॥ ೩೪ ॥"

  ಇವೆಲ್ಲವೂ ಆನೆಯ ಹೆಸರುಗಳು.

- ಅಮರಸಿಂಹನ ಅಮರಕೋಶಕ್ಕೆ 'ಸುಧಾ' ಎಂಬ ವ್ಯಾಖ್ಯಾನವಿದೆ. ಅಲ್ಲಿಯೂ 'ಮಕುಟ' ಎಂಬ ಪ್ರಾಚೀನ ಗ್ರಂಥದ ಆಧಾರದಿಂದ 'ದ್ವಿರದ = ದ್ವೌರ–ದಾವಸ್ಯ' (ಎರಡು ಹಲ್ಲುಳ್ಳ ಪ್ರಾಣಿ = ಆನೆ) ಎಂದೇ ನಿಷ್ಪತ್ತಿ ನೀಡ–ಲಾಗಿದೆ. [ಚೌಖಾಂಬಾ ಪ್ರಕಾಶನ]

- 'ಶಬ್ದಕಲ್ಪದ್ರುಮ' ಎಂಬ ಕೋಶದಲ್ಲಿ 'ದ್ವಿರದ' = (ದ್ವೌ ರದೌ ದಂತೌ ಪ್ರಧಾನತಯಾ ಯಸ್ಯ) ಹಸ್ತಿ ಇತ್ಯಮರಃ. (ರದ = ಹಲ್ಲು. ಎರಡು ಹಲ್ಲು–ಗಳು ಮುಖ್ಯವಾಗಿ ಯಾರಿಗೆ ಇವೆಯೋ ಅದು = ಆನೆ.) ದ್ವಿರದಾಂತಕ = ಸಿಂಹಃ (ಆನೆಯ ಮೃತ್ಯು ಸಿಂಹ) ಎಂದಿದೆ.

  [ವರದಾಪ್ರಸಾದ ವಸು, ಅಹಿಚರಣ ವಸು, ೧೮೮೬, **ಶಬ್ದಕಲ್ಪದ್ರುಮ**, ಮೋತೀಲಾಲ್ ಬನಾರಸೀ ದಾಸ, ಕಲ್ಕತ್ತಾ. ದ್ವಿತೀಯ ಕಾಂಡ – ಪು.೭೭೦.]

- ಚಕ್ರವರ್ತಿ ಶ್ರೀನಿವಾಸಗೋಪಾಲಾಚಾರ್ಯರ 'ಶಬ್ದಾರ್ಥ ಕೌಸ್ತುಭ'–ದಲ್ಲೂ 'ದ್ವಿರದ' ಎಂದರೆ 'ಗೆಜ್ಜೆ' ಅಥವಾ 'ಕಂಕಣ' ಎಂದು ಅರ್ಥವಿಲ್ಲ. ಆನೆ ಎಂದು ಅರ್ಥವಿದೆ.

  [ಚಕ್ರವರ್ತಿ ಶ್ರೀನಿವಾಸಗೋಪಾಲಾಚಾರ್ಯ, ೧೯೬೧, **ಶಬ್ದಾರ್ಥಕೌಸ್ತುಭಃ**, ಸಂಸ್ಕೃತ – ಕನ್ನಡ ಶಬ್ದಕೋಶ, ಸಂಪುಟ: ೧ ರಿಂದ ೬, ಚಕ್ರವರ್ತಿ ಶ್ರೀನಿವಾಸಗೋಪಾಲಾ–ಚಾರ್ಯ, ಬೆಂಗಳೂರು]

- ಸಂಸ್ಕೃತದ ಪ್ರಸಿದ್ಧ ಕೋಶಗಳಾದ ಅಮರ, ಅಭಿಧಾನರತ್ನಮಾಲೆ, ವಿಶ್ವಕೋಶ, ನಾನಾರ್ಥರತ್ನಮಾಲೆ, ಹಾರಾವಳೀ, ಮೇದಿನೀ, ದ್ವಿರೂಪಕೋಶ, ಅಮರಶೇಷ, ಮಾತೃಕಾಕೋಶ, ರುದ್ರನಿಘಂಟು, ಹಲಾಯುಧನಿಘಂಟು, ಅನೇಕಾರ್ಥಧ್ವನಿಮಂಜರೀ, ನಾಮಮಾಲಾಕೋಶ – ಮುಂತಾದ ೧೩ಕ್ಕೂ ಹೆಚ್ಚು ಪದಕೋಶಗಳನ್ನು ಆಧರಿಸಿ ರಚಿಸಿದ 'ಶಬ್ದೌಘಕಲ್ಪದ್ರುಮ'ದಲ್ಲೂ 'ದ್ವಿರದಃ = ಆನೆ' ಎಂದೇ ಅರ್ಥವಿದೆ.

  [ಟಿ. ಸುಬ್ಬರಾಯಶಾಸ್ತ್ರಿಗಳು, (ದ್ವಿತೀಯ ಮುದ್ರಣ) ೧೯೧೯, **ಶಬ್ದೌಘಕಲ್ಪದ್ರುಮ**, ಟಿ.ಎನ್.ಕೃಷ್ಣಯ್ಯಶೆಟ್ಟಿ ಬೆಂಗಳೂರು. ಪು.೩೦೩]

  ಹೀಗಾಗಿ –

೧. 'ದ್ವಿರದ' ಶಬ್ದಕ್ಕೆ 'ಗೆಜ್ಜೆ' ಅಥವಾ 'ಕಡಗ' ಎಂಬ ಅರ್ಥ ಯಾವ ಶಬ್ದ–ಕೋಶದಲ್ಲಿಯೂ ಕಂಡು ಬರುವುದಿಲ್ಲ.

೨. ಪ್ರತಿಯಾಗಿ 'ದ್ವಿರದ' ಎಂದರೆ 'ಆನೆ' ಎಂಬ ಒಂದೇ ಅರ್ಥವೇ ಎಲ್ಲ ಶಬ್ದಕೋಶಗಳಲ್ಲೂ ಪ್ರಸಿದ್ಧವಾಗಿದೆ.

೩. ಈ ಪದಕ್ಕೆ ಆನೆ ಎಂಬುದರ ವಿನಃ ಅನ್ಯ ಅರ್ಥವನ್ನು ಯಾವ ಕೋಶ–ಕಾರರೂ ಒಪ್ಪಿಲ್ಲ.

೪. ಆದ್ದರಿಂದ ಮೇಲಿನ ಶ್ಲೋಕದ **'ಪಾದೇ ದ್ವಿರದ ಸಂಯುತಾ'** ಅಂದರೆ **'ಪಾದವು ಸುಂದರ ಕಡಗದಿಂದ ಹಾಗೂ ಗೆಜ್ಜೆಯಿಂದ ಯುಕ್ತವಾಗಿದೆ'** ಎಂದು ಸ.ಸೀ.ಮೂ.ದಲ್ಲಿ ಹೇಳಿರುವ ಲಕ್ಷಣವನ್ನು ಒಪ್ಪಲು ಸಾಧ್ಯವಿಲ್ಲ. ಒಂದೊಮ್ಮೆ ಒಪ್ಪಿದರೆ ಶ್ರೀಮದಾಚಾರ್ಯಕರಾರ್ಚಿತ ಅನೇಕ ರಾಮಪ್ರತಿಮೆ–ಗಳಲ್ಲಿ ಗೆಜ್ಜೆ ಮತ್ತು ಕಡಗಗಳಲ್ಲೊಂದು ಇದ್ದೇ ಇದೆ. ಹೀಗೆ ಅತೀ ವ್ಯಾಪ್ತಿ ಒದಗುತ್ತದೆ.

ಶ್ರೀಮೂಲರಾಮ ಪ್ರತಿಮೆಯು **'ಪಾದೇ ದ್ವಿರದ ಸಂಯುತಾ'** ಅಂದರೆ ಪಾದಪ್ರದೇಶವಾದ ಪೀಠದಲ್ಲಿ ಗಜಚಿನ್ಹೆಯನ್ನು (ಆನೆಯ ಚಿತ್ರವನ್ನು) ಒಳ–ಗೊಂಡಿದೆ. **'ಶ್ರೀರಾಘವೇಂದ್ರಸ್ವಾಮಿಗಳಮಠದಲ್ಲಿ' ಇಂದಿಗೂ ಪೂಜೆಗೊಳ್ಳು–**

ಮುಕುತಿಪ್ರದಾಯಕ ಸಿರಿಕೃಷ್ಣ ನಿನ್ನಲ್ಲಿ।
ಅಕಳಂಕ ನವವಿಧ ಭಕುತಿಯನ್ನು ॥ ೩ ॥"

– ಶ್ರೀವ್ಯಾಸರಾಯರು

"ಹೃದ್ಗ ಮಧ್ವಸ್ಯ ಕೃಪಯಾ ತಚ್ಛಿಷ್ಯಾಣಾಂ ಪರಂಪರಾ।
ಪರಾಭಾವ್ಯ ಪರಾನ್ ಸರ್ವಾನ್ ದೂರೀಕೃತ್ಯ ದುರಾಗಮಾನ್।
ಅದ್ಯಾಪಿಶಾಸ್ತಿ ಸತ್ತತ್ವಂ ಮಧ್ವೋಸೌ ಜಯತೇತರಾಮ್ ॥"

– ಭಾವಿಸಮೀರ ಶ್ರೀವಾದಿರಾಜರು, **ಸರಸಭಾರತೀವಿಲಾಸ**

[ಶ್ರೀಮನ್ಮಧ್ವಾಚಾರ್ಯರ ಶಿಷ್ಯ ಪರಂಪರೆಯು ತಮ್ಮ ಹೃತ್ಕಮಲವಾಸಿ–ಗಳಾದ ಶ್ರೀಮದಾಚಾರ್ಯರ ಅನುಗ್ರಹದಿಂದ ಇತರ ಎಲ್ಲ ಕುವಾದಿಗಳನ್ನು ಸೋಲಿಸಿ, ದುರಾಗಮಗಳನ್ನು ದೂರೀಕರಿಸಿ, ಇಂದಿಗೂ ಶುದ್ಧತತ್ವಜ್ಞಾನವನ್ನು ಬೋಧಿಸುತ್ತಿದ್ದಾರೆ. ಅಲ್ಲೆಲ್ಲ ಶ್ರೀಮನ್ಮಧ್ವರೇ ದಿಗ್ವಿಜಯ ಮಾಡುತ್ತಾ ಶೋಭಿಸುತ್ತಾರೆ.]

ಇಂತಹ ಉದಾತ್ತ ಚಿಂತನೆಗಳನ್ನು ತ್ರಿಕರಣಗಳಲ್ಲೂ ಅನುಸಂಧಾನ ಮತ್ತು ಅನುಷ್ಠಾನಕ್ಕೆ ತರದೆಹೋದಲ್ಲಿ ನಮ್ಮ ಸಾಧನೆಯ ಗತಿಯೇನು? ಈ ಹಿನ್ನಲೆಯಲ್ಲಿ ವಿಚಾರಿಸಿದಾಗ –

'ಈ ಪೀಠದಲ್ಲಿ ವಿರಾಜಿಸುವವರಲ್ಲಿ ಶ್ರೀಮದಾಚಾರ್ಯರ ಸನ್ನಿಧಾನ ವಿಶೇಷ–ವಾಗಿ ಉಂಟು. ಇದು ಈ ಪೀಠದಲ್ಲಿ ಕುಳಿತ ಪ್ರತಿವ್ಯಕ್ತಿಗಳ ಲೋಕವಿಲಕ್ಷಣ ವ್ಯಾಪಾರ ಹಾಗೂ ವ್ಯಕ್ತಿತ್ವದಿಂದ ಸ್ಫುಟ. ಇಂದಿಗೂ ಪ್ರತ್ಯಕ್ಷ ಸಿದ್ಧ.' (ಸ.ಸೀ.ಮೂ. ಪು:೮) – ಎಂಬ ಮಹಿಮೆಯನ್ನು ಸ್ವಮಠಕ್ಕೆ ಮಾತ್ರ ಸೀಮಿತಗೊಳಿಸದೆ, **ಸರ್ವ ಮಾಧ್ವ ಪೀಠಾಧಿಪತಿಗಳಿಗೂ ಅನ್ವಯಿಸುವುದೆಂದು** ಚಿಂತಿಸುವುದು ಶ್ರೇಯಸ್ಕರವಲ್ಲವೆ?

"ತದ್ದಾಸದಾಸ್ಯಮಪಿ ಕಿಂ ನ ದದಾತಿ ಪುಂಸಃ।"

– ಶ್ರೀಸುಮಧ್ವವಿಜಯ ೧೪೧/೧೫

[ಶ್ರೀಮದಾಚಾರ್ಯರ ಶಿಷ್ಯರ ಶಿಷ್ಯತ್ವವೂ ಸಾಧಕನಿಗೆ ಏನನ್ನು ತಾನೇ ಕೊಡುವುದಿಲ್ಲ! ಸಮಸ್ತ ಪುರುಷಾರ್ಥಗಳನ್ನೂ ನೀಡುತ್ತದೆ.]

ಮೂಲರಾಮಪ್ರತಿಮಾಲಕ್ಷಣ

'ಪಾದೇ ದ್ವಿರದಸಂಯುತಾ' – ಎಂದರೇನು?

ಸ.ಸೀ.ಮೂ. ಪು. ೧೫ ರಲ್ಲಿ **'ಶ್ರೀಮನ್ಮೂಲಸೀತಾರಾಮರ ಪ್ರತಿಮೆಗಳ ಬಗ್ಗೆ ಪ್ರಸ್ತಾಪಿಸುವವರು ಒಮ್ಮತದಿಂದ ಒಪ್ಪಿಕೊಂಡಿರುವ ಪ್ರಾಚೀನ ಗ್ರಂಥ ವಾಸಿಷ್ಠ ರಾಮಾಯಣ'** ಎಂದು ಹೇಳಿ ಶ್ರೀಮೂಲರಾಮದೇವರ ಪ್ರತಿಮೆಯ ಲಕ್ಷಣ–ಗಳನ್ನು ಹೇಳುವ ಈ ಕೆಳಗಿನ ಶ್ಲೋಕಗಳನ್ನು ಮುದ್ರಿಸಲಾಗಿದೆ –

'ಸರ್ವಲಕ್ಷಣ ಸಂಪನ್ನಾ ಪಾದೇ ದ್ವಿರದಸಂಯುತಾ।

....

ಶುದ್ಧಾಂ ತಾಮ್ರಮಯೀಂ ಶಸ್ತಾಂ ಬ್ರಹ್ಮಣಾ ಚಿರಪೂಜಿತಾಮ್' ॥

– ಅಧ್ಯಾಯ ೧೧ (ವಾಸಿಷ್ಠ ರಾಮಾಯಣ)

ಮೇಲಿನ ಶ್ಲೋಕದ **'ಪಾದೇ ದ್ವಿರದ ಸಂಯುತಾ'** ಎಂಬುದನ್ನು **'ಪಾದವು ಸುಂದರ ಕಡಗದಿಂದ ಹಾಗೂ ಗೆಜ್ಜೆಯಿಂದ ಯುಕ್ತವಾಗಿದೆ'** ಎಂದು ಅನು–ವಾದಿಸಲಾಗಿದೆ. ಅಂದರೆ 'ದ್ವಿರದ' ಎನ್ನುವ ಶಬ್ದಕ್ಕೆ ಸ.ಸೀ.ಮೂ.ದಲ್ಲಿ 'ಗೆಜ್ಜೆ' ಹಾಗೂ 'ಸುಂದರ ಕಡಗ' ಎಂದು ಎರಡು ಅರ್ಥಮಾಡಿದಂತಾಯಿತು.

ಸ.ಸೀ.ಮೂ. ಪು: ೧೭ರಲ್ಲಿ **"ವಾಸಿಷ್ಠರಾಮಾಯಣದ ಈ ಶ್ಲೋಕಗಳನ್ನು ಶ್ರೀಸತ್ಯಪರಾಯಣತೀರ್ಥರು ತಮ್ಮ 'ರಾಮಶಬ್ದಾರ್ಥಮಾಲಾ' (ರಾಮಶಬ್ದಕ್ಕೆ ನೂರಾರು ಅರ್ಥಗಳನ್ನು ತೋರಿಸಿಕೊಟ್ಟ ಗ್ರಂಥ) ಎಂಬ ಕೃತಿಯಲ್ಲಿ ಉದಾ–ಹರಿಸಿದ್ದಾರೆ."** ಎಂದು ಹೇಳಲಾಗಿದೆ. ಆದರೆ ವಿದ್ವಾನ್. ಬಾಳಗಾರು ರುಚಿರಾ–ಚಾರ್ಯರ ಸಂಪಾದಕತ್ವದಲ್ಲಿ ಪ್ರಕಟವಾದ ಕೃತಿಯಲ್ಲಿ ಶ್ರೀಮೂಲರಾಮ ಪ್ರತಿಮೆಯು ಇಕ್ಷ್ವಾಕುವಂಶದಲ್ಲಿ ಪೂಜೆಗೊಂಡ, ಹಾಗೂ ಶ್ರೀನರಹರಿತೀರ್ಥ–ರಿಗೆ ಪ್ರಾಪ್ತವಾದ ಭಾಗದ ಶ್ಲೋಕಗಳಿವೆಯೇ ವಿನಃ ಪ್ರತಿಮಾಲಕ್ಷಣದ ಶ್ಲೋಕ–ಗಳು ಕಂಡುಬರುತ್ತಿಲ್ಲವೆಂಬುದು ಆಶ್ಚರ್ಯಕರ ಸಂಗತಿ! ಅಷ್ಟೇ ಅಲ್ಲದೆ ಈ ಗ್ರಂಥದ ಯಾವುದೇ ಭಾಗದಲ್ಲಿ 'ಮೂಲರಾಮ'ನನ್ನು ಸ್ತುತಿಸಿದ್ದು ಕಂಡು ಬಂದಿಲ್ಲ.

[ಬಾಳಗಾರು ರುಚಿರಾಚಾರ್ಯ (ಸಂ), ೧೯೯೮, **ರಾಮಶಬ್ದಾರ್ಥ ರತ್ನಮಾಲಾ,** ಶ್ರೀಮಾಧ್ವಗ್ರಂಥ ಪ್ರಕಾಶನ, ಸಂತೆಬಿದನೂರು, ಪುಟ: ೪ ರಿಂದ ೭]

ಈ ಬಗ್ಗೆ ಕೆಲವು ಸಂದೇಹಗಳು ಮೂಡುತ್ತವೆ.

ಅಧ್ಯಾಯ – 2

'ಸಸೀತಾಮೂಲರಾಮಾರ್ಚಾ'

ಕೆಲವು ಸಂದೇಹಗಳು

ಇತ್ತೀಚೆಗೆ ಬೆಂಗಳೂರಿನ ವಿಶ್ವಮಧ್ವಮಹಾಪರಿಷತ್ತಿನಿಂದ **'ಸಸೀತಾ ಮೂಲರಾಮಾರ್ಚಾ'** ಎಂಬ ಗ್ರಂಥವು ಪ್ರಕಟಗೊಂಡಿದ್ದು, ಅದರಲ್ಲಿ ಸಹೃದಯರಾದ ವಿವೇಕಿ ಓದುಗರಿಗೆ ಹತ್ತಾರು ಪ್ರಶ್ನೆಗಳು ಎದುರಾಗುತ್ತವೆ. ಶ್ರೀರಾಘವೇಂದ್ರಸ್ವಾಮಿಗಳವರ ಮಠದ ತಾಮ್ರಶಾಸನ, ಪ್ರಾಚೀನ ಗ್ರಂಥಗಳು, ಸ್ತೋತ್ರಗಳು, ವಿಜಯಕಾವ್ಯಗಳು ಹಾಗೂ ಅಪರೋಕ್ಷಜ್ಞಾನಿಗಳಾದ ಹರಿದಾಸರ ಕೀರ್ತನೆಗಳಿಗೆ ವಿರುದ್ಧವಾದ ವಿಚಿತ್ರ ಸಂಗತಿಗಳನ್ನು ಒಳಗೊಂಡ ಆ ಗ್ರಂಥದ ಅಭಿಪ್ರಾಯಗಳನ್ನು ಸಕಾರಣವಾಗಿ ವಿಮರ್ಶಿಸುವುದು ಪ್ರಸ್ತುತ ಗ್ರಂಥದ ಎರಡನೆಯ ಅಧ್ಯಾಯದ ಉದ್ದೇಶವಾಗಿದೆ.

ತಮ್ಮದು **'ನಿರ್ದಿಷ್ಟ ಕೇಂದ್ರ, ಕಾಲ, ದೇಶ, ಗೋತ್ರ, ವಂಶ, ವ್ಯಕ್ತಿಗಳಿಗೆ ಸೀಮಿತವಲ್ಲದ ಪರಮಹಂಸರ ಪರಂಪರೆ'** ಎಂದು ಸ.ಸೀ.ಮೂ. ಪುಟ ೮ರಲ್ಲಿ ಘೋಷಿಸಿಕೊಳ್ಳಲಾಗಿದೆ. ಈ ವಾಕ್ಯವನ್ನು ಓದಿದಾಗ –

೧. **'ದೇಶ – ಕಾಲ – ವ್ಯಕ್ತಿ – ಕೇಂದ್ರಗಳಿಗೆ ಬದ್ಧವಾಗದ' ಒಂದು ಧಾರ್ಮಿಕ ಸಂಸ್ಥೆ ಅಸ್ತಿತ್ವದಲ್ಲಿರಲು ಸಾಧ್ಯವೇ?**

೨. **ಇಂತಹ ವಾಕ್ಯಪ್ರಯೋಗದ ಆಂತರ್ಯವಾದರೂ ಏನು?**

೩. **ಇತರ ಮಾಧ್ವ ಪರಂಪರೆಗಳ ಸ್ಥಾನವೇನು?**

ಇತ್ಯಾದಿ ಮೂಲಭೂತ ಪ್ರಶ್ನೆಗಳು ಕಾಡತೊಡಗುತ್ತವೆ.

ಇತರ ಮಾಧ್ವ ಪರಂಪರೆಗಳ ಸ್ಥಾನವೇನು?

೧. ತ್ರೈಲೋಕ್ಯಾಚಾರ್ಯರಾದ ಶ್ರೀಮನ್ಮಧ್ವಾಚಾರ್ಯರು ಪೂರ್ವಾಶ್ರಮದ ತಮ್ಮ ಸ್ವಂತ ತಮ್ಮನಿಗೆ ಸನ್ಯಾಸ ನೀಡಿ ಶ್ರೀವಿಷ್ಣುತೀರ್ಥರೆಂದು ನಾಮಕರಣ ಮಾಡಿ ಶ್ರೀಸೋದಾ ಮಠ (ಅಂದಿನ ಕುಂಭಾಸಿಮಠ)ದ ಅಧಿಪತಿಗಳನ್ನಾಗಿ ಮಾಡಿದ ಬಗ್ಗೆ ಸ.ಸೀ.ಮೂ. ಗ್ರಂಥಕಾರರ ಪ್ರತಿಕ್ರಿಯೆ ಏನು?

೨. ಇದರಿಂದ ಸೋದಾ ಶ್ರೀವಾದಿರಾಜಮಠವು ನಿರ್ದಿಷ್ಟ ಕೇಂದ್ರ, ಕಾಲ, ದೇಶ, ಗೋತ್ರ, ವಂಶ, ವ್ಯಕ್ತಿಗಳಿಗೆ ಸೀಮಿತವಾಯಿತೆನ್ನುವುದಾದರೆ ವೇದಾಂತಗುರುಸೋದರರೆಂದು ಸಕಲ ಮಾಧ್ವರು ಗೌರವಿಸುವ ಶ್ರೀವಿಷ್ಣುತೀರ್ಥಾಚಾರ್ಯರ ಮತ್ತು ಅವರ ಪರಂಪರೆಯ ಸ್ಥಾನ–ಮಾನವೇನು? ಇದನ್ನು ಟೀಕಿಸಿದರೆ ವಾಯ್ವಂಶ ಮಧ್ವರ ಹಾಗು ಅವರ ಭಕ್ತ ಪರಂಪರೆಯವರಲ್ಲಿ ಗೈದ **'ತದ್ಭಕ್ತ ದ್ವೇಷ ಏವ ಚ'** ಎಂಬ ದೋಷ ಘಟಿಸಿದಂತಲ್ಲವೆ?

೩. ತಮ್ಮದು **'ನಿರ್ದಿಷ್ಟ ಕೇಂದ್ರ, ಕಾಲ, ದೇಶ, ಗೋತ್ರ, ವಂಶ, ವ್ಯಕ್ತಿಗಳಿಗೆ ಸೀಮಿತವಲ್ಲದ ಪರಮಹಂಸರ ಪರಮಧರ್ಮದ ಪರಂಪರೆ'** ಎಂದು ಹೇಳಿಕೊಳ್ಳುವಲ್ಲೂ ವಂಶಪಾರಂಪರ್ಯ ಕ್ರಮ ಕಂಡುಬರುವುದು ಅತ್ಯಾಶ್ಚರ್ಯ.

೪. ಅನಂತ ಜನ್ಮಗಳ ಪುಣ್ಯಪರಿಪಾಕದಿಂದಲೂ, ಶ್ರೀಹರಿವಾಯುಗುರುಗಳ ಪರಮಾನುಗ್ರಹದಿಂದಲೂ, ಕರ್ಮಭೂಮಿಯಾದ ಭರತಖಂಡದಲ್ಲಿ, ಸದ್ವೈಷ್ಣವ ಭೂಸುರಸಂತತಿಯಲ್ಲಿ ಸಾಧನಶರೀರವನ್ನು ಪಡೆದು ಬಂದ ನಮ್ಮ ಉದ್ಧಾರವಾಗಬೇಕಾದರೆ ನಮ್ಮ ಚಿಂತನೆ ಹೇಗಿರಬೇಕೆಂದು ಜ್ಞಾನಿಗಳು ಸ್ಫುಟವಾಗಿ ತಿಳಿಸಿದ್ದಾರೆ:

"ಜನುಮ ಜನುಮದಲ್ಲಿ ಕೊಡುಕಂಡ್ಯ ಹರಿಯೆ ।
ಅನಿಮಿತ್ತ ಬಂಧು ಕೃಷ್ಣ ದಯದಿಂದಲೆನಗೆ ॥ ಪ ॥

....

ಸಕಲವಿಬುಧೋತ್ತಮರಲ್ಲಿ ನಮ್ರತೆಯು ।
ಸುಖತೀರ್ಥರಲಿ ಮುಖ್ಯಗುರು ಭಾವವು ॥

ಪಾಮರನ ಉದ್ಧರಿಸು ರವಿಸಾರ್ವಭೌಮ ನೀ
ಅನವರತ ಸಂಚರಿಪೆ ಈ ಮಹೀತಳದಿ'' ॥ ೨ ॥

ಎಂದು ಮೊರೆಹೊಕ್ಕಿದ್ದಾರೆ. ಇದರಿಂದ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಚತುರ್ಯುಗಮೂರ್ತಿ ಶ್ರೀಮೂಲರಾಮದೇವರ, ಶ್ರೀದಿಗ್ವಿಜಯರಾಮದೇವರ ಹಾಗೂ ವ್ಯಾಸಮುಷ್ಟಿಗಳ ಇರುವಿಕೆಗೆ ಶ್ರೀಮಾನವಿದಾಸರ ಮಾನ್ಯತೆಯೂ ಲಭಿಸಿತು.

ಅಹೋಬಲ ನರಸಿಂಹಾಂಕಿತರ ಅಂಕಿತ

ಶ್ರೀಸುಬೋಧೇಂದ್ರತೀರ್ಥರ ಕರಕಮಲಸಂಜಾತರಾದ ಶ್ರೀಸುಜನೇಂದ್ರತೀರ್ಥರು ತಮ್ಮ ಗುರುಗಳ ಜೊತೆಯಲ್ಲಿ ೨೮ ವರ್ಷಕಾಲ ಕಿರಿಯ ಸ್ವಾಮಿಗಳಾಗಿದ್ದೇ ಹಿರಿದಾದ ಸಾಧನೆ ನಡೆಸಿದ ಭಾಗ್ಯಶಾಲಿಗಳು. ಗುರುಗಳ ಆಜ್ಞೆಯಂತೆ ಸರ್ವಜ್ಞಾಚಾರ್ಯಕರಾರ್ಚಿತ ಶ್ರೀದಿಗ್ವಿಜಯರಾಮದೇವರ ಪೂಜಾತತ್ಪರರಾಗಿ, ಸಂಚಾರ ಕೈಗೊಂಡು, ಸೂರ್ಯೋಪಾಸನೆಯಿಂದ ಸಿದ್ಧಿ ಗಳಿಸಿದ್ದ ತ್ರ್ಯಂಬಕಶಾಸ್ತ್ರಿಯೆಂಬ ದುರ್ವಾದಿಯನ್ನು ನಿಗ್ರಹಿಸಿ, ಮಹೀಶೂರ ಮಹೀಪಾಲರಿಂದ ಶ್ರೀರಂಗಪಟ್ಟಣದಲ್ಲಿ ಸನ್ಮಾನಿತರಾಗಿ, ಅರಸರು ಸಮರ್ಪಿಸಿದ ನಂಜನಗೂಡಿನ ಮಠದಲ್ಲಿ ಸಚ್ಛಾಸ್ತ್ರಪ್ರವಚನ ನಡೆಸುತ್ತಿದ್ದ ವೈಭವವನ್ನು ಅಹೋಬಲ ನರಸಿಂಹಾಂಕಿತ ಹರಿದಾಸರು ತಮ್ಮ ಕೀರ್ತನೆಯಲ್ಲಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ –

''ಪಾಲಿಸಿ ಕೊಟ್ಟರು ಹರಕೆಯ ॥ ಪ ॥

ನಳಿನಪದಗಳ ನಮಿಪ ಸುಜನಕೆ
ಒಲವಿನೊಳು ಕಲ್ಯಾಣ ಬಯಸುತ ॥ ಅ.ಪ ॥

....
ನವರತ್ನಪದಕಗಳು ಪುಷ್ಪದಹಾರ
ಸುವರ್ಣದ ತೊಟ್ಟಿಲೊಳು ದಿಗ್ವಿಜಯರಾಮ
ಪವಡಿಸೆನುತಲಿ ನಗುತಾ ತೂಗುತ್ತ ॥

ಪವನನೊಡೆಯನ ಮುದದಿ ನೆನೆಯುತ
ಪ್ರವಚನದಿ ಪ್ರಖ್ಯಾತರಾದಾ
ಭುವನಗುರು ವರಪೀಠ ಮಂಡಿಸಿ
ಕವಿವಿನುತ ಸುಜನೇಂದ್ರರಾಯರು ॥ ೪ ॥''

ಇತ್ಯಾದಿ ಐತಿಹಾಸಿಕ ಉಲ್ಲೇಖಗಳು ಅಪರೋಕ್ಷಜ್ಞಾನಿಗಳಾದ ಪೂರ್ವೋಕ್ತ ಹರಿದಾಸರ ಉಕ್ತಿಗಳಿಗೆ ಸಂವಾದಿಯಾಗಿರುವುದರಿಂದ ವಿಶ್ವಾಸಾರ್ಹವಾಗಿವೆ.

***

ಎಂಬಲ್ಲಿ ಈ ದಿಗ್ವಿಜಯರಾಮದೇವರು ಶ್ರೀಮದಾಚಾರ್ಯರ ಉಪಾಸ್ಯಮೂರ್ತಿ–ಯೆಂದು ಸ್ಪಷ್ಟಪಡಿಸಿದ್ದಾರೆ –

''ಇಂದ್ರಗೋಪದಂತೆ ವರ್ಣದಿಂದೊಪ್ಪುವ
ಅಂದವಾದ ದಿಗ್ವಿಜಯರಾಮ
ಚಂದ್ರ . . . .
. . . .**ನಿನ್ನಘ್ರಿನಖಚಂದ್ರ**
ಚಂದ್ರಿಕೆಯಲಿ ಎನ್ನ ಹೃತ್ತಾಪವ
ನಂದಿಸು ನಾನಾವತಾರ ನಾರಾಯಣ ।''

ಇಲ್ಲಿ ಶ್ರೀದಿಗ್ವಿಜಯರಾಮದೇವರ ಪಾದದ ನಖದಿಂದ (ಉಗುರಿನಿಂದ) ಹೊರಹೊಮ್ಮುತ್ತಿರುವ ಬೆಳುದಿಂಗಳ ಕಾಂತಿಯಲ್ಲಿ ಬೆಳಗುತ್ತಿರುವ **ಸ್ವಗತಭೇದ–ವಿವರ್ಜಿತನಾದ** ನಾನಾವತಾರನಾದ ನಾರಾಯಣನನ್ನು, ಅಂದರೆ ದಶಾವತಾರ ಪೀಠಸ್ಥಿತನಾದ ಶ್ರೀದಿಗ್ವಿಜಯರಾಮ ಪ್ರತಿಮೆಯನ್ನು ಕಂಡು ದಾಖಲಿಸಿದ್ದಾರೆ.

ಸುಳಾದಿಯ ಸಾರಸಂಗ್ರಹವಾದ 'ಜತೆ'ಯಲ್ಲಿ –

''ವಸುಧೇಂದ್ರಮುನಿಯಿಂದ ನಾನಾಪೂಜೆಯಗೊಂಡು ।
ವಸುಧೆಯೊಳಗೆ ಮೆರೆವ ವಿಜಯವಿಠ್ಠಲ ರಾಮಾ ॥''

ಎಂದೇ ಉಲ್ಲೇಖಿಸಿದ್ದಾರೆ.

ವಸುಧೇಂದ್ರಮುನಿಯಿಂದ ನಾನಾಪೂಜೆಯಗೊಂಡ, ಸರ್ವಜ್ಞಾಚಾರ್ಯ ಕರಾರ್ಚಿತ ಶ್ರೀದಿಗ್ವಿಜಯರಾಮನು ಭಕ್ತರಿಗೆ ಅನುಗ್ರಹಮಾಡುವ ಕ್ರಮವನ್ನು ಹೀಗೆ ವಿಶದಪಡಿಸಿದ್ದಾರೆ –

'ಎನ್ನ ಹೃತ್ತಾಪವ ನಂದಿಸು' ಎಂದು ಮೊರೆಯಿಟ್ಟ ಅವರು, **'ನಿನ್ನ ಕಂಡ ಮೇಲೆ ಬಿಂದುಮಾತುರ ಕ್ಲೇಶ ಎನಗಿಪ್ಪುದೇ'** ಎಂದು ದೇವರನ್ನೇ ವಿಚಾರಿಸಿ ದೃಢಪಡಿಸಿಕೊಂಡು, ದಿಗ್ವಿಜಯರಾಮ ದರ್ಶನದಿಂದ ಕ್ಲೇಶಪರಿಹಾರವಾಗುವ ದಿವ್ಯ ಮಹಿಮೆಯನ್ನು ಸಾರಿದ್ದಾರೆ.

'ಬಡವ ಭಾಗ್ಯವಂತನೆಂಬ ವಾರ್ತೆಯಿಲ್ಲ' (ಭೇದವಿಲ್ಲ)ದೆ, **'ಜ್ಞಾನಪ್ರದ', 'ಆನಂದಪ್ರದ' ಪಾದ; 'ಧ್ಯಾನಪ್ರದ' 'ಮಾನಪ್ರದ' 'ಭವತಾರಕ'ವಾದ; ಈ ಪಾದವು,**

'ದೀನ ಮಾನವರಿಗೆ ಒಲಿದೊಲಿದು ನಿತ್ಯ ಏನೇನು ಬೇಡಿದಭೀಷ್ಟೆಯ ಕೊಡುವುದು' ಎಂದು ಅಭಯ ನೀಡಿದ್ದಾರೆ. ಅಂದರೆ, ದುಃಖಿತರಾದ ಮಾನವರಿಗೆ ತಾನಾಗಿಯೇ **ಒಲಿದೊಲಿದು;** ಜ್ಞಾನ ಆನಂದ, ಧ್ಯಾನ, ಬಹುಮಾನಾದಿಗಳನ್ನೆಲ್ಲ ದಯಪಾಲಿಸುವ ದಿವ್ಯಸ್ವರೂಪನಿವನು.

ಶ್ರೀವಿಜಯದಾಸಾರ್ಯರ ದಿವ್ಯವಾಣಿಯಲ್ಲಿ ವಿಶ್ವಾಸವುಳ್ಳವರೆಲ್ಲ; **'ಸಂದರ್ಶನ ಮಾತ್ರದಿಂದ ಲಾಭಸಂದೋಹ ಕೊಡುವ'** ಈ ದಿಗ್ವಿಜಯರಾಮ ದೇವರಲ್ಲಿ ಅತಿಶಯ ಭಕ್ತಿಮಾಡಿದರೆ, **'ಪೊಡವಿ ವಿಬುಧರೆಲ್ಲ ಮತ್ಸರದುರ್ಗವ ಕಡಿದು ಮನೋರಥ ಪಡಕೊಂಡು ಸುಖಿಪರು'** ಅಂದರೆ, ವಿಪ್ರವೃಂದದ ಮಾತ್ಸರ್ಯ–ವೆಲ್ಲ ನಿವಾರಣೆಗೊಳ್ಳುತ್ತವೆ. ಇಷ್ಟಾರ್ಥಗಳನ್ನು ಪಡೆದುಕೊಂಡು ಸುಖಪಡುತ್ತಾರೆ.

ಹೀಗೆ ಶ್ರೀವಾದೀಂದ್ರತೀರ್ಥರು ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಸರ್ವಜ್ಞಾಚಾರ್ಯಕರಾರ್ಚಿತ ಶ್ರೀದಿಗ್ವಿಜಯರಾಮ ಪ್ರತಿಮೆಯ ಅಸ್ತಿತ್ವದ ಬಗ್ಗೆ 'ಅರ್ಚಾಗತಿಕ್ರಮ' ಎಂಬ ಗ್ರಂಥದಲ್ಲಿ ವರ್ಣಿಸಿದ ಪ್ರಾಚೀನ (೧೭೨೮ ರಿಂದ ೧೭೫೦ರ) ವಿಚಾರಗಳಿಗೆ, ಅವರ ಸಮಕಾಲೀನರಾದ (೧೬೮೨ ರಿಂದ ೧೭೫೫ರ) ಶ್ರೀವಿಜಯದಾಸರ ಪ್ರತ್ಯಕ್ಷ ಸಾಕ್ಷ್ಯದ ಬೆಂಬಲ ದೊರೆಯುತ್ತದೆ.

ಅವರಿಗಿಂತ ಅರ್ವಾಚೀನರಾದ ವಡವೀ ಭೀಮಾಚಾರ್ಯ ಪ್ರತಿಪಾದಿತ ದಿಗ್ವಿಜಯರಾಮ ವಿಚಾರವು ಶ್ರೀವಾದೀಂದ್ರತೀರ್ಥರ ಹಾಗೂ ಶ್ರೀವಿಜಯದಾಸರ ವಾಕ್ಯವಿರೋಧಿಯಾಗಿ ಉಳಿಯುತ್ತದೆ.

ಶ್ರೀಮಾನವಿದಾಸರ ಮಾನ್ಯತೆ

ಶ್ರೀಜಗನ್ನಾಥದಾಸರು ಶ್ರೀಭುವನೇಂದ್ರತೀರ್ಥರ ಸ್ತುತಿರೂಪವಾದ **'ಭುವನೇಂದ್ರ ಮುನಿಪ ನಿನ್ನವನೊ ಎನ್ನ ಅವಗುಣಗಳೆಣಿಸದಲೆ ಅನುದಿನದಿ ಪಾಲಿಪುದು'** ಎಂಬ ಕೀರ್ತನೆಯಲ್ಲಿ:

''...

ಶ್ರೀಮೂಲದಿಗ್ವಿಜಯರಾಮವ್ಯಾಸಾಂಘ್ರಿ ಯುಗ
ತಾಮರಸಭಜಕ ಈ ಭೂಮಿಯೊಳಿಹ

"ಪೂರ್ಣಪ್ರಜ್ಞಸ್ತತೋ ರಾಮಪ್ರತಿಮಾಮತಿಸುಂದರಾಮ್ ।
ಶಿಲ್ಪಿಭಿಃ ಕಾರಯಾಮಾಸ ಸಂಸ್ಥಾನಂ ಕರ್ತುಮಾದರಾತ್ ॥೧॥

ಸರ್ವತೋಭದ್ರಪೀಠಸ್ಥಾಂ ತಾಂ ಪಿತ್ತಲಮಯೀಂ ಶುಭಾಮ್ ।
ಭಿಕ್ಷುಕಾನಾಂ ಕಿರೀಟಾಭಕಿರೀಟಾಂ ವಿಜಯಪ್ರದಾಮ್" ॥೨॥

ಇದನ್ನು ಅವರು "ಇದು ದಿಗ್ವಿಜಯರಾಮನ ಪ್ರತಿಮೆಯ ವರ್ಣನೆ. ದಿಗ್ವಿಜಯರಾಮ ಸಂಸ್ಥಾನ ಪ್ರತಿಮೆ. ಅತಿಸುಂದರ. ಶ್ರೀಮದಾಚಾರ್ಯರು ತಾವೇ ಮಾಡಿಸಿದ ಪ್ರತಿಮೆ. ಸರ್ವತೋಭದ್ರಪೀಠದಿಂದ ಕೂಡಿದ ಶುದ್ಧ ಹಿತ್ತಾಳೆ ಪ್ರತಿಮೆ. ಅದ್ಭುತ ಕಿರೀಟದಿಂದ ಕೂಡಿದೆ. ವಿಜಯಪ್ರದವಾಗಿದೆ" ಎಂದು ಅನುವಾದಿಸಿದ್ದಾರೆ.

ಈ ಶ್ಲೋಕದಲ್ಲಿರುವ **'ಭಿಕ್ಷುಕಾನಾಂ ಕಿರೀಟಾಭಕಿರೀಟಾಂ'** ಎಂಬ ಭಾಗಕ್ಕೆ ಸ.ಸೀ.ಮೂ. ಗ್ರಂಥಕಾರರು **'ಅದ್ಭುತ ಕಿರೀಟದಿಂದ ಕೂಡಿದೆ.'** ಎಂದು ತಪ್ಪಾಗಿ ಅನುವಾದಿಸಿ ಜಾರಿಕೊಂಡಿದ್ದಾರೆ. ಆದರೆ ಅದೇ ಮಠದ 'ಗುರುಪೀಳಿಗಿ' ಎಂಬ ಹಸ್ತಪ್ರತಿಯಲ್ಲಿ (ಪು : ೬–ಅ), **'ಜೋಗಿಯೇರ ಟೋಪಿಯೋಪಾದೇಲಿ ಕಿರೀಟ ಸರ್ವತೋಭದ್ರ ಯೆಂಬ ಗದಿಗೀ ರಾಮಪ್ರತಿಮಾ'** ಎಂದಿದೆ.

ಆದರೆ **'ದಿಗ್ವಿಜಯರಾಮನ ಕಿರೀಟ ಭಿಕ್ಷುಕರ ಟೋಪಿಯಂತಿದೆ'**ಯೆಂಬ ಕವಿಯ ನಿರೂಪಣೆಯಲ್ಲಿ ಮತ್ತೆ ಗೊಂದಲಗಳು ಆರಂಭವಾಗುತ್ತವೆ –

೧. ಟೋಪಿಯ ಆಕಾರವು ಅದನ್ನು ಧರಿಸುವವರ ಇಷ್ಟ ಹಾಗೂ ಅಭ್ಯಾಸವನ್ನವಲಂಬಿಸಿರುತ್ತದೆ. ಆದ್ದರಿಂದ 'ಭಿಕ್ಷುಕರ ಟೋಪಿ'ಗೆ ನಿರ್ದಿಷ್ಟ ಆಕಾರವನ್ನು ಊಹಿಸುವುದಾದರೂ ಹೇಗೆ?

೨. ಒಂದೇ ಸೀಮೆಯ ಬೇರೆ ಬೇರೆ ಜೋಗೇರು ಬೇರೆ ಬೇರೆ ಆಕಾರದ ಟೋಪಿಯನ್ನು ಧರಿಸುವುದು ಕಂಡುಬರುತ್ತಿದೆ. ಹೀಗಿರುವಾಗ, ಬೇರೆ ಬೇರೆ ಸೀಮೆಯ ಬೇರೆ ಬೇರೆ ಜೋಗೇರು ಧರಿಸುವ 'ಟೋಪಿ'ಗೆ ನಿರ್ದಿಷ್ಟ ಆಕಾರವನ್ನು ಊಹಿಸುವುದಾದರೂ ಹೇಗೆ?

೩. ಇಂತಹ ಅಸ್ಪಷ್ಟ ಲಕ್ಷಣಗಳನ್ನು ಹೇಳುವ ವಡವೀ ಭೀಮಾಚಾರ್ಯರ ಕಾವ್ಯದ ಮಾತುಗಳನ್ನು ನಂಬಿ ಶ್ರೀದಿಗ್ವಿಜಯರಾಮಪ್ರತಿಮೆಯ ಲಕ್ಷಣಗಳನ್ನು ನಿರ್ಧರಿಸುವುದು ಹೇಗೆ?

೪. ನಿಜಕ್ಕೂ 'ಭಿಕ್ಷುಕಾನಾಂ ಕಿರೀಟಾಭಕಿರೀಟಾಂ' ಎಂದರೇನು? ಅಂತಹ ಉಪಮೆಯ ಸಾರ್ಥಕ್ಯವೇನು? ತಿಳಿಯದಂತಿದೆ.

೫. ಇದಕ್ಕೆ ಸಂವಾದಿಯಾದ ಬೇರಾವುದೇ ಪ್ರಾಚೀನ ಸಂಸ್ಕೃತವಾಕ್ಯಗಳ ಅಥವಾ ಹರಿದಾಸರಕೀರ್ತನೆಗಳ ಪ್ರಮಾಣಗಳಿರಬೇಕಾಗಿತ್ತಲ್ಲವೆ?

೬. ವಡವೀ ಭೀಮಾಚಾರ್ಯರ ಕಾವ್ಯದ ಮಾತುಗಳನ್ನು ನಂಬಿ ಶ್ರೀದಿಗ್ವಿಜಯ ರಾಮಪ್ರತಿಮೆಯ ಲಕ್ಷಣಗಳನ್ನು ನಿರ್ಧರಿಸುವುದೇ ಕಷ್ಟವಿರುವಾಗ; ಅದೇ ಕಾವ್ಯದ, ಅದೇ ಸರ್ಗದ ಮುಂದಿನ ಶ್ಲೋಕಗಳಲ್ಲಿ ಬಂದಿರುವ ಶ್ರೀಮೂಲಸೀತಾರಾಮಪ್ರತಿಮೆಯ ಲಕ್ಷಣಗಳನ್ನು; ಅದಕ್ಕೆ ಅವರು ಪ್ರಮಾಣವೆಂದು ಹೆಸರಿಸಿದ ಗ್ರಂಥೋಕ್ತ ಶ್ಲೋಕಗಳನ್ನು ಪ್ರಾಮಾಣಿಕವೆಂದು ಒಪ್ಪುವ ಅಗತ್ಯವೇನು?

೭. ಈ ಎಲ್ಲ ಮುಜುಗರಗಳಿಂದ ಪಾರಾಗಲು, ಸ್ವತಃ ಸ.ಸೀ.ಮೂ. ಗ್ರಂಥಕಾರರೇ. ಅವರೇ ಉಲ್ಲೇಖಿಸಿರುವ **'ಭಿಕ್ಷುಕಾನಾಂ ಕಿರೀಟಾಭಕಿರೀಟಾಂ'** ಎಂಬ ಭಾಗಕ್ಕೆ ಕಿಂಚಿತ್ತೂ ಬೆಲೆಕೊಡದೆ, 'ಅದ್ಭುತ ಕಿರೀಟದಿಂದ ಕೂಡಿದೆ.' ಎಂದು ತಮಗೆ ಬೇಕಾದಂತೆ ಅನುವಾದಿಸುವ ಹಕ್ಕನ್ನು ಚಲಾಯಿಸುವ ಮೂಲಕ, ಆ ಕಾವ್ಯದ ಮಾತುಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲವೆಂಬ ಸಂದೇಶವನ್ನು ರವಾನಿಸಿದಂತಿಲ್ಲವೆ?

೮. ಆದ್ದರಿಂದ ಈ ಶ್ಲೋಕಗಳು ಶ್ರೀಸರ್ವಜ್ಞಾಚಾರ್ಯಕರಾರ್ಚಿತ ಶ್ರೀದಿಗ್ವಿಜಯ ರಾಮಪ್ರತಿಮೆಯ ಲಕ್ಷಣಗಳೆನಿಸುತ್ತವೆಯೆ? ವಾಚಕರೇ ವಿಚಾರಿಸುವುದು.

ದಿಗ್ವಿಜಯರಾಮನಿಗೆ ವಿಜಯದಾಸರ ಸಾಕ್ಷ್ಯ

ಶ್ರೀವಾದೀಂದ್ರರ ಸಮಕಾಲೀನರಾದ ಶ್ರೀವಿಜಯದಾಸರು, ಅಂದಿನ ಕಿರಿಯ ಶ್ರೀಗಳವರಾಗಿದ್ದ ಶ್ರೀವಸುಧೇಂದ್ರತೀರ್ಥಶ್ರೀಪಾದಂಗಳವರ ದರ್ಶನ ಮಾಡಿ, ಅವರಿಂದ ಪೂಜೆಗೊಳ್ಳುತ್ತಿದ್ದ **ಶ್ರೀದಿಗ್ವಿಜಯರಾಮದೇವರ** ಬಗ್ಗೆ ವಿಪುಲ ವಿವರಗಳುಳ್ಳ **'ವಂದೇಮುಕುಂದ ಮುಚುಕುಂದಪರಿಪಾಲಕ'** ಎಂಬ ಸುಳಾದಿಯನ್ನು ರಚಿಸಿದ್ದಾರೆ. ಅಲ್ಲಿ –

"..................
ಆನಂದತೀರ್ಥರ ಮನದಲ್ಲಿನಿಂದ
ಅತಿನಿರ್ಮಳಪಾದ ಅಪ್ರಾಕೃತಪಾದ ।"

ಅಧ್ಯಾಯ – 3

ಶ್ರೀದಿಗ್ವಿಜಯರಾಮಪ್ರತಿಮಾಮಹಿಮೆ

ದಿಗ್ವಿಜಯರಾಮಪ್ರತಿಮಾ ಲಕ್ಷಣ

ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಸಂಸ್ಥಾನಪೂಜಾಪೀಠದಲ್ಲಿ ಮಧ್ಯಪ್ರಭಾವಳಿಯಲ್ಲಿ ಶೋಭಿಸುವ ಚತುರ್ಯುಗಮೂರ್ತಿ ಶ್ರೀಮೂಲ–ರಾಮದೇವರ ಬಲಬದಿಯಲ್ಲಿ ಕಂಗೊಳಿಸುವ, ಶುಭಲಕ್ಷಣಗಳಿಂದಕೂಡಿದ, **ನೀಲಮೇಘಚ್ಛಾಯೆಯ ಸುಂದರ ರಜತಮಯ (ಬೆಳ್ಳಿ) ಪ್ರತಿಮೆಯೇ** ಶ್ರೀದಿಗ್ವಿಜಯ–ರಾಮಮೂರ್ತಿ.

ರಜತಪೀಠಪುರದಲ್ಲಿ ದೊರೆತ ರಜತಮಯ ದಶಾವತಾರ ಪೀಠದ ಮೇಲೆ ಶ್ರೀಮದಾಚಾರ್ಯರು ಈ ಪ್ರತಿಮೆಯನ್ನು ಶಿಲ್ಪಿಗಳಿಂದ ನಿರ್ಮಿಸಿ, ದಂಡ–ಕಾಷ್ಠದ ಮುದ್ರಿಕೆಯಲ್ಲಿ ಸಂಗ್ರಹಿಸಿಕೊಂಡು, ತಮ್ಮ ಬದರೀಯಾತ್ರೆಯ ಸಂದರ್ಭ–ದಲ್ಲಿ, ಶ್ರೀವೇದವ್ಯಾಸದೇವರ ಹಸ್ತಸ್ಪರ್ಶ ಮಾಡಿಸುವ ಮೂಲಕ ಈ ಪ್ರತಿಮೆ–ಯಲ್ಲಿ ವಿಶೇಷ ಸಾನ್ನಿಧ್ಯವನ್ನು ಸಂಪಾದಿಸಿ ಭಕ್ತಿಪೂರ್ವಕವಾಗಿ ಅರ್ಚಿಸಿ, ಶ್ರೀಪದ್ಮನಾಭತೀರ್ಥರಿಗೆ ದಯಪಾಲಿಸಿದರು. ಹೀಗೆ ಪರಂಪರೆಯಿಂದ ನಿರಂತರ ಪೂಜೆಗೊಳ್ಳುತ್ತ ಬಂದ ಮಹಿಮಾನ್ವಿತ ಮೂರ್ತಿಯಿದು.

ಈ ಪ್ರತಿಮೆಯ ಲಕ್ಷಣಗಳನ್ನು ಶ್ರೀರಾಘವೇಂದ್ರಗುರುಸಾರ್ವಭೌಮರ ಮಂತ್ರಿಗಳಂತೆ ಶೋಭಿಸುವ ಶ್ರೀವಾದೀಂದ್ರಸ್ವಾಮಿಗಳವರು ತಾವು ರಚಿಸಿರುವ 'ಶ್ರೀಮದ್ರಾಘವೇಂದ್ರಮಠಾಗತಾರ್ಚಾಗತಿಕ್ರಮಃ' ಎಂಬ ಗ್ರಂಥದಲ್ಲಿ ವರ್ಣಿಸಿದ್ದಾರೆ.

"ಪಾದಮೂಲೇ ಶಿರಶ್ಚಕ್ರೇ ಸುದರ್ಶನ ಶಿಲಾಂಚಿತಾ ।
ದಶಾವತಾರಪೀಠಾರ್ಚಾ ರಾಮಸ್ಯತ್ರಾಸ್ತಿ ರಾಜತಾ ॥ ೨೩ ॥

ಆಚಾರ್ಯಪೂಜಿತಾಮೇತಾಂ ಗುರುರ್ವ್ಯಾಸೋಪಲದ್ವಯಮ್ ।
ವಿಬುಧೇಂದ್ರಾಯ ದತ್ವಾ ತಂ ಪ್ರಾಹಿಣೋದುತ್ತರಾಂ ದಿಶಮ್" ॥ ೨೪ ॥

[ದಶಾವತಾರಪೀಠ, ಶಿರಃಪಾದಗಳಲ್ಲಿ ಕೂಡಿಸಲ್ಪಟ್ಟ ಸುದರ್ಶನ ಶಿಲೆ–ಯುಳ್ಳ, ಶ್ರೀಮನ್ಮಧ್ವಾಚಾರ್ಯರಿಂದ ಪೂಜಿತವಾದ ಬೆಳ್ಳಿಯ ರಾಮಪ್ರತಿಮೆಯು ಈ ಸಂಸ್ಥಾನದಲ್ಲಿದೆ. ಗುರುಗಳಾದ ಶ್ರೀರಾಮಚಂದ್ರತೀರ್ಥರು ಶ್ರೀವಿಬುಧೇಂದ್ರರಿಗೆ ಈ ಪ್ರತಿಮೆಯನ್ನೂ ಜೊತೆಗೆ ಎರಡು ವ್ಯಾಸಮುಷ್ಟಿಗಳನ್ನೂ ದಯಪಾಲಿಸಿ, ಉತ್ತರಭಾರತ ದಿಗ್ವಿಜಯ ಯಾತ್ರೆಗೆ ಕಳುಹಿಸಿಕೊಟ್ಟರು.]

ಇಲ್ಲಿರುವ ಸ್ವಾರಸ್ಯವನ್ನು ವಾಚಕರು ಗಮನಿಸಬೇಕು:– ಗುರುಗಳಾದ ಶ್ರೀರಾಮಚಂದ್ರತೀರ್ಥರು ತಮ್ಮ ಕರಕಮಲಸಂಜಾತರಾದ, ಪಟ್ಟಾಭಿಷಿಕ್ತರಾಗಿ ಅಧಿಕೃತ ಉತ್ತರಾಧಿಕಾರಿಗಳಾಗಿಯೇ ಉಳಿದಿದ್ದ ಶ್ರೀವಿಬುಧೇಂದ್ರರಿಗೆ ಮಾತ್ರ ಶ್ರೀಸರ್ವಜ್ಞಾಚಾರ್ಯಕರಾರ್ಚಿತವಾದ ರಜತಮಯ ರಾಮಪ್ರತಿಮೆಯನ್ನು ನೀಡಿ ದಿಗ್ವಿಜಯಯಾತ್ರೆಗೆ ಕಳುಹಿಸಿಕೊಟ್ಟರೇ ವಿನಃ ಇತರ ಯಾರಿಗೂ, ಯಾವ ಪ್ರತಿಮೆಯನ್ನೂ ಕೊಟ್ಟಿರಲಿಲ್ಲ. ಅಂತೆಯೇ ಇತರ ಪ್ರತಿಮೆಗಳ ಭೂಸ್ಥಾಪನೆ ಮಾಡಿದರು.

ವಿಜಯಪ್ರದವಾದ ಈ ರಾಮಪ್ರತಿಮೆಯು ಮುಂದೆ ಶ್ರೀದಿಗ್ವಿಜಯರಾಮ–ನೆಂಬ ಹೆಸರಿನಿಂದಲೇ ಪ್ರಖ್ಯಾತವಾಯಿತು. ಹೀಗೆ ಶ್ರೀಮದಾಚಾರ್ಯರಿಂದ ಆರಂಭಿಸಿ ಶ್ರೀವಿಬುಧೇಂದ್ರರಿಗೆ ಪರಂಪರಯಾ ಪ್ರಾಪ್ತವಾಗಿ, ಶ್ರೀರಾಘವೇಂದ್ರ–ಸ್ವಾಮಿಗಳವರ ಮಠದಲ್ಲಿ ಇಂದಿಗೂ ಸಂಸ್ಥಾನದ ಪ್ರಧಾನ ಪ್ರತಿಮೆಗಳ–ಲ್ಲೊಂದಾಗಿ ಪೂಜೆಗೊಳ್ಳುತ್ತಿದೆ. ಹಿರಿಯ ಶ್ರೀಗಳವರ ಅಪ್ಪಣೆಯಮೇರೆಗೆ, ಉತ್ತರಾಧಿಕಾರಿಗಳಾದ ಕಿರಿಯ ಶ್ರೀಗಳವರು ಪ್ರತ್ಯೇಕ ಸಂಚಾರ ಕೈಗೊಂಡ ಅವಧಿಯಲ್ಲಿ, ಬ್ರಹ್ಮಕರಾರ್ಚಿತ ಶ್ರೀಮೂಲರಾಮದೇವರನ್ನು ಹಿರಿಯ ಶ್ರೀಗಳವರೂ; ಗುರುಪ್ರದತ್ತವಾದ ಶ್ರೀದಿಗ್ವಿಜಯರಾಮಪ್ರತಿಮೆ ಹಾಗೂ ವ್ಯಾಸಮುಷ್ಟಿಗಳನ್ನು ಕಿರಿಯ ಶ್ರೀಗಳವರೂ; ಪೂಜಿಸುವ ಸಂಪ್ರದಾಯವಿದೆ.

ಅಸ್ಪಷ್ಟ ಲಕ್ಷಣದ ಗೊಂದಲಗಳು

ಸ.ಸೀ.ಮೂ. ಪು:೨೮ ರ ಪ್ರಕಾರ ವಡವೀ ಭೀಮಾಚಾರ್ಯರಿಂದ ರಚಿತವಾದ ಗುರುವಂಶಕಥಾಕಲ್ಪತರು ಕಾವ್ಯದ ೩ನೇ ಸರ್ಗದಲ್ಲಿ ಶ್ರೀದಿಗ್ವಿಜಯ ರಾಮಪ್ರತಿಮೆಯ ಲಕ್ಷಣಗಳನ್ನು ಕುರಿತ ಶ್ಲೋಕಗಳು –

ಉಪಸಂಹಾರ

ಇತ್ತೀಚಿಗೆ ಕೆಲವರು ತಮ್ಮ ಮಠದ ಮೂಲತ್ವವನ್ನು ಹಾಗೂ ಪ್ರತಿಮೆಗಳ ಶ್ರೇಷ್ಠತ್ವವನ್ನು ಮಾತ್ರ ವ್ಯಾಪಕ ಪ್ರಸಾರಮಾಡುತ್ತಾ, ಇತರ ಮಠಗಳ ಪರಂಪರೆ, ಸಂಪ್ರದಾಯ, ಪ್ರತಿಮೆಗಳ ಬಗ್ಗೆ ಕಿಂಚಿತ್ತೂ ಗೌರವವಿಲ್ಲದೆ ಅಪಪ್ರಚಾರಮಾಡು–ವುದಲ್ಲದೆ, ಪುಸ್ತಕ ರೂಪದಲ್ಲೂ ಪ್ರಕಟಿಸುತ್ತಿದ್ದಾರೆ. ಇದರಿಂದ ನಿಷ್ಕಲ್ಮಷ ಮನಸ್ಸು–ಗಳೂ ಮಲಿನವಾಗುವ ಅಪಾಯವಿದೆ. ಆದ್ದರಿಂದ ಸತ್ಯಾಂಶಗಳನ್ನು ಭಕ್ತ–ಸಮುದಾಯದ ಮುಂದಿಟ್ಟು, ವಿವೇಕಿಗಳಾದ ಸಜ್ಜನರು ಸಾರಯಾವುದು? ಅಸಾರಯಾವುದು? ಎಂದು ವಿವೇಚಿಸಿ ತಮ್ಮ ಸ್ವಂತ ನಿರ್ಣಯಗಳನ್ನು ರೂಪಿಸಿ–ಕೊಳ್ಳಲು ಸಹಾಯಕವಾಗಲೆಂದು ಈ ವಿಮರ್ಶಾತ್ಮಕ ಗ್ರಂಥವನ್ನು ರೂಪಿಸ–ಲಾಗಿದೆ.

ಚರಿತ್ರೆ ಹಾಗೂ ಪ್ರಮಾಣಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಗಮನಿಸಿದಾಗ – ಶ್ರೀರಾಮಚಂದ್ರತೀರ್ಥರಿಂದ ಶ್ರೀವಿಬುಧೇಂದ್ರಸ್ವಾಮಿಗಳಿಗೆ ಬರಬೇಕಾಗಿದ್ದ ಶ್ರೀಮೂಲರಾಮಪ್ರತಿಮೆ ಕೈತಪ್ಪಿದ್ದು ಎಷ್ಟು ಸತ್ಯವೋ, ಶ್ರೀರಘುನಂದನತೀರ್ಥರು ಬಾಡದ ಚಂದ್ರಭಟ್ಟನ ಮೂಲಕ ಶ್ರೀಮೂಲರಾಮಚಂದ್ರಪ್ರತಿಮೆಯನ್ನು ಪುನಃ ಸಂಪಾದಿಸಿದ್ದೂ; ಅದು ಅದ್ಯಾಪಿ ಶ್ರೀರಾಯರ ಮಠದಲ್ಲಿ ಕಂಗೊಳಿಸುತ್ತಿರು–ವುದೂ ಅಷ್ಟೇ ಸತ್ಯ. ಇತಿಹಾಸವನ್ನು ಬದಲಿಸಲಾಗದು.

'ಶ್ರೀಮನ್ಮೂಲರಾಮೋ ವಿಜಯತೇ' ಎಂಬ ದಿವ್ಯಘೋಷ ಮುಗಿಲು ಮುಟ್ಟುತ್ತಿರುವುದು ಶ್ರೀರಾಯರ ಮಠದಲ್ಲಿ ಮಾತ್ರ. ಇನ್ನು ಮುಂದೆ ಈ ಘೋಷಣೆ–ಯನ್ನು ಇತರರೂ ಆರಂಭಿಸಿದರೆ ಆಶ್ಚರ್ಯವೇನಿಲ್ಲ!

ಶ್ರೀರಾಯರ ಮಠವು 'ಶ್ರೀಮದಾಚಾರ್ಯರ ಮೂಲಮಹಾಸಂಸ್ಥಾನ'ವೆಂದು ನಾವು ಧನ್ಯತೆಯಿಂದ ಎಲ್ಲೆಲ್ಲ ಕಡೆ ಹೇಳಿಕೊಳ್ಳುತ್ತಿರುವಾಗಲೂ, ಎಲ್ಲೇ ಆಗಲಿ, ಇತರ ಯಾವುದೇ ಮಾಧ್ವಮಠಗಳನ್ನು 'ಶಾಖಾಮಠಗಳು' ಎಂದು ಹೆಸರಿಸಿಲ್ಲ, ನಿಂದಿಸಿಲ್ಲ ಹಾಗೂ ಅವಮಾನಿಸಿಲ್ಲವೆಂಬುದನ್ನು ವಾಚಕಸಮುದಾಯಕ್ಕೆ ಮನವರಿಕೆ ಮಾಡಿಕೊಡಲು ಹೆಮ್ಮೆಯೆನಿಸುತ್ತದೆ.

ಸ.ಸೀ.ಮೂ. ಗ್ರಂಥಕಾರರ ದುರಾಗ್ರಹದ ಬಗ್ಗೆ ಮಾತ್ರ ನಮ್ಮ ಆಕ್ಷೇಪ–ಗಳನ್ನು ಮಂಡಿಸಬೇಕಾಗಿ ಬಂದದ್ದು ಅನಿವಾರ್ಯ.

ಶ್ರೀಮಧ್ವಾಚಾರ್ಯರಿಂದ ಪ್ರವರ್ತಿತವಾದ ಎಲ್ಲ ಮಠಗಳೂ ಮೂಲ ಮಹಾಸಂಸ್ಥಾನಗಳೇ, ಸಕಲರೂ ಪೂಜ್ಯರೇ ಆಗಿದ್ದಾರೆ.

ಮಾಧ್ವಸಮಾಜದ ಸರ್ವಾಂಗೀಣ ಒಳಿತಿಗಾಗಿ, ಪರಸ್ಪರ ಸ್ನೇಹ ಸೌಹಾರ್ದದ ಸುದಿನಗಳು ಒದಗಿಬರಲೆಂಬ ಹಾರೈಕೆಯಿಂದ ರಚಿತವಾದ ಈ ಕೃತಿಯನ್ನು, ಶ್ರೀಮದ್ರಾಘವೇಂದ್ರತೀರ್ಥಾದಿ ಸಮಸ್ತಗುರ್ವಂತರ್ಗತ ಶ್ರೀಮಧ್ವರಾಜಾಂತರ್ಗತ ಶ್ರೀಮೂಲರಘುಪತಿ ವೇದವ್ಯಾಸರಲ್ಲಿ ಸಮರ್ಪಿಸುತ್ತಿದ್ದೇವೆ.

***

ಇನ್ನು ನಿಷ್ಕಳಂಕ ಪರಂಪರೆಯ ಬಗ್ಗೆ ಸ್ವಲ್ಪ ಯೋಚಿಸೋಣ. ಶ್ರೀವಿದ್ಯಾ–ನಿಧಿಗಳ ಕಾಲಕ್ಕೇನೇ ಮಠೀಯ ಕರ್ಮಕಾರರೊಡನೆ ಒಪ್ಪುವ ಮಾಡಿಕೊಂಡು ಮಠದ ಯಾಜಮಾನ್ಯವನ್ನು ಶ್ಯಾನುಭೋಗರು ನಿರ್ವಹಿಸುತ್ತಿದ್ದರಷ್ಟೇ? ಶ್ರೀಸತ್ಯ–ವೀರರ ಕಾಲಕ್ಕೆ (೧೮೮೦) ಅವರುಗಳ ಉಪಟಳ ಹೆಚ್ಚಿ ಗುರುಗಳು ಅವರನ್ನು ಮಠದಿಂದ ಹೊರಗೆ ಹಾಕಿದರು. ಆಗ ಆ ಶ್ಯಾನುಭೋಗರು ಮೈಸೂರಿನ ಕೋರ್ಟಿಗೂ, ಮಹಾರಾಜರುಗಳಿಗೂ ಅರ್ಜಿ ಸಲ್ಲಿಸಿ (O.S. No. 48 of 1891) ಆ ಅರ್ಜಿಯು ಶ್ಯಾನುಭೋಗರ ಪರವಾಗಿ ನಿರ್ಣಯವಾಗಿ ಅವರುಗಳನ್ನು ಕೋರ್ಟಿನ ಖರ್ಚುಕೊಟ್ಟು ಸ್ವಾಮಿಗಳು ಪುನರ್ನೇಮಕ ಮಾಡಿಕೊಳ್ಳಬೇಕಾಯಿತು. ಪುನಃ ಸ್ವಾಮಿಗಳು ಅರ್ಚಕರು ಮಾತ್ರ ಯಜಮಾನರು ಶ್ಯಾನುಭೋಗರು ಎಂಬ ಪರಿಸ್ಥಿತಿ ಮುಂದುವರೆಯಿತು. ಮುಂದಿನ ಎರಡು – ಮೂರು ತಲೆಮಾರಿನ ಸ್ವಾಮಿಗಳು ಕೋರ್ಟ್ ವಾರೆಂಟು ತಪ್ಪಿಸಲು ಹೈದ್ರಾಬಾದಿನ ಕಡೆಗೇನೇ ಸಂಚರಿಸಬೇಕಾಯಿತು. ಅಂತೂ ಶ್ರೀಸತ್ಯಧ್ಯಾನರ ಕಾಲದಲ್ಲಿ ಕರ್ಮಕಾರರೊಡನೆ ರಾಜಿ ಮಾಡಿಕೊಂಡು ಅಪಾರ ಹಣಕೊಟ್ಟು 'ಹಕ್ಕು ಬಿಟ್ಟ ಪತ್ರ' (Release Document) ಪಡೆಯಲಾಯಿತು. ಶ್ರೀಸತ್ಯಧ್ಯಾನರಿಂದಲೇ ಉತ್ತರಾದಿಮಠವು ಇತರ ಮಠಗಳಂತೆ ಸ್ವತಂತ್ರ ಮಠವೆನಿಸಿತು.

ಹೀಗೆ ಕೋರ್ಟ್ ವ್ಯಾಜ್ಯದ ಪ್ರಕರಣವು ಒಂದಾದರೆ – ಶ್ರೀಸತ್ಯಧ್ಯಾನರೇ ಕಂಚಿ ಸುಬ್ಬರಾಯರ ತಿರುಪತಿಯ ಸಭೆಯನ್ನು ಮುರಿದರು ಹಾಗೂ ತೀರ್ಥ ಪ್ರಕರಣವನ್ನು ಕೋರ್ಟಿಗೆ ಒಯ್ದರು. ಇನ್ನು ಶ್ರೀಸತ್ಯಪ್ರಮೋದರ ಮೇಲೆ ಅವರ ಶಿಷ್ಯರುಗಳು ಒರಿಜಿನಲ್ ಸೂಟ್ ನಂ. ೧೧೬/೫೩ ಮದ್ರಾಸ್ ಹೈಕೋರ್ಟಿನಲ್ಲಿ ನಡೆಸಿದರು. ಅಲ್ಲದೇ, ಬೆಳಗಾಂ ಡಿಸ್ಟ್ರಿಕ್ಟ್ ಜಜ್ಡ್ ಕೋರ್ಟಿನಲ್ಲಿ ನಂ. ೨೫/೮೩ ಕೇಸು ನಡೆಸಲಾಯಿತು. ಶ್ರೀವಿದ್ಯಮಾನಶ್ರೀಗಳ ಮೇಲೆಯೂ ಪಂಢರಪುರ ಕೋರ್ಟಿನಲ್ಲಿ ದಾವೆಗಳು ನಡೆಯುತ್ತಿವೆ.

ಸತ್ಯಾಂಶ ಹೀಗಿರುವಾಗ ನಿಷ್ಕಳಂಕ ಅವಿಚ್ಛಿನ್ನ ಪರಂಪರೆ ಎಂದು ಹೇಳಿ–ಕೊಳ್ಳುವುದರ ಔಚಿತ್ಯವೇನಿದೆ?

ಇಲ್ಲಿ ಮುಖ್ಯವಾಗಿ ಸತ್ಯಾನ್ವೇಷಕ ಸುವಿಚಾರಿಗಳ ಅವಗಾಹನೆಗಾಗಿ ತಿಳಿಸ ಬಯಸುವುದೇನೆಂದರೆ ಉತ್ತರಾದಿಮಠದ ಉತ್ಕೃಷ್ಟತ್ವ ಪ್ರತಿಪಾದಕ ಗ್ರಂಥಗಳ

ಗುರುಚರ್ಯ(೧೬೪೮)ಯಿಂದ ಆರಂಭಿಸಿ ಇಂದಿನವರೆಗೆ (ಸತ್ಕಥಾ, ಪೂರ್ಣಬೋಧ ಗುರುವಂಶಕಥಾಕಲ್ಪತರು, ಉತ್ತರಾದಿಮಠದ ಯತಿಗಳ ವೈಭವ, ಉತ್ತರಾದಿ ಮಠ – ಶ್ರೀಮಧ್ವಾಚಾರ್ಯರ ಮೂಲಮಹಾಸಂಸ್ಥಾನ, ಶ್ರೀರಾಘವೇಂದ್ರ ಕಥಾಮೃತ, ಮಾಧ್ವಮುನಿವೃಂದಚರಿತೆ ಇತ್ಯಾದಿ) ವೈಭವೀಕರಣವನ್ನೊಂದನ್ನೇ ಧ್ಯೇಯವಾಗಿ ಇಟ್ಟುಕೊಂಡವುಗಳಾಗಿವೆ. ಆ ಭರದಲ್ಲಿ ಇತಿಹಾಸ, ಇಸ್ವಿಗಳಿಗೆ ಗಮನಕೊಡದೇ ಅನೇಕ ವಿಪರ್ಯಾಸದಿಂದ ಕೂಡಿದವುಗಳಾಗಿವೆ. ಅರ್ಧ ಸತ್ಯಗಳನ್ನೊಳಗೊಂಡ ಈ ಪ್ರಬಂಧಗಳಲ್ಲಿ ಸತ್ಯವನ್ನು ಹೆಕ್ಕಿ ತೆಗೆಯುವುದು ಪ್ರಯಾಸಕರ. ಆದರೂ ಡಾ. ಶರ್ಮಾರವರಂತಹ ಮೇಧಾವಿಗಳು ಈ ಕೆಲಸ–ವನ್ನು ಮಾಡಿದ್ದಾರೆ.

ಇಲ್ಲಿನ ಉದ್ದೇಶ ಖಂಡಿತವಾಗಿಯೂ ಉತ್ತರಾದಿಮಠವನ್ನು ತೆಗಳುವುದಲ್ಲ. ಅಲ್ಲಿರುವ ಪ್ರತಿಮೆಗಳಲ್ಲಿ ಸನ್ನಿಧಾನವಿಲ್ಲವೆನ್ನುವುದಕ್ಕಲ್ಲ. ಅಲ್ಲಿನ ಸಾಕಷ್ಟು ಯತಿ–ವರೇಣ್ಯರು ಮಧ್ವಸಿದ್ಧಾಂತದ ಬೆಳವಣಿಗೆಗೆ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ.

ಶ್ರೀಮೂಲರಾಮನ ಪ್ರತಿಮೆಯ ಬಗ್ಗೆ ಅವರೇ ಎಬ್ಬಿಸಿದ ವಿವಾದವನ್ನು ಉಪಶಮನಮಾಡಲು ಈ ರೀತಿ ಬರೆಯುವುದು ಅನಿವಾರ್ಯವಾಗಿದೆ. ಶ್ರೀವಿದ್ಯಾನಿಧಿಗಳು ೧೪೩೬ ರಿಂದ ೧೪೪೪ ರ ವರೆಗೂ, ಶ್ರೀರಘುನಾಥ–ತೀರ್ಥರು ೧೪೪೪ ರಿಂದ ೧೪೯೩ (ಶ್ರೀರಘುನಂದನರು ಶ್ರೀಮೂಲರಾಮ–ನನ್ನು ಮರಳಿ ಪಡೆಯುವವರೆಗೂ) ರ ವರೆಗೂ ಶ್ರೀಮೂಲರಾಮನನ್ನು ಪೂಜೆ ಮಾಡಿದ್ದು ಐತಿಹಾಸಿಕ ಘಟನೆಯಾಗಿದೆ. ಆ ಬಗ್ಗೆ ರಾಯರ ಮಠದಲ್ಲಿ ತಾಮ್ರ ಶಾಸನವಿದೆ. ಶ್ರೀಮಠವು ರಾಯಸವನ್ನು 'ಶ್ರೀಮನ್ಮೂಲರಾಮೋ ವಿಜಯತೇ' ಎಂದೇ ಹೊರಡಿಸುತ್ತಿದೆ. ಇಷ್ಟಾದರೂ ಆಗ್ರಹದಿಂದ ತಮ್ಮದೇ ಭ್ರಾಂತಿಗೆ ಜೋತು ಬೀಳುವುದಾದಲ್ಲಿ – ಅದಕ್ಕೆ ಔಷಧಿ ಇಲ್ಲ. ಟೀಕಾಚಾರ್ಯರು ಹೇಳುವಂತೆ – **"चक्षुषी निमील्य तत्तथा इति वदत: क: प्रतिमल्ल:"**?

ಈ ಸತ್ಯವನ್ನು ಜೀರ್ಣಿಸಿಕೊಂಡು ಉತ್ತರಾದಿಮಠವು ವಿಧಾಯಕ ಕಾರ್ಯಗಳತ್ತ ಗಮನಹರಿಸಲೆಂಬುದೇ ನಮ್ಮ ಸದಾಶಯ.

ಇಲ್ಲಿ ಗಮನಿಸಬೇಕಾದ ಅಂಶ ಒಂದಿದೆ. ನಮ್ಮ ಸುಮಾರು ೧೮ ಮಾಧ್ವ ಮಠಗಳಲ್ಲಿ ಯಾರೊಬ್ಬರೂ ತಮ್ಮ ಪ್ರವಚನಗಳಲ್ಲಾಗಲೀ, ಪುಸ್ತಗಳಲ್ಲಾಗಲೀ, ಪಂಡಿತರುಗಳಾಗಲೀ – ನಮ್ಮ ಮಠವೇ ಹಂಸನಾಮಕ ಪರಮಾತ್ಮನಿಂದ ನೇರವಾಗಿ ಬಂದದ್ದು, ಆಚಾರ್ಯ ಮಧ್ವರು ನಮ್ಮ ಮಠದವರು, ಇತರ ಮಠಗಳು ಶಾಖಾಮಠಗಳು ಇತ್ಯಾದಿ ಪ್ರತಿಪಾದನೆ ಮಾಡುವುದು ಕಂಡುಬಂದಿಲ್ಲ. ಉಡುಪಿಯ ಅಷ್ಟಮಠಗಳೂ – ನಾವೇ ಇತರರಿಗಿಂತ ಶ್ರೇಷ್ಠ ಎನ್ನುವುದಿಲ್ಲ. (ಫಲಿಮಾರು ಮಠದ ಅಷ್ಟೋತ್ಕೃಷ್ಟತ್ವವು ಪರ್ಯಾಯಗಳ ವರ್ತುಲದ ಪ್ರಾರಂಭಿಕವಿದ್ದುದರಿಂದ) ಶಂಕರರ ಅನೇಕ ಮಠಗಳು ತಮ್ಮದೇ ಮೂಲ ಮಠವೆಂದು ಪ್ರತಿಪಾದಿಸುತ್ತಿಲ್ಲ. ಹೀಗಿರುವಾಗ ಉತ್ತರಾದಿಮಠವು ಮಾತ್ರ ಪದೇ ಪದೇ 'ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನ' ಎಂದು ಏಕೆ ಹೇಳಿಕೊಳ್ಳುತ್ತಿದೆ? ಹಾಗೆ ನೋಡಿದರೆ ಅವರ ಹಿಂದಿನ ರಾಯಸಗಳು ಮೊದಮೊದಲು (೧೯೪೮) ಉತ್ತರಾದಿಮಠ, ನಂತರ ಶ್ರೀಮಧ್ವಾಚಾರ್ಯ ಸಂಸ್ಥಾನ ಉತ್ತರಾದಿ ಮಠ, ನಂತರ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಸಂಸ್ಥಾನ – ಹೀಗೆ ಕಾಲಕಾಲಕ್ಕೆ ಬದಲಾಗುತ್ತಾ ಈಗ 'ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ – ಶ್ರೀಉತ್ತರಾದಿಮಠ'ಕ್ಕೆ ಬಂದು ನಿಂತಿದೆ. ಆ ಮಠದ ದುರಭಿಮಾನಿ ಪಂಡಿತರುಗಳು – ತಾವು ಎಲ್ಲಿಯೇ ಹೋಗಲಿ, ಅದು ಪ್ರವಚನವೋ, ಶ್ರದ್ಧಾಂಜಲಿ ಸಭೆಯೋ, ಮದುವೆಯೋ, ಹಬ್ಬವೋ ಎಂತಹುದೇ ಸಂದರ್ಭವಿದ್ದರೂ ಅಲ್ಲಿ ಅವರು ಮಠದ ಪ್ರಸ್ತಾಪವನ್ನು ತೆಗೆದು ನಮ್ಮದೇ ಮೂಲಮಠ, ಮಳಖೇಡ – ಯರಗೋಳ – ನವವೃಂದಾವನಾದಿಗಳು ನಮ್ಮ ಮಾಲಕಿನಲ್ಲಿವೆ ಇತ್ಯಾದಿ ವಿಷಯಗಳನ್ನು ಹೇಳದೇ ಬಿಡುವುದಿಲ್ಲ. ಹಿಂದಿನ ಪೀಠಾಧಿಪತಿಗಳಂತೂ ಪ್ರತಿನಿತ್ಯ – ಯಾವುದೇ ಊರಲ್ಲಾಗಲೀ – ಸಾಯಂ ಸಭೆಯಲ್ಲಿ ಓರ್ವ ಶಿಷ್ಯನಿಂದ 'ಸ್ವಾಮಿ ಈ ಉತ್ತರಾದಿಮಠ ಎಂದರೇನು?' ಎಂಬ ಪ್ರಶ್ನೆಯನ್ನು ಹಾಕಿಸಿಕೊಂಡು ತಮ್ಮ ಪ್ರವಚನದಲ್ಲಿ ಈ ಮೂಲಮಠದ ತಮಟೆಯನ್ನು ಬಾರಿಸುತ್ತಿದ್ದರು. ಹೀಗೇಕೆ?

ಇದು ಸಾಮಾನ್ಯ ಕೇಳುಗರಲ್ಲಿ ಸಂಶಯದ ಬೀಜ ಬಿತ್ತುವದಲ್ಲವೇ? ತಮ್ಮಲ್ಲಿ ಇರದೇ ಇದ್ದ ಗುಣಗಳನ್ನು ಇವರುಗಳು ತಮ್ಮಲ್ಲಿ ಆರೋಪಿಸುತ್ತಿರುವರೆಂಬುದು ಸಹಜವಾಗಿಯೇ ಯಾರಿಗಾದರೂ ಸಂಶಯ ಮೂಡುವುದು. ರಾಜಕಾರಣಿಗಳು ಪದೇ ಪದೇ ತಮ್ಮ ಪಕ್ಷವೇ ತುಂಬಾ ಪ್ರಾಮಾಣಿಕವಾದುದು –

ಇತರ ಪಕ್ಷಗಳು ಅಲ್ಲ ಎಂದು ಹೇಳಿದರೆ ಅದನ್ನು ಯಾರಾದರೂ ನಂಬಬಹುದೇ? ಆ ಮಾತನ್ನು ಇತರರು ಹೇಳಬೇಕೇ ವಿನಃ ತಾವೇ ತುತ್ತೂರಿಯನ್ನು ಊದಿದರೆ – ಅಪಾರ್ಥಕ್ಕೇನೇ ಎಡೆಯಾಗುವುದು.

ಇನ್ನು ನಿಷ್ಕಳಂಕ ಅವಿಚ್ಛಿನ್ನ ಪರಂಪರೆ ಎನ್ನುವುದಂತೂ ತೀರಾ ಅತಿರೇಕದ ಪರಮಾವಧಿ. ಆಚಾರ್ಯರ ಕಾಲಕ್ಕಾಗಲೀ (೧೨ನೇ ಶತಮಾನ), ಶ್ರೀಕೂರ್ಮ ಶಿಲಾಶಾಸನದ ಕಾಲಕ್ಕಾಗಲೀ, ಈ ಹಿಂದೆಯಾಗಲೀ 'ಉತ್ತರಾದಿಮಠ' ಎಂಬ ಶಬ್ದವೇ ಕಾಣಸಿಗುವುದಿಲ್ಲ. ಶ್ರೀಸುಮಧ್ವವಿಜಯ, ಮಣಿಮಂಜರಿ, ವಾಯುಸ್ತುತಿ, ಸಂಪ್ರದಾಯಪದ್ಧತಿ ಮುಂತಾದ ಯಾವ ಮಾನ್ಯ ಗ್ರಂಥಗಳಲ್ಲೂ, ಶಿಲಾಶಾಸನಗಳಲ್ಲೂ, 'ಉತ್ತರಾದಿಮಠ' ಎಂಬ ಶಬ್ದವು ಕಾಣಸಿಗದು. (ಇಂದಿಗೂ ರಾಯರ ಮಠದವರು ಈಗಾಗಲೇ ಎರಡು 'ಮಾಧ್ವಮಠಗಳ ಶಾಸನಗಳೆಂಬ ಹೊತ್ತಿಗೆಗಳನ್ನು ಪ್ರಕಟಿಸಿದ್ದು – ಮೂರನೆಯ ಸಂಪುಟವು ಸಿದ್ಧವಾಗುತ್ತಲಿದೆ. ಅದರಲ್ಲೂ 'ಉತ್ತರಾದಿ' ಮಠದ ಹೆಸರು ಸುತರಾಂ ಇಲ್ಲ!')

ಶ್ರೀರಾಮಚಂದ್ರತೀರ್ಥರ ನಿರ್ಯಾಣಾನಂತರ (೧೪೩೦), ಯರಗೋಳದಿಂದ ಮಠದ ಕರ್ಮಕಾರಕ ಸಹಾಯದಿಂದ ಸಂಸ್ಥಾನದ ಕೊಂಚಭಾಗ ಸಂಪತ್ತು, ಕಾಗದಪತ್ರ, ಶ್ರೀಮೂಲಸೀತಾರಾಮ ವಿಗ್ರಹಗಳೊಂದಿಗೆ ಹೊರಟು ಸ್ವಹಸ್ತದಿಂದ ಮೂರ್ಧ್ನಾಭಿಷೇಕ ಮಾಡಿಕೊಂಡ ಶ್ರೀವಿದ್ಯಾನಿಧಿಗಳೆಂಬ ತೌಳವ ಸನ್ಯಾಸಿಗಳು (ಕೃಷ್ಣಾಚಾರ್ಯ – ಶಿರೂರು ಮಠ ಉಡುಪಿ) ಪ್ರತ್ಯೇಕ ಸಂಸ್ಥೆ ಸ್ಥಾಪಿಸಿಕೊಂಡು ಉತ್ತರದೇಶ (ಮಹಾರಾಷ್ಟ್ರ ವಗ್ಗೈರೆ)ಗಳಲ್ಲಿ ಸಂಚಾರ ಮಾಡುತ್ತಿದ್ದುದರಿಂದ 'ಉತ್ತರಾದಿಮಠ'ವೆಂಬ ಹೆಸರು ಪಡೆದಿದೆ. (ಇತರ ವಿವರಗಳಿಗೆ ಉತ್ತರಾದಿಮಠದ ಸಂಪ್ರದಾಯಪದ್ಧತಿ ಪುಸ್ತಕ, ಡಾ. ಬಿ.ಎನ್.ಕೆ. ಶರ್ಮಾರವರ 'ಸತ್ಯಮೇವ ಜಯತೇ' ನೋಡಿರಿ). ಅಂತೂ ಶ್ರೀಮೂಲರಾಮ, ಸೀತೆಯರು ಶ್ರೀವಿದ್ಯಾನಿಧಿಗಳ ವಶವಾದದ್ದು ೧೪೩೬ ರಲ್ಲಿ ಅಲ್ಲಿಗೆ ೧೪೩೦ ದಿಂದ ೧೪೩೬ ವರೆಗಿನ ವಿಚ್ಛೇದ ಅನಿವಾರ್ಯವಾಯಿತು. ಆ ಮಠವು ಪ್ರಾರಂಭವಾದದ್ದಂತೂ ೧೪೩೬ ದಿಂದ. ಹೀಗಾಗಿ ಅದಕ್ಕೂ ಹಿಂದಿನ ಪರಂಪರೆಗಂತೂ ತಿಲಾಂಜಲಿಯನ್ನಿತ್ತಂತಾಯಿತು. ಮುಂದಿನ ಪರಂಪರೆಯಲ್ಲೂ ಅನೇಕ ವಿಪ್ಲವಗಳು, ಯತಿಗಳ ನಿರ್ಯಾಣಾನಂತರ ಉತ್ತರಾಧಿಕಾರಿಗಳ ನೇಮಕ (ಕರ್ಮಕಾರರಿಂದ) ಇತ್ಯಾದಿ ವಿಘ್ನಗಳು ಸ್ಪಷ್ಟವಿದೆ.

೧. ಆದರೆ **'ಹ್ಯಕ್ಷ್ಯಾದಿ ತ್ರಿತಯಂ ಪ್ರಮಾಣಂ'** ಎಂದು ಒಪ್ಪಿರುವ ಮಧ್ವಮತ-ದಲ್ಲಿ; ಎಷ್ಟೇ ಪ್ರತ್ಯಕ್ಷಸಿದ್ಧ ವಿಷಯಗಳಿದ್ದರೂ, ಆಗಮಸಹಕೃತವಾದ ಸದ್ಯುಕ್ತಿಗಳು ಹಾಗೂ ಐತಿಹಾಸಿಕ ಮಹತ್ವದ ಪ್ರಮಾಣ (ಆಗಮ)ಗಳಿಂದ ಪ್ರಮಾಣಿಸಿನೋಡದಿದ್ದರೆ ಯಾಥಾರ್ಥ್ಯವು ಸಿದ್ಧಿಸಲಾರದೆಂಬುದು; ಸ್ವತಃ ಶ್ರೀಮನ್ನ್ಯಾಯಸುಧಾದಿ ಗ್ರಂಥಗಳನ್ನು ಅಧ್ಯಯನ ಮಾಡುವವರಿಗೆ ತಿಳಿ-ದಿರಲೇಬೇಕಲ್ಲವೇ?

೨. ಹಿರಿಯರು ಶ್ರೀಮನ್ಮಧ್ವಾಚಾರ್ಯರನ್ನು 'ಅನುಮಾನತೀರ್ಥರು' ಅಂದರೆ 'ಸದ್ಯುಕ್ತಿ ಮತಾಚಾರ್ಯರು' ಎಂದೇ ಕರೆದು ಗೌರವಿಸಲಿಲ್ಲವೆ?

೩. **ನಾರಾಯಣೋಽನಂತಗುಣೋ ಬ್ರಹ್ಮಾಖ್ಯೋ ವೇದವೇದಿತಃ।**
ವಿಶ್ವಕರ್ತೇತಿ ವಿಶ್ವಜ್ಞಃ ಶ್ರುತ್ಯಾ ಯುಕ್ತ್ಯಾಪ್ಯಶೀಷಧತ್ ॥

ಸಮೀಚೀನವಾದ ಯುಕ್ತಿಯನ್ನು ಬಿಟ್ಟರೆ ನಾವು ಮಾಧ್ವರಾಗಿ ಉಳಿಯಲು ಸಾಧ್ಯವೇ?.

'ದುಷ್ಟವಾಕ್ಯ' ಯಾವುದು?

ಸ.ಸೀ.ಮೂ. ಗ್ರಂಥಕಾರರು ಪುಟ ೫೨ರಲ್ಲಿ : 'ದುಷ್ಟವಾಕ್ಯಗಳ ಪರಿಣಾಮ-ದಿಂದಾಗುವ ಮನೋದೋಷ ನಿವಾರಣೆಗೋಸ್ಕರ ಈ ಪ್ರಯತ್ನ' ಎಂದು ಹೇಳಿರುತ್ತಾರೆ.

'ಸಸೀತಾ ಮೂಲರಾಮಾರ್ಚಾ' – ಹೆಸರಿನ ಪುಸ್ತಕವು ಮುಖ್ಯವಾಗಿ, ಶ್ರೀಮೂಲರಾಮದೇವರ ಅಸ್ತಿತ್ವದ ವಿಷಯವನ್ನು ಒಳಗೊಂಡಿದ್ದು; ಗ್ರಂಥ-ಕಾರರು ಮೂರಕ್ಕಿಂತ ಹೆಚ್ಚುಕಡೆ 'ರಘುನಂದನರು ಮೂಲರಾಮ ಪ್ರತಿಮೆ-ಯನ್ನು ತಮ್ಮ ಸಂಸ್ಥಾನಕ್ಕೆ ತಂದುಕೊಟ್ಟರು'ಎಂಬ ಸತ್ಯವನ್ನು ನಿರಾಕರಿಸುವಲ್ಲಿ ಆಸ್ಥೆತೋರಿದ್ದಾರೆ.

ಬರವಣಿಗೆಯ ಗಡಿಬಿಡಿಯಲ್ಲಿ 'ತಮಗೆ ಬಾಧಕವಾದ ಪ್ರಮಾಣವಾಕ್ಯ-ಗಳನ್ನು ಹಾಗೂ ಶಾಸನಗಳನ್ನು ದುಷ್ಟವಾಕ್ಯವೆಂದು ನಿಂದಿಸಿದಂತಿದೆ! ಹಾಗಾದರೆ –

೧. 'ದುಷ್ಟವಾಕ್ಯ'ಯಾವುದು ?

೨. ಮೂಲರಾಮನನ್ನು ಶ್ರೀರಾಯರ ಮಠದಲ್ಲಿ ಕಂಡು ಸ್ತುತಿಸಿದ, ಅವರಿಗೆ ಬಾಧಕವಾದ; ಶ್ರೀಪುರಂದರದಾಸರು ಶ್ರೀವಿಜಯದಾಸರು, ಶ್ರೀಗೋಪಾಲ-

ದಾಸರು, ಶ್ರೀಜಗನ್ನಾಥದಾಸರು ಎಂಬ ದಾಸಚತುಷ್ಟಯರ ವಾಕ್ಯಗಳು ದುಷ್ಟವಾಕ್ಯಗಳೆ ?

೩. ಶ್ರೀರಘುನಂದನರ ಆಜ್ಞೆಯ ಮೇರೆಗೆ ಶ್ರೀಮೂಲರಘುಪತಿಯನ್ನು ತಂದ ಬಾಡದ ಚಂದ್ರಭಟ್ಟನಿಗೆ, ಶ್ರೀರಘುನಂದನತೀರ್ಥರು ನೀಡಿದ ಆಜ್ಞೆಯ ಪ್ರಕಾರ ಶ್ರೀಸುರೇಂದ್ರತೀರ್ಥರು ನೀಡಿದ ದಾನಶಾಸನದ ವಾಕ್ಯಗಳು ದುಷ್ಟವಾಕ್ಯಗಳೆ ?

೪. ಶ್ರೀಮೂಲರಾಮಪ್ರತಿಮೆಯು ಶ್ರೀರಾಯರ ಮಠದಲ್ಲೇ ಇದೆಯೆಂದು ವರ್ಣಿಸಿರುವ ಶ್ರೀವಿಜಯೀಂದ್ರತೀರ್ಥರು,ಶ್ರೀಮದಪ್ಪಣಾಚಾರ್ಯರು, ಶ್ರೀಸುಮತೀಂದ್ರ, ಶ್ರೀವಾದೀಂದ್ರರೇ ಮೊದಲಾದ ಮಹನೀಯರ ವಾಕ್ಯಗಳು ದುಷ್ಟವಾಕ್ಯಗಳೇ ?

ಬರೆಯುವ ಪವಿತ್ರಕಾರ್ಯವು ಬೈಗುಳವಾಗದಂತೆ ವಿವೇಕವು ನಮ್ಮನ್ನು ಕಾಪಾಡಬೇಕಷ್ಟೆ !

ವಿವೇಚನೆ

'ವಸ್ತುಸ್ವರೂಪಂ ಯಥಾರೂಪಂ ಜ್ಞೇಯಂ' ಎಂಬಂತೆ ಯಾವುದೇ ವಿಷಯವನ್ನು ಯಥಾರ್ಥವಾಗಿ ತಿಳಿಯಬೇಕಾದದ್ದು ಅವಶ್ಯವಷ್ಟೇ? ಇತ್ತೀಚಿನ ದಿನಗಳಲ್ಲಿ ಕೆಲವರು ತಮ್ಮ ಸ್ಥಾನವನ್ನು ಅರಿಯದೇ ತಾವು ತುಂಬಾ ದೊಡ್ಡವರು ಎಂಬ ಭ್ರಮೆಯಲ್ಲಿದ್ದು – ಅದೇ ವಿಷಬೀಜವನ್ನು ತಮ್ಮ ಭಾವೀ ಪೀಳಿಗೆಯಲ್ಲಿ ಬಿತ್ತುವ ಪ್ರಯತ್ನಮಾಡುತ್ತಿರುವರು. ಶ್ರೀಮಠದ ಶಿಷ್ಯಕೋಟಿ ಪ್ರವಿಷ್ಟರಿಗೆ ಸ್ಪಷ್ಟ ಮಾಹಿತಿಯನ್ನು ಒದಗಿಸಲು ಈ ಪ್ರಯತ್ನ ಎನ್ನುವ ಇವರುಗಳಿಂದ ಈ ಹಿಂದೆಯೂ ಅನೇಕ ಪ್ರಯತ್ನಗಳು ನಡೆದು – ಇತಿಹಾಸಕ್ಕೆ ವಿರುದ್ಧವಾದ, ತಮ್ಮ ವ್ಯಕ್ತಿತ್ವವನ್ನು ವಿಸ್ತರಿಸುವ ಕೂಟ ಪ್ರಯತ್ನಗಳನ್ನು ಅಂದಿನ ವಿದ್ವಾಂಸರು-ಗಳು ಖಂಡಿಸಿದ್ದುಂಟು. ಇಂದಿನ ಜನಾಂಗಕ್ಕೆ ಅದೆಲ್ಲ ಹೊಸತು. ಹೀಗಾಗಿ ಪುನಃ ಅವೇ ವಿಷಯಗಳನ್ನೊಳಗೊಂಡ 'ಮೂಲರಾಮ'ನ ಪ್ರತಿಮೆಯ ಬಗ್ಗೆ ಹೆಚ್ಚಿನ ಒತ್ತು ಕೊಟ್ಟು 'ಸಸೀತಾಮೂಲರಾಮಾರ್ಚಾ' ಎಂಬ ಪುಸ್ತಕವನ್ನು ಹೊರಡಿಸಿರುವರು. ಇತಿಹಾಸವನ್ನರಿಯದ ಯಾರಾದರೂ ಇದನ್ನು ಓದಿದರೆ ಮೆಚ್ಚಿ ಒಪ್ಪಿಕೊಳ್ಳಬೇಕಾದ ಹಾಗೆ ವಿಷಯಗಳನ್ನು ಪ್ರತಿಪಾದಿಸಲಾಗಿದೆ.

ಒಟ್ಟಾರೆ ವಿವೇಚನೆಯಿಂದ ತಿಳಿದು ಬರುವುದೇನೆಂದರೆ:

ಪೂರ್ವೋಕ್ತರಾದ ಅಪರೋಕ್ಷಜ್ಞಾನಿಗಳಾದ ಎಲ್ಲ ಹರಿದಾಸರೂ ತಮ್ಮ ಕೃತಿಗಳಲ್ಲಿ ಒಂದು ಕಡೆಯಾದರೂ 'ಕೇವಲ ಸ್ವಮಠಗಳು ಮಾತ್ರ ಮೂಲ ಪರಂಪರೆ' ಎಂದು ಉಲ್ಲೇಖಿಸಿಲ್ಲ. **'ಬಾಂಧವಾ ವಿಷ್ಣು ಭಕ್ತಾಶ್ಚ' ಎಂಬ ವಿಶಾಲ ದೃಷ್ಟಿಯಿಂದ ಚಿಂತಿಸಿ, 'ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ' ಎನ್ನುವವರೆಲ್ಲರೂ ನಮಗೆ ಪೂಜ್ಯರೆಂದು ಭಜಿಸುವ ಭಾಗ್ಯೋದಯವನ್ನು ತಮ್ಮ ಕೀರ್ತನೆಗಳ ಮೂಲಕ ಕರುಣಿಸಿದ್ದಾರೆ.**

ಸಾಂಶದೇವತೆಗಳಾದ ಅವರು, **'ನಮ್ಮ ತಲೆಮಾರಿನಲ್ಲಿ ಹೆಚ್ಚುತ್ತಿರುವ ದುರಭಿಮಾನ ಹಾಗೂ ಶ್ರೀಮದಾಚಾರ್ಯರ ಪರಂಪರೆಗಳ ಮಧ್ಯೆ ಭೇದ ಚಿಂತಿಸುವ ಪಕ್ಷಪಾತಾದಿ ದೃಷ್ಟಿಗಳನ್ನು ನಿವಾರಿಸಿ ರಕ್ಷಿಸಬೇಕಾಗಿದೆ'**. ಅವರ ಅನುಗ್ರಹ-ದಿಂದ **'ಶ್ರೀಹರಿದಾಸರ ಹೆಸರಿನಲ್ಲೂ ಮಠಭೇಧವನ್ನು ಸೃಷ್ಟಿಸದೆ, ನಾವೆಲ್ಲರೂ ಒಟ್ಟಿಗೆ ಕೂಡಿಬಾಳಲು ಬೇಕಾದ ಸಾಮರಸ್ಯದ ಮನಃಸ್ಥಿತಿಯನ್ನು ಉಳಿಸಿ ಬೆಳೆಸಿ-ಕೊಳ್ಳುವುದು'** ನಮ್ಮ ವ್ಯಕ್ತಿಗತ ಹೊಣೆಗಾರಿಕೆಯಾಗಿದೆ.

ಕೀರ್ತನೆಗಳು ಸ್ವತಃ ಪ್ರಮಾಣಗಳೇ?

ಸ.ಸೀ.ಮೂ. ಪುಟ : ೫೨ರಲ್ಲಿ ಗೋರಬಾಳಹನುಮಂತರಾಯರ ಪುಸ್ತಕ-ಗಳಿಂದಲೂ, ಕರ್ನಾಟಕ ಸರ್ಕಾರದ ಹರಿದಾಸ ಸಂಪುಟಗಳಿಂದಲೂ ಕೃತಿ ಸ್ವೀಕರಿಸಿದ್ದನ್ನು ಸ್ಮರಿಸುತ್ತ, ಇವುಗಳನ್ನು 'ಅನೇಕ ಸಂಶೋಧಕರಿಂದ ಅಂಗೀ-ಕರಿಸಲ್ಪಟ್ಟ ಕೃತಿಗಳಾಗಿವೆ' ಎಂದಿದ್ದಾರೆ.

ಮೇಲಿನ ಎರಡೂ ಆಕರಗಳ ಬಗ್ಗೆ ನಿಜಕ್ಕೂ ಗೌರವ ಹಾಗು ಪ್ರಾಮಾಣ್ಯ ಬುದ್ಧಿಯಿದ್ದರೆ ಸ.ಸೀ.ಮೂ.ದಂತಹ ಗ್ರಂಥವೇ ಹುಟ್ಟುತ್ತಿರಲಿಲ್ಲವೆಂದು ಹೇಳು-ವುದು ಅನವಾರ್ಯವೆನಿಸುತ್ತದೆ. ಕಾರಣವೇನೆಂದರೆ, ಆ ಎರಡೂ ಆಕರ-ಗಳಲ್ಲೂ ಶ್ರೀಮೂಲರಾಮದೇವರು ಶ್ರೀರಾಯರ ಮಠದಲ್ಲಿರುವ ಬಗ್ಗೆ ಹಾಗೂ ಯತಿಪರಂಪರೆಯ ಸರ್ವಸಮ ಗೌರವಭಾವದ ಬಗ್ಗೆ ಸಾಕಷ್ಟು ಕೀರ್ತನೆ-ಗಳಿದ್ದರೂ, ಅವುಗಳನ್ನು ಸ.ಸೀ.ಮೂ. ಲೇಖಕರು ಪರಿಗಣಿಸದೆ, ಅವುಗಳ ಬಗ್ಗೆ ಚಕಾರವೆತ್ತದೆ, ದಿವ್ಯನಿರ್ಲಕ್ಷ್ಯವಹಿಸಿರುವುದು ಆಗ್ರಹಯುಕ್ತತೆಯ ಪ್ರತೀಕವಲ್ಲವೇ?

ನಾವೂ ಸಹ ಆ ಎರಡು ಆಕರಗಳಿಂದ ಸಾಕಷ್ಟು ಪ್ರಮಾಣಗಳನ್ನು ಉದಾ-ಹರಿಸಿದ್ದೇವೆ. ಆದ್ದರಿಂದ ಆಯಾ ವಿದ್ವಾಂಸರಿಗೆ ಕೃತಜ್ಞರೂ ಆಗಿದ್ದೇವೆ. ಅಂದ

ಮಾತ್ರಕ್ಕೆ ಆ ಎರಡು ಸಂಸ್ಥೆಗಳು ಮುದ್ರಿಸಿದ ಎಲ್ಲಾ ಕೀರ್ತನೆಗಳು ಸ್ವತಃ ಪ್ರಮಾಣ-ಗಳೆಂಬ ನಿಯಮವೇನಿಲ್ಲ.

ಅಲ್ಲಿ ಮುದ್ರಿಸಿದ ಅನೇಕ ಕೃತಿಗಳನ್ನು ಸಂವಾದಿ ಭಿನ್ನಪ್ರಮಾಣಗಳೊಂದಿಗೆ ಹೋಲಿಸಿ ನೋಡಿ, ಒಂದೊಮ್ಮೆ ಪ್ರತ್ಯಕ್ಷ ಹಾಗೂ ಆಗಮಸಹಕೃತ ಯುಕ್ತಿ-ಗಳಿಗೆ ವಿರೋಧ ಕಂಡುಬಂದಲ್ಲಿ ವಿಮರ್ಶಿಸುವ ಮುಕ್ತ ಅವಕಾಶವನ್ನು ಸತ್ಯಾನ್ವೇಷಿಗಳಾರೂ ನಿರಾಕರಿಸಲಾರರು.

'ಹಾಗಾದರೆ ಮುದ್ರಿಸುವ ಮುನ್ನ ಸಂಪಾದಕರಾದ ಸಂಶೋಧಕರು ವಿಮರ್ಶಿಸಲಿಲ್ಲವೆ?' ಎಂಬ ಪ್ರಶ್ನೆಯು ಎದುರಾದೀತು.

'ಗ್ರಂಥಸಂಪಾದನೆ' ಹಾಗೂ 'ಕೃತಿವಿಮರ್ಶೆ'ಗಳಿಗೆ ಪರಸ್ಪರ ಸಂಬಂಧ-ವಿದ್ದರೂ, ಸ್ಥೂಲವಾಗಿ ಅವೆರಡೂ ವಿಭಿನ್ನ ಶಾಸ್ತ್ರಗಳು. ಮೇಲಿನ ಎರಡು ಆಕರಗಳ ವಿದ್ವಾಂಸರೂ, 'ಗ್ರಂಥಸಂಪಾದನೆ'ಯ ಹಿನ್ನಲೆಯಲ್ಲಿ ಬಹುಪರಿಶ್ರಮ-ದಿಂದ ತಮ್ಮ ವಿದ್ವತ್ತನ್ನು ಧಾರೆಯೆರೆದು ನಾಡಿಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅಲ್ಲಿಯ ಎಲ್ಲಾ ಕೃತಿಗಳನ್ನು ವಿಮರ್ಶಿಸುವ ಜವಾಬ್ದಾರಿಯನ್ನು, ಮುಂದಿನ ದಿನಗಳಿಗೆ – ಮುಂದಿನ ಜನರಿಗೆ ಮುಕ್ತರಾಗಿರಿಸಿದ್ದಾರೆ.

ಗೋರೆಬಾಳರಂತಹ 'ಹರಿದಾಸವಾಙ್ಮಯ ವಾರ್ಧಿವಿಹಾರ ನಿಪುಣರು' ಇಲ್ಲಿ ನಾವು ಪ್ರಶ್ನಿಸುತ್ತಿರುವ, ಪ್ರಶ್ನಾರ್ಹಕೀರ್ತನೆಗಳನ್ನೂ ತಾವು **'ಪ್ರಶ್ನಿಸದೆ, ಖಂಡಿಸದೆ, ತಿದ್ದದೆ, ಅವರಿಗೆ ದೊರೆತ ಯಥಾ ರೀತಿಯಲ್ಲೇ ಮುದ್ರಿಸಿರುವುದು'** ಅವರ ಪ್ರಾಮಾಣಿಕತೆ ಹಾಗೂ ವೃತ್ತಿಧರ್ಮದ ದ್ಯೋತಕವೇ ಆಗಿದೆ. ಅವರು ತಮ್ಮ ಅಭಿಪ್ರಾಯವನ್ನು ಪ್ರತ್ಯೇಕವಾಗಿಯೇ ಅಲ್ಲಲ್ಲಿ ದಾಖಲಿಸಿ ವೈಚಾರಿಕತೆ-ಯನ್ನೂ ಮೆರೆದಿದ್ದಾರೆ. ಇವೇ ಮಾತುಗಳು ಇತರ ಸಂಶೋಧಕರಿಗೂ ಸಲ್ಲಬೇಕಲ್ಲವೆ!

ಯುಕ್ತಿಗಳು ಪ್ರಮಾಣವಲ್ಲವೆ?

ಕೆಲವರು, 'ಪರಂಪರಾಸಿದ್ಧವಾದ, ಸ್ವತಃಸಿದ್ಧವಾದ, ಪ್ರತ್ಯಕ್ಷಸಿದ್ಧವಾದ ವಿಷಯಗಳ ಪ್ರಾಮಾಣ್ಯವನ್ನು ಗ್ರಹಿಸಲು **ಯುಕ್ತಿಗಳು ಮತ್ತು ಇತರ ಆಧಾರ-ಗಳು ಬೇಕಿಲ್ಲ'** (ಸ.ಸೀ.ಮೂ. ಪು. ೫೨) ಎಂಬ ಹೊಸಸಿದ್ಧಾಂತವನ್ನು ಮಂಡಿಸಹೊರಟಿದ್ದಾರೆ. ಈ ಹೊಸ ಸಿದ್ಧಾಂತವು ಸ್ವಗೋಷ್ಠಿಯಲ್ಲಿ ಮಾತ್ರ ಶೋಭಿಸೀತು!

ಗುರುಸತ್ಯನಾಥ ಶ್ರೀಸತ್ಯಾಭಿನವತೀರ್ಥರ ॥
ವರಸತ್ಯಪೂರ್ಣ ಸತ್ಯವಿಜಯರಾ ॥ ೮ ॥

ಸತ್ಯಪ್ರಿಯರ ಸತ್ಯಬೋಧ ಸತ್ಯಸಂಧರ ॥
ಸತ್ಯವರರಾ ಸತ್ಯಧರ್ಮಾಖ್ಯಮುನಿಪರ ॥ ೯ ॥

ಈ ನಮ್ಮಗುರುಗಳ ಅನುದೀನ ಸ್ಮರಿಸುತ ॥
ಪ್ರಾಣೇಶವಿಠ್ಠಲನ ಕರುಣಾವಪಡೆವೆ ॥ ೧೦ ॥

ಇಲ್ಲಿ ಮೊದಲು ರಾಜೇಂದ್ರರ ಪರಂಪರೆಯನ್ನು ಶ್ರೀವಿದ್ಯಾಪತಿತೀರ್ಥ–ರವರೆಗೆ ಹೇಳಿ; ಅದೇ ಕೀರ್ತನೆಯ ಮುಂದಿನ ನುಡಿಗಳಲ್ಲಿ ಶ್ರೀವಿದ್ಯಾನಿಧಿ–ಗಳಿಂದ ಶ್ರೀಸತ್ಯಧರ್ಮತೀರ್ಥರವರೆಗಿನ ಉತ್ತರಾದಿಮಠದ ಪರಂಪರೆಯನ್ನು ತಿಳಿಸಿ 'ಈ **ನಮ್ಮ ಗುರುಗಳ** ಅನುದಿನ ಸ್ಮರಿಸುತ ಪ್ರಾಣೇಶವಿಠ್ಠಲನ ಕರುಣವ ಪಡೆವೆ' ಎಂದಿದ್ದಾರೆ.

ಶ್ರೀವ್ಯಾಸರಾಜಮಠದ, ಶ್ರೀಮದುತ್ತರಾದಿಮಠದ ಗುರುಗಳನ್ನು '**ನಮ್ಮ ಗುರುಗಳು**' ಎಂದು ಆದರಿಸುವ ವಿಶಾಲ ದೃಷ್ಟಿ ಶ್ರೀಪ್ರಾಣೇಶದಾಸರಿಗೆ ಒದಗಿ ಬಂದದ್ದು ಶ್ರೀಜಗನ್ನಾಥದಾಸರ ದಿವ್ಯಾದರ್ಶದಿಂದ!

ಆದರೆ ಸ,ಸೀ,ಮೂ. ಗ್ರಂಥಕಾರರಂತೆ ನಾವೂ 'ಆದ್ಯತೆ'ಯ ಸಂಶೋಧನೆಗೆ ತೊಡಗಿದರೆ ಶ್ರೀವ್ಯಾಸರಾಜಮಠಕ್ಕೆ ಶ್ರೀಮದುತ್ತರಾದಿಮಠಕ್ಕಿಂತ ಮೊದಲ ಆದ್ಯತೆಯೆಂದು ಪ್ರತಿಪಾದಿಸಲು ಅವಕಾಶವಿದೆ.

ಪೀಳಿಗೆ ಎಂದರೇನು?

ಸ.ಸೀ.ಮೂ. ಪುಟ : ೪೧ರಲ್ಲಿ 'ಈ ಮೇಲಿನ ಎಲ್ಲ ಹರಿದಾಸರು ಅಪರೋಕ್ಷ ಜ್ಞಾನಿಗಳೆಂದು ಪ್ರಸಿದ್ಧಿ. ಇವರೆಲ್ಲರೂ ತಮ್ಮ ಕೃತಿಗಳಲ್ಲಿ ಮಠಗಳ ಪಕ್ಷಪಾತಾದಿ–ಗಳನ್ನು ಬಿಟ್ಟು ಉತ್ತರಾದಿಮಠದ ಪರಂಪರೆಯನ್ನು ಹೊಗಳಿದ್ದಲ್ಲದೆ ಈ ಪರಂಪರೆಗೇ ಆದ್ಯತೆ ಕೊಟ್ಟಿರುವುದು ಮತ್ತು ಇತರ ಪರಂಪರೆಗಳನ್ನು ಸ್ಮರಿಸುವಾಗ **ಪೀಳಿಗೆ (ಶಾಖಾಗಳು)** ಎಂದು ಕರೆದದ್ದನ್ನು ಗಮನಿಸಬೇಕು' ಎಂದಿದ್ದಾರೆ. **ಈ ಹೇಳಿಕೆ ಶತಶ: ಖಂಡನೀಯ.** 'ರಾಮಚಂದ್ರ ಮುನಿ ತರುವಾಯ ಪೀಳಿಗೆಯ' ಎಂಬ ಪ್ರಯೋಗವನ್ನು ಮನಸ್ಸಿನಲ್ಲಿಟ್ಟುಕೊಂಡು ಸ.ಸೀ.ಮೂ.ಗ್ರಂ (ಪುಟ ೪೨ರಲ್ಲಿ) 'ಪೀಳಿಗೆ' ಎಂಬುದಕ್ಕೆ 'ಶಾಖಾಗಳು' ಎಂದು ಅರ್ಥೈಸಿದ್ದಾರೆ.

೧. ಅಂದರೆ ಅವರು ತಮ್ಮ ಮಠದ ಪ್ರಾಶಸ್ತ್ಯ ಸ್ಥಾಪನೆಗಾಗಿ ದುರಾಗ್ರಹ ಮತ್ತು ದುರುದ್ದೇಶದಿಂದ 'ಪೀಳಿಗೆ' ಎಂಬ ಪದಕ್ಕೆ 'ಶಾಖಾಗಳು' ಎಂಬ ಅರ್ಥಮಾಡಿ ಶಬ್ದಬ್ರಹ್ಮನನ್ನು ಅಪಮಾನಿಸಿದ್ದಾರೆ. [ಬಹುವಚನ ಗಮನಿಸಿ! ಇತರ ಎಲ್ಲ ಮಾಧ್ವಮಠಗಳೂ ನಗಣ್ಯ ಎಂಬ ಈ ವ್ಯಂಗ್ಯವು ಯಾರಿಗೂ ಶೋಭೆತರಲಾರದು.] ಆದರೆ 'ಪೀಳಿಗೆ' ಎಂಬ ಪದಕ್ಕೆ 'ವಂಶ', 'ಸಂತತಿ', 'ಪರಂಪರೆ', 'ತಲೆಮಾರು' ಎಂಬ ಅರ್ಥವೇ ಹೊರತು 'ಶಾಖಾ' ಎಂದು ಯಾವ ನಿಘಂಟಿನಲ್ಲೂ ಉಕ್ತವಾಗಿಲ್ಲ. [ನೋಡಿ: ಕನ್ನಡ–ಕನ್ನಡ ನಿಘಂಟು. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು].

೨. ಹರಿದಾಸಕ್ಷೇತ್ರದ ಹಿರಿಯ ವಿದ್ವಾಂಸರಾದ ಡಾ. ಕೆ.ಎಂ. ಕೃಷ್ಣರಾಯರು ತಮ್ಮ 'ಜಗನ್ನಾಥದಾಸರ ಕೃತಿಗಳು' ಗ್ರಂಥದ ೨೧ನೇ ಪುಟದಲ್ಲಿ ಶ್ರೀಜಗ–ನ್ನಾಥದಾಸರು ರಚಿಸಿದ 'ಆ ನಮಿಪೆ ಗುರುಸಂತತಿಗೆ ಸತತ' ಎಂಬ ಕೀರ್ತಿಯನ್ನು '**ಶ್ರೀಉತ್ತರಾದಿಮಠದ ಪೀಳಿಗೆ. ಶ್ರೀಸತ್ಯಸಂಧರವರೆಗೆ**' ಎಂಬ ಶೀರ್ಷಿಕೆಯ ಕೆಳಗೆ ಮುದ್ರಿಸಿದ್ದಾರೆ. ಹಾಗಾದರೆ ಇಲ್ಲೂ 'ಪೀಳಿಗೆ' ಎಂದರೆ 'ಶಾಖಾಗಳು' ಎಂದು ಅರ್ಥಮಾಡಿದರೆ ಸ.ಸೀ.ಮೂ ಗ್ರಂಥಕಾರರಿಗೆ ಸಂತೋಷವಾದೀತೆ?

೩. ಉತ್ತರಾದಿಮಠದ ಪರಂಪರೆಯನ್ನು ಹೇಳುವ, ಪ್ರಾಚೀನ ಹಸ್ತಪ್ರತಿಯ ರೂಪದಲ್ಲಿರುವ ಗ್ರಂಥದ ಹೆಸರೇ '**ಗುರುಪೀಳಿಗಿ**' ಇದು ಅವರೇ ಇಟ್ಟು–ಕೊಂಡ ಹೆಸರು. ಇಲ್ಲೂ ಪೀಳಿಗಿ ಎಂದರೆ ಶಾಖೆಗಳು ಎಂದು ಅರ್ಥವೆ? ಒಂದೊಮ್ಮೆ 'ಪೀಳಿಗೆ' ಎಂದರೆ 'ಶಾಖಾಗಳು' ಎನ್ನುವುದೇ ನಿಜವಾದರೆ; 'ಮಾಧವತೀರ್ಥರಕಾಲದಲಿ **ಪೀಳಿಗೆ ರಾಮಚಂದ್ರನ** ಸ್ವಪ್ನದಿ ದ್ವಿಜತಂದಾ' ಎನ್ನುವ ಸುಳಾದಿಯಲ್ಲಿರುವ '**ಪೀಳಿಗೆ ರಾಮ**' **ಪದಕ್ಕೆ ಅರ್ಥವೇನು**? ಎಂದು ಕೇಳಬೇಕಲ್ಲವೆ? ಶಾಖಾಮಠದ ರಾಮನೆಂದು ಅರ್ಥಮಾಡಿದರೆ ಶಬ್ದಶಾಸ್ತ್ರವಿರೋಧವಲ್ಲವೆ? ಹಾಗೆ ಮಾಡಬಾರದು.

ಹೀಗಾಗಿ 'ಪೀಳಿಗೆರಾಮ = ವಂಶರಾಮ' ಎನ್ನುವುದೇ ನಿಜವಾದರೆ, ಸ.ಸೀ.ಮೂ. ಗ್ರಂಥಕಾರರು ಇತರ ಮಾಧ್ವ ಪೀಳಿಗೆಗಳನ್ನು 'ಶಾಖಾಗಳು' ಎಂದು ತಪ್ಪಾಗಿ ಚಿಂತಿಸಿ, ಆ ದೋಷವನ್ನು ಹರಿದಾಸರ ಕೊರಳಿಗೆ ಕಟ್ಟಿದ ಘೋರ ಅಪರಾಧಕ್ಕಾಗಿ, ಸ್ವೋತ್ತಮರಾದ ವಿವಿಧ ಪರಂಪರೆಗಳ ಯತಿವರೇಣ್ಯರಲ್ಲಿ ಹಾಗೂ ಹರಿದಾಸರಲ್ಲಿ ಮಾಡಿದ ಅಪಚಾರಕ್ಕಾಗಿ ವಿಷಾದಿಸುವರೆ?

ಅಷ್ಟಮಠಾಧೀಶರನ್ನು, ಭಂಡಾರಕೆರೆ, ಕೂಡಲಿ, ಕುಂದಾಪುರಾದಿ ಇತರ ಮಾಧ್ವ ಮಠಗಳ ಯತೀಶ್ವರರನ್ನೂ; ಸಾಮಾನ್ಯರಂತೆ ಪರಿಗಣಿಸಿ ತಾರತಮ್ಯ ಪಾಲಿಸದೆ ಕೆಳಕ್ಕೆ; ಮತ್ತೂ ಕೆಳಕ್ಕೆ ಹಾಕಿ ಸ್ಮರಿಸುವುದು ಶ್ರೀಹಯವದನ–ವಿಠಲರ ಘನತೆಗೆ ತಕ್ಕುದಲ್ಲ.

ಈ ಆರೂ ಕಾರಣಗಳಿಂದಾಗಿ ಉತ್ತರಾದಿಮಠದ ಪರಂಪರೆಗೆ ಆದ್ಯತೆ ನೀಡುವ ಏಕಮಾತ್ರ ಉದ್ದೇಶದಿಂದ ಈ ಕೃತಿ ರಚಿತವಾಗಿದೆ ಎನಿಸುವಷ್ಟರ ಮಟ್ಟಿಗೆ ಉತ್ತರ ಕಾಲೀನರ ಕೈವಾಡದಿಂದಾಗಿ ಹದಗೆಟ್ಟಿದೆ. ಹೀಗೆ ಹದಗೆಡಿಸುವ ಮಹನೀಯರಿಗೆ ಅಣ್ಣನಾದ ಶ್ರೀವಿಜಯದಾಸರೇನು? ತಮ್ಮನಾದ ಶ್ರೀಹಯವದನ–ದಾಸರೇನು? ಅಂತೂ ವಿಪರ್ಯಾಸಮಯ!

ಸ.ಸೀ.ಮೂ.ಗ್ರಂ : ಒಂದೊಂದು ಕೀರ್ತನೆಯ ಕೊನೆಗೂ 'ಉತ್ತರಾದಿ ಮಠಕ್ಕೇ ಆದ್ಯತೆ ಕೊಟ್ಟಿದ್ದಾರೆ' ಆದ್ದರಿಂದ ಇದೇ ಮೂಲ! ಇದೇ ಮೂಲ! ಇದೇ ಮೂಲ! ಎಂದು ಪದೇ ಪದೇ ಹೇಳಿಕೊಂಡಿದ್ದಾರೆ. ಒಂದು ಸಂಗತಿ ಸತ್ಯವೇ ಆಗಿದ್ದರೆ ಅದನ್ನು ಮತ್ತೆ ಮತ್ತೆ ಹೇಳಿಕೊಳ್ಳುವ ಅನಿವಾರ್ಯತೆ ಏನು? ಇದು ಕೀಳರಿಮೆಯ ಮನಃಸ್ಥಿತಿಯೆ? ಅಥವಾ ಮಹತ್ವಾಕಾಂಕ್ಷೆಯ ಮಹಿಮೆಯೆ?

ಶ್ರೀಜಗನ್ನಾಥದಾಸರ ದಿವ್ಯಾದರ್ಶ

ಸ.ಸೀ.ಮೂ. ಪುಟ : ೫೦ರಲ್ಲಿ ಶ್ರೀಜಗನ್ನಾಥದಾಸರ 'ಆ ನಮಿಪೆ ಗುರು ಸಂತತಿಗೆ ಸತತ' ಎಂಬ ಕೀರ್ತನೆಯಿದೆ. ಶ್ರೀರಾಘವೇಂದ್ರ ಮಠಾನುಯಾಯಿ–ಗಳಾದ ಶ್ರೀಜಗನ್ನಾಥದಾಸಾರ್ಯರು 'ಗುರುಸಂತತಿ' ಎಂಬ ಪದವನ್ನು ಉತ್ತರಾದಿ ಮಠದ ಗುರುಪೀಠಕ್ಕೂ ಪ್ರಯೋಗಿಸಿರುತ್ತಾರೆ. ಇದನ್ನು ಸ.ಸೀ.ಮೂ ಗ್ರಂಥಕಾರರು ಎತ್ತಿ ಹೇಳುತ್ತಾರೆ. ಆದರೆ ಇದೇ ದಾಸರು, **ಶ್ರೀವ್ಯಾಸರಾಜಮಠದ ಮತ್ತು ಶ್ರೀರಾಯರ ಮಠದ ಪರಂಪರೆಯನ್ನು ಸ್ತುತಿಸುವಾಗಲೂ 'ಸ್ಮರಿಸಿ ಗುರುಸಂತತಿಯನು' ಎಂದೇ ಪ್ರಯೋಗಿಸಿರುವುದನ್ನು,** ಸ.ಸೀ.ಮೂ ಗ್ರಂಥಕಾರರು ಗಮನಿಸದೆ ಅಥವಾ ಗಮನಿಸಿಯೂ ಗಮನಿಸಿಲ್ಲವೆಂಬಂತೆ ಜಾಣಕುರುಡತನವನ್ನು ಪ್ರದರ್ಶಿಸಿದ್ದಾರೆ.

ಶ್ರೀಜಗನ್ನಾಥದಾಸರು 'ಸ್ಮರಿಸಿ ಗುರುಸಂತತಿಯನು' ಎಂಬ ಕೀರ್ತನೆಯಲ್ಲಿ ಶ್ರೀರಾಜೇಂದ್ರರ ಪರಂಪರೆ ಹಾಗೂ ಶ್ರೀಕವೀಂದ್ರರ ಪರಂಪರೆಗಳೆರಡಕ್ಕೂ ಶ್ರೀವಿದ್ಯಾಧಿ–ರಾಜರ ನೇರ ಸಂಪರ್ಕದ ಸಮಾನ ಗೌರವವನ್ನು ಚಿತ್ರಿಸಿ ಸತ್ಯಕ್ಕೆ ಚ್ಯುತಿಬರದಂತೆ ಉಭಯ ಪೀಠಗಳ ಘನತೆಯನ್ನೂ ಎತ್ತಿಹಿಡಿದಿದ್ದಾರೆ. ಉತ್ತರಾದಿಮಠವನ್ನು

ಕುರಿತು ಪ್ರತ್ಯೇಕ ಕೀರ್ತನೆ ರಚಿಸಿ, **ಪರಮಠದ ಪರಂಪರೆಯನ್ನೂ 'ಗುರುಸಂತತಿ' ಎಂದೇ ಸ್ಮರಿಸಿರುವುದು ಅವರ ವಿಶಾಲದೃಷ್ಟಿಯ ನಿದರ್ಶನವೇ ಸರಿ!**

ವ್ಯಾಸರಾಜ ಮಠಕ್ಕೆ ಮೊದಲ ಆದ್ಯತೆಯೇ?

ಶ್ರೀಜಗನ್ನಾಥದಾಸರ ಶಿಷ್ಯರಾದ ಶ್ರೀಪ್ರಾಣೇಶದಾಸರು ರಾಯರಮಠದ ಪರಂಪರೆಯನ್ನು ಸ್ತುತಿಸುವಾಗ 'ಗುರುಗಳನುದಿನ ನೆನೆವೆನಾ' ಎಂಬ ಪ್ರತ್ಯೇಕ ಕೀರ್ತನೆಯನ್ನು ರಚಿಸಿದ್ದಾರೆ. ಆದರೆ ವ್ಯಾಸರಾಜರಮಠ ಹಾಗೂ ಉತ್ತರಾದಿ ಮಠದ ಪೀಳಿಗೆಗಳನ್ನು ಸ್ತುತಿಸುವಾಗ 'ಗುರುಗಳ ಪದಕಂಜ ಸ್ತುತಿಸುವೆ ನಿತ್ಯ' ಎಂಬ ಒಂದೇ ಕೀರ್ತನೆಯನ್ನು ರಚಿಸಿದ್ದಾರೆ.

ವ್ಯಾಸರಾಯಮಠದ ಮತ್ತು ಉತ್ತರಾದಿಮಠದ ಪೀಳಿಗೆ

ರಾಗ : ಭೈರವಿ **ಅಟ್ಟತಾಳ**

ಗುರುಪಾದಕಂಜಾ । ಸ್ಮರಿಸೂವೆ ನಿತ್ಯಾ ॥
ದುರಿತೌಘಗಳನು ಓಡಿಸುವೆನತ್ತತ್ತಾ ॥ ಪ ॥

ರಾಜೇಂದ್ರ ತಪೋನಿಧಿ ಶ್ರೀಜಯಧ್ವಜತೀರ್ಥ ॥
ರಾಜಿತಪುರುಷೋತ್ತಮ ಬ್ರಹ್ಮಣ್ಯತೀರ್ಥರ ॥ ೧ ॥

ಮಧ್ವಸಿದ್ಧಾಂತಸ್ಥಾಪಕ ವ್ಯಾಸರಾಯ ಪ್ರ–॥
ಸಿದ್ಧ ಶ್ರೀನಿವಾಸ ರಾಮ ಲಕ್ಷ್ಮೀಕಾಂತ ॥ ೨ ॥

ಬಲ್ಲೀದ ಶ್ರೀಪತಿ ರಾಮಚಂದ್ರ ಲಕ್ಷ್ಮೀ–॥
ವಲ್ಲಭ ಶ್ರೀಲಕ್ಷ್ಮೀಕಾಂತರೆಂತೆಂಬಾರ ॥ ೩ ॥

ಶ್ರೀಲಕ್ಷ್ಮೀಪತಿತೀರ್ಥ ಲಕ್ಷ್ಮೀನಾರಾಯಣರ
ನೀಲೇಶ ಭಜಕರ ಶ್ರೀನಾಥತೀರ್ಥರ ॥ ೪ ॥

ರಘುನಾಥ ಜಗನ್ನಾಥ ಶ್ರೀನಾಥ ಕರಜಾತ ॥
ಸುಗುಣ ವಿದ್ಯಾನಾಥ ಶ್ರೀವಿದ್ಯಾಪತಿಯ ॥ ೫ ॥

ಶ್ರೀವಿದ್ಯಾನಿಧಿ ರಘುನಾಥ ಶ್ರೀರಘುವರ್ಯರ ॥
ಕೋವಿದವಿನುತ ರಘೋತ್ತಮತೀರ್ಥರ ॥ ೬ ॥

ವ್ಯಾಸ ವಿದ್ಯಾಧೀಶ ವೇದನಿಧಿತೀರ್ಥರ ॥
ಶ್ರೀಸತ್ಯವ್ರತರ ಶ್ರೀಸತ್ಯನಿಧಿಗಳಾ ॥ ೭ ॥

೬. 'ಈ ಸ್ತುತಿಯಲ್ಲಿ ಯಾವ ಅನುಕ್ರಮವನ್ನು ಪಾಲಿಸಲಾಗಿದೆ?' ಎಂಬುದೇ ಸ್ಪಷ್ಟವಿಲ್ಲ.

* ಜ್ಞಾನಿಗಳ ಕಾಲೀನವಾದ ಆಶ್ರಮಜ್ಯೇಷ್ಠತ್ವವೆ?
* ಅಂಶ ಆವೇಶಗಳ ಅನುಸಂಧಾನದ ತಾರತಮ್ಯವೆ?
* ಅಥವಾ ಗುರುಭಕ್ತಿಯ ಹೆಸರಿನಲ್ಲಿ ಬಂದ ದುರಭಿಮಾನವೆ? ತಿಳಿಯದಂತಿದೆ.

ಇಷ್ಟೊಂದು ಸಮಸ್ಯಾತ್ಮಕ ಕೀರ್ತನೆಯನ್ನು ಸ್ವಲ್ಪವೂ ವಿಮರ್ಶಿಸದೆ, ಯಥಾವತ್ತಾಗಿ ಅಂಗೀಕರಿಸಿ, ಇದರ ಆಧಾರದಿಂದಲೇ 'ಉತ್ತರಾದಿ ಮಠದ ಪರಂಪರೆಗೇ ಆದ್ಯತೆ ಕೊಟ್ಟು ನಂತರ ಇತರ ಪರಂಪರೆಯನ್ನು ಸ್ಮರಿಸಿರುವರು' ಎಂಬ ಸ.ಸೀ.ಮೂ ಗ್ರಂಥಕಾರರ ಮಾತು ಕೇವಲ ಅಭಿಮಾನಿಕವಲ್ಲದೆ ಮತ್ತೇನು?

ಹದಗೆಡಿಸಹೊರಟವರಿಗೆ ಅಣ್ಣನೇನು? – ತಮ್ಮನೇನು?

ಶ್ರೀವಿಜಯದಾಸರ ತಮ್ಮಂದಿರಾದ ಹಯವದನವಿಠಲಾಂಕಿತ ಶ್ರೀಆನಂದ–ದಾಸರೂ ಮಹಾಜ್ಞಾನಿಗಳು. ಶ್ರೀವಿಜಯದಾಸರ ಅನುಗ್ರಹಪಾತ್ರರು. ಇವರ ಹೆಸರಿನಲ್ಲಿ 'ಸಂತರನ ನೆನೆಸಿ ಜನರು' ಎಂಬ ೮ ನುಡಿಗಳ ಸುದೀರ್ಘ ಕೀರ್ತನೆ ಕಂಡುಬಂದು ಹಲವು ಪ್ರಶ್ನೆಗಳು ಉದ್ಭವಿಸುತ್ತಿವೆ.

೧. ಈ ಕೃತಿಯನ್ನು ಆಮೂಲಾಗ್ರವಾಗಿ ಗಮನಿಸಿದಾಗ ಉತ್ತರಾದಿ ಮಠದ ಮತ್ತು ರಾಯರ ಮಠದ ಪರಂಪರೆಗಳನ್ನು ಮಾತ್ರ ವಿಸ್ತಾರವಾಗಿ ಸ್ತುತಿಸಿದ್ದಾರೆ. ಆದರೆ ಶ್ರೀವ್ಯಾಸರಾಯರ, ಶ್ರೀಪಾದರಾಯರ, ಶ್ರೀವಾದಿರಾಜರ, ಅಷ್ಟಮಠ–ಗಳ, ಶ್ರೀಸತ್ಯತೀರ್ಥರ (ಭೀಮನಕಟ್ಟೆಮಠ), ಸುಬ್ರಹ್ಮಣ್ಯ, ಭಂಡಾರಕೆರೆ, ಕೂಡಲಿ, ಕುಂದಾಪುರ ಮಠದ ಹೆಸರುಗಳನ್ನು ಮಾತ್ರ ಕಾಟಾಚಾರಕ್ಕೆ ಹೇಳಿ 'ಉಳ್ಳ ಮಧ್ವಮತ ಯತಿಯ ಪೊಗಳಿ' ಎಂದದ್ದು ಸಮಂಜಸವೆ?

೨. ವಿವಿಧ ಮಾಧ್ವಮಠಗಳ ಜ್ಞಾನಿಶ್ರೇಷ್ಠರ ಹೆಸರನ್ನು ಹೇಳದೆ 'ಪದ್ಧತಿಯ ಮುನಿಗಳು' ಎಂದಿರುವುದನ್ನು ಗಮನಿಸಿದರೆ ಖೇದವಾಗದಿರದು.

೩. ಇದೇ ಕೃತಿಯ ೧ನೇ ಚರಣವು ಶ್ರೀರಾಮಚಂದ್ರತೀರ್ಥರ ಹೆಸರಿನಿಂದ ಮುಗಿಯುತ್ತದೆ. ೨ನೇ ಚರಣವು ವಿದ್ಯಾನಿಧಿಗಳ ಹೆಸರಿನಿಂದ ಆರಂಭ–ವಾಗಿದೆ. ಅಂದರೆ ಶ್ರೀರಾಮಚಂದ್ರತೀರ್ಥರ ಹಾಗೂ ವಿದ್ಯಾನಿಧಿಗಳ ಸಂಬಂಧ ಹೇಳುವಲ್ಲಿ ವಿಶೇಷವೇನಿಲ್ಲ.

೪. ಆದರೆ ಇದೇ ಕೃತಿಯ ೪ನೇ ಚರಣದ ಪ್ರಾರಂಭದಲ್ಲಿ 'ಪೇಳುವೆನು ಶ್ರೀರಾಮಚಂದ್ರಮುನಿ ತರುವಾಯ ಪೀಠಿಗೆಯ ಸ್ವಾಮಿಗಳ' ಎಂಬ ವಿಶೇಷ ಪ್ರಸ್ತಾವನೆಯೊಂದಿಗೆ ಶ್ರೀವಿಬುಧೇಂದ್ರಸ್ವಾಮಿಗಳನ್ನು ಹೆಸರಿಸಲಾಗಿದೆ. ಈ ಎರಡು ಸಂದರ್ಭಗಳನ್ನು ಹೋಲಿಸಿದರೆ "ಶ್ರೀವಿಬುಧೇಂದ್ರರು ಶ್ರೀರಾಮ–ಚಂದ್ರತೀರ್ಥರ ಪೀಠಿಗೆಯನ್ನು ಅಂದರೆ ಪರಂಪರೆಯನ್ನು ಮುಂದುವರಿಸಿ–ದವರು" ಎಂದು ವಿಶೇಷವಾಗಿ ಹೇಳಿದಂತಾಗಲಿಲ್ಲವೆ?

೫. ಇದೇ ಕೃತಿಯ ೪ನೇ ಚರಣದಲ್ಲಿ 'ಮೂಲೋಕ ಪ್ರಖ್ಯಾತ ರಾಘವೇಂದ್ರಮುನಿ' ಎಂಬಲ್ಲಿ ಶ್ರೀರಾಯರಿಗೆ ಅಸಾಧಾರಣ ಲಕ್ಷಣವನ್ನು ಹೇಳಿದ್ದು, ಈ ಮಾತು ಶ್ರೀಪುರಂದರದಾಸಾರ್ಯರ –

"ಈಸುಮುನಿಗಳಿದ್ದೇನು ಮಾಡಿದರು
ವ್ಯಾಸಮುನಿ ಮಧ್ವಮತವನುದ್ಧರಿಸಿದ"

ಎಂಬ ಉದ್ಗಾರಕ್ಕೆ ಸಂವಾದಿಯಾಗಿದೆ. ಶ್ರೀತಾತ್ಪರ್ಯಚಂದ್ರಿಕಾದಿ ಲೋಕ ವಿಖ್ಯಾತ ಗ್ರಂಥಕಾರರೂ, ಅಪಾರಮಹಿಮೋಪೇತರೂ, ಪ್ರತ್ಯರ್ಥಿಗಜ–ಕೇಸರಿಗಳೂ, ಹರಿದಾಸಕುಲಸಂವರ್ಧಕರೂ ಆದ ಶ್ರೀವ್ಯಾಸರಾಯರ ಸ್ಥಾನ–ಮಾನವನ್ನು ಪರಿಗಣಿಸದೆ, ತಾರತಮ್ಯ ಪಾಲಿಸದೆ, ಎಲ್ಲೋ ಸಂದಿಗೊಂದಿ–ಯಲ್ಲಿ 'ವ್ಯಾಸಮುನಿರಾಯರ ಬ್ಯಾಸರದೆ ತುತಿಸಿ' ಎಂದು ಹೇಳುವುದು ಉಚಿತವೆ?

೬. ಇನ್ನು ಶ್ರೀವ್ಯಾಸರಾಜರಲಿ, ರಾಘವೇಂದ್ರರಲಿ, ಶ್ರೀಪುರಂದರದಾಸರು ಶ್ರೀವಿಜಯದಾಸಾದಿ ಮಹನೀಯರಿಂದ ಪರಮಮಾನ್ಯರಾದ ವ್ಯಾಸರಾಯರ ವಿದ್ಯಾಗುರುಗಳಾದ ಶ್ರೀಪಾದರಾಯರನ್ನೂ; ಶ್ರೀವಿಜಯದಾಸಾದಿ ಜ್ಞಾನಿ–ವರೇಣ್ಯರಿಂದ ಋಜುಸ್ಥಾನಾಪನ್ನರೆಂದು ಮುಕ್ತಕಂಠದಿಂದ ಶ್ಲಾಘಿತರಾದ ವಾದಿರಾಜರನ್ನೂ; ಶ್ರೀಮದಾನಂದತೀರ್ಥರ ಊರ್ಧ್ವಬದರಿಕಾಶ್ರಮ ಗಮನ–ವನ್ನು [ಅಂದರೆ 'ಉಲ್ಲಲಾಸಗಿರಿಪುಂಗವಶೃಂಗೇ' ಇತ್ಯಾದಿ ಮಹಿಮೋ–ಪೇತರಾದ ಆಚಾರ್ಯರ ದಿವ್ಯರೂಪವನ್ನು] ಕಂಡ ಶ್ರೀಸತ್ಯತೀರ್ಥರನ್ನೂ; ಸಾಕ್ಷಾತ್ 'ವೇದಾಂತಗುರುಸೋದರ'ರಾದ ಶ್ರೀವಿಷ್ಣುತೀರ್ಥಾಚಾರ್ಯಾದಿ

೪. ಅವರ ಅಪರೋಕ್ಷಜ್ಞಾನ ವಿದ್ಯಾನಿಧಿಗಳ ಸಮರ್ಥನೆಗೆ ಸೀಮಿತವು ಎನ್ನೋಣವೆ! ಬೇಡ, ಹಾಗಾದರೆ ಇತರ ಸರ್ವಸಮ್ಮತ ಅಪರೋಕ್ಷಜ್ಞಾನಿಗಳ ವಿರೋಧ ತಪ್ಪಿದ್ದಲ್ಲ!

೫. ಇನ್ನು 'ಕರ್ಣಘಾತದ ಆಧಾರದಿಂದ ಕತೆಯನ್ನು ಉಲ್ಲೇಖಿಸಿದ್ದಾರೆ' ಎಂದಾದರೆ ಪ್ರಮಾಣ ಹೇಗೆ?

ಒಂದಂತೂ ಸರಿ; ಮತ್ತೊಂದೇಕೆ ಹೀಗೆ?

೧. ಭೃಗ್ವಂಶಸಂಭೂತರೆಂದು ಸರ್ವಮಾನ್ಯರಾದ ಶ್ರೀವಿಜಯದಾಸರ ಕೃತಿ–ಗಳಲ್ಲಿ 'ಗುರುವಂಶಕೆ ನಮೋ ಎಂಬೆ ನಮ್ಮ ಮರುತ ಮತಾಬ್ಧಿಗೆ ನಮೋ ಎಂಬೆ' ಕೃತಿಯಲ್ಲಿಯೂ ಹಿಂದೆ ತಿಳಿಸಿದಂತೆ ಒಂದು ಪರಂಪರೆಯ ವಿಷಯವನ್ನು ಚಿತ್ರಿಸಿರುತ್ತಾರೆಯೇ ವಿನ: ಇದರಲ್ಲಿ ಮೂಲ–ಶಾಖಾ ಪರಂಪರಾ ಭೇದ ವಿಷಯದ ಪ್ರಸ್ತಾಪದ ಛಾಯೆಯೂ ಇಲ್ಲವೆಂಬುದು ಸ್ಪಷ್ಟ.

೨. ಶ್ರೀವಿಜಯದಾಸರ ಹೆಸರಿನಲ್ಲಿ 'ಸಂತರನ ಸ್ಮರಿಸಿ ಜನರೂ' ಎಂಬ ಮತ್ತೊಂದು ಕೀರ್ತನೆಯನ್ನು ಮುದ್ರಿಸಲಾಗಿದೆ. ಈ ಕೃತಿಯ ಬಗ್ಗೆ ಸ.ಸೀ.ಮೂ ಪುಟ ೪೬ರಲ್ಲಿ 'ಮೂಲಪೀಠವಾದ ಉತ್ತರಾದಿ ಮಠದ ಪರಂಪರೆಗೆ ಆದ್ಯತೆ ಕೊಟ್ಟು ನಂತರ ಇತರ ಪರಂಪರೆಯನ್ನು ಸ್ಮರಿಸಿರುವುದು (ವ್ಯಾಸ–ರಾಯರು ರಾಘವೇಂದ್ರರೇ ಮೊದಲಾದವರನ್ನು ಸಹ) ಗಮನಾರ್ಹ'–ವೆಂದು ಅಭಿಪ್ರಾಯ ಪಡಲಾಗಿದೆ.

ಈ ಕೀರ್ತನೆಯನ್ನು ವಿವರವಾಗಿ ಪರಿಶೀಲಿಸಿದರೆ 'ಆದ್ಯತೆಯ ಮೇರೆಗೆ ಹೇಳುತ್ತೇನೆ'ಎಂದು ದಾಸರು ಎಲ್ಲೂ ಹೇಳಿಕೊಂಡಿಲ್ಲ. ಆದ್ದರಿಂದ ಆದ್ಯತೆಯ ಮೇರೆಗೆ ಹೇಳಿದ್ದಾರೆ ಎಂಬುದು ಗ್ರಂಥಕಾರರ ಭಾವನೆ ಮಾತ್ರ. ಈ ರೀತಿ ಭಾವನಾತ್ಮಕ ಅರ್ಥವನ್ನು ಅಂಗೀಕರಿಸುವುದಾದರೆ ಅದೇ ರೀತಿಯ ಭಾವನೆಗಳು ನಮಗೂ ಬಂದಾವು.

೧. ಉಡುಪಿಯ ಅಷ್ಟಮಠಗಳನ್ನು ಹೇಳೇ ಇಲ್ಲವಾದುದರಿಂದ ಅವು ಮಾಧ್ವ ಮಠಗಳೇ ಅಲ್ಲವೆನ್ನಬೇಕೆ? ಖಂಡಿತ ಹಾಗೆನ್ನಬಾರದು.

೨. ಇದೇ ದೇವರನಾಮದಲ್ಲಿ ಎಲ್ಲ ಯತಿಗಳನ್ನು ಸಾಮಾನ್ಯವಾಗಿ ಹೇಳಿ ಶ್ರೀರಾಘವೇಂದ್ರರನ್ನು ಪ್ರಹ್ಲಾದರಾಜರು ಎಂದು ಹೇಳಿದ್ದಾರೆ. ಇದರ ಔಚಿತ್ಯವೇನು? ಬೇರೆ ಎಲ್ಲ ಯತಿಗಳೂ ಮನುಷ್ಯರು (ವಿಶೇಷ ಇಲ್ಲದವರು) ರಾಘವೇಂದ್ರರು ಮಾತ್ರ ಪ್ರಹ್ಲಾದ ಎಂಬ ದೇವತೆಯ ಅಂಶ ಎಂಬ ಭಾವನೆಯೂ ಬರುತ್ತದೆ. ಎನ್ನಬಹುದೇ? ಖಂಡಿತ ಹಾಗೆ ಹೇಳ ಬಾರದಲ್ಲವೆ!

೩. ವಿಜಯದಾಸರೇ 'ದೇವಾಂಶರಾದ ಪ್ರಹ್ಲಾದನೇ ರಾಯರು' ಎಂದು ಸೂಚಿಸಿದ್ದು, ಬೇರೆ ಸಂದರ್ಭಗಳಲ್ಲಿ ಈ ಪ್ರಹ್ಲಾದಾಂಶವೆಂಬುದನ್ನು ಅಲ್ಲಗೆಳೆಯುವ ವ್ಯಕ್ತಿಗಳು ವಿಜಯದಾಸರಿಗೆ ಗೌರವ ಕೊಟ್ಟಂತಾಯಿತೆ?

ಆದರೆ ಈ ಕೀರ್ತನೆಯಲ್ಲಿ ಉತ್ತರಾದಿ ಮಠದ ಮತ್ತು ರಾಯರ ಮಠದ ಪರಂಪರೆಗಳನ್ನು ಮಾತ್ರ ವಿವರವಾಗಿ ಹೇಳಿ; ಇತರ ಬಹುಪಾಲು ಮಾಧ್ವ ಮಠಗಳ ಸುಪ್ರಸಿದ್ಧ ಮಹನೀಯರನ್ನೂ ಹೆಸರಿಸದೆ 'ಮಧ್ವಪದ್ಧತಿಯ ಯತಿಯ' ನೆನೆವೆನಾ ಎಂದು ಕಾಟಾಚಾರಕ್ಕೆ ವಂದಿಸಲಾಗಿದೆ. ಅನುಕ್ರಮ–ತಾರತಮ್ಯಗಳಂತೂ ದೇವರಿಗೇ ಪ್ರೀತಿ!

೪. ೨ನೇ ನುಡಿಯಲ್ಲಿ ರಾಯರಮಠದಲ್ಲಿ 'ವಿಬುಧೇಂದ್ರ – ಜಿತಾಮಿತ್ರ – ರಘುತನಯ'ರೆಂಬ ಜಗತ್ಪ್ರಸಿದ್ಧ ಗುರುಶಿಷ್ಯಾನುಕ್ರಮವನ್ನು ತಿರುಚಿ 'ವಿಬುಧೇಂದ್ರ – ರಘುತನಯ – ಜಿತಾಮಿತ್ರ' ಎಂದು ತಪ್ಪಾಗಿ ಹೇಳಿರು–ವುದಕ್ಕೆ ಯಾರು ಹೊಣೆ? ಇಂಥ ಪ್ರಬಲ ದೋಷಗ್ರಸ್ತ ಕೀರ್ತನೆಯನ್ನು ಶ್ರೀವಿಜಯದಾಸರ ಹೆಸರಿಗೆ ಕಟ್ಟಿದರೆ ಒಪ್ಪಿಕೊಳ್ಳುವ ಅನಿವಾರ್ಯತೆ ಏನು?

೫. ಇದೇ ಕೀರ್ತನೆಯಲ್ಲಿ ಶ್ರೀರಾಘವೇಂದ್ರರ ಪೂರ್ವಾವತಾರರಾದ ಶ್ರೀವ್ಯಾಸರಾಯರನ್ನು ಶ್ರೀರಾಘವೇಂದ್ರರ ನಂತರ ಮಾತ್ರವಲ್ಲದೆ, ಶ್ರೀಸುಮತೀಂದ್ರ – ಶ್ರೀಉಪೇಂದ್ರತೀರ್ಥರ ನಂತರವೂ; ಶ್ರೀವ್ಯಾಸ–ರಾಯರ ವಿದ್ಯಾಗುರುಗಳಾದ ಶ್ರೀಶ್ರೀಪಾದರಾಯರನ್ನು ಶ್ರೀವ್ಯಾಸರಾಯರ ನಂತರವೂ ಸೇರಿಸಿರುವ ಕೃತ್ಯವು, ಹರಿದಾಸವಾಙ್ಮಯದಲ್ಲಿ ಅತಿಹೆಚ್ಚು ಕೃತಿಗಳಲ್ಲಿ ನಿತ್ಯ–ಸತ್ಯ ತಾರತಮ್ಯದ ಸಂಸ್ಥಾಪಕರಾದ ಶ್ರೀವಿಜಯರಾಯರಿಗೆ ಸಮ್ಮತವಾದೀತೆ?

> "........ **ಪಶ್ಚಾತ್ ವಿದ್ಯಾನಿಧಿ ಮುನೀಶ್ವರ: ।**
> **ಶ್ರೀರಾಮಚಂದ್ರತೀರ್ಥಸ್ಯ ವೃಂದಾವನ ಸುಸನ್ನಿಧೌ ।**
> **ಸ್ವಸ್ಯ ದಕ್ಷಿಣ ಹಸ್ತೇನ ಶಂಖತೋಯೇನ ಸತ್ತಮ: ॥**
> **ಸ್ವಯಂ ಪಟ್ಟಾಭಿಷಿಚ್ಯಾಥ**............ ॥"

ಎಂಬ ವಾಕ್ಯಗಳಿಂದ 'ಪ್ರತ್ಯಕ್ಷ ಹಸ್ತಾಂತರವು ಸರ್ವಥಾ ನಡೆಯಲಿಲ್ಲ'ವೆಂಬು–ದನ್ನು ಒಪ್ಪಿದಂತಲ್ಲವೆ?

೧೭೮೦ಕ್ಕಿಂತ ಮೊದಲು ಯಾರೂ ಹೇಳಲಿಲ್ಲವೆ?

ಸ.ಸೀ.ಮೂ ಪು:೪೦ರಲ್ಲಿ "ಉತ್ತರಾದಿಮಠದ ಗುರುಪರಂಪರೆಯನ್ನು **ಮೊದಲಬಾರಿಗೆ** ಭೀಮಕವಿ ತನ್ನ ಸಂಸ್ಕೃತ 'ಪೂರ್ಣಬೋಧ ಗುರುವಂಶ ಕಥಾಕಲ್ಪತರು' ಕಾವ್ಯದಲ್ಲಿ ದಾಖಲಿಸುವ ೫೦ ವರ್ಷಗಳ ಮೊದಲೇ ಮಹಿ–ಪತಿದಾಸರು ಗುರುಪರಂಪರೆಯನ್ನು ಹೇಳಿದರು" ಎಂಬ ವಾಕ್ಯವಿದೆ. ಅದೇ ಪುಟ ೪೨ರಲ್ಲೂ ಇದೇ ರೀತಿಯ ವಾಕ್ಯವಿದೆ. ಅಂದರೆ ಕ್ರಿ.ಶ ೧೭೮೦ಕ್ಕಿಂತ ಮೊದಲು ಯಾವುದೇ ಸಂಸ್ಕೃತಗ್ರಂಥದಲ್ಲಿ ಉತ್ತರಾದಿಮಠವು ಶ್ರೀಮಧ್ವರ, ಹಂಸನಾಮಕ ಪರಮಾತ್ಮನಪರಂಪರೆ ಎಂದು ಯಾರೂ ಹೇಳಿರಲಿಲ್ಲವೆಂದಂ–ತಾಯಿತು.

ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಂತೂ –

೧. ೧೭೮೦ರ ಭೀಮಕವಿಗಿಂತ ೧೬೦ವರ್ಷ ಮೊದಲೇ, ಅಂದರೆ ೧೬೨೦ರಲ್ಲಿ 'ಶ್ರೀವಿಜಯೀಂದ್ರವಿಜಯ' ರಚಿಸಿದ ಭಾವೀಸಮೀರ ಶ್ರೀವಾದಿರಾಜರ ಶಿಷ್ಯರಾದ ಮಧ್ವಕವಿಗಳು, ಶ್ರೀಹರಿ ಹಾಗೂ ಬ್ರಹ್ಮದೇವರಿಂದ ಆರಂಭಿಸಿ ಮಧ್ವರ ಮೂಲಕ ಶ್ರೀವಿಜಯೀಂದ್ರರವರೆಗಿನ ಗುರುಪರಂಪರೆಯನ್ನು ಹೇಳಿದ್ದಾರೆ.

೨. ಭೀಮಕವಿಗಿಂತ ೧೨೦ ವರ್ಷ ಮೊದಲೇ, ಅಂದರೆ ಕ್ರಿ.ಶ. ೧೬೬೦ರಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳವರ ಪೂರ್ವಾಶ್ರಮದ ಸೋದರಳಿಯಂದಿ–ರಾದ ಶ್ರೀನಾರಾಯಣಾಚಾರ್ಯರು ರಚಿಸಿದ 'ಶ್ರೀರಾಘವೇಂದ್ರವಿಜಯ'ದಲ್ಲಿ ಶ್ರೀಮಧ್ವರಿಂದ ಆರಂಭಿಸಿ ಶ್ರೀರಾಯರವರೆಗಿನ ಗುರುಪರಂಪರೆಯಲ್ಲಿ ಶ್ರೀಮೂಲರಾಮಪೂಜಾಧಿಕಾರವು ಸಾಗಿಬಂದ ಕ್ರಮವನ್ನು ನಿರೂಪಿಸಿದ್ದಾರೆ. ಇದರಿಂದ ಮೂಲರಾಮಾರ್ಚಾಗತಿಕ್ರಮವನ್ನು ಹೇಳಿದ್ದಲ್ಲದೆ ಅವಿಚ್ಛಿನ್ನ ಪರಂಪರೆಯನ್ನೂ ತಿಳಿಸಿದಂತಾಯಿತು.

೩. ಭೀಮಕವಿಗಿಂತ ೩೦ ವರ್ಷ ಮೊದಲೇ, ಅಂದರೆ ೧೭೨೮ರಿಂದ ೧೭೫೦ರ ಅವಧಿಯಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ಪೀಠಾಧಿಪತಿ–ಗಳಾದ ಶ್ರೀವಾದೀಂದ್ರತೀರ್ಥರು 'ಅರ್ಚಾಗತಿಕ್ರಮ'ದಲ್ಲಿ ಮಧ್ವರಿಂದ ಆರಂಭಿಸಿ ಉಪೇಂದ್ರತೀರ್ಥರವರೆಗಿನ ಗುರುಪರಂಪರೆಯನ್ನು ಹೇಳಿದ್ದಾರೆ.

೪. ಭೀಮಕವಿಗಿಂತ ೨೦ ವರ್ಷಗಳ ಮೊದಲೇ, ಅಂದರೆ ೧೭೫೦ ರಿಂದ ೧೭೬೧ರ ಅವಧಿಯ ಶ್ರೀವಸುಧೇಂದ್ರತೀರ್ಥರು ತಮ್ಮ ಗುರುಪರಂಪರೆಯನ್ನು

> "**ಶ್ರೀಮಧ್ವಂ ಪದ್ಮನಾಭಂ**................
> ....**ಪ್ರೌಢ ವಾದೀಂದ್ರವರ್ಯಮ್** ॥"

ಎಂದು ದಾಖಲಿಸಿದ್ದಾರೆ.

ಹೀಗಾಗಿ ವಿವಾದದ ಪ್ರಖರತೆಯೇನಿದ್ದರೂ ೧೭೮೦ರ ನಂತರವೆಂಬುದು ತಿಳಿದುಬರುತ್ತದೆ.

'ಗುರು ಆಜ್ಞಾಪಾಲಕತ್ವ'ದ ಪ್ರಶ್ನೆ

ಶ್ರೀಪ್ರಸನ್ನವೆಂಕಟದಾಸರ 'ಗುರುಪದವ ನಂಬಿ' ಎಂಬ ಕೀರ್ತನೆಯ ೪ನೇ ನುಡಿಯಲ್ಲಿ 'ಗುರು ಆಜ್ಞಾಪಾಲಕ ವಿದ್ಯಾನಿಧಿಗಳ' ಎಂಬ ವಿಶೇಷಣ–ವನ್ನು ಕಂಡು ಸಂಭ್ರಮಗೊಂಡ ಸ.ಸೀ.ಮೂ. ಗ್ರಂಥಕಾರರು, ಪುಟ ೪೩ರಲ್ಲಿ "ವಿದ್ಯಾನಿಧಿಗಳು ಗುರುಗಳ ಆಜ್ಞಾಪಾಲಕರು ಎಂದು ಹೇಳುವಲ್ಲಿ **ಸೂಕ್ಷ್ಮವಾಗಿ** ಗುರುಪೀಠವನ್ನು ಗುರುಗಳ ಆಜ್ಞೆಯಂತೆ ಮುಂದುವರಿಸಿಕೊಂಡುಬಂದುದರ ಕಥೆಯನ್ನು ಹೇಳಿದಂತಾಗಿದೆ" ಎಂದು ಪ್ರತಿಕ್ರಿಯಿಸಿದ್ದಾರೆ.

ಇಲ್ಲಿ ಜಿಜ್ಞಾಸೆಗಿಟ್ಟುಕೊಳ್ಳುವ ವಿಚಾರವೆಂದರೆ –

೧. 'ಸೂಕ್ಷ್ಮವಾಗಿ' ಎಂದರೇನು? ಇದರ 'ಕಥೆ'ಯನ್ನು ಹೇಳಲಾಗಿದೆಯೆ?

೨. ವಿದ್ಯಾನಿಧಿಗಳ ಗುರು ಆಜ್ಞಾಪಾಲಕತ್ವದ **ಸೂಕ್ಷ್ಮ**ವು ಸಮಕಾಲೀನರಲ್ಲದ ಪ್ರಸನ್ನವೇಂಕಟದಾಸರಿಗೆ ತಿಳಿದ ಬಗೆ ಹೇಗೆ?

೩. ಅಪರೋಕ್ಷಜ್ಞಾನದಿಂದ ತಿಳಿದ ವಿಷಯವೆಂದು ಹೇಳಬಹುದೆ? ಅಥವಾ ಪರಂಪರಯಾ ಕರ್ಣಾಘಾತವೇ?

ಅಧ್ಯಾಯ – 4

ಮೂಲಪರಂಪರೆ – ಚರ್ವಿತಚರ್ವಣ

ಇದುವರೆಗೆ ಘಟ್ಟದ ಮೇಲಿನ ಮೂರು ಮಾಧ್ವಮಠಗಳಲ್ಲಿ 'ಮೂಲ ಪರಂಪರೆ' ಎಂಬ ಪ್ರತಿಷ್ಠಿತ ಸ್ಥಾನವು ತಮ್ಮ ಪರಂಪರೆಗೆ ಮಾತ್ರ ಸೀಮಿತ–ವಾಗಿರಬೇಕೆಂಬ ಹಟದಿಂದ 'ಬೇಕಾದಷ್ಟು, ಹಾಗೆ ನೋಡಿದರೆ ಬೇಡವೆನಿಸು–ವಷ್ಟು' ಗ್ರಂಥಗಳು, ಲೇಖನಗಳು ಹೊರಬಂದು ಪರಸ್ಪರ ಖಂಡನೆ –ಮಂಡನೆಗಳ ಶೀತಲಸಮರ ಸಾಗಿಬಂದಿದೆ. ಅದರ ಮತ್ತೊಂದು ಭಾಗವೋ ಎಂಬಂತಿರುವ ಸ.ಸೀ.ಮೂ ಪು : ೩೯ರಿಂದ೫೨ ರ ವರೆಗಿನ **'ಹರಿದಾಸರು ಅರುಹಿದ ಹಿರಿದಾದ ಮಠದ ಮಹಿಮೆ'** ಎಂಬ ಉಪ – ಅಧ್ಯಾಯದಲ್ಲಿ ಹರಿದಾಸರ ಎಂಟು ಕೀರ್ತನೆ–ಗಳನ್ನು ಬಳಸಿಕೊಳ್ಳಲಾಗಿದೆ –

೧. ಮಹಿಪತಿದಾಸರ – 'ನೆನೆದು ನಮಿಸುವೆ ನಾನು ವಾರಂವಾರ'

೨. ಪ್ರಸನ್ನ ವೆಂಕಟದಾಸರ – 'ಸತತ ಸ್ಮರಿಸಿ ಮಧ್ವಸಂತತಿ ಗುರುಗಳ'

೩. ಪ್ರಸನ್ನ ವೆಂಕಟದಾಸರ – 'ಗುರುಪದವ ನಂಬಿ ಹರಿಪದವ ಕಾಂಬೆ'

೪. ವಿಜಯದಾಸರ – 'ಗುರುವಂಶಕೆ ನಮೋ ಎಂಬೆ'

೫. ವಿಜಯದಾಸರ – 'ಸಂತರನ ಸ್ಮರಿಸಿ ಜನರೂ'

೬. ಗಲಗಲಿ ಅವ್ವನವರ – 'ಇವರಲ್ಲೇ ನೀತಿ ರಾಮದೇವರ ಪ್ರೀತಿ'

೭. ಹಯವದನ ವಿಠಲರ – 'ಸಂತರನ ನೆನೆಸಿ ಜನರೂ'

೮. ಜಗನ್ನಾಥದಾಸರ – 'ಆನಮಿಪೆ ಗುರುಸಂತತಿಗೆ ಸತತ'

ಎಂಬ ಈ ಎಂಟು ಕೀರ್ತನೆಗಳಲ್ಲಿ; ಕ್ರಮಸಂಖ್ಯೆ ೫ ಮತ್ತು ೭ನೇ ಕೀರ್ತನೆ–ಗಳು ಆಕ್ಷೇಪಾರ್ಹವಾಗಿವೆ.

ಉಳಿದ ಆರುಕೀರ್ತನೆಗಳು ಒಂದು ಮಠದ ಯತಿಸ್ತುತಿರೂಪವಾಗಿವೆ. ವಿವಾದರಹಿತವಾದ ಆ ಆರನ್ನೂ ಸೇರಿ, ಒಟ್ಟು ಎಂಟೂ ಕೀರ್ತನೆಗಳನ್ನು ಸ.ಸೀ.ಮೂ ಗ್ರಂಥಕಾರರು ತಮ್ಮ ಉದ್ದೇಶ ಸಾಧನೆಗೆ ಅನುಕೂಲವಾಗುವಂತೆ ಹೇಳಿರುವ, ಅಸಂಗತ ಅರ್ಥಗಳ ನಿರಾಸವನ್ನು ಈ ಭಾಗದಲ್ಲಿ ಕೈಗೊಳ್ಳ–ಲಾಗಿದೆ.

ಹಸ್ತಾಂತರಕ್ಕೆ ಅವಕಾಶವಿತ್ತೆ?

'ನೆನೆದು ನಮಿಸುವೆ' ಎಂಬ ಮಹಿಪತಿದಾಸರ ಕೀರ್ತನೆಯ ಬಗ್ಗೆ ಸ.ಸೀ.ಮೂ. ಪುಟ : ೪೦ರಲ್ಲಿ 'ಮಹಿಪತಿದಾಸರು ಉತ್ತರಾದಿಮಠದ ಯತಿಪರಂಪರೆ–ಯನ್ನೇ ಶ್ರೀಮಧ್ವರ ಮೂಲ ಗುರುಪರಂಪರೆ ಎಂಬುದಾಗಿ ದಾಖಲಿಸಿದ್ದು ಚಾರಿತ್ರಿಕ ಮಹತ್ವದ್ದಾಗಿದೆ' ಎಂದು ಬೀಗಿದ್ದಾರೆ. ಆದರೆ ಹರಿದಾಸರಮಧ್ಯೆ ಮೊಟ್ಟಮೊದಲ ಬಾರಿಗೆ ಗುರುಪರಂಪರೆಯ ಮಾಹಿತಿರೂಪದಲ್ಲಿ ದೊರೆತಿರುವ ಈ ಕೀರ್ತನೆಯಲ್ಲಿ, ಒಂದುಮಠದ ಯತಿಗಳ ಹೆಸರುಗಳ ಪಟ್ಟಿಯಿದೆಯೇ ವಿನ: 'ಅದೇ ಮೂಲ ಗುರುಪರಂಪರೆ' ಎಂದು ಹೇಳುವ ಯಾವುದೇ ವಿಶಿಷ್ಟ ಪದಪ್ರಯೋಗವಿಲ್ಲ. ಇತರ ಮಠಗಳ ಪ್ರಸ್ತಾಪವೇ ಇಲ್ಲದಿರುವುದರಿಂದ 'ಆದ್ಯತೆ'ಯ ಪ್ರಶ್ನೆಯೂ ಬರುವುದಿಲ್ಲ. ಆದ್ದರಿಂದ ಉತ್ತರಾದಿಮಠವೇ ಶ್ರೀಮಧ್ವರ ಮೂಲ ಗುರುಪರಂಪರೆಯೆಂದು ಎಂದಿಗೂ ಸ್ಥಾಪಿಸಲು ಬರುವುದಿಲ್ಲ. ಇದೆಲ್ಲಾ ಸ.ಸಿ.ಮೂ. ಗ್ರಂಥಕಾರರ ಕಲ್ಪನೆಯೆಂಬುದು ಸ್ಪಷ್ಟವಾಗುತ್ತದೆ.

ಅದೇ ಪುಟದಲ್ಲಿ **'ಮೂಲಪರಂಪರೆಯಲ್ಲಿ ಬರುವ ಶ್ರೀರಾಮಚಂದ್ರ–ತೀರ್ಥರಿಂದ ಶ್ರೀವಿದ್ಯಾನಿಧಿತೀರ್ಥರಿಗೆ ಗುರುಪೀಠ ಹಸ್ತಾಂತರವಾದುದನ್ನು ಕಾಣಬಹುದು'** ಎಂದೂ ಹೇಳಲಾಗಿದೆ. ಆದರೆ ಕೀರ್ತನೆಯಲ್ಲಿ ಶ್ರೀರಾಮಚಂದ್ರ–ತೀರ್ಥರ ನಂತರ ವಿದ್ಯಾನಿಧಿಗಳ ಹೆಸರನ್ನು ಉಚ್ಚರಿಸಿದ ಮಾತ್ರಕ್ಕೆ 'ಗುರುಪೀಠದ ಹಸ್ತಾಂತರ ವಿಷಯ ಸ್ಥಾಪಿತವಾಯಿತು' ಎಂದು ಸ.ಸಿ.ಮೂ. ಗ್ರಂಥಕಾರರು ಹಿಗ್ಗುವುದಾದರೆ ಏನೆನ್ನಲಾದೀತು?

ಅಲ್ಲದೆ ಶ್ರೀರಾಮಚಂದ್ರತೀರ್ಥರ ನಿರ್ಯಾಣೋತ್ತರದ ಆಗಿನ ಪರಿಸ್ಥಿತಿ–ಯಲ್ಲಿ ವಿದ್ಯಾನಿಧಿಗಳಿಗೆ ಪ್ರಣವೋಪದೇಶ, ಪಟ್ಟಾಭಿಷೇಕಾದಿ ಗುರು–ಶಿಷ್ಯ ಸಂಬಂಧದ ಸನ್ನಿವೇಶಗಳು ಇರಲಿಲ್ಲವೆಂಬುದು ಸರ್ವವಿದಿತ. 'ಗುರುಚರ್ಯಾ' ಗ್ರಂಥದಲ್ಲಿಹೇಳುವಂತೆ –



ಪ್ರತಿಮಾ ದರ್ಶನ – ೭


ಇಲ್ಲಿ ಕಾಣುತ್ತಿರುವುದು ಉತ್ತರಾದಿ ಮಠದ ಸಂಸ್ಥಾನ ಪ್ರತಿಮೆಗಳು.
ಸೀತಾಪ್ರತಿಮೆ ಮಾತ್ರ ಅಲಂಕಾರಸಮೇತ ಇರುವುದನ್ನು ಗಮನಿಸಿ.



ಪ್ರತಿಮಾ ದರ್ಶನ – ೮

ಕೂಡಲಿ ಆರ್ಯ ಅಕ್ಷೋಭ್ಯಮಠದ ಪ್ರತಿಮೆಗಳು
ಶ್ರೀರಾಮ–ಸೀತೆಯರ ಪೀಠ ಹಾಗೂ ಎತ್ತರಗಳ ಸಾಮ್ಯವನ್ನು ಗಮನಿಸಿ.





ಪ್ರತಿಮಾ ದರ್ಶನ – ೪

೧. ಉತ್ತರಾದಿಮಠದಲ್ಲಿ ಪ್ರಸ್ತುತ ಪೂಜೆಯಾಗುತ್ತಿರುವ ಸೀತಾರಾಮಚಂದ್ರ ಪ್ರತಿಮೆಗಳು.

೨. ಶ್ರೀಭಂಡಾರಕೆರೆ ಮಠದ ಮೂಲಪುರುಷರಾದ ಶ್ರೀಸತ್ಯತೀರ್ಥರಿಗೆ ಶ್ರೀಮನ್ಮಧ್ವಾಚಾರ್ಯರು ದಯಪಾಲಿಸಿದ ಶ್ರೀಸೀತಾರಾಮಚಂದ್ರದೇವರು.



ಪ್ರತಿಮಾ ದರ್ಶನ – ೫

ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಪೂಜೆಗೊಳ್ಳುತ್ತಿರುವ
ಬ್ರಹ್ಮಕರಾರ್ಚಿತ ಶ್ರೀಮನ್ಮೂಲರಾಮದೇವರು ಹಾಗೂ ಉತ್ತರಾದಿ ಮಠದಲ್ಲಿನ ಸೀತಾದೇವಿ.

ಇದರಂತೆಯೇ ಬಾಳಗಾರು ಶ್ರೀಅಕ್ಷೋಭ್ಯತೀರ್ಥ ಮಠ, ಕೂಡ್ಲಿ ಶ್ರೀಅಕ್ಷೋಭ್ಯತೀರ್ಥ ಮಠದಲ್ಲಿನ ಶ್ರೀಸೀತಾರಾಮಚಂದ್ರ ಪ್ರತಿಮೆಗಳು ಹಾಗೂ ಶ್ರೀಪೇಜಾವರ ಮಠದ ಕಣ್ವಪೂಜಿತ ಶ್ರೀಸೀತಾರಾಮಚಂದ್ರ ಪ್ರತಿಮೆಗಳನ್ನು ಕೂಡಾ ಗಮನಿಸಬಹುದು.



ಪ್ರತಿಮಾ ದರ್ಶನ – ೬


ಇಲ್ಲಿ ಕಾಣುತ್ತಿರುವುದು ಉತ್ತರಾದಿ ಮಠದ ಸೀತಾಪ್ರತಿಮೆ. ಇದನ್ನು ಶಿಲ್ಪಶಾಸ್ತ್ರ ರೀತ್ಯಾ ವಿಮರ್ಶಿಸಿದಾಗ ಶಿಲ್ಪಶಾಸ್ತ್ರವು ಈ ಅಭಿಪ್ರಾಯವನ್ನು ಕೊಡುತ್ತದೆ.

೧. ದೊಡ್ಡ ತಾಳಾಪ್ರಮಾಣ (ಅಡಿಗಳ ಲೆಕ್ಕದಲ್ಲಿ) ದೇವಾಲಯದ ಉತ್ಸವಮೂರ್ತಿಗಳನ್ನು ರಚಿಸುವ ಪದ್ಧತಿಯಲ್ಲಿ ಬೇರೆ ಬೇರೆ ಲೋಹಗಳ ಮಿಶ್ರಣದ ಪೀಠ ಮತ್ತು ಮೂರ್ತಿಗಳನ್ನು ನಿರ್ಮಿಸುತ್ತಾರೆ. ಈ ಪದ್ಧತಿಗೆ **ಜಡಬಂಧನ** ಮೂರ್ತಿಗಳೆನ್ನುವರು.

೨. ಸಣ್ಣ ಸಣ್ಣ ತಾಳಾಪ್ರಮಾಣದ (ಇಂಚು ಲೆಕ್ಕದ) ಅರ್ಚಾಮೂರ್ತಿಗಳ ನಿರ್ಮಾಣದಲ್ಲಿ ಪೀಠ ಹಾಗೂ ಮೂರ್ತಿಯ ಲೋಹ ಒಂದೇ ಆಗಿರಬೇಕೆಂಬುದು ಶಿಲ್ಪಶಾಸ್ತ್ರದ ನಿಯಮ. ಎಂದಿಗೂ ಪೀಠ ಹಾಗೂ ಮೂರ್ತಿಗಳ ಭಿನ್ನಲೋಹವಾಗಬಾರದೆಂಬ ಸ್ಥಿರನಿಯಮವಿದೆ.

ಇಂತಹ ಮೂರ್ತಿಗಳಿಗೆ **ಏಕಬಂಧನ** ಮೂರ್ತಿಗಳೆನ್ನುವರು.

ಏಕಬಂಧನಾರ್ಚಾಪ್ರತಿಮಾಲಕ್ಷಣವುಳ್ಳ ಶ್ರೀಮೂಲರಾಮಪ್ರತಿಮೆಯಂತೆ ಸೀತಾಪ್ರತಿಮೆಯೂ ಇರಬೇಕಿತ್ತಲ್ಲವೇ?






ಪ್ರತಿಮಾ ದರ್ಶನ – ೨

೧. ಉತ್ತರಾದಿಮಠದಲ್ಲಿ ಪ್ರಸ್ತುತ ಪೂಜೆಯಾಗುತ್ತಿರುವ ಸೀತಾರಾಮಚಂದ್ರ ಪ್ರತಿಮೆಗಳು.

೨. ಶ್ರೀಭೀಮಸೇತು ಮುನಿವೃಂದ ಮಠದ ಮೂಲಪುರುಷರಾದ ಶ್ರೀಸತ್ಯತೀರ್ಥರಿಗೆ ಶ್ರೀಮನ್ಮಧ್ವಾಚಾರ್ಯರು ದಯಪಾಲಿಸಿದ ಸನಕಾದಿಮುನಿ ಪೂಜಿತ ಲಕ್ಷ್ಮಣಸಮೇತ ಶ್ರೀಸೀತಾರಾಮಚಂದ್ರದೇವರು.





ಪ್ರತಿಮಾ ದರ್ಶನ – ೩

೧. ಉತ್ತರಾದಿಮಠದಲ್ಲಿ ಪ್ರಸ್ತುತ ಪೂಜೆಯಾಗುತ್ತಿರುವ ಸೀತಾರಾಮಚಂದ್ರ ಪ್ರತಿಮೆಗಳು.

೨. ಶ್ರೀಪಲಿಮಾರು ಮಠದ ಮೂಲಪುರುಷರಾದ ಶ್ರೀಹೃಷೀಕೇಶತೀರ್ಥರಿಗೆ ಶ್ರೀಮನ್ಮಧ್ವಾಚಾರ್ಯರು ದಯಪಾಲಿಸಿದ ಲಕ್ಷ್ಮಣ–ಮುಖ್ಯಪ್ರಾಣ ಸಮೇತ ಶ್ರೀಸೀತಾಕೋದಂಡರಾಮ ಪ್ರತಿಮೆಗಳು.

ಶಿರೋಮಣಿಗಳಾದ ಶ್ರೀವಾದೀಂದ್ರತೀರ್ಥರಿಂದ ರಚಿತವಾದ 'ಅರ್ಚಾಗತಿ–ಕ್ರಮ'ದ

"ಕರ್ಣತೋವರ್ಣತಶ್ಚೈವ ಪೀಠತಃಪರಿಮಾಣತಃ।
ಸೀತಾರಾಮಾರ್ಚಯೋಃ ಸಾಮ್ಯಂ......"


ಎಂಬ ಪ್ರತಿಮಾ ಲಕ್ಷಣಶಾಸ್ತ್ರಸಮ್ಮತ ಸೂತ್ರವು ಏಕೆ ಪ್ರಮಾಣವಲ್ಲ?

೪. ಮೇಲ್ಕಂಡ ಯಾವುದೇ ಪ್ರಾಚೀನ ಗ್ರಂಥಗಳಲ್ಲಿ ಮೂಲಸೀತಾ–ರಾಮ ಪ್ರತಿಮೆಗಳ ಎತ್ತರದ ಬಗ್ಗೆ ಅಧಿಕೃತ ಪ್ರಮಾಣಗಳು ಇಲ್ಲದಿರುವಾಗ, ಸ.ಸೀ.ಮೂ.ಪು: ೬೧ರಲ್ಲಿರುವ, ಶ್ರೀಮುದ್ದುವಿಠಲದಾಸರ ಸುಳಾದಿ–ಯಲ್ಲಿ ಮಾತ್ರ **'ತನ್ನ ಪತಿ ಆನಾಭಿ ಪ್ರಮಾಣಳಾಗಿ'** ಎಂದಿರುವ ವಾಕ್ಯ–ವನ್ನು, ಮೂಲಸೀತಾಲಕ್ಷಣವೆಂದು ಒಪ್ಪಬೇಕಾದ ಅನಿವಾರ್ಯತೆ ಏನು? ಮುದ್ದುವಿಠಲರು ತಮ್ಮ ಕಾಲದಲ್ಲಿರುವ ಹಿತ್ತಾಳೆ ಪ್ರತಿಮೆಯ ಎತ್ತರವನ್ನು ಸಮರ್ಥಿಸಲು ಈ ಮಾತುಗಳನ್ನು ಹೇಳಿರುವರೆಂದು ತೋರುವದಿಲ್ಲವೇ?

೫. ಮೇಲ್ಕಂಡ ಯಾವುದೇ ಪ್ರಾಚೀನ ಗ್ರಂಥಗಳಲ್ಲಿ ಮೂಲಸೀತಾಪ್ರತಿಮೆಯ ಕರಚರಯಾದಿ ಅವಯವಗಳ ಬಗ್ಗೆ ಅಧಿಕೃತ ಪ್ರಮಾಣಗಳು ಇಲ್ಲದಿರು–ವಾಗ, ಸ.ಸೀ.ಮೂ.ಪು: ೬೧ರಲ್ಲಿರುವ, ಮುದ್ದುವಿಠಲದಾಸರ **'ಕರದಿ ಕಮಲಾ ಅಮೃತ ಕಲಶವಾ ಪಿಡಿದಿಹಳು'** ಎಂಬ ಸುಳಾದಿಯ ವಾಕ್ಯ–ವನ್ನು, ಮೂಲಸೀತಾಲಕ್ಷಣವೆಂದು ಒಪ್ಪಬೇಕಾದ ಅನಿವಾರ್ಯತೆ ಏನು? ಮುಂತಾದ ಅಪರಿಹಾರ್ಯ ಸಮಸ್ಯೆಗಳ ಸುರುಳಿ ಬಿಚ್ಚಿಕೊಳ್ಳು–ತ್ತಲೇ ಹೋಗುತ್ತದೆ.

ಈ ಜಿಜ್ಞಾಸೆಯ ಜಟಿಲತೆಯನ್ನು ತಿಳಿಯಲು, ವಿವಿಧ ಮಾಧ್ವಮಠಗಳ–ಲ್ಲಿರುವ ಶ್ರೀಮದಾಚಾರ್ಯಪ್ರದತ್ತವಾದ ಎಲ್ಲ ಸೀತಾ–ರಾಮಪ್ರತಿಮೆಗಳನ್ನು ಒಮ್ಮೆ ಅವಲೋಕಿಸಬಹುದು –







ಪ್ರತಿಮಾ ದರ್ಶನ–೧
೧. ಉತ್ತರಾದಿಮಠದಲ್ಲಿ ಪ್ರಸ್ತುತ ಪೂಜೆಯಾಗುತ್ತಿರುವ ಸೀತಾರಾಮಚಂದ್ರ ಪ್ರತಿಮೆಗಳು.
೨. ಶ್ರೀಭೀಮಸೇತು ಮುನಿವೃಂದ ಮಠದ ಮೂಲಪುರುಷರಾದ ಶ್ರೀಸತ್ಯತೀರ್ಥರಿಗೆ ಶ್ರೀಮನ್ಮಧ್ವಾಚಾರ್ಯರು ದಯಪಾಲಿಸಿದ ಪಾಂಡವ ಪೂಜಿತ ಲಕ್ಷ್ಮಣಸಮೇತ ಶ್ರೀಸೀತಾರಾಮಚಂದ್ರದೇವರು.







































ಅನುಬಂಧ – ೪















[illegible]


10 – ಧಂಯಡಅ


೯ – ಧಂಯಡಅ



ಹಡಅಂಆಡಅ್ರ ದಃಫಿಗ್ರಂಝ ರಯರಾಶಂಡಡಾಹ ಈಡರಿಾಜಿಗ್ರ
ತ್ರಿಕ ರದ್ರಂದಿಡಾ್ರ ದಡರಡತ್ರಿಫ








– 13



– 12













ಅಧ್ಯಾಯ – 15

[illegible]

[illegible]

GAZETTEER OF BOMBAY STATE

DHARWAR DISTRICT

The Vaiṣṇavas—Mādhva Brahmins—are found all over Dharwar District in towns and villages. They are the followers of the Dvaita school of philosophy and religion started by Shri Madhvācārya (A.D. 1238 to 1317), who is regarded as the avatāra (incarnation) of god Vāyu. Madhvācārya is called Pūrṇabodha, Sarvajñācārya, Sumadhvācārya and Ānandatīrtha-Bhagavatpādācārya. His chief mission was to preach the reality and dependence of the Universe composed of cit (souls) and acit (matter) upon the Supreme Soul (Paramātmā) God Viṣṇu, and pure bhakti (unsullied bhakti) or devotion to Viṣṇu is the means of emancipation for the souls from the whirlpool of births and deaths and of enjoying the highest bliss that is their own. The Ācārya founded his new school of philosophy and religion by out-arguing twenty-one earlier commentators on the Brahmasūtras of Bādarāyaṇa and composing thirty-seven original works in which the dvaita-siddhānta was established on the authority of perception, logic and faultless word—the Vedas, Purāṇas and Āgamas. He is the earliest known commentator on the Vedas, the famous Sāyaṇa being later than Madhva.

Madhvācārya installed the image of Lord Kṛṣṇa at Udupi which he got by a miracle from a vessel sailing from Dvārakā towards Malpe. While carrying the idol from the harbour to Udupi town he composed what is known as Dvādaśa-stotra which is recited every day in Mādhva houses. To conduct regular worship and offerings to the deity he established eight pontifical seats (mathas) at Udupi, each of which was to hold charge of the temple for two months. The names of these eight Udupi Mathas are: Adhamaru, Palimaru, Kanur, Sirur, Pejawar, Sode, Krishnapur and Puttige. These eight Mathas are grouped into four pairs which are known as dvandva-mathas. The famous Vādirāja Swami, the great saint-philosopher of the Sode-matha in the 16th century A.D., introduced many reforms in the administration and rituals of the Kṛṣṇa-matha at Udupi, according to which the duration of worship of Kṛṣṇa by each Matha was changed from two months to two years. Thus, the paryāya (change) of worship of Lord Kṛṣṇa happens once in two years when the Sun enters into Makara (Capricorn) in the month of January. On this occasion, a great fair is held at Udupi and thousands of pilgrims come to make offerings to the god. The out-going svāmi leaves with sorrow since he has to wait a long period of 14 years to get another opportunity to pūjā (worship) Lord Kṛṣṇa. The incoming svāmi takes charge with joy since he gets an opportunity to pūjā (worship) Lord Kṛṣṇa which is the primary purpose of the establishment of his matha.

Besides these eight mathas, two more mathas Bhimanakatti and Mandarkone are found in Mangalore. Viṣṇutīrtha, the younger brother of Sri Madhvācārya and the first pontiff of Sode Matha established one more matha at Subrahmanya which is called Subrahmanya-Matha. The followers of these eleven mathas are mostly found on the Mangalore coast.

In his tour of digvijaya, Madhvācārya had gained many new converts to his fold in the up ghāt country of which the most famous were the stalwart scholars known after sanyāsa as Padmanābhatīrtha, Naraharitīrtha, Mādhavatīrtha and Akṣobhyatīrtha—all of

which succeeded to the pontifical seat of Sri Madhvācārya, one after the other. Naraharitīrtha acted as administrator of Kalinga (Orissa), at the bidding of his guru Madhvācārya and brought from the royal treasury the images of Rāma and Sītā which had a long tradition of worship by god Brahma, and handed them over to Sri Madhvācārya. Sri Madhva worshipped the images for some time and before he retired to Badarikāśrama for the last time, left them in charge of his successor Padmanābhatīrtha. Padmanābhatīrtha occupied the pontifical seat for seven years. His work Sannyāya-ratnāvali is the first commentary on Sri Madhvācārya's anuvyākhyāna. He was succeeded by Naraharitīrtha on the pīṭha of the Ācārya, whose inscriptions are found in the Kalinga 14th Century (at Shri Kurma, etc.) and who brought as stated above the two images of Sri Rāma and Sītā for his master Sri Madhva. Naraharitīrtha is regarded as the first composer of devotional songs in Kannada upon Sri Hari and was thus the inaugurator of the Haridāsakūṭa in Karnatak. After Naraharitīrtha, Mādhavatīrtha became the head of the Vedānta-Sāmrājya. He was succeeded by Akṣobhyatīrtha who according to the local chronicles and a pillar inscription (now lost) at Mulbhagal (Kolar District), is said to have encountered the great Vidyāraṇya, the teacher of the founders of the Vijayanagara empire and defeated him in the interpretation of the Upaniṣadic passage tattvamasi, the great Viśiṣṭādvaita scholar Vedānta Deśika being the madhyastha (umpire) in the disputation.

After Sri Akṣobhyatīrtha, a powerful personality Dhoṇḍo Raghunātha Deshpāṇḍe of Mangalwedhe ascended on the throne of Vedānta of Sri Madhvācārya. After sanyāsa, he took the name Jayatīrtha. He is also called Ṭīkācārya as he wrote commentaries on most of Sri Madhva's works. Among the Vaiṣṇava pontiffs, he holds the place of honour next only to Sri Madhva and is considered as the avatāra of Indra, the god of heaven. Among his commentaries, "Nyāya-Sudhā" is the biggest and most important; and it runs into twenty-eight thousand granthas (thirty-two letters make a grantha). He is believed to have been the bullock that carried the library of Sri Madhvācārya in his previous birth and Sri Madhvācārya had given certain indications of his re-birth to Akṣobhyatīrtha on the observation of which, Akṣobhyatīrtha was to identify him and give him sanyāsa. Dhoṇḍo Raghunātha was a general in his father's army and one day he was drinking water from the river Bhimā directly by his mouth like a bullock, sitting on the horse's back. Akṣobhyatīrtha saw it and remembering Sri Madhva's words chose him to be his successor. Jayatīrtha ruled for twenty-one years. His vṛndāvana (tomb) is at Malkhed, twenty-three miles south-east of Gulbarga. Sri Vidyādhirājatīrtha succeeded Jayatīrtha. His successor was Rājendratīrtha. At the time of Vidyādhirāja's death, Rājendratīrtha was on tour and so, in order to avoid the break in the worship of the images in the saṁsthāna, he chose Sri Kavīndratīrtha. Thus, the two branches—one represented by Sri Rājendra called subsequently after the great Vyāsatīrtha as Vyāsarāyamaṭha and the other by

Sri Kavindra Thirtha came into being. Sri Kavindra Thirtha was succeeded by Sri Vagisha Thirtha, whose successor was Sri Ramachandra Thirtha. Sri Ramachandra Thirtha gave ashrama to Sri Vibudhendra Thirtha, the most learned, disputant and scholar. He won great laurels by undertaking long and continuous tours of Digvijaya. At the time of the death of Sri Ramachandra Thirtha, Sri Vibudhendra was away and could not be present at the time. So, another disciple known as Sri Vidyanidhi Thirtha took charge of the matha and pooja with the help of local devotees. Here again two branches came into existence – One represented by SENIOR - Sri Vibudhendra and other by the JUNIOR - Sri Vidyanidhi. Sri Vibudhendra's branch was subsequently called as Sri Raghavendra Swamy Matha after the great philospher saint saint Sri Raghavendra Swamy.


The senior branch was embellished by several scholars the most notable among them being Sri Vijayendra, a great controversialist and opponent of Sri Appayya Dikshit, the well-known Saiva scholar of the day. Sudhindra and his disciple Sri Raghavendra whose sacred vrindāvana at Mantrālaya is still worshipped by all people irrespective of caste and community to get their desires fulfilled. Sri Raghavendratirtha's works especially the Parimala a fine gloss on Nyāyasudhā, Bhavadipa a commentary on Tatva Prakāśikā and the Vadavali-Bhavadipikā are an indispensible guide to the student of Dvaita philosophy. He was a great yogin and his influence is acknowledged by people of all classes and communities. Many temples are built in his memory all over India and great miraculous acts are attributed to him by his devotees. Sumatindra, one of the prolific writers of the 18th century philosophers, is known by his Bhavaratnakosa and was so famous that the matha began to be known after him as Sumatindramatha. Another great pontiff of the samsthana was Sri Varadendra who by his learning and successful campaigns of disputations was honoured by Peshwa (Madhava Rao I, who gifted him three villages in Dharwar District). He spent the rest of his life at Poona and was enshrined in the vrindāvana in the vāḍā (mansion) which the Swamiji had won after defeating the opponents there. The vrindāvana still stands in Poona as a mark of the respect which the Swāmi commanded in Poona, the then capital of the Peshwas. Another great pontiff who is worshipped by people of all castes and communities for the fulfilment of their desires and who was known for his austerity and high learning is Sri Dhirendratirtha. His vrindāvana stands at Hosaritti in the Haveri tāluka. After Sri Dhirendra, the most powerful and learned pontiff who raised the status of his samsthāna by solid acts and reforms, etc., was Sri Susilendratirtha whose vrindāvana stands by the side of Sri Dhirendra's at Hosaritti.


ಅಧ್ಯಾಯ – 16

The donee, Vijayīndra Tīrtha, is one of the most famous of the Mādhva ācāryas. Nothing is known of his parentage and his birth place. Surēndra Tīrtha of the Pūrvādi or Sumatīndra maṭha, who was the twelfth in descent from Madhvāchārya, the founder of the Dvaita school of philosophy, was the spiritual guru of Vijayīndra.[4] It is from him that he received the robes of sanyāsa, and eventually he also succeeded him on the pontifical see as the thirteenth guru. But Vijayīndra, like Vādirāja Tīrtha of the Sōdē maṭha, received all his education in philosophy from the great Vyāsarāya Tīrtha[5] of the Vyāsarāya maṭha. Vijayīndra was succeeded by Sudhīndra and he, in his turn, by Rāghavēndra Tīrtha, who was the fifteenth in the list of succession. Next to Śrīmad Ānanda Tīrtha (another name of Madhvāchārya) and Jaya Tīrtha, the most important names in the history of the Mādhva hierarchy are Vyāsarāya Tīrtha, Vijayīndra Tīrtha, Vādirāja Tīrtha and Rāghavēndra Tīrtha. Therefore, a short summary of the lives of these four āchāryas will not be out of place in this paper.


The following is the traditional list of the svāmins of this maṭha as far as Rāghavēndra Tīrtha :—
(a) Madhvāchārya. (b) Padmanābha Tīrtha. (c) Mādhava T. (d) Jaya Tīrtha. (e) Vidyādhirāja T.
(f) Kavīndra T. (g) Vāgīśa T. (h) Rāmachandra T. (i) Nārāyaṇa T. (j) Vibudhēndra T.
(k) Jitāmitra T. (l) Raghunandana T. (m) Surēndra T. (n) Vijayīndra T. (o) Sudhīndra T.
(p) Rāghavēndra T.


17





[illegible]





[illegible]



[illegible]



[illegible] – 18



